# ಸೂಕ್ತಿ - ವ್ಯಾಪ್ತಿ

## ಸುಭಾಷಿತ ಸಂಗ್ರಹ

೨

ಎನ್. ರಂಗನಾಥಶರ್ಮಾ

# ಸೂಕ್ತಿ-ವ್ಯಾಪ್ತಿ

## ಸುಭಾಷಿತ ಸಂಗ್ರಹ

ಸಂಪುಟ - ೨

ಎನ್. ರಂಗನಾಥಶರ್ಮಾ

ಪ್ರಕಟಣೆ ೮೨

ರಾಷ್ಟ್ರೋತ್ಥಾನ ಸಾಹಿತ್ಯ
'ಕೇಶವಶಿಲ್ಪ'
ಕೆಂಪೇಗೌಡನಗರ
ಬೆಂಗಳೂರು - ೫೬೦ ೦೧೯

© ರಾಷ್ಟ್ರೋತ್ಥಾನ ಸಾಹಿತ್ಯ

ಮೊದಲನೆ ಮುದ್ರಣ : ೧೯೯೯
ಎರಡನೆ ಮುದ್ರಣ : ೨೦೦೨
ಬೆಲೆ : ರೂ. ೩೫-೦೦

ರಾಷ್ಟ್ರೋತ್ಥಾನ ಮುದ್ರಣಾಲಯ
ಬೆಂಗಳೂರು - ೫೬೦ ೦೧೯

*'SUKTI-VYAPTI'*. Kannada. By N. RANGANATHA SHARMA. Vol. 2. A collection of epigrammatic verses in Sanskrit and Kannada, with commentary explaining their contemporary relevance. Published by RASHTROTTHANA SAHITYA, 'Keshava Shilpa', Kempegowda Nagar, Bangalore - 560 019 (India). Pages: vi + 164. Price: Rs. 35-00 .
First edition : 1999.
**Second Print : 2002**

**ISBN 81-7531-015-4**

*Cover Design:*
M/s. UNKNOWN CREATIONS, Bangalore

*Typeset by:*
CREATIVE GRAPHICS, Bangalore - 560 053. ✆ 6706014

*Printed at:*
RASHTROTTHANA MUDRANALAYA, Bangalore - 560 019

# ಸಮಕ್ಷಮದಲ್ಲಿ

ಅನೇಕ ಶತಮಾನಗಳ ನಮ್ಮ ಸ್ವಾತಂತ್ರ್ಯಸಂಘರ್ಷ ಇಂದು ಯಶಸ್ಸಿನ ಒಂದು ಘಟ್ಟ ಮುಟ್ಟಿದೆ. ನಮ್ಮ ರಾಷ್ಟ್ರದ ಸ್ವತಂತ್ರ, ಸಾರ್ವಭೌಮ ಜೀವನವನ್ನು ಕಟ್ಟುವ ಸುವರ್ಣಸಂಧಿ ನಮಗಿಂದು ಒದಗಿಬಂದಿದೆ.

ಇದೊಂದು ಸುವರ್ಣಸಂಧಿ ಆಗಿರುವಂತೆಯೇ ಒಂದು ಗಂಭೀರ ಸವಾಲೂ ಆಗಿದೆ. ನಮ್ಮ ರಾಷ್ಟ್ರಜೀವನವನ್ನು ಯಾವ ಆದರ್ಶದ ಬೆಳಕಿನಲ್ಲಿ, ಯಾವ ಸಿದ್ಧಾಂತದ ಅಡಿಗಲ್ಲ ಮೇಲೆ ಕಟ್ಟಬೇಕು - ಎಂಬ ಸವಾಲಿಗೆ ನಾವಿಂದು ಉತ್ತರ ಕೊಡಬೇಕಾಗಿದೆ.

ಆದರೆ ನಮ್ಮ ನಾಡಿನ ದೌರ್ಭಾಗ್ಯದಿಂದ ಇವತ್ತಿಗೂ ಈ ಮೂಲಪ್ರಶ್ನೆಯ ಬಗೆಗೆ ನಮ್ಮ ಸ್ವತಂತ್ರ ಪ್ರತಿಭೆಯಿಂದ ವಿಚಾರಮಂಥನ ನಡೆಯುತ್ತಲೇ ಇಲ್ಲ. ಇಂಗ್ಲೆಂಡ್ ಅಮೆರಿಕಗಳಂತೆಯೋ ಇಲ್ಲವೆ ರಷ್ಯ ಚೀಣಾಗಳಂತೆಯೋ ನಮ್ಮ ಜೀವನವನ್ನು ಎರಕಹೊಯ್ಯುವ ಆತುರ ಎಲ್ಲ ಕ್ಷೇತ್ರಗಳಲ್ಲೂ ಕಂಡುಬರುತ್ತಿದೆ. ನಮ್ಮ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಇತ್ಯಾದಿ ಪ್ರತಿಯೊಂದು ಕ್ಷೇತ್ರದಲ್ಲೂ ಭಾರತವನ್ನು ಪರದೇಶ, ಪರಸಂಸ್ಕೃತಿಗಳ ಅಗ್ಗದ ನಕಲಾಗಿ ಮಾಡುವ ಪ್ರಯತ್ನವೇ ನಡೆದಿದೆ. ನಮ್ಮ ರಾಷ್ಟ್ರೀಯ ಪ್ರತಿಭೆ, ಪರಂಪರೆ, ತತ್ತ್ವಜ್ಞಾನ, ಜೀವನಾದರ್ಶ ಇವೆಲ್ಲಕ್ಕೂ ಇಂದು ಗ್ರಹಣ ಹಿಡಿದಂತಾಗಿದೆ.

ಹೀಗಾಗಿ ಇಂದು ಕೋಟಿ ಕೋಟಿ ಭಾರತೀಯರ ಹೃದಯಕ್ಕೆ ನಮ್ಮ ಸ್ವತಂತ್ರ ರಾಷ್ಟ್ರಜೀವನದ ಅಮೃತಸ್ಪರ್ಶ ಅನುಭವಕ್ಕೆ ಬರುತ್ತಿಲ್ಲ. ನಮ್ಮ ಜನಸಾಮಾನ್ಯರ ಅಂತಃಕರಣವನ್ನು ತಟ್ಟಿ ಎಬ್ಬಿಸುವ ರಾಷ್ಟ್ರೀಯ ಆದರ್ಶಗಳಿಲ್ಲದೆಹೋದಲ್ಲಿ ರಾಷ್ಟ್ರದ ಪುನರುತ್ಥಾನಕ್ಕಾಗಿ ಅವರಲ್ಲಿ ಸ್ವಯಂಪ್ರೇರಣೆ, ಕಾರ್ಯೋತ್ಸಾಹ, ತ್ಯಾಗ, ಪೌರುಷಗಳು ಬೆಳೆದು ನಿಲ್ಲುವುದಾದರೂ ಹೇಗೆ? ಆದ್ದರಿಂದಲೇ ಇಂದು ರಾಷ್ಟ್ರದ ಆಗುಹೋಗುಗಳ ಬಗೆಗೆ ಸರ್ವತ್ರ ಉದಾಸೀನತೆ, ಕ್ರಿಯಾಶೂನ್ಯತೆ, ವಿಫಲತೆಗಳೇ ತಾಂಡವವಾಡುತ್ತಿವೆ. ಎಂದಮೇಲೆ ಜನರೆದೆಗೆ ಸ್ಫೂರ್ತಿ, ಉತ್ಸಾಹಗಳನ್ನೆರೆಯಬಲ್ಲ ಭಾರತೀಯತೆಯ ಆದರ್ಶವನ್ನು ಎತ್ತಿಹಿಡಿಯುವುದು ಇಂದು ತೀರ ಅನಿವಾರ್ಯ ಹಾಗೂ ತುರ್ತು ಕರ್ತವ್ಯವಾಗಿದೆ. ಭಾರತವು 'ತನ್ನತನ'ದಿಂದ ಎದ್ದುನಿಂತಾಗಲೇ ಅದು ಜಗತ್ತಿನಲ್ಲಿ ತಲೆಯೆತ್ತಿ ಬಾಳುವಂತಾದೀತು ಎಂಬುದು ಸ್ಪಷ್ಟವಿದೆ.

ನಮ್ಮ ಭಾರತೀಯತೆಯ - ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸ, ತತ್ತ್ವಜ್ಞಾನ, ಜೀವನಾದರ್ಶಗಳ - ಹಿರಿಮೆ ಈ ಲೋಕದಲ್ಲಿ ಸಾಟಿಯಿಲ್ಲದ್ದು. ನೂರಾರು ಶತಮಾನಗಳವರೆಗೆ ನಮ್ಮ ರಾಷ್ಟ್ರಜೀವನವನ್ನು ವೈಭವಶಾಲಿಯಾಗಿ ಮಾಡಿದ್ದಷ್ಟೆ ಅಲ್ಲ, ಜಗತ್ತಿಗೆಲ್ಲ ದಿವ್ಯಜೀವನದ ಸುಧೆ ಕುಡಿಸಿದಂತಹ ಅದ್ಭುತ ಚೈತನ್ಯ ಅದರಲ್ಲಿದೆ. ಇಂದಿಗೂ ಸಹ ಆಧುನಿಕ ಜೀವನದ

ಅನೇಕ ವಿಕಟ ಸಮಸ್ಯೆ-ಸವಾಲುಗಳಿಗೆ ಸಮರ್ಪಕವಾಗಿ ಸಮಾಧಾನ ನೀಡಬಲ್ಲಂತಹ ಸಮಗ್ರ ಜೀವನದೃಷ್ಟಿ, ವಿಚಾರಸಂಪತ್ತು ಅದರಲ್ಲಿದೆ.

ರಾಷ್ಟ್ರೋತ್ಥಾನದ ಅಡಿಗಲ್ಲಾದ ನಮ್ಮ ಭಾರತೀಯ ಜೀವನದ ಜ್ಞಾನ-ನಿಷ್ಠೆಗಳನ್ನು ಜನಮನದಲ್ಲಿ ಬೇರೂರಿಸುವ ಈ ಚರಿತ್ರಾರ್ಹ ಕಾರ್ಯಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್ತು ೧೯೬೫ರಲ್ಲಿ ಜನ್ಮತಾಳಿತು. ಪರಿಷತ್ತು ಕಳೆದ ಮೂವತ್ತನಾಲ್ಕು ವರ್ಷಗಳಲ್ಲಿ ಜನಜಾಗೃತಿಯ ಚಟುವಟಿಕೆಯಲ್ಲದೆ ಇನ್ನಿತರ ಹತ್ತುಹಲವು ಸಮಾಜಸೇವಾ ಚಟುವಟಿಕೆಗಳನ್ನು ಹಮ್ಮಿಕೊಂಡು ಬೆಳೆಯುತ್ತಾ ಬಂದಿದೆ. ಪರಿಣಾಮವಾಗಿ ಪರಿಷತ್ತಿನ ಆರಂಭದ ಕೆಲವು ಚಟುವಟಿಕೆಗಳನ್ನು ಜನವರಿ ೧೯೮೬ರಿಂದ ಬೇರ್ಪಡಿಸಲಾಯಿತು. ಈ ರೀತಿ ಬೇರ್ಪಡಿಸಿದ ಚಟುವಟಿಕೆಗಳಲ್ಲಿ ಪ್ರಕಾಶನಕ್ಕೆ ಸಂಬಂಧಿಸಿದ ಚಟುವಟಿಕೆಯು 'ರಾಷ್ಟ್ರೋತ್ಥಾನ ಸಾಹಿತ್ಯ ಟ್ರಸ್ಟ್' ಹೆಸರಿನಲ್ಲಿ ಮುಂದುವರಿದಿದೆ. ಪ್ರಕಾಶನದ ಮುಖ್ಯ ಯೋಜನೆ ಹೀಗಿದೆ :

* ಸಾಮಾಜಿಕ ಚಿಂತನ ಪ್ರಧಾನವಾದ ಗ್ರಂಥಗಳನ್ನು ಹೊರತರುವುದು. ಇಂದು ಕನ್ನಡ ಸಾಹಿತ್ಯಲೋಕದಲ್ಲಿ ಎಲ್ಲಕ್ಕಿಂತ ಹೆಚ್ಚಿನ ಕೊರತೆ, ಅಗತ್ಯ ಇರುವುದು ಅಂತಹ ಗ್ರಂಥಗಳಿಗೇ. ಈ ಕೊರತೆಯನ್ನು ತುಂಬಲು ಮೂಲ ಕನ್ನಡ ಕೃತಿಗಳ ಜೊತೆಗೆ ಇತರ ಭಾಷೆಗಳಿಂದಲೂ ಉತ್ತಮ ರಾಷ್ಟ್ರೀಯ ಸಾಹಿತ್ಯವನ್ನು ಕನ್ನಡಕ್ಕೆ ತರುವುದು.

* ನಿಜವಾದ ರಾಷ್ಟ್ರೀಯ ಇತಿಹಾಸದ ಗ್ರಂಥಗಳಿಗಂತೂ ಕನ್ನಡದಲ್ಲೇ ಏಕೆ, ಇಡೀ ದೇಶದಲ್ಲೇ ತೀವ್ರ ಕೊರತೆ ಇದೆ. ಇದುವರೆಗೆ ಪಾಶ್ಚಾತ್ಯ ವಿದ್ವಾಂಸರ ಗ್ರಂಥಗಳು, ಅವರ ದೃಷ್ಟಿ-ಧೋರಣೆಗಳ ಜಾಡಿನಲ್ಲೇ ನಮ್ಮ ಇತಿಹಾಸದ ಅಧ್ಯಯನ ಸಾಗಿದೆ. ಇನ್ನಾದರೂ ನಮ್ಮ ರಾಷ್ಟ್ರೀಯ ದೃಷ್ಟಿಯಿಂದ ಚರಿತ್ರೆಯನ್ನು ಬರೆಯುವ, ಓದುವ ಅಭ್ಯಾಸವಾಗುವಂತೆ ನಮ್ಮ ರಾಷ್ಟ್ರೀಯ ಇತಿಹಾಸಗ್ರಂಥಗಳಿಗೆ 'ರಾಷ್ಟ್ರೋತ್ಥಾನ ಸಾಹಿತ್ಯ'ದಲ್ಲಿ ಅಗ್ರಸ್ಥಾನ ಕೊಡುವುದು.

* ಸಮಾಜದಲ್ಲಿ ಸತ್ಸಂಸ್ಕಾರಗಳನ್ನು ಮೂಡಿಸುವ ಸದಭಿರುಚಿಯ ಸಾಹಿತ್ಯವನ್ನು ಪ್ರಕಟಿಸುವುದು.

* ಸರಳ ಹಾಗೂ ಉದ್ಬೋಧಕ ರೀತಿಯಲ್ಲಿ ವೈಚಾರಿಕ ಮತ್ತು ವಿಶ್ಲೇಷಣಾತ್ಮಕ ಪುಸ್ತಕಗಳನ್ನು ಪ್ರಕಟಿಸುವುದು.

ತಾಯಿ ಭಾರತಿಯ ದಿವ್ಯಮಂದಿರದಲ್ಲಿ ಹೊತ್ತಿರುವ ಈ ಜ್ಞಾನದ ಸೊಡರಿಗೆ ಜನರ ಒಲವು-ನೆರವುಗಳ ತೈಲಧಾರೆ ನಿರಂತರವಾಗಿ ಒದಗಿಬರಲಿ ಎಂಬುದು ನಮ್ಮ ಹೃದಯದಾಳದ ಹಾರೈಕೆ.

— *ಪ್ರಕಾಶಕರು*

# ಪುಸ್ತಕವನ್ನು ಕುರಿತು

ಇದು 'ಸೂಕ್ತಿ-ವ್ಯಾಪ್ತಿ'ಯ ಎರಡನೆಯ ಸಂಪುಟ. ಇದರಲ್ಲಿ ಸಂಕಲಿತವಾಗಿರುವವು 'ಉತ್ಥಾನ' ಮಾಸಪತ್ರಿಕೆಯಲ್ಲಿ ನಿಯಮಿತವಾಗಿ ೧೯೯೦-೯೮ರ ಅವಧಿಯಲ್ಲಿ ಪ್ರಕಟಗೊಂಡಿರುವ ಅಂಕಣಬರಹಗಳು. ೧೯೯೧ರಲ್ಲಿ ಪ್ರಕಟಗೊಂಡ 'ಸೂಕ್ತಿ-ವ್ಯಾಪ್ತಿ' ಮೊದಲ ಸಂಪುಟವು ವಿಶಾಲ ಜನಾದರಣೆಯನ್ನು ಗಳಿಸಿಕೊಂಡಿರುವುದು ಪ್ರಕೃತ ಸಂಪುಟವನ್ನು ಹೊರತರಲು ಪ್ರೋತ್ಸಾಹಿಸಿದೆ.

ನಮ್ಮ ಪ್ರಾರ್ಥನೆಯಂತೆ 'ಉತ್ಥಾನ' ಪತ್ರಿಕೆಯಲ್ಲಿ ಕಳೆದ ಎರಡು ದಶಕಗಳಿಂದ ನಿರಂತರವಾಗಿ ಈ ಸುಭಾಷಿತ ಅರ್ಥವ್ಯಾಖ್ಯೆಗಳನ್ನು ಬರೆಯುತ್ತಿರುವವರು ವಿದ್ವಾನ್ ಎನ್. ರಂಗನಾಥಶರ್ಮಾ ಅವರು - 'ವಿಶ್ವಾಮಿತ್ರ' ಎಂಬ ಹೆಸರಿನಲ್ಲಿ. ಸಂಸ್ಕೃತ ಹಾಗೂ ಕನ್ನಡ ವಿದ್ವದ್ವಲಯದಲ್ಲಿ ವಿದ್ವಾನ್ ರಂಗನಾಥಶರ್ಮಾ ಅವರು ಸುಪರಿಚಿತರು; ಈ ಪೀಳಿಗೆಯ ಶ್ರೇಷ್ಠ ವಿದ್ವಾಂಸರ ಅಗ್ರಶ್ರೇಣಿಯಲ್ಲಿ ಸ್ಥಾನ ಪಡೆದುಕೊಂಡಿರುವವರು. ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ವಿದ್ವಾನ್ ರಂಗನಾಥಶರ್ಮಾ ಅವರು ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಸುಮಾರು ೫೦ ಗ್ರಂಥಗಳನ್ನು ರಚಿಸಿದ್ದಾರೆ. ಅವರ ವಾಲ್ಮೀಕಿರಾಮಾಯಣದ ಮತ್ತು ಭಾಗವತದ ೧೦-೧೧-೧೨ನೆ ಸ್ಕಂಧಗಳ ಅನುವಾದಗಳೂ ಅಮರಕೋಶದ ಕನ್ನಡ ಅನುವಾದವೂ ಪ್ರಸಿದ್ಧವಾಗಿವೆ. ವಿಷ್ಣುಪುರಾಣ, ಭರ್ತೃಹರಿಯ ವಾಕ್ಯಪದೀಯ ಮೊದಲಾದವುಗಳ ಅನುವಾದವನ್ನೂ ಅವರು ಲಭ್ಯವಾಗಿಸಿದ್ದಾರೆ. ಸಂಸ್ಕೃತದಲ್ಲಿ 'ಏಕಚಕ್ರಮ್', 'ಬಾಹುಬಲಿವಿಜಯಮ್' ಮೊದಲಾದ ಹಲವು ಸ್ವತಂತ್ರ ಗ್ರಂಥಗಳನ್ನಲ್ಲದೆ ಕನ್ನಡದಲ್ಲಿ ನೂರಾರು ಲೇಖನಗಳನ್ನು ಬರೆದಿದ್ದಾರೆ. ವ್ಯಾಕರಣ, ಅಲಂಕಾರಶಾಸ್ತ್ರಗಳಲ್ಲದೆ ವೇದಾಂತಾದಿ ದರ್ಶನಗಳಲ್ಲಿಯೂ ಕೃತಪರಿಶ್ರಮರಾದ ವಿದ್ವಾನ್ ರಂಗನಾಥಶರ್ಮಾ ಅವರಿಗೆ ಸಂಸ್ಕೃತ ವಿದ್ವತ್ತಿಗಾಗಿ ರಾಷ್ಟ್ರಪತಿಪ್ರಶಸ್ತಿಯೂ ಸಾಹಿತ್ಯಸೇವೆಗಾಗಿ ರಾಜ್ಯೋತ್ಸವ ಪ್ರಶಸ್ತಿಯೂ ಸಂದಿವೆ. ೮೫ರ ಇಳಿವಯಸ್ಸಿನಲ್ಲಿಯೂ (ಜನನ: ೭-೪-೧೯೧೬) ನಿರಂತರ ಸಾರಸ್ವತಸೇವೆಯಲ್ಲಿ ನಿರತರಾಗಿರುವ ವಿದ್ವಾನ್ ರಂಗನಾಥಶರ್ಮಾ ಅವರು ಎಲ್ಲ ಸಾಹಿತ್ಯಾಸಕ್ತರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇತ್ತೀಚೆಗೆ 'ಮಾಧವೀಯ ಶಂಕರವಿಜಯ'

ಉದ್ಗ್ರಂಥದ ಕನ್ನಡ ಅನುವಾದ ಹಾಗೂ ಅವಲೋಕನದಿಂದ ಸಾಹಿತ್ಯಲೋಕವನ್ನು ಅವರು ಶ್ರೀಮಂತಗೊಳಿಸಿದ್ದಾರೆ.

'ಸೂಕ್ತಿ-ವ್ಯಾಪ್ತಿ' ಬರಹದಲ್ಲಿ ವಿದ್ವಾನ್ ರಂಗನಾಥಶರ್ಮಾ ಅವರು ಆಯ್ಕೆ ಮಾಡಿ ವಿವರಿಸಿರುವ ಶ್ಲೋಕಗಳು ಸಾರ್ವತ್ರಿಕ ಅರ್ಥವ್ಯಾಪ್ತಿಯುಳ್ಳವು. ಅವರ ವ್ಯಾಖ್ಯಾನದಲ್ಲಿ ಎರಡು ವಿಶೇಷತೆಗಳಿವೆ: (೧) ಅರ್ಥವಿವರಣೆಯು ತೀರಾ ಸಂಕ್ಷಿಪ್ತವೂ ಅಲ್ಲದೆ ತೀರಾ ವಿಸ್ತೃತವೂ ಅಲ್ಲದೆ ಹಿತಮಿತವಾಗಿ ಸುಲಭಗ್ರಾಹ್ಯವಾಗಿರುವುದು; (೨) ಶ್ಲೋಕದ ಅರ್ಥವನ್ನು ಇಂದಿನ ಸಾಮಾಜಿಕ ಸನ್ನಿವೇಶದ ಹಿನ್ನೆಲೆಯಲ್ಲಿ ವಿವೇಚಿಸಿರುವುದು. ಈ ವಿಶಿಷ್ಟತೆಯ ಕಾರಣದಿಂದ ಈ ಸಂಪುಟವೂ ಹಿಂದಿನ ಸಂಪುಟದಂತೆ ಕನ್ನಡ ಜನತೆಗೆ ಮೆಚ್ಚಿಕೆಯಾದೀತೆಂದು ಆಶಿಸಿದ್ದೇವೆ.

ಶ್ರೀ ಬಹುಧಾನ್ಯ ಸಂ ||
ಮಕರ ಸಂಕ್ರಾಂತಿ
೧೪-೧-೧೯೯೯

*— ಪ್ರಕಾಶಕರು*

# ಸೂಕ್ತಿ - ವ್ಯಾಪ್ತಿ

**ಅಕೃತಾತ್ಮಾನಮಾಸಾದ್ಯ ರಾಜಾನಮನಯೇ ರತಮ್ ।**
**ಸಮೃದ್ಧಾನಿ ವಿನಶ್ಯಂತಿ ರಾಷ್ಟ್ರಾಣಿ ನಗರಾಣಿ ಚ ॥೧॥**

*— ರಾಮಾಯಣ, ಸುಂದರಕಾಂಡ, ೨೧-೧೧*

"ರಾಷ್ಟ್ರಗಳಾಗಲಿ, ನಗರಗಳಾಗಲಿ, ಎಷ್ಟೇ ವೈಭವಸಮೃದ್ಧವಾಗಿದ್ದರೂ ಸಹ, ರಾಜನಾದವನು ಅಜಿತೇಂದ್ರಿಯನೂ ಅಯೋಗ್ಯವಾದ ರಾಜನೀತಿಯಲ್ಲಿ ನಿರತನೂ ಆಗಿಬಿಟ್ಟರೆ, ಅವು ನಾಶವಾಗಿ ಹೋಗುತ್ತವೆ."

ಅಶೋಕವನದಲ್ಲಿ ಬಂಧಿತಳಾಗಿದ್ದ ಸೀತಾದೇವಿಯು ರಾವಣನಿಗೆ ಹೇಳುವ ಬುದ್ಧಿವಾದವಿದು: "ಎಲೈ ರಾವಣ, ನಿನ್ನ ಲಂಕಾರಾಜ್ಯ ತುಂಬ ಸಂಪತ್ತುಗಳಿಂದ ತುಂಬಿರಬಹುದು. ಲಂಕಾನಗರ ಸಕಲವೈಭವಗಳಿಂದ ಮೆರೆಯುತ್ತಿರಬಹುದು. ಇನ್ನು ಬಹಳ ದಿನ ಹೀಗೆ ಉಳಿಯುವುದಿಲ್ಲ. ಕಾಮಾತ್ಮನಾದ ನಿನಗೆ ಇಂದ್ರಿಯಗಳ ಮೇಲೆ ಹತೋಟಿ ಇಲ್ಲ. ನಿಷ್ಕಾರಣವಾಗಿ ಶ್ರೀರಾಮನೊಡನೆ ವೈರವನ್ನೇ ಬೆಳೆಸಿರುವುದು ರಾಜನೀತಿಯೂ ಅಲ್ಲ. ಯಾವ ಪ್ರಯೋಜನವೂ ಇಲ್ಲದೆ ಬಲವದ್ವಿರೋಧವನ್ನು ಕಟ್ಟಿಕೊಂಡಿದ್ದೀ."

ರಾಷ್ಟ್ರವೂ ನಗರವೂ ನಾಶವಾಗುವುದೆಂದರೇನು? ಪ್ರಜೆಗಳಿಗೆ ನಾನಾ ಬಗೆಯ ಹಿಂಸೆಗಳುಂಟಾಗಿ ಅವರ ಶಾಂತಿಸಮಾಧಾನಗಳು ಕಲಕಿಹೋಗುವುದೇ ನಾಶ. ಇಂದಿನ ಪ್ರಜಾಪ್ರಭುತ್ವದ ಯುಗದಲ್ಲಿ, ಹಿಂದಿನ ರಾಜವೈಭವವನ್ನೇ ಮೀರಿಸಿದೆ, ಈಗಿನ ಮಂತ್ರಿಗಳ ವೈಭವ. ಹಿಂದೆ ಮಂತ್ರಾಲೋಚನೆಯನ್ನು ಮಾಡಿ ರಾಜನೀತಿಯನ್ನು ರೂಪಿಸತಕ್ಕವನು ಮಂತ್ರಿಯೆನಿಸಿಕೊಳ್ಳುತ್ತಿದ್ದ. ಈಗ ಮಂತ್ರಿಯೇ ರಾಜಕಾರ್ಯವನ್ನು ನಡೆಸುತ್ತಾನೆ. ಈತನಿಗೆ ಅಷ್ಟು ಅಧಿಕಾರಬಲ ದೊರಕಿದ್ದು ಹೇಗೆ? ಶಾಸಕ ಬೆಂಬಲದಿಂದ. ಶಾಸಕರ ಬೆಂಬಲ ಹೇಗೆ ದೊರಕುತ್ತದೆ? ಹಣದ ಬಲ ಮತ್ತು ಕುಟಿಲನೀತಿಗಳಿಂದ. ಸ್ತ್ರೀ ಪುರುಷರಿಗೆ ಈಗ ಮತ ನೀಡುವ ಅಧಿಕಾರವು ಕೇವಲ

ವಯೋನಿಮಿತ್ತದಿಂದ ಪ್ರಾಪ್ತವಾಗಿಬಿಟ್ಟಿದೆ. ಶಾಸಕರಿಗೂ ಮಂತ್ರಿಗಳಿಗೂ ಅಧಿಕಾರವನ್ನು ನೀಡಿ, ಆಳುವ ಸಾಮರ್ಥ್ಯವನ್ನು ಅವರಲ್ಲಿ ಹೊರಿಸಿ ತುಂಬುವ ಚುನಾವಣೆಯ ವಿಧಾನ ಎಷ್ಟು ಸಡಿಲವಾದದ್ದೆಂಬುದನ್ನು ಸರ್ವರೂ ಮನಗಾಣಬಹುದು.

ಇಂದು ಪ್ರಜಾಭಿಪ್ರಾಯದಂತೆ ಸರ್ಕಾರದ ಕಾರ್ಯವು ನಡೆಯುತ್ತದೆನ್ನುವುದು ಸುಳ್ಳು ಮಾತು. ಸ್ವಾತಂತ್ರ್ಯ ಬಂದಾಗ ರಾಷ್ಟ್ರವು ಎರಡು ಹೋಳಾಯಿತಷ್ಟೆ. ಹೀಗೆ ಹೋಳು ಮಾಡುವ ಅಧಿಕಾರವನ್ನು ಯಾರು ಯಾರಿಗೆ ಕೊಟ್ಟಿದ್ದರು?

ಈ ರಾಷ್ಟ್ರದಲ್ಲಿ ಸರ್ವರನ್ನೂ ನಿರ್ಬಂಧಿಸುವ ಧರ್ಮಸೂತ್ರ ಒಂದಿತ್ತು. ರಾಜನಾಗಲಿ ಮಂತ್ರಿಗಳಾಗಲಿ, ಅದಕ್ಕೆ ಶರಣಾಗಬೇಕಾಗಿತ್ತು. ಇಷ್ಟವಿರಲಿ ಇಲ್ಲದಿರಲಿ ಅದನ್ನು ಮನ್ನಿಸಬೇಕಾಗಿತ್ತು. ಹಾಗೆ ಧರ್ಮಸೂತ್ರವನ್ನು ಮನ್ನಿಸುವುದು ನಯ. ಈ ನಯವನ್ನು ಯಾರು ಮೀರಿದರೂ ದಂಡನಾರ್ಹರಾಗುತ್ತಿದ್ದರು. ಈಗ ಗೊತ್ತಾದ 'ನಯ' ಎಂಬುದು ಯಾವುದೂ ಇಲ್ಲ. ಇಂದ್ರಿಯಜಯವೆಂಬುದಂತೂ ಅರ್ಥಶೂನ್ಯವಾದ ಶಬ್ದವೆನಿಸಿ ಶಬ್ದಕೋಶದಲ್ಲಿ ಉಳಿದಿದೆ. ರಾಷ್ಟ್ರವು ವಿನಾಶಡೆದೆಗೆ ಉರುಳದೆ ಹೇಗೆ ನಿಲ್ಲುತ್ತದೆ?

**ಅವಿದಿತಪರಮಾನಂದೋ ವದತಿ ಜನೋ ವಿಷಯಮೇವ ರಮಣೀಯಮ್ ।**
**ತಿಲತೈಲಮೇವ ಮೃಷ್ಟಂ ಯೇನ ನ ದೃಷ್ಟಂ ಘೃತಂ ಕ್ವಾಪಿ ॥೨॥**

— *ಸುಭಾಷಿತರತ್ನ-ಭಾಂಡಾಗಾರ*

"ಬ್ರಹ್ಮಾನಂದವನ್ನು ತಿಳಿದು ಅನುಭವಿಸದೇ ಇರತಕ್ಕ ಜನರು ವಿಷಯಸುಖವೇ ರಮಣೀಯವೆನ್ನುತ್ತಾರೆ. ತುಪ್ಪವನ್ನು ಎಲ್ಲಿಯೂ ಕಾಣದವನಿಗೆ ಎಣ್ಣೆಯೇ ರುಚಿಕರವೆನಿಸುತ್ತದೆ."

ಆರೋಗ್ಯಶಾಲಿಯೂ ಬಲಿಷ್ಠನೂ ಆದ ಒಬ್ಬ ಯುವಕನಿಗೆ ಸಮಸ್ತ ಭೂಮಂಡಲವೂ ಅಧೀನವಾಗಿದ್ದು ಸಕಲಸಂಪತ್ತುಗಳೂ ಯಥೇಷ್ಟವಾಗಿ ಎಷ್ಟು ಆನಂದವಾಗಬಹುದು! ಅದು ವಿಷಯಸುಖದ ಪರಮಾವಧಿ. ಅದರ ಎಷ್ಟೋ ಲಕ್ಷಪಾಲು ಅಧಿಕವಾದ ಸುಖ ಬ್ರಹ್ಮಾನಂದದಲ್ಲಿದೆಯೆಂದು ಉಪನಿಷತ್ತು ಹೇಳುತ್ತದೆ. ಬ್ರಹ್ಮವಸ್ತುವನ್ನರಿತ ಬ್ರಹ್ಮಜ್ಞಾನಿ ಅಂತಹ ಆನಂದವನ್ನನುಭವಿಸುತ್ತಾನೆಂದು ತೈತ್ತಿರೀಯೋಪನಿಷತ್ತಿನ ಬ್ರಹ್ಮವಲ್ಲಿಯು 'ಸ ಏಕೋ ಬ್ರಹ್ಮಣ ಆನಂದಃ' ಎಂದು

ಬ್ರಹ್ಮಾನಂದವನ್ನು ವರ್ಣಿಸಿದೆ. ಲೋಕದಲ್ಲಿ ಸಿಗುವ ವಿಷಯಸುಖವೇ ಅಧಿಕವೆಂದು ತಿಳಿದವರಿಗೆ ಬ್ರಹ್ಮಾನಂದದ ಕಲ್ಪನೆಯೇ ಬರಲಾರದು.

ಶ್ರೇಷ್ಠವಾದ ಕಾವ್ಯಗಳಿಂದಾಗುವ ಆನಂದವನ್ನು ಸಹೃದಯರು ಅನುಭವಿಸುತ್ತಾರೆ. ಇದನ್ನು ಕಾವ್ಯಾನಂದ-ರಸಾನಂದ ಎನ್ನಬಹುದು. ಅದು ಬ್ರಹ್ಮಾನಂದದಂತೆ ಪರಮ ರಮಣೀಯವೆಂಬ ಅಭಿಪ್ರಾಯದಿಂದ ಕಾವ್ಯಜ್ಞರು ಅದನ್ನು 'ಬ್ರಹ್ಮಾನಂದಸೋದರ' ಎಂದು ವರ್ಣಿಸಿದ್ದಾರೆ. ರಾಮಾಯಣ ಮಹಾಭಾರತಗಳೂ ಕಾಳಿದಾಸ, ಭಾಸ, ಪಂಪ, ಲಕ್ಷ್ಮೀಶ, ರಾಘವಾಂಕ - ಮುಂತಾದ ಮಹಾಕವಿಗಳ ಮಹಾಕಾವ್ಯಗಳೂ ಅಷ್ಟು ಆನಂದಮಯವಾದವುಗಳೆಂದು ಸಹೃದಯರು ಮನ್ನಿಸುತ್ತ ಬಂದಿದ್ದಾರೆ. ಸಾಮಾನ್ಯಜನರಿಗೆ ಅರ್ಥವಾಗುವುದಿಲ್ಲವಾದ್ದರಿಂದ ಇವೆಲ್ಲವೂ ಬೂಸಾ ಸಾಹಿತ್ಯವೆಂದು ಕೆಲವರು ಜರಿಯಲಾರಂಭಿಸಿದ್ದಾರೆ. ಇವರು ರಾಮಾಯಣಾದಿ ಗ್ರಂಥಗಳನ್ನು ಕಣ್ಣಿನಿಂದಲೂ ನೋಡಿದವರಲ್ಲ. ಎಲ್ಲವೂ ಜನಸಾಮಾನ್ಯರಿಗಾಗಿಯೇ ಇರಬೇಕಾಗಿಲ್ಲ. ತಮತಮಗೆ ನಿಲುಕತಕ್ಕದ್ದನ್ನು ಅವರವರು ಆರಿಸಿಕೊಳ್ಳುತ್ತಾರೆ. ಕಡ್ಲೆಪುರಿಯನ್ನು ತಿನ್ನತಕ್ಕವರು ತಮಗೆ ದುರ್ಲಭವೆಂದು ದ್ರಾಕ್ಷಿಹಣ್ಣನ್ನು ನಿಂದಿಸಬೇಕಾಗಿಲ್ಲ. ಬಡವರಿಗೆ ದಕ್ಕುವುದಿಲ್ಲವೆಂದು ಚಿನ್ನದ ಗಣಿಯನ್ನು ಮುಚ್ಚಬೇಕಾಗಿಲ್ಲ.

**ಪಂಡಿತರುಂ ನಿಖಿಲಕಲಾ-**
**ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ ।**
**ಕಂಡರ್ ಕೇಳ್ವಡೆ ಗೊರವರ**
**ಡುಂಡುಚಯೇ ಬೀದಿಯರಿಯೆ ಬೀರನ ಕತೆಯೇ?**

— ಎಂದು ಮಧುರಕವಿ ಈ ಬೂಸಾ ಸಾಹಿತ್ಯವಾದಿಗಳನ್ನು ಲಕ್ಷಿಸಿಯೇ ಹೇಳಿರಬೇಕು. ಮತ್ತು ಹಸುಗಳು ತಿನ್ನುವ ಬೂಸಾದಿಂದ ಸಿಹಿಯಾದ ಹಾಲು ಹೊರಡುತ್ತದೆಯೆಂದು ನಮ್ಮ ಅನುಭವ!

ಇಂದು ಮಂತ್ರಿಗಳ ಖುರ್ಚಿ ಸರ್ವಜ್ಞಪೀಠವಾಗಿದೆ. ಅದರಲ್ಲಿ ಕುಳಿತರೆ ಸರ್ವ ವಿಷಯಗಳ ಮೇಲೂ ಅಭಿಪ್ರಾಯವನ್ನು ನೀಡುವ ಶಕ್ತಿ ಬರುತ್ತದೆ. ಹಿಂದೆ ಸರ್ವಜ್ಞರಾದವರು ಕಾಶ್ಮೀರದಲ್ಲಿದ್ದ ಸರ್ವಜ್ಞಪೀಠವನ್ನು ಏರಬಹುದಾಗಿತ್ತು. ಅದಕ್ಕಿಂತ ಮಿಗಿಲು ಮಂತ್ರಿಗಳ ಪೀಠ. ಇದರಲ್ಲಿ ಕುಳಿತರೆ ಸರ್ವಜ್ಞರಾಗುತ್ತಾರೆ! ಸಂಸ್ಕೃತ ಕನ್ನಡ ಜಗಳ ನಡೆಯುತ್ತಿದ್ದಾಗ "ಸಂಸ್ಕೃತವು ಪರಕೀಯ ಭಾಷೆ. ಕನ್ನಡಕ್ಕೆ ಅದರಿಂದ ಉಪಯೋಗವೇನು?" ಎಂದು ವಿದ್ಯಾಮಂತ್ರಿಗಳು ಕೇಳಿದರು! "ಪರಕೀಯ,

ಭಾಷೆ, ಉಪಯೋಗ - ಎಂಬ ಶಬ್ದಗಳು ಸಂಸ್ಕೃತದವು. ಸಾಹಿತ್ಯ ಪರಿಷತ್ತು, ವಿಧಾನಸೌಧ, ಮಂತ್ರಿಮಂಡಲ - ಸಂಸ್ಕೃತವೇ. ಸಂಸ್ಕೃತವನ್ನು ಬಿಟ್ಟರೆ ರಾಜ್ಯಪಾಲರೂ ಇಲ್ಲ, ಮುಖ್ಯಮಂತ್ರಿಗಳೂ ಇಲ್ಲ, ವಿದ್ಯಾಮಂತ್ರಿಗಳೂ ಇಲ್ಲ!" ಎಂಬ ಉತ್ತರವನ್ನು ಕೇಳಿ ವಿದ್ಯಾಮಂತ್ರಿಗಳು ದಿಗ್‌ಭ್ರಾಂತರಾದರು.

"ದಾಸರ ಪದಗಳೂ ಶಿವಶರಣರ ವಚನಗಳೂ ಸಾಕು. ಶಂಕರಾಚಾರ್ಯರ ವೇದಾಂತಗ್ರಂಥಗಳಿಂದ ಏನು ಪ್ರಯೋಜನ"? - ಎಂದು ಒಬ್ಬ ಮಾಜಿ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಇಂಥವರನ್ನು ನೋಡಿ ಮೇಲಿನ ನೀತಿಶ್ಲೋಕ ಹೊರಟಿದೆ.

**ಇಹೈವೈಕಸ್ಯ ನಾಮುತ್ರ ಅಮುತ್ರೈಕಸ್ಯ ನೋ ಇಹ ।**
**ಇಹ ನಾಮುತ್ರ ಚೈಕಸ್ಯ ನಾಮುತ್ರೈಕಸ್ಯ ನೋ ಇಹ ॥೩॥**

*— ಮಹಾಭಾರತ, ವನಪರ್ವ, ೧೮೩ - ೮೮*

"ಒಬ್ಬನಿಗೆ ಇಲ್ಲಿ ಮಾತ್ರ ಇದೆ, ಅಲ್ಲಿಲ್ಲ. ಇನ್ನೊಬ್ಬನಿಗೆ ಅಲ್ಲಿದೆ, ಇಲ್ಲಿಲ್ಲ. ಮತ್ತೊಬ್ಬನಿಗೆ ಇಲ್ಲಿಯೂ ಇದೆ, ಅಲ್ಲಿಯೂ ಇದೆ. ಮಗದೊಬ್ಬನಿಗೆ ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ!"

ವೇದವ್ಯಾಸರು ಮಹಾಭಾರತವನ್ನು ರಚಿಸಲು ಆರಂಭಿಸಿದಾಗ ಗಣೇಶನನ್ನು ಉಕ್ತಲೇಖಕನಾಗಿರುವಂತೆ ಕೇಳಿಕೊಂಡರು. ತಾನು ಬರೆಯುವಾಗ ತೆರಪು ಕೊಡದಂತೆ ಶ್ಲೋಕಗಳನ್ನು ಹೇಳುತ್ತ ಹೋಗಬೇಕೆಂಬ ನಿಯಮವನ್ನೊಡ್ಡಿ ಚತುರನಾದ ಗಣೇಶನು ಬರೆಯಲು ಒಪ್ಪಿಕೊಂಡನಂತೆ. ವೇದವ್ಯಾಸರು "ನಾನು ಹೇಳಿದ ಶ್ಲೋಕವನ್ನು ಅರ್ಥಮಾಡಿಕೊಂಡು ನೀನು ಬರೆಯಬೇಕು, ಅರ್ಥವಾಗದೆ ಬರೆಯಬಾರದು" ಎಂಬ ನಿಯಮವನ್ನು ಒಡ್ಡಿದರಂತೆ. ನಡುನಡುವೆ ಇಂತಹ ಒಂದೊಂದು ಕ್ಲಿಷ್ಟಶ್ಲೋಕವನ್ನು ಹೇಳುತ್ತ ಹೋದರು. ಗಣೇಶನು ತಡವರಿಸುತ್ತ ಅರ್ಥಮಾಡಿಕೊಂಡು ಬರೆಯುವಷ್ಟರಲ್ಲಿ ಮುಂದಿನ ಶ್ಲೋಕಗಳು ಹೇಗಿರಬೇಕೆಂದು ವ್ಯಾಸರು ಗುಣಿಸಿಕೊಳ್ಳುತ್ತಿದ್ದನಂತೆ. ಇಂತಹ ಶ್ಲೋಕಗಳಿಗೆ 'ವ್ಯಾಸರಹಸ್ಯ' ಎನ್ನುತ್ತಾರೆ.

ಮೇಲಣ ಶ್ಲೋಕದ ಅರ್ಥವನ್ನು ಇನ್ನೊಂದೆಡೆ ಬಿಡಿಸುವ ಸಂದರ್ಭ ಹೀಗಿದೆ :

ಒಬ್ಬ ಋಷಿ ಕಾಡಿನ ಮಾರ್ಗದಲ್ಲಿ ಹೋಗುತ್ತಿದ್ದಾಗ ಒಬ್ಬ ರಾಜಕುಮಾರನು ಎದುರಿಗೆ ಬಂದ. ಆತನಿಗೆ ಈ ಋಷಿ 'ರಾಜಪುತ್ರ ಚಿರಂ ಜೀವ - ರಾಜಕುಮಾರ, ನೀನು ದೀರ್ಘಕಾಲ ಬದುಕಿರು' ಎಂದು ಆಶೀರ್ವದಿಸಿದ. ಮುಂದೆ ಹೋದಾಗ ಒಬ್ಬ ಮುನಿಪುತ್ರನಾದ ವಟು ಕಟ್ಟಿಗೆ ಹೊರೆಯನ್ನು ಹೊತ್ತುಕೊಂಡು ಬರುತ್ತಿದ್ದ. ಅವನು ಈ ಋಷಿಗೆ ವಂದಿಸಲು, 'ಮಾ ಜೀವ ಮುನಿಪುತ್ರಕ - ಮುನಿಪುತ್ರ, ನೀನು ಹೆಚ್ಚು ಕಾಲ ಬದುಕಬೇಡ!' ಎಂದು ಆಶೀರ್ವದಿಸಿದ. ಆಮೇಲೆ ಒಬ್ಬ ಗೃಹಸ್ಥನು ತನ್ನ ಹೆಂಡತಿಮಕ್ಕಳೊಡನೆ ಬರುತ್ತ ಎದುರಾದ. ಆತನಿಗೆ ಈ ಋಷಿ 'ಜೀವ ವಾ ಮರ ವಾ ಸಾಧೋ - ಎಲೈ ಸಾಧುವೆ, ನೀನು ಬದುಕಿಯಾದರೂ ಇರು, ಸತ್ತಾದರೂ ಹೋಗು!' ಎಂದು ಆಶೀರ್ವಾದ ಮಾಡಿದ. ಅನಂತರ ಒಬ್ಬ ಬೇಡರವನು ಬಂದು ನಮಸ್ಕರಿಸಿದಾಗ 'ನ ಜೀವ ನ ಚ ವೈ ಮರ - ನೀನು ಬದುಕಲೂಬೇಡ, ಸಾಯಲೂಬೇಡ!' ಎಂದು ನುಡಿದನಂತೆ.

**ರಾಜಪುತ್ರ ಚಿರಂ ಜೀವ ಮಾ ಜೀವ ಮುನಿಪುತ್ರಕ ।**
**ಜೀವ ವಾ ಮರ ವಾ ಸಾಧೋ ನ ಜೀವ ನ ಚ ವೈ ಮರ ॥**

ರಾಜಪುತ್ರನು ಜನ್ಮಾಂತರದ ಪುಣ್ಯದಿಂದ ಸುಖವನ್ನು ಭೋಗಿಸತಕ್ಕವನು. ಈಗ ಯಾವ ಒಳ್ಳೆಯದನ್ನೂ ಮಾಡತಕ್ಕವನಲ್ಲ. ಅಂತಹವರಿಗೆ 'ಇಹೈವೈಕಸ್ಯ', ಇಲ್ಲಿ ಮಾತ್ರ ಸುಖವಿದೆ, ಮುಂದಿನ ಜನ್ಮದಲ್ಲಿಲ್ಲ. ಮುನಿಪುತ್ರನಾದರೋ ಬಹಳ ಕಷ್ಟದಿಂದ ವ್ರತಾಚರಣೆ ಮಾಡತಕ್ಕವನು. ಆತನಿಗೆ ಸುಖ ಅಮುತ್ರ - ಮುಂದಿನ ಜನ್ಮದಲ್ಲಿಯೇ. ಗೃಹಸ್ಥನಾದರೋ ಸತ್ಪುರುಷನಾಗಿ ಬಾಳುತ್ತಿದ್ದಾನೆ. ಅವನಿಗೆ ಇಹ-ಪರಗಳೆರಡರಲ್ಲಿಯೂ ಸೌಖ್ಯ ಉಂಟು : 'ಇಹ ವಾಮುತ್ರ' ಅವನು ಸುಖಿ. ದುರ್ಮಾರ್ಗದಲ್ಲಿ ಬದುಕತಕ್ಕ ಬೇಡ ಮುಂತಾದವರಿಗೆ ಇಹವೂ ಇಲ್ಲ, ಪರವೂ ಇಲ್ಲ. ಅವರ ಜೀವನ ವ್ಯರ್ಥ. ಸತ್ತರೂ ಒಂದೇ, ಬದುಕಿದ್ದರೂ ಒಂದೇ.

ಲೋಕದಲ್ಲಿ ನಾಲ್ಕು ಬಗೆಯ ಜನರನ್ನು ನಾವು ಕಾಣಬಹುದು. ಧನ, ಅಧಿಕಾರಗಳನ್ನು ಹೇಗೋ ಗಳಿಸಿ ಭೋಗಲಂಪಟರಾದ 'ರಾಜಕುಮಾರ'ರ ಗುಂಪು ಒಂದು. ಜನರ ಹೆಗಲನ್ನು ಹತ್ತಿ ಮೇಲೇರಿ ಜನರನ್ನೇ ಎಡಗಾಲಿನಿಂದ ತಳ್ಳಿಬಿಡತಕ್ಕವರು ಇವರು. ಪಾಪಪುಣ್ಯಗಳ ಅರಿವೇ ಇಲ್ಲದೆ ದುರ್ಮಾರ್ಗದಿಂದ ಜೀವಿಸುತ್ತ, ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತ ವ್ಯಾಧನಂತೆ ಬದುಕುತ್ತಿರುವವರ ಗುಂಪು ಇನ್ನೊಂದು. ಈ ಎರಡು ಗುಂಪಿನವರಿಂದ ಲೋಕಕ್ಕೆ ಯಾವ ಪ್ರಯೋಜನವೂ

ಇಲ್ಲ. ತನ್ನನ್ನು ಮರೆಯದೆ, ಅನ್ಯರ ಹಿತವನ್ನು ಉಪೇಕ್ಷಿಸದೆ ಪಾಪಭೀರುಗಳಾಗಿ ನಡೆಯುವ ಸದ್ಗೃಹಸ್ಥರ ಪರಂಪರೆ ಮತ್ತೊಂದು. ತನ್ನನ್ನು ಮರೆತು ಪರಹಿತಕ್ಕಾಗಿ ಶ್ರೀಗಂಧದ ಕೊರಡಿನಂತೆ ಜೀವನವನ್ನು ಸವೆಸುವ ಋಷಿಗಳ ಸಂಖ್ಯೆ ವಿರಳವಾದರೂ ಉಳಿದುಕೊಂಡಿದೆ.

**ಏಕಂ ವಿಷರಸೋ ಹಂತಿ ಶಸ್ತ್ರೇಣೈಕಶ್ಚ ಹನ್ಯತೇ ।**
**ಸಬಂಧುರಾಷ್ಟ್ರಂ ರಾಜಾನಂ ಹಂತ್ಯೇಕೋ ಮಂತ್ರವಿಪ್ಲವಃ ॥೪॥**

— *ಯಶಸ್ತಿಲಕ, ೩-೨೮*

"ವಿಷವು ಒಬ್ಬನನ್ನು ಕೊಲ್ಲುತ್ತದೆ. ಆಯುಧದಿಂದ ಒಬ್ಬ ಹತನಾಗ ಬಹುದು. ಆದರೆ ತಪ್ಪಾದ ಮಂತ್ರಾಲೋಚನೆ ರಾಜನನ್ನೂ ಅವನ ಬಂಧುಗಳನ್ನೂ ಸಮಸ್ತರಾಷ್ಟ್ರವನ್ನೂ ಸಹ ನಾಶಮಾಡಿಬಿಡುತ್ತದೆ."

ವಿಷಪ್ರಯೋಗವು ಒಬ್ಬರನ್ನು ಕೊಂದರೆ, ವಿಷಾನಿಲಪೂರಿತವಾದ ಅಸ್ತ್ರವು ಸಾವಿರಾರು ಜನರನ್ನು ಕೊಂದೀತು. ಇತರ ಭೀಕರಾಯುಧಗಳೂ ಬಹುಸಂಖ್ಯೆಯಲ್ಲಿ ಜನರನ್ನು ನಾಶಮಾಡಬಹುದು. ಆದರೆ ಈ ಎರಡು ಪ್ರಸಂಗಗಳೂ ಮಂತ್ರವಿಪ್ಲವದಿಂದಲೇ ಆಗುತ್ತವೆ ಎಂಬುದನ್ನು ಲಕ್ಷ್ಯದಲ್ಲಿಡಬೇಕು. ತಪ್ಪಾದ ಮಂತ್ರಾಲೋಚನೆಯು ಘೋರವಾದದ್ದು. ಅದು ಬಹುವ್ಯಾಪಿಯೂ ದೀರ್ಘ ಪರಿಣಾಮಿಯೂ ಆದದ್ದು. ರಾಜ್ಯವನ್ನಾಳತಕ್ಕವರು ಪ್ರಜಾಹಿತವನ್ನು ಬಯಸುವುದಾದರೆ ಬಹಳ ಎಚ್ಚರಿಕೆಯಿಂದಿರಬೇಕಾಗುತ್ತದೆ. ನಡೆಯುವ ಮನುಷ್ಯನು ಎಡವಿದರೆ ಅವನೊಬ್ಬನು ಬೀಳುತ್ತಾನೆ. ಓಡುತ್ತಿರುವ ರೈಲುಗಾಡಿಯನ್ನು ಉರುಳಿಸಿದರೆ? ಪ್ರಜಾತಂತ್ರವು ಓಡುತ್ತಿರುವ ರೈಲುಗಾಡಿ ಇದ್ದಂತೆ. ಮಂತ್ರಾಲೋಚನೆ ಹುಡುಗಾಟವಲ್ಲ; ಒಬ್ಬ ವ್ಯಕ್ತಿಯ ಸ್ವತಂತ್ರೇಚ್ಛೆಗೆ ಒಳಪಟ್ಟದ್ದಲ್ಲ.

**ನ ಸಾ ಸಭಾ ಯತ್ರ ನ ಸಂತಿ ವೃದ್ಧಾಃ ।**
**ನ ತೇ ವೃದ್ಧಾ ಯೇ ನ ವದಂತಿ ಧರ್ಮಮ್ ॥**

ಎಲ್ಲಿ ವೃದ್ಧರಿಲ್ಲವೋ ಅದು ಮಂತ್ರಾಲೋಚನಾ ಸಭೆಯಲ್ಲ; ಯಾರು ಧರ್ಮಾನ್ವಿತವಾದ ಸಲಹೆಯನ್ನು ಕೊಡುವುದಿಲ್ಲವೋ ಅವರು ವೃದ್ಧರಲ್ಲ - ಎಂದು ಮಹಾಭಾರತವು ಮಾಡಿರುವ ಉಪದೇಶ ಮಾರ್ಮಿಕವಾದದ್ದು. ಮಂತ್ರಾ

ಲೋಚನೆಯು ಧರ್ಮಪ್ರಚೋದಿತವೇ ಆಗಿರತಕ್ಕದ್ದು. ಅತಿ ಸೂಕ್ಷ್ಮವಾದ ಧರ್ಮ ಸ್ವರೂಪವನ್ನರಿತವರೇ ಮಂತ್ರಿಗಳಾಗಲು ಅರ್ಹರು - ಎಂಬುದು ವ್ಯಾಸಮುನಿಗಳು ಹೇಳಿದ ಬುದ್ಧಿವಾದ. ರಾಜ್ಯಸೂತ್ರವನ್ನು ಕೈಯಲ್ಲಿ ಹಿಡಿದವರು ಸ್ವಾರ್ಥಿಗಳೂ ದುರಹಂಕಾರಿಗಳೂ ಆದಾಗ ಯಾವ ಮಂತ್ರಾಲೋಚನೆಯೂ ಫಲವನ್ನು ನೀಡದು. ಇತಿಹಾಸದಿಂದಲೂ ಜನರು ಪಾಠವನ್ನು ಕಲಿಯುವುದಿಲ್ಲವೆಂಬುದು ರುಜುವಾತಾಗಿದೆ. ಹಿಟ್ಲರ್, ಸದ್ದಾಂಹುಸೇನನಂಥವರು ಮತ್ತೆ ಮತ್ತೆ ಬರುತ್ತಲೇ ಇರುತ್ತಾರೆ.

ಪ್ರಜೆಗಳ ಯೋಗಕ್ಷೇಮಗಳನ್ನು ನೋಡಿಕೊಳ್ಳುತ್ತ ಅವರನ್ನು ಸನ್ಮಾರ್ಗದಲ್ಲಿ ನಿಯಂತ್ರಿಸತಕ್ಕವನು ರಾಜ್ಯದ ಪ್ರಭು. ಅವನನ್ನು ನಿಯಂತ್ರಿಸತಕ್ಕದ್ದು ಜ್ಞಾನವೃದ್ಧರ ಮಂತ್ರಾಲೋಚನೆ. "ನ ವ್ಯತೀಯುಃ ಪ್ರಜಾಸ್ತಸ್ಯ ನಿಯಂತುರ್ನೇಮಿವೃತ್ತಯಃ" ಎನ್ನುತ್ತಾನೆ ಕಾಳಿದಾಸ. ದಿಲೀಪನು ರಾಜ್ಯವನ್ನಾಳುತ್ತಿದ್ದಾಗ ಪ್ರಜೆಗಳು, ರಥದ ಗಾಲಿಯ ಹಳಿಯಂತೆ, ಒಂದು ಗೆರೆ ಅತ್ತಿತ್ತ ಚಲಿಸದೆ ಧರ್ಮಮಾರ್ಗದಲ್ಲಿ ನಡೆಯುತ್ತಿದ್ದರಂತೆ.

ಇಂದು ಪ್ರಜೆಗಳೇ ಪ್ರಭುಗಳು. ಪ್ರಜೆಗಳ ಇಷ್ಟದಂತೆ ಪ್ರಭುಗಳೆಂಬ ಮಂತ್ರಿಗಳು ನಡೆದುಕೊಳ್ಳಲಿ, ಮಂತ್ರಿಗಳ ಮರ್ಜಿಯಂತೆ ಪ್ರಜೆಗಳು ನಡೆದುಕೊಳ್ಳಲಿ - ಎಂಬುದು ಇಂದಿನ ರಾಜನೀತಿ. ಅನ್ಯೋನ್ಯಾಶ್ರಯವಾಗಿರುವ ಈ ಪ್ರಭುತ್ವದಲ್ಲಿ ಹೇಳತಕ್ಕವರು ಯಾರು, ಕೇಳತಕ್ಕವರು ಯಾರು? ನಾಯಿಯು ಬಾಲವನ್ನು ಅಲ್ಲಾಡಿಸುತ್ತದೆಯೋ ಬಾಲವೇ ನಾಯಿಯನ್ನು ಅಲ್ಲಾಡಿಸುತ್ತದೆಯೋ - ಎಂಬ ಸಮಸ್ಯೆಗೆ ನಾವಿಂದು ಈಡಾಗಿದ್ದೇವೆ. ಮಂತ್ರಾಲೋಚನೆ ಹೇಳತಕ್ಕವರು ಜ್ಞಾನವೃದ್ಧರೂ ಅಲ್ಲ, ವಯೋವೃದ್ಧರೂ ಅಲ್ಲ. ಮತಿಗೆಟ್ಟ ಮತಗಟ್ಟೆಗಳು ಮಂತ್ರಾಲೋಚನೆ ಹೇಳುತ್ತವೆ.

**ಕೋ ಧರ್ಮೋ ಭೂತದಯಾ ಕಿಂ ಸೌಖ್ಯಮರೋಗಿತಾ**
**ಜಗತಿ ಜಂತೋಃ ।**
**ಕಃ ಸ್ನೇಹಃ ಸದ್ಭಾವಃ ಕಿಂ ಪಾಂಡಿತ್ಯಂ ಪರಿಚ್ಛೇದಃ ॥೫॥**

*— ಹಿತೋಪದೇಶ, ಮಿತ್ರಲಾಭ - ೧೧೧*

"ಧರ್ಮ ಯಾವುದು? ಪ್ರಾಣಿದಯೆಯೇ ಧರ್ಮ. ಸುಖವು ಯಾವುದು? ರೋಗವಿಲ್ಲದೆ ಆರೋಗ್ಯದಿಂದಿರುವುದು ಈ ಲೋಕದಲ್ಲಿ ಮನುಷ್ಯನಿಗೆ ಸುಖ. ಸ್ನೇಹವೆಂದರೇನು? ಒಳ್ಳೆಯ ಭಾವನೆಯೇ

ಸ್ನೇಹ. ಪಾಂಡಿತ್ಯ ಯಾವುದು? ವಿವೇಕದಿಂದ ಮಾಡುವ ವಸ್ತು ವಿಮರ್ಶೆ."

ಪ್ರಾಣಿದಯೆ ಎಲ್ಲ ಧರ್ಮಗಳಲ್ಲಿಯೂ ಶ್ರೇಷ್ಠವಾದದ್ದು. ದಯೆಗೆ ಎರಡು ಮುಖಗಳುಂಟು. ಅನ್ಯರ ಕಷ್ಟಗಳಲ್ಲಿ ಪಾಲ್ಗೊಂಡು ಅವರ ನೋವನ್ನು ಪರಿಹರಿಸುವುದೊಂದು; ತನ್ನಿಂದ ಅನ್ಯರಿಗೆ ಹಿಂಸೆಯಾಗದಂತೆ ನೋಡಿಕೊಳ್ಳುವುದು ಮತ್ತೊಂದು. ಈ ಎರಡನೆಯ ಮುಖ ಕೇವಲ ನಿಷೇಧಾತ್ಮಕವಾದದ್ದು. ಅದು ಅಷ್ಟರಲ್ಲಿ ನಿಲ್ಲದೆ ಪರರ ಕಷ್ಟವನ್ನು ನೀಗಿಸುವ ಪ್ರವೃತ್ತಿಯನ್ನು ತಳೆದಾಗ ದಯೆ ಸತ್ತ್ವಯುತವಾಗುತ್ತದೆ. 'ಅಹಿಂಸಾ ಪರಮೋ ಧರ್ಮಃ!' ಅದು ಪರಮ ಧರ್ಮವಾಗುವುದು ಪ್ರವೃತ್ತಿರೂಪವಾಗುವುದರಿಂದ ಮಾತ್ರ. ಏವಂ ಚ ಭೂತದಯೆ ಅಹಿಂಸೆಗಳು ಒಂದೇ ನಾಣ್ಯದ ಎರಡು ಪಾರ್ಶ್ವಗಳಾಗುತ್ತವೆ.

ಅಹಿಂಸೆ, ಸತ್ಯ, ಅಸ್ತೇಯ (ಪರದ್ರವ್ಯವನ್ನು ಅಪಹರಿಸದಿರುವುದು), ಇಂದ್ರಿಯ ನಿಗ್ರಹ - ಇವು ನಾಲ್ಕು ಯಾವ ವರ್ಣಭೇದವೂ ಇಲ್ಲದೆ ಸಮಸ್ತ ಮಾನವರೂ ಪಾಲಿಸಬೇಕಾದ ಧರ್ಮಗಳೆಂದು ಮನು ಹೇಳಿದ್ದಾನೆ (ಮನುಸ್ಮೃತಿ, ೧೦-೬೩). ಮನು ಹೇಳಿದಂತೆ ನಡೆಯತಕ್ಕವರು ಮಾನವರು. ಅವರೇ ಮನುವಂಶದವರು. ಅದನ್ನು ಮನ್ನಿಸದವರು ಮಾನವರೆನಿಸಿಕೊಳ್ಳಲಾರರು. 'ವಿಶ್ವಮಾನವ' ಎಂಬ ದೊಡ್ಡ ಶಬ್ದವನ್ನು ಬಳಸತಕ್ಕವರು ಇದನ್ನು ಗಮನಿಸಬೇಕು. ವಿಚಾರಮಾಡಿ ನೋಡಿದಾಗ ಅಹಿಂಸೆ ಮೊದಲಾದ ನಾಲ್ಕು ಧರ್ಮಭೇದಗಳಿಗೆ ಭೂತದಯೆಯೇ ಆಧಾರಸ್ತಂಭವೆಂದು ಗೊತ್ತಾಗುತ್ತದೆ.

ಮಾನವನು ಆತ್ಮಜ್ಞಾನವನ್ನು ಪಡೆಯಬೇಕಾದರೆ 'ಸರ್ವಭೂತಾತ್ಮಭೂತಾತ್ಮ' ನಾಗಿರಬೇಕೆಂದು ಭಗವದ್ಗೀತೆಯಲ್ಲಿ ಹೇಳಿದೆ (೫-೭). ಸರ್ವ ಪ್ರಾಣಿಗಳ ಆತ್ಮವೇ ತನ್ನ ಆತ್ಮನೆಂದು ಆತನು ಹೃದಯದಲ್ಲಿ ದೃಢವಾಗಿ ನಂಬಿರಬೇಕು. 'ತನ್ನಂತೆ ಪರರು' ಎಂಬ ಮಾತಿಗಿಂತ ಮುಂದೆ ಹೋಗಿ 'ತಾನೇ ಪರರು, ಪರರೆಂದರೆ ತಾನೇ' ಎಂದು ಭಗವದ್ಗೀತೆ ಹೇಳಿದೆ. ಇದನ್ನು ಮನಸ್ಸಿಗೆ ತಂದುಕೊಂಡಾಗ ಭೂತದಯೆಯೆಂದರೆ ತನ್ನ ವಿಷಯದಲ್ಲಿ ಇರಿಸಿಕೊಂಡ ಅನುಕಂಪೆಯೇ ಆಗಿಬಿಡುತ್ತದೆ. ಜಗತ್ತಿನಲ್ಲಿರುವ ಸಕಲ ನೀತಿಸಂಹಿತೆಗಳ ಸಾರವೂ ಮೂಲರಹಸ್ಯವೂ 'ಸರ್ವಭೂತಾತ್ಮಭೂತಾತ್ಮಾ' ಎಂಬ ಮಾತಿನಲ್ಲಡಗಿದೆ.

ಅನ್ಯರಿಗೆ ಒಳ್ಳೆಯದಾಗಲೆಂಬ ಭಾವನೆ ಸದ್ಭಾವ. ಅದೇ ಸ್ನೇಹ. ಕೇವಲ ತನ್ನ ಹಿತಕ್ಕಾಗಿ ಬಳಸಿಕೊಳ್ಳಲು ಬೆಳೆಸಿದ ಪರಿಚಯ ಸ್ನೇಹವಲ್ಲ, ಅದೊಂದು ಸ್ವಾರ್ಥಪರವಾದ ಕೂಟತಂತ್ರ. ಈ ತಂತ್ರದಲ್ಲಿ ತಾನೊಬ್ಬನೇ 'ಭೂತ'ನಾಗಿರುತ್ತಾನೆ! ಈ 'ಭೂತತಂತ್ರ'ವೇ ಸಾಮಾನ್ಯವಾಗಿ ಇಂದು ಸ್ನೇಹವೆಂಬ ಹೆಸರಿನಲ್ಲಿ ಮೆರೆಯುತ್ತದೆ!

ಸರಿ-ತಪ್ಪುಗಳನ್ನು ಪಕ್ಷಪಾತವಿಲ್ಲದೆ ತುಲನಾತ್ಮಕವಾಗಿ ವಿವೇಚಿಸುವ ಶಕ್ತಿ ಪಾಂಡಿತ್ಯ. ವ್ಯಾಪಾರಿಯು ಎಲ್ಲ ಪದಾರ್ಥಗಳನ್ನೂ ತೂಗಿ ನೋಡುವಂತೆ ಗುಣದೋಷಗಳನ್ನು ತೂಗುವ ಸಾಮರ್ಥ್ಯ ಇದು. ಈ ಸಾಮರ್ಥ್ಯ ಎಲ್ಲರಿಗೂ ಲಭ್ಯವಲ್ಲ. ತೂಗುವಾಗ ಪೂರ್ವಗ್ರಹದಿಂದಾದ ಪಕ್ಷಪಾತ ಅಡ್ಡಿಪಡಿಸುತ್ತದೆ. ನಾವು ಭೌತಿಕ ದ್ರವ್ಯಗಳನ್ನು ಸರಿಯಾಗಿ ತೂಗಬಲ್ಲ ತಕ್ಕಡಿಯನ್ನು ಕಂಡುಹಿಡಿದಿದ್ದೇವೆ. ಗುಣದೋಷಗಳನ್ನು ತೂಗುವ ತಕ್ಕಡಿಯನ್ನು ಮಾತ್ರ ಸಂಪಾದಿಸಿಕೊಂಡಿಲ್ಲ.

**ಸಮರಭರಃ ಸುಭಟಾನಾಂ ಫಲಾನಿ ಕರ್ಣೇಜಪೈಸ್ತು ಭೋಗ್ಯಾನಿ ।**
**ಕರಿದಶನಾ ಇವ ನೃಪತೇಃ ಬಾಹ್ಯಾಃ ಕ್ಲೇಶಾಯ ಖಾದನೇಽಂತಸ್ಥಾಃ ॥೬॥**

*— ಯಶಸ್ತಿಲಕ, ೩-೨೭೪*

"ಯುದ್ಧದ ಹೊರೆಯನ್ನು ಹೊತ್ತು ಕ್ಲೇಶಪಡತಕ್ಕವರು ಸೈನಿಕರು. ಅದಕ್ಕೆ ಫಲವಾಗಿ ದೊರೆಯುವ ಸುಖವನ್ನು ಭೋಗಿಸತಕ್ಕವರು ಚಾಡಿಖೋರರಾದ ರಾಜ ಮತ್ತು ಅವನ ಸಮೀಪದವರು. ಆನೆಯ ಕೋರೆಹಲ್ಲುಗಳಂತೆ ಹೊರಗೆ ಇರತಕ್ಕವರು ಕಷ್ಟಕ್ಕೆ ಒಳಗಾಗುತ್ತಾರೆ: ಬಾಯೊಳಗಿರುವ ಹಲ್ಲುಗಳಂತೆ ಒಳಗಿರುವವರು ತಿನ್ನತಕ್ಕವರು."

ರಾಜ, ಮಂತ್ರಿ, ಮಿತ್ರವರ್ಗ, ರಾಷ್ಟ್ರ, ಕೋಟೆ, ಬೊಕ್ಕಸ, ಸೈನ್ಯ - ಇವು ಏಳು ರಾಜ್ಯಾಂಗಗಳೆಂದು ರಾಜ್ಯಶಾಸ್ತ್ರ ಹೇಳುತ್ತದೆ. ಕಾಲಾನುಗುಣವಾಗಿ ಇವುಗಳ ಸ್ವರೂಪವು ಸ್ವಲ್ಪ ಭಿನ್ನವಾಗಿರಬಹುದು. ರಾಜನೆಂದರೆ ಈಗ ರಾಷ್ಟ್ರಪತಿಯೋ ಪ್ರಧಾನಿಯೋ ಆಗಬಹುದು. ಅಂತೂ ರಾಷ್ಟ್ರದ ಆಡಳಿತವನ್ನು ನೋಡಿಕೊಳ್ಳುವ ಒಬ್ಬ ವ್ಯಕ್ತಿ ಇರಲೇಬೇಕಾಗುತ್ತದೆ. ಮಿತ್ರವರ್ಗವು ಉತ್ತಮವಾದ ವಿದೇಶಾಂಗ ನೀತಿಯಿಂದ ಏರ್ಪಡತಕ್ಕದ್ದು. ರಾಷ್ಟ್ರವೆಂದರೆ ಪ್ರಜಾಸಮುದಾಯವಿರುವ ಭೂಖಂಡ. ಈ ಸಪ್ತಾಂಗಗಳು ಅನ್ಯೋನ್ಯವಾಗಿ ಹೊಂದಿಕೊಂಡು ಕಾರ್ಯತತ್ಪರವಾಗಿದ್ದಲ್ಲಿ ಸರ್ವರಿಗೂ

ಕ್ಷೇಮ. 'ಪರಸ್ಪರೋಪಕಾರೀದಂ ಸಪ್ತಾಂಗಂ ರಾಜ್ಯಮುಚ್ಯತೇ' ಎಂದು ಕಾಮಂದಕನು ಹೇಳುತ್ತಾನೆ. ಏಳು ರಾಷ್ಟ್ರಾವಯವಗಳು ಕಣ್ಣು ಮೊದಲಾದ ಅವಯವಗಳಂತೆ ಪರಸ್ಪರೋಪಕಾರಿಗಳು. ಸೈನ್ಯದ ಮುಖ್ಯ ಕರ್ತವ್ಯ ರಾಷ್ಟ್ರರಕ್ಷಣೆ. ದೇಶದೊಳಗಡೆ ಪುಂಡರು ದಂಗೆಯೆದ್ದಾಗ, ಶತ್ರುಗಳು ದೇಶದ ಮೇಲೆ ದುರಾಕ್ರಮಣವನ್ನೆಸಗಿದಾಗ ಸೈನ್ಯದ ಬಳಕೆ ಆವಶ್ಯಕವಾಗುತ್ತದೆ.

ರಾಜನು ಅನ್ಯರಾಷ್ಟ್ರದ ಮೇಲೆ ದುರಾಕ್ರಮಣವೆಸಗಿದಾಗ ನಾನಾ ಕಷ್ಟಗಳಿಗೆ ಒಳಗಾಗತಕ್ಕವರು ಸೈನಿಕರು. ಫಲವಾಗಿ ದೊರಕಬಹುದಾದ ಸುಖಭೋಗಗಳು, ರಾಜನಿಗೆ ಮತ್ತು ರಾಜಪರಿವಾರದವರಿಗೆ. ಘೋರಿ ಮಹಮ್ಮದನಿಂದ ಹಿಡಿದು ದಾಳಿಕಾರರ ಮತ್ತು ಚಾಡಿಖೋರರ ಕೃತ್ಯಗಳಿಂದಾದ ಪರಿಣಾಮಗಳು ಇಂತಹವೇ. ಭಾರತದ ಸ್ವಾತಂತ್ರ್ಯಕ್ಕಾಗಿ ದುಡಿದವರಲ್ಲಿ ಎಷ್ಟು ಜನರು ಫಲಭಾಗಿಗಳಾದರು? ಗಾಂಧಿಯವರಿಗೆ ಪ್ರಾಣಾರ್ಪಣೆಯೇ ಫಲವಾಯಿತು. ಸ್ವಾತಂತ್ರ್ಯಸಮರದಲ್ಲಿ ಯಾವ ದುಡಿಮೆಯನ್ನೂ ಮಾಡದೆ ಕೈಕಟ್ಟಿ ಕುಳಿತವರಿಗೆ ರಾಷ್ಟ್ರದಲ್ಲಿ ಸಮಪಾಲು ದೊರೆಯಿತು.

ಇದೇ ಪರಿಸ್ಥಿತಿ ರಾಷ್ಟ್ರದ ನಾನಾ ವ್ಯವಸ್ಥೆಗಳಿಗೂ ತಪ್ಪಿದ್ದಲ್ಲ. ಕಾರ್ಮಿಕರ ಶ್ರಮದ ಫಲ ಮಾಲಿಕನಿಗೆ. ರೈತರ ದುಡಿಮೆಯ ಫಲ ಮಧ್ಯಸ್ಥರಿಗೆ. ಆನೆಗಳ ಕೋರೆಹಲ್ಲುಗಳು ಗಿಡಮರಗಳನ್ನು ಸೀಳಿ ಉರುಳಿಸುತ್ತವೆ. ಗರಗಸದ ಕೊಯಿತಕ್ಕೂ ಈಡಾಗುತ್ತವೆ. ಬಾಯೊಳಗಿರುವ ಹಲ್ಲುಗಳು ಮೆಲ್ಲುತ್ತವೆ.

**ಜ್ಞಾನವೃದ್ಧಾ ವಯೋವೃದ್ಧಾಃ ಶೀಲವೃದ್ಧಾಶ್ಚ ಯೇ ನರಾಃ ।**
**ತೇ ಸರ್ವೇ ಧನವೃದ್ಧಸ್ಯ ದ್ವಾರಿ ತಿಷ್ಠಂತಿ ಕಿಂಕರಾಃ ॥೭॥**

— *ಅಜ್ಞಾತಮೂಲ*

"ಜ್ಞಾನವೃದ್ಧರೆಂದೂ ವಯೋವೃದ್ಧರೆಂದೂ ಶೀಲಸಂಪನ್ನರೆಂದೂ ಖ್ಯಾತರಾದ ಯಾವ ಜನರಿದ್ದಾರೋ ಅವರೆಲ್ಲರೂ ಧನವೃದ್ಧನ ಮನೆಬಾಗಿಲಲ್ಲಿ ಸೇವಕರಾಗಿ ನಿಂತಿರುತ್ತಾರೆ."

ಶಾಸ್ತ್ರಜ್ಞರೆಂದೂ ವಿದ್ಯಾವಂತರೆಂದೂ ವಿಖ್ಯಾತರಾದವರಿದ್ದಾರೆ. ಅವರು ಜ್ಞಾನವೃದ್ಧರು. ಜ್ಞಾನಸಂಪತ್ತಿನಿಂದ ಹಿರಿಯರು. ಅವರನ್ನು ಲೋಕವು ಗೌರವದಿಂದ ಆದರಿಸುವುದು ಸಹಜ. ವಯಸ್ಸಿನಿಂದ ಹಿರಿಯರಾದವರೂ ವಿದ್ಯಾವಂತರನ್ನು

ಆದರಿಸಬೇಕೆಂದು ಧರ್ಮಶಾಸ್ತ್ರ ಹೇಳುತ್ತದೆ. ಅನಂತರ ಬರತಕ್ಕವರು ವಯೋವೃದ್ಧರು. ವಯಸ್ಸು ಸಮಾಜದಲ್ಲಿ ಗೌರವಸ್ಥಾನವನ್ನು ಪಡೆಯುತ್ತದೆ. ಬಾಳಿನ ಕಷ್ಟಕಾರ್ಪಣ್ಯಗಳ ಅನುಭವದಿಂದ ಪಕ್ವವಾದ ಜೀವ ವಯೋವೃದ್ಧನದು. ವಯಸ್ಸಿಗೂ ಮಾನ್ಯಸ್ಥಾನ ಉಂಟು. ಹಾಗೆಯೇ ಗುಣಾಢ್ಯರಾದ ಸಚ್ಛೀಲರು ಲೋಕದಲ್ಲಿ ಪೂಜಾರ್ಹರಾಗುತ್ತಾರೆ. ಇವುಗಳಂತೆ ಬಾಂಧವ್ಯವೆಂಬುದೂ ಒಂದು ಗೌರವಸ್ಥಾನ. ತಂದೆ, ತಾಯಿ, ಗುರು, ಮಾವ - ಮೊದಲಾದವರು ಪೂಜ್ಯರೆನಿಸುತ್ತಾರೆ. ಆದರೆ ಈ ಬಾಂಧವ್ಯವು ಆಯಾ ವ್ಯಕ್ತಿಗೆ ಸಂಬಂಧಿಸಿದ್ದು. ವಿದ್ಯೆ, ವಯಸ್ಸು, ಸೌಶೀಲ್ಯ - ಇವು ಮಾತ್ರ ಸರ್ವಮಾನ್ಯವಾದವು.

ಐಶ್ವರ್ಯಕ್ಕೂ ಒಂದು ಮಾನ್ಯಸ್ಥಾನ ಉಂಟು. ಅದು ವಿದ್ಯಾದಿಗಳಿಗಿಂತ ಕನಿಷ್ಠ ಸ್ಥಾನವನ್ನು ಪಡೆಯುತ್ತದೆಂದು ಧರ್ಮಶಾಸ್ತ್ರಕಾರರ ಮತ. ಲೋಕವಾದರೋ ಧನಕ್ಕೆ ಸರ್ವಮಾನ್ಯವಾದ ಅಗ್ರಸ್ಥಾನವನ್ನು ಕೊಟ್ಟಿದೆ. ಜ್ಞಾನವೃದ್ಧ, ವಯೋವೃದ್ಧ, ಶೀಲವೃದ್ಧರೆಲ್ಲ ಧನಿಕನ ಬಾಗಿಲಲ್ಲಿ ನಿಂತಿರುತ್ತಾರೆ. 'ಸರ್ವೇ ಗುಣಾಃ ಕಾಂಚನಮಾಶ್ರಯಂತೇ'.

ನಮ್ಮ ಪ್ರಜಾಪ್ರಭುತ್ವದಲ್ಲಿ ಈ ಧನವೃದ್ಧನನ್ನೂ ತನ್ನ ಬಾಗಿಲಿಗೆ ಕರೆಸಬಲ್ಲ ಇನ್ನೊಬ್ಬ ಅಧಿಕವೃದ್ಧನು ಹುಟ್ಟಿಕೊಂಡಿದ್ದಾನೆ. ಅವನೇ ಅಧಿಕಾರವೃದ್ಧ! ಸಚಿವರಿಂದ ಹಿಡಿದು ಕಾರಕೂನನವರೆಗೆ ಈ ಅಧಿಕಾರವು ಯಥೋಚಿತವಾಗಿ ಹಂಚಿಕೊಂಡಿದೆ; ದೊಡ್ಡ ಅಧಿಕಾರಿಗಳು, ಇಲಾಖೆಯ ಮುಖ್ಯಸ್ಥರು, ನಾನಾ ಸಮಿತಿಗಳ ಅಧ್ಯಕ್ಷರು - ಇವರಲ್ಲಿ ತಳವೂರಿ ಕುಳಿತಿರುತ್ತದೆ. ಧನವೃದ್ಧರೂ ಈ ಪ್ರಭುಗಳಿಗೆ ಸುವರ್ಣಪುಷ್ಪಗಳನ್ನರ್ಪಿಸುತ್ತ ಅಷ್ಟೋತ್ತರ ನಾಮಗಳಿಂದ ಪೂಜಿಸುವುದುಂಟು. ಸಾರ್ವತ್ರಿಕ ಚುನಾವಣೆಗಳು ಬಂದಾಗಲಂತೂ ಸಹಸ್ರಾರ್ಚನೆ, ಲಕ್ಷಾರ್ಚನೆಗಳಿಗೆ ಲೆಖ್ಖವಿಲ್ಲ. ಮೇಲ್ಕಂಡ ಸುಭಾಷಿತವನ್ನು ಈಗ ಹೀಗೆ ಪರಿವರ್ತಿಸಿಕೊಳ್ಳಬಹುದು :

> ಜ್ಞಾನವೃದ್ಧಾ ವಯೋವೃದ್ಧಾಃ ಶೀಲವೃದ್ಧಾಶ್ಚ ಯೇ ನರಾಃ ।
> ಧನವೃದ್ಧಾಶ್ಚ ತೇ ಸರ್ವೇ ಪ್ರಭುತಾವೃದ್ಧಕಿಂಕರಾಃ ॥

**ಯಸ್ಮಿನ್ ದೇಶೇ ಯ ಆಚಾರೋ ವ್ಯವಹಾರಃ ಕುಲಸ್ಥಿತಿಃ ।**
**ತಥೈವ ಪರಿಪಾಲ್ಯೋಽಸೌ ಯದಾ ವಶಮುಪಾಗತಃ ॥೮॥**

— *ಯಾಜ್ಞವಲ್ಕ್ಯಸ್ಮೃತಿ, ೧-೩೪೩*

"ಒಂದು ದೇಶವನ್ನು ವಶಪಡಿಸಿಕೊಂಡಾಗ ಆ ದೇಶದಲ್ಲಿ ಪ್ರಚುರವಾಗಿರತಕ್ಕ ಆಚಾರ, ವ್ಯವಹಾರ, ಕುಟುಂಬ ಮರ್ಯಾದೆಗಳನ್ನು ಮೊದಲು ಹೇಗಿದ್ದವೋ ಹಾಗೆಯೇ ಉಳಿಸಿ ಪಾಲಿಸಬೇಕು."

ವಿವಾಹಾದಿ ಸಂಸ್ಕಾರಗಳಿಗೆ ಸಂಬಂಧಿಸಿದ ನಡವಳಿಕೆ ಆಚಾರವೆನಿಸುತ್ತದೆ. ಇದು ವಿಶೇಷವಾಗಿ ಧರ್ಮಕ್ಕೆ ಸಂಬಂಧಿಸಿದ್ದು. ಧಾರ್ಮಿಕವಾದ ಈ ಆಚಾರದ ಮೂಲವು ಧರ್ಮಶಾಸ್ತ್ರವೇ ಆಗಿದ್ದರೂ ದೇಶಭೇದದಿಂದ ಅದರ ಆಚರಣೆ ಸ್ವಲ್ಪ ಭಿನ್ನವಾಗಿರಬಹುದು. ಮೂಲತತ್ತ್ವದಲ್ಲಿ ಭೇದವೇನೂ ಇರುವುದಿಲ್ಲ. ಭಾಷೆ, ವಸ್ತ್ರವೇಷಾದಿಗಳು, ಸಮಾಜದಲ್ಲಿ ಅನ್ಯೋನ್ಯವಾಗಿ ನಡೆದುಕೊಳ್ಳತಕ್ಕ ರೀತಿ - ಇವೆಲ್ಲವೂ ವ್ಯವಹಾರದ ಗುಂಪಿಗೆ ಸೇರತಕ್ಕವು. ಕನ್ನಡ, ತಮಿಳು, ಮರಾಠಿ - ಮುಂತಾದ ಭಾಷೆಗಳು ಆಯಾ ದೇಶಗಳಲ್ಲಿ ಬಳಕೆಯಲ್ಲಿರತಕ್ಕವು. ಅವುಗಳಲ್ಲಿ ಆ ದೇಶೀಯರಿಗೆ ಅಭಿಮಾನವಿರತಕ್ಕದ್ದು ಸಹಜ. ಹಾಗೆಯೇ ಉಡುಪುತೊಡಪುಗಳೂ ಬೇರೆಯಾಗಿರುತ್ತವೆ. ಕುಲಸ್ಥಿತಿ ಎಂದರೆ ಒಂದು ಕುಟುಂಬದಲ್ಲಿ ಹಿಂದಿನಿಂದ ಬಂದಿರುವ ಸಂಪ್ರದಾಯ: ಅವಿಭಕ್ತಕುಟುಂಬ ಪದ್ಧತಿ, ಆಸ್ತಿಯ ಒಡೆತನ - ಮುಂತಾದವು.

ಇವೆಲ್ಲವೂ ಆಯಾ ಪ್ರಜೆಗಳ ಮೇಲೆ ಗಾಢವಾದ ಪರಿಣಾಮವನ್ನು ಬೀರಿರುತ್ತವೆ. ಅವುಗಳನ್ನು ಸಡಿಲಿಸಲು ಯತ್ನಿಸಿದರೆ ಪ್ರಜೆಗಳಲ್ಲಿ ಕ್ಷೋಭೆಯುಂಟಾಗುವುದು ಅಚ್ಚರಿಯಲ್ಲ. ಪ್ರಜಾಕ್ಷೋಭೆಯಾಗದಂತೆ ಎಚ್ಚರಿಕೆ ವಹಿಸುವುದು ಆಡಳಿತಗಾರರ ಪ್ರಥಮ ಕರ್ತವ್ಯ. ಸಾಮಾನ್ಯಧರ್ಮಕ್ಕೆ ವ್ಯತಿರಿಕ್ತವಲ್ಲದಿದ್ದಾಗ, ಈ ಆಚಾರ ವ್ಯವಹಾರಗಳಲ್ಲಿ ಕೈಹಾಕದಿರುವುದೇ ರಾಜನಿಗೆ ಹಿತಕರ. ಹಿಂದೂ ರಾಜರು ಸರ್ವದಾ ಪಾಲಿಸಿಕೊಂಡು ಬಂದಿದ್ದ ರಾಜನೀತಿ ಇದು. ರಾಜಸೂಯ, ಅಶ್ವಮೇಧಯಾಗಗಳ ಸಂದರ್ಭದಲ್ಲಿ ಆ ರಾಜನು ಅನ್ಯದೇಶಗಳನ್ನು ಗೆದ್ದು ಕಪ್ಪ-ಕಾಣಿಕೆಗಳನ್ನು ತರುತ್ತಿದ್ದುದುಂಟು. ಆದರೆ ಯಾವ ಚಕ್ರವರ್ತಿಯೂ ಅಧೀನರಾಜ್ಯಗಳ ಆಡಳಿತದ ವಿಷಯದಲ್ಲಿ ಕೈಹಾಕುತ್ತಿರಲಿಲ್ಲ. ಸಾಮಂತರಾಜನು ಧರ್ಮವಿರೋಧಿಯಾಗಿ ಪ್ರಜಾಪೀಡಕನಾದಾಗ ಮಾತ್ರ ಚಕ್ರವರ್ತಿ ಕತ್ತಿಯನ್ನು ಎತ್ತುತ್ತಿದ್ದ. ವಾಲಿಯನ್ನು ಸಂಹರಿಸಿದ ಮೇಲೆ ಶ್ರೀರಾಮನು ಕಿಷ್ಕಿಂಧೆಯನ್ನು ಸುಗ್ರೀವನಿಗೆ ವಹಿಸಿದನೇ ಹೊರತು ಕಿಷ್ಕಿಂಧೆಯೊಳಗೆ ಕಾಲಿಡಲಿಲ್ಲ. ಆತನೇ ರಾವಣನನ್ನು ವಧಿಸಿದ ಮೇಲೆ ಲಂಕಾರಾಜ್ಯವನ್ನು ವಿಭೀಷಣನಿಗೆ ವಹಿಸಿಕೊಟ್ಟನೇ ಹೊರತು, ಲಂಕೆಯೊಳಗೆ

ಇಣಿಕಿಯೂ ನೋಡಲಿಲ್ಲ. ರಾಜಸೂಯ, ಅಶ್ವಮೇಧಗಳಲ್ಲಿ ಭೀಮಾರ್ಜುನರು ಭರತಖಂಡವನ್ನೇ ಜಯಿಸಿಕೊಟ್ಟರೂ ಧರ್ಮರಾಜನ ಆಡಳಿತ ಹಸ್ತಿನಾವತಿಗೆ ಸೀಮಿತವಾಗಿತ್ತು. ವಿಜಯನಗರದ ಬುಕ್ಕರಾಜನು ತನ್ನ ಮಗನಾದ ಕಂಪಣನನ್ನು ಕಳಿಸಿ ತಮಿಳುನಾಡಿನ ಮಧುರೆಯನ್ನು ಮುಸಲ್ಮಾನರ ದುರಾಡಳಿತದಿಂದ ಬಿಡಿಸಿದನೇ ಹೊರತು, ಅಲ್ಲಿ ಕನ್ನಡದ ಧ್ವಜವನ್ನೇರಿಸಲಿಲ್ಲ.

ಆದರೆ ವಿದೇಶೀಯರು ಭಾರತವನ್ನು ಆಕ್ರಮಿಸಿದಾಗ ಅವರ ನಡವಳಿಕೆ ತೀರ ಭಿನ್ನವಾಗಿತ್ತು. ಹಿಂದೂಗಳನ್ನು ಮತಾಂತರಗೊಳಿಸುವುದೇ ಅವರು ಮಾಡಿಕೊಂಡ ನಿಬಂಧನೆಗಳಲ್ಲಿ ಮೊದಲನೆಯ ಸೂತ್ರವಾಯಿತು. ಈ ದೇಶದವರ ಆಚಾರ, ವ್ಯವಹಾರ, ಕುಲಸ್ಥಿತಿಗಳು ಅದರಿಂದ ಬುಡಸಹಿತ ಅಲ್ಲಾಡಿದವು. ಭರತಖಂಡದಲ್ಲಿ ಜಾತಿ-ಮತ-ಭಾಷಾಭೇದಗಳು ಅನಾದಿಯಾಗಿದ್ದರೂ ರಾಜಕೀಯ ಸಂಬಂಧ ಅವುಗಳಿಗೆ ಇರಲಿಲ್ಲ. ಜಾತಿ ಮತ್ತು ರಾಜಕೀಯಗಳಿಗೆ ತಳಕುಹಾಕಿ ಅಂಟಿಸಿದವರೇ ವಿದೇಶೀಯರು. ಸ್ವಾತಂತ್ರ್ಯೋತ್ತರದಲ್ಲಿ ಭಾಷೆಯನ್ನೂ ಇದರೊಡನೆ ಸೇರಿಸಿ ಮುಪ್ಪುರಿಯ ಕಗ್ಗಂಟನ್ನು ಮಾಡಿದವರು ಈಗಿನ ರಾಜಕೀಯ ಮುಖಂಡರು. ಆಧುನಿಕ ಸ್ಮೃತಿಕಾರರೆದುರಿಗೆ ಯಾಜ್ಞವಲ್ಕ್ಯರು ತಲೆತಗ್ಗಿಸಿದರು!

**ಆಜನ್ಮಮರಣಾಂತಂ ಚ ಗಂಗಾದಿತಟನೀಸ್ಥಿತಾಃ ।**
**ಮಂಡೂಕಮತ್ಸ್ಯಪ್ರಮುಖಾ ಯೋಗಿನಸ್ತೇ ಭವಂತಿ ಕಿಮ್ ॥೯॥**

— *ಗರುಡಪುರಾಣ, ೧೬-೬೮*

“ಕಪ್ಪೆ, ಮೀನು ಮೊದಲಾದ ಪ್ರಾಣಿಗಳು ಗಂಗಾನದಿಯೇ ಮೊದಲಾದ ಪವಿತ್ರನದಿಗಳಲ್ಲಿ, ಹುಟ್ಟಿದ ಮೊದಲುಗೊಂಡು ಸಾಯುವವರೆಗೂ ನೆಲೆಸಿರುತ್ತವೆ. ಅಷ್ಟುಮಾತ್ರದಿಂದ ಅವು ಯೋಗಿಗಳಾಗಿಬಿಡುತ್ತವೆಯೇನು?”

ಯೋಗವು ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ - ಇತ್ಯಾದಿ ನಾನಾ ವಿಧವಾಗಿದೆ. ಫಲಾಪೇಕ್ಷೆ ಇಲ್ಲದೆ ಈಶ್ವರಾರ್ಪಣಬುದ್ಧಿಯಿಂದ ಕರ್ತವ್ಯವನ್ನು ನೆರವೇರಿಸುತ್ತಿರುವುದು ಕರ್ಮಯೋಗ. ಭಗವಂತನ ಸ್ವರೂಪವನ್ನು ಚಿಂತಿಸುತ್ತ ಸದಾ ಈಶ್ವರಧ್ಯಾನದಲ್ಲಿ ತೊಡಗಿರುವುದು ಭಕ್ತಿಯೋಗ. ಭಗವಂತನ

ಸತ್ಯಸ್ವರೂಪವನ್ನರಿತು ಸರ್ವವೂ ಆತ್ಮವೇ ಎಂದು ನಿಶ್ಚಯಿಸಿ ಶಾಂತನಾಗಿರುವುದು ಜ್ಞಾನಯೋಗ. ಭಕ್ತಿಯೋಗವು ಕರ್ಮ, ಜ್ಞಾನಗಳೆರಡರ ತಳದಲ್ಲಿಯೂ ಇದ್ದು ಅವುಗಳ ಸಿದ್ಧಿಗೆ ಆಧಾರವಾಗಿರುತ್ತದೆ. ಇವುಗಳ ಸಾಧನೆಗೆ ಮನಸ್ಸಿಗಿರುವ ನಿಗ್ರಹಶಕ್ತಿ ಉಪಕರಿಸುತ್ತದೆ. ಮನೋವಿಕಾರಗಳನ್ನು ನಿಗ್ರಹಿಸುತ್ತಹೋದಂತೆ ಮನಸ್ಸಿನಲ್ಲಿ ಹುಟ್ಟುವ ಕೆಟ್ಟ ಭಾವನೆ ಕಡಮೆಯಾಗುತ್ತ ಕಾಲಕ್ರಮದಲ್ಲಿ ನಶಿಸಿಹೋಗುತ್ತದೆ. ದುಷ್ಟಚಿಂತನೆ ಅಡಗಿದಾಗ ಸದ್ಭಾವನೆ ತಾನಾಗಿ ಎದ್ದುಕೊಳ್ಳುತ್ತದೆ. ಸಜ್ಜನರ ಸಹವಾಸ, ಸದ್ಗ್ರಂಥಗಳ ಅವಲೋಕನ - ಇವೆರಡು ಬೆಳಕನ್ನು ಪಡೆಯುವ ಮುಖ್ಯ ಸಾಧನಗಳು. ಸತ್ಸಂಗವೆಂಬ ಒಂದೇ ಶಬ್ದದಲ್ಲಿ ಇವನ್ನು ಅಡಕಗೊಳಿಸಬಹುದು.

ರಾಷ್ಟ್ರಭಕ್ತಿ, ಉತ್ತಮವಾದ ನಡವಳಿಕೆ - ಮೊದಲಾದ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಹಿರಿಯರು ಉಪನ್ಯಾಸ ಮಾಡುತ್ತಲೇ ಇರುತ್ತಾರೆ. ಇವರ ಹಿರಿಯತನ ಸ್ಥಾನಬಲದಿಂದ ಲಭಿಸಿದ್ದು. ಆದರೆ ಜ್ಞಾನ, ಶೀಲಾದಿ ಗುಣಗಳಿಂದಾಗಿ ಕಿರಿಯನಾದವನೂ ಸ್ಥಾನಬಲದಿಂದ ಹಿರಿಯನಾಗುತ್ತಾನೆ.

ಸದ್ಗುಣಗಳನ್ನು ಬೆಳೆಸಿಕೊಳ್ಳುವುದು ಹೇಗೆ? ಮಹಾತ್ಮ ಗಾಂಧಿಯವರ ಸಮೀಪದಲ್ಲಿ ಬಹಳ ಜನ ಬೆಳೆದು ವಿಖ್ಯಾತರಾದರು. ಗಾಂಧಿಜೀಯವರ ಪ್ರಭಾವ ಅವರ ಮೇಲೆ ಕೆಲಸಮಾಡಿದ್ದು ಹೌದು. ಆ ಪ್ರಭಾವವು ತಾತ್ಕಾಲಿಕವೂ ಕ್ಷಣಿಕವೂ ಆಗಿತ್ತು. ಸ್ವತಃಸಿದ್ಧವಾದ ದುಷ್ಟಸಂಸ್ಕಾರ ಅಳಿಯಲೇ ಇಲ್ಲ. ಗಾಂಧಿಜೀಯವರ ಸಹವಾಸ ತಪ್ಪಿದೊಡನೆ, ಮಳೆಗಾಲ ಬಂದೊಡನೆ ವಟಗುಟ್ಟುವ ಕಪ್ಪೆಗಳಂತೆ, ಆ ಸಂಸ್ಕಾರಗಳು ಕುಪ್ಪಳಿಸತೊಡಗಿದವು. ತಾನು ಉತ್ತಮನಾಗಬೇಕೆಂಬ ತೀವ್ರವಾದ ಕುತೂಹಲವು ಮೊಳೆಯದಾಗ, ಸಹವಾಸದಿಂದ ಲಭಿಸುವ ಫಲ ಸೊನ್ನೆಯೇ. ಶ್ರೀ ರಾಮಕೃಷ್ಣ ಪರಮಹಂಸರು ಗಳಿಸಿದ ಸಿದ್ಧಿಯು ಸಂಸ್ಕಾರಜನ್ಯವಾದ ತೀವ್ರ ಕುತೂಹಲದಿಂದ; ಸಹವಾಸಬಲದಿಂದಲ್ಲ.

**ಅನುಗಂತುಂ ಸತಾಂ ವರ್ತ್ಮ ಯದಿ ಕೃತ್ಸ್ನಂ ನ ಶಕ್ಯತೇ ।**
**ಸ್ವಲ್ಪಮಪ್ಯನುಗಂತವ್ಯಂ ಮಾರ್ಗಸ್ಥೋ ನಾವಸೀದತಿ ॥೧೦॥**

— *ಸುಭಾಷಿತಸುಧಾನಿಧಿ*

"ಸಜ್ಜನರು ತೋರಿಸಿಕೊಟ್ಟ ಮಾರ್ಗವನ್ನು ಪೂರ್ತಿಯಾಗಿ ಅನುಸರಿಸಲು ಸಾಧ್ಯವಿಲ್ಲವೆನಿಸಿದರೆ, ಸ್ವಲ್ಪವಾದರೂ ಅನುಸರಿಸಿ ಆ ದಾರಿಯಲ್ಲಿ

ಹೋಗುತ್ತಿರಬೇಕು. ಹೀಗೆ ಸಜ್ಜನರ ದಾರಿಯನ್ನು ಹಿಡಿದವನು ಎಂದಿಗೂ ಕೆಡುವುದಿಲ್ಲ."

ಶ್ರೀರಾಮನು ವನವಾಸಕ್ಕೆ ಹೋಗಲು ದೃಢಸಂಕಲ್ಪನಾಗಿ ಕೌಸಲ್ಯೆಗೆ "ಅಮ್ಮ, ನಾನು ತಂದೆಯ ಮಾತನ್ನು ಪಾಲಿಸುತ್ತಿದ್ದೇನೆ. ಪಿತೃವಾಕ್ಯಪರಿಪಾಲನೆ ನಮ್ಮ ಧರ್ಮ. ನಾನೇನೂ ಹೊಸ ಮಾರ್ಗವನ್ನು ಪ್ರವರ್ತಿಸುತ್ತಿಲ್ಲ. ಗತೋ ಮಾರ್ಗೋಽನುಗಮ್ಯತೇ - ಹಿಂದಿನವರು ಹೋದ ದಾರಿಯಲ್ಲೆ ಹೋಗುತ್ತಿದ್ದೇನೆ" ಎಂದು ನುಡಿಯುತ್ತಾನೆ (ಅಯೋ., ೧೨೧-೩೬). ಮುಂದೆ ಭಿನ್ನಸಂದರ್ಭಗಳಲ್ಲಿ ಬೇರೆ ದಾರಿಯನ್ನು ತುಳಿಯಬೇಕಾದ ಪ್ರಸಂಗ ಬಂದಾಗ ಸಹ "ಇಲ್ಲ, ನನ್ನ ಹಿರಿಯರು ಹಾಕಿಕೊಟ್ಟ ಮಾರ್ಗ ಇದಲ್ಲ" ಎಂದುಬಿಡುತ್ತಾನೆ. 'ಗತೋ ಮಾರ್ಗೋಽನುಗಮ್ಯತೇ' ಎಂಬುದು ಬಹಳ ದೊಡ್ಡ ಮಾತು.

ಈ ಶ್ರದ್ಧೆಯಿಂದಲೇ ಇಂದು ವೇದಶಾಸ್ತ್ರಾಧ್ಯಯನಾದಿಗಳು ಸ್ವಲ್ಪವಾದರೂ ಜೀವಂತವಾಗಿವೆ. ಹಾಗೆಯೇ ಗ್ರಾಮಕೈಗಾರಿಕೆ, ಕುಶಲವಿದ್ಯೆ, ಕ್ಷೌರಿಕವೃತ್ತಿ, ಕುಂಬಾರರ ಕಸಬು, ನೇಯ್ಗೆ - ಮುಂತಾದವು ಬದುಕಿವೆ. ಹಿರಿಯರಿಂದ ಬಂದ ವಿದ್ಯೆ, ಜೀವನಮಾರ್ಗಗಳು ಸ್ವಧರ್ಮವೆನಿಸಿಕೊಂಡವು. ಮಹಾಭಾರತದಲ್ಲಿ ಬರುವ ಧರ್ಮವ್ಯಾಧನ ಕಥೆ ಒಂದು ಉದಾಹರಣೆ. ಧರ್ಮವ್ಯಾಧನು ಜ್ಞಾನಿ. ಆದರೂ ಜೀವನಕ್ಕಾಗಿ ಮಾಂಸದ ಮಾರಾಟದಲ್ಲಿ ತೊಡಗಿದ್ದವನು.

ಸ್ವಲ್ಪಮಪ್ಯನುಗಂತವ್ಯಂ - ಎಂಬುದನ್ನು ನಾವೀಗ ಅಕ್ಷರಶಃ ಪಾಲಿಸುತ್ತಿದ್ದೇವಲ್ಲವೆ? ಗಾಂಧಿಜಯಂತಿಯ ದಿನ ಟಿ.ವಿ.ಯಲ್ಲಿ ನೂಲನ್ನು ತೆಗೆಯುತ್ತೇವೆ. ಮಾತುಕೊಟ್ಟಂತೆ ಸತ್ಯದ ಒಂದಂಶವನ್ನಾದರೂ ಪಾಲಿಸುವುದಕ್ಕಾಗಿ ಯೋಜನೆಯ ಅಸ್ತಿಭಾರವನ್ನಾದರೂ ಹಾಕಿ ಕೈಬಿಡುತ್ತೇವೆ. ಅಹಿಂಸಾವ್ರತವನ್ನು ಪಾಲಿಸುವುದಕ್ಕಾಗಿ ಬುದ್ಧಜಯಂತಿಯಂದು ಮಾಂಸದ ಮಾರಾಟವನ್ನು ನಿಷೇಧಿಸುತ್ತೇವೆ; ಆ ದಿನ ಮಾಂಸವನ್ನು ತಿನ್ನಲು ಅಡ್ಡಿಯಿಲ್ಲ. 'ದಯೆಯೇ ಧರ್ಮದ ಮೂಲವಯ್ಯ' ಎಂಬ ಶರಣರ ವಚನ ನಮಗೆ ಸಂಮತ; ಆದ್ದರಿಂದಲೇ ಕಸಾಯಿಖಾನೆಯಲ್ಲಿ ಗೋವನ್ನು ಕುರಿತು "ಅಮ್ಮ, ಹತ್ತಿರ ಬಾರಮ್ಮ, ನಿನ್ನ ಕೊರಳನ್ನು ಕತ್ತರಿಸುತ್ತೇನೆ" ಎಂದು ದಯಾಪೂರ್ಣಾಂತರಂಗದಿಂದ ಕರೆಯುತ್ತೇವೆ. ಮನುಸ್ಮೃತಿಕಾರನನ್ನು ಮತ್ತೆ ಮತ್ತೆ ಬಯ್ಯುತ್ತಲೇ ಇದ್ದೇವೆ; ಆದರೆ ಸರ್ಕಾರಿ ವ್ಯವಹಾರದಲ್ಲಿ ಮಾತ್ರ ಜಾತಿಭೇದವನ್ನು ಸೌಕರ್ಯಕ್ಕಾಗಿ ಉಳಿಸಿಕೊಂಡು, ಸಮಾಜದಲ್ಲಿ ಕಾನೂನುಬಾಹಿರಗೊಳಿಸಿದ್ದೇವೆ.

'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್' ಎಂಬ ಗೀತಾವಚನ ನಮಗೆ ಮಾರ್ಗದರ್ಶಿ.

**ಆಲಸ್ಯಂ ಯದಿ ನ ಭವೇಜ್ಜಗತ್ಯನರ್ಥಃ**
**ಕೋ ನ ಸ್ಯಾದ್ ಬಹುಧನಕೋ ಬಹುಶ್ರುತೋ ವಾ?**
**ಆಲಸ್ಯಾದಿಯಮವನಿಃ ಸಸಾಗರಾಂತಾ**
**ಸಂಪೂರ್ಣಾ ನರಪಶುಭಿಶ್ಚ ನಿರ್ಧನೈಶ್ಚ ॥೧೧॥**

— *ಯೋಗವಾಸಿಷ್ಠ*

"ಈ ಜಗತ್ತಿನಲ್ಲಿ ಆಲಸ್ಯವೆಂಬ ಕೇಡು ಇಲ್ಲದೆಹೋಗಿದ್ದ ಪಕ್ಷದಲ್ಲಿ ಯಾವನು ಧನಿಕನಾಗುತ್ತಿರಲಿಲ್ಲ? ಯಾವನು ವಿದ್ಯಾವಂತ ನಾಗುತ್ತಿರಲಿಲ್ಲ? ಈ ಭೂಮಿಯು ಸಮುದ್ರಪರ್ಯಂತವಾಗಿ ಆಲಸ್ಯ ದಿಂದಲೇ ವಿದ್ಯೆಯಿಲ್ಲದ ನರಪಶುಗಳಿಂದಲೂ ದರಿದ್ರರಿಂದಲೂ ತುಂಬಿಕೊಂಡಿದೆ."

ವಸಿಷ್ಠರು ಶ್ರೀರಾಮನಿಗೆ ನೀಡಿದ ಉಪದೇಶವಿದು. ಅಲಸನೆಂದರೆ ಸೋಮಾರಿ. ಅವನ ಸ್ವಭಾವ ಆಲಸ್ಯ. ಅದೇ ಸೋಮಾರಿತನ. ಉಲ್ಲಾಸ-ಉತ್ಸಾಹಗಳಿಲ್ಲದವನು ಅಲಸ. ಕನ್ನಡದಲ್ಲಿ ಮೈಗಳ್ಳ ಎಂದು ಹೇಳುವುದುಂಟು. ಮೈಗೂ ಬುದ್ಧಿಗೂ ಶ್ರಮವನ್ನು ಕೊಡದವನು ಅಲಸ. ನಮ್ಮ ಸಾಹಿತ್ಯವು ಸರ್ವವೂ ದೈವಾಧೀನವೆಂದು ಹೇಳಿ ಜನರನ್ನು ನಿಷ್ಕ್ರಿಯಗೊಳಿಸಿದೆ ಎನ್ನುವ ಬುದ್ಧಿಜೀವಿಗಳು ಕಿವಿತೆರೆದು ಕೇಳಬೇಕಾದ ಶ್ಲೋಕವಿದು.

ಕಷ್ಟದ ದುಡಿತದಿಂದ ಹಣ, ಶ್ರಮದ ಕಲಿಕೆಯಿಂದ ವಿದ್ಯೆ - ಎನ್ನುವುದು ಸ್ವಾಭಾವಿಕವಾದ ಪ್ರಕೃತಿಸಿದ್ಧ ನಿಯಮ. ಧರ್ಮದ ತಳಕು ಇಲ್ಲದಾಗ ಈ ನಿಯಮ ಬಿದ್ದುಹೋಗುತ್ತದೆ. ಹಣದ ಗಳಿಕೆಗೆ ಇಂದು ನಾನಾ ಮಾರ್ಗಗಳು ತೆರೆದಿವೆ. ಲಕ್ಷ್ಮೀಭವನಕ್ಕೆ ಎಲ್ಲ ದಿಕ್ಕುಗಳಲ್ಲಿಯೂ ಬಾಗಿಲುಗಳುಂಟು! ಅಡ್ಡಬಾಗಿಲು, ಹಿಂಬಾಗಿಲು ಗಳಿಂದಲೂ ಒಳಗೆ ಹೋಗಬಹುದು. ಎದುರುಬಾಗಿಲಲ್ಲಿ ಮಾತ್ರ ಕಾವಲು ಗಾರರಿದ್ದಾರೆ; ಪ್ರವೇಶಿಸುವುದು ಕಷ್ಟ. ಇತರ ದ್ವಾರಗಳಿಂದ ನುಸುಳಿ ಹೋಗಿ ಹೊರಲಾರದಷ್ಟನ್ನು ಹಿರಿದು ತರಬಹುದು. 'ಅನ್ಯಾಯೇನಾರ್ಜಿತಂ ವಿತ್ತಂ' ಎಂದು ವಾಲ್ಮೀಕಿಮುನಿ ಹೇಳಿದ್ದುಂಟು. ಅಲ್ಲಿ 'ಅನ್ಯಾಯೇನ' ಎಂದು ಏಕವಚನವಿದೆ; ಈಗ

ಬಹುವಚನ ಸರಿಯಾದದ್ದು: 'ಅನ್ಯಾಯೈರಾರ್ಜಿತಂ ವಿತ್ತಂ'. ಮೈಬಗ್ಗಿಸದೆ ಅಮಿತವಾಗಿ ಆರ್ಜಿಸಲು ಶಕ್ಯವಿರುವಾಗ ಮೈಬಗ್ಗಿಸಿ ಮಿತವಾದ್ದನ್ನು ಪಡೆಯಲು ಯಾವನು ಬಯಸಿಯಾನು ?

ಸರ್ಕಾರದ ನಡವಳಿಕೆಯೂ ಆಲಸ್ಯಕ್ಕೆ ಪೋಷಕವಾಗಿದೆ. ಲಾಟರಿಯ ಮೂಲಕ ಲಕ್ಷಾಂತರ ರೂಪಾಯಿಗಳನ್ನು ಮನೆಯಲ್ಲಿ ಮಲಗಿದವರಿಗೆ ಹಂಚುತ್ತಿದೆ. ಸಾಲಮೇಳಗಳನ್ನು ನಡೆಸಿ ಬ್ಯಾಂಕುಗಳನ್ನು ಬಡಿದು ಕೋಟಿಗಟ್ಟಲೆ ಹಣವನ್ನು ಉದುರಿಸಿದ್ದಾಯಿತು. ಪ್ರಶಸ್ತಿಗಳ ನೆವದಿಂದ 'ನಿನಗೆ ಹತ್ತು ಸಾವಿರ, ಅವನಿಗೆ ಹನ್ನೆರಡು ಸಾವಿರ, ಇವಳಿಗೆ ಇಪ್ಪತ್ತು' ಎಂದು ಹಣವನ್ನು ತೂರುತ್ತಿದೆ, ಸರ್ಕಾರ. ಸ್ವಾತಂತ್ರ್ಯ ಚಳವಳಿ ಮುಗಿದು ಐವತ್ತು ವರ್ಷಗಳಾದರೂ ಸ್ವಾತಂತ್ರ್ಯವೀರರು ಹುಟ್ಟುತ್ತಲೇ ಇದ್ದಾರೆ. ಈ ವೀರರಿಗೆ ಹಣದ ಆವಶ್ಯಕತೆ ಇದೆಯೆ? - ಎಂಬ ಪ್ರಶ್ನೆಯೇ ಕೃತಘ್ನತೆಯೆಂದು ಭಾವಿಸಲಾಗಿದೆ. ಇಂತಹ ಔದಾರ್ಯ ಭೋಜರಾಜನಿಗೂ ಇದ್ದಿರಲಿಕ್ಕಿಲ್ಲ. ಈ ನೀತಿಯಿಂದ ಕುಬೇರನ ಭಂಡಾರವೂ ಬರಿದಾಗಿಹೋಗುತ್ತಿತ್ತು. ಅಷ್ಟು ಶ್ರೀಮಂತ ದೇಶ ನಮ್ಮದು! ಇಂತಹ ಸಂಗತಿಗಳಲ್ಲಿ ಸರ್ಕಾರಿ ಖಜಾನೆಗಳು ಬರಿದಾಗುವುದಿಲ್ಲ. ಏಕೆಂದರೆ, ಈ ಖಜಾನೆಗಳಲ್ಲಿರುವುದು ಬೆಳ್ಳಿ ಬಂಗಾರಗಳಲ್ಲ, ಕರೆನ್ಸಿ ನೋಟುಗಳು!

ಕೈಚಳಕದ ಜೊತೆಗೆ ಬುದ್ಧಿಚಳಕವಿದ್ದರೆ ಹಣವನ್ನು ಕೈಯಿಂದ ಕೈಗೆ ಜಿಗಿಸ ಬಹುದು. ವಿದ್ಯೆಯನ್ನು ಜಿಗಿಸುವುದು ಹೇಗೆ? 'ಸುಖಾರ್ಥಿನಃ ಕುತೋ ವಿದ್ಯಾ ಕುತೋ ವಿದ್ಯಾರ್ಥಿನಃ ಸುಖಂ' - 'ಸುಖಾರ್ಥಿಗೆ ವಿದ್ಯೆ ಬಂದೀತೆ? ವಿದ್ಯಾರ್ಥಿಗೆ ಸುಖವಿದ್ದೀತೆ?' ಎಂಬುದು ಬುದ್ಧಿಯಿಲ್ಲದವರು ಹೇಳಿದ ಮಾತು. ಆಸ್ತಿಯನ್ನು ಹಂಚಿದಂತೆ ವಿದ್ಯೆಯನ್ನು ಹಂಚಿಕೊಡಲು ಬರುತ್ತದೆ. ಕರೆನ್ಸಿ ನೋಟುಗಳಂತೆ ವಿದ್ಯಾರ್ಹತಾಪತ್ರಗಳನ್ನು ಹಂಚುತ್ತಿದ್ದೇವೆ. ಕರೆನ್ಸಿ ನೋಟು ಹೇಗೆ ರೂಪಾಯಿಗೆ ಪ್ರತಿನಿಧಿಯೋ ಹಾಗೆ ಅರ್ಹತಾಪತ್ರವು (Certificate) ವಿದ್ಯೆಗೆ ಪ್ರತಿನಿಧಿ.

ಚಾತುರ್ಯವೆಂಬ ಉಪಾಯವೊಂದಿದ್ದರೆ ಸಾಕು, ಯಾವುದಕ್ಕೂ ಶ್ರಮಿಸ ಬೇಕಾದ್ದಿಲ್ಲ. ಶ್ರಮಿಸಿದರೆ ಹೆಚ್ಚಿನ ಪ್ರಯೋಜನವೂ ಇಲ್ಲ. ಚಾತುರ್ಯವಿಲ್ಲದವನು ನರಪಶು. ಚಾತುರ್ಯವಿದ್ದರೆ ಪಶುಪತಿಯಾಗುತ್ತಾನೆ. ಪಶುಪತಿ ಎಂದರೆ ಪರಮೇಶ್ವರ, ಸರ್ವವಿದ್ಯಾಧಿಪತಿ. 'ಈಶಾನಃ ಸರ್ವವಿದ್ಯಾನಾಂ'. ಅವನು ಕುಬೇರನೂ ಆಗಬಲ್ಲ. ಯೋಗವಾಸಿಷ್ಠದ ಶ್ಲೋಕವನ್ನು ಹೀಗೆ ಬದಲಾಯಿಸಿಕೊಳ್ಳಬೇಕು —

ಚಾತುರ್ಯಂ ಯದಿ ನ ಭವೇಜ್ಜಗತ್ಕುಪಾಯಃ
ಕೋ ನ ಸ್ಯಾದ್ ವಿಗತಧನೋ ಲಘುಶ್ರುತೋ ವಾ?
ಚಾತುರ್ಯಾದಿಯಮವನಿಃ ಸಸಾಗರಾಂತಾ
ಸಂಪೂರ್ಣಾ ಪಶುಪತಿಭಿಸ್ತಥಾ ಕುಬೇರೈಃ ॥

**ಚಾಟ-ತಸ್ಕರ-ದುರ್ವೃತ್ತ-ಮಹಾಸಾಹಸಿಕಾದಿಭಿಃ ।**
**ಪೀಡ್ಯಮಾನಾಃ ಪ್ರಜಾ ರಕ್ಷೇತ್ ಕಾಯಸ್ಥೈಶ್ಚ ವಿಶೇಷತಃ ॥೧೨॥**

*— ಯಾಜ್ಞವಲ್ಕ್ಯಸ್ಮೃತಿ, ೧-೩೩೬*

"ವಂಚಕರು, ಕಳ್ಳರು, ಕೆಟ್ಟನಡತೆಯವರು, ಮಹಾಸಾಹಸಿಕರು - ಮೊದಲಾದವರು ಪ್ರಜೆಗಳನ್ನು ಪೀಡಿಸುತ್ತಾರೆ. ಅವರ ಪೀಡೆಯನ್ನು ತಪ್ಪಿಸಿ ರಾಜನು ಪ್ರಜೆಗಳನ್ನು ರಕ್ಷಿಸಬೇಕು. ವಿಶೇಷವಾಗಿ ಗುಮಾಸ್ತ ವರ್ಗದವರ ಪೀಡೆಯಿಂದ ಪ್ರಜೆಗಳನ್ನು ಪಾರುಮಾಡಬೇಕು."

ಚಟ=ಭೇದೇ ಎಂಬ ಧಾತುವಿನಿಂದ 'ಚಾಟ' ಶಬ್ದ ಬಂದಿದೆ. ಚಾಟಯತೀತಿ ಚಾಟಃ. ವಂಚನೆಯಿಂದ ಜನರನ್ನು ಭೇದಿಸಿ ಹಣವನ್ನು ದೋಚತಕ್ಕವರು ಚಾಟರು; ಠಕ್ಕರು. ಚಿಟ್‌ಫಂಡ್, ಫೈನಾನ್ಸ್ ಕಾರ್ಪೊರೇಷನ್‌ಗಳಲ್ಲಿ ಕೆಲವು ಇಂತಹವೇ. ಇನ್ನು ಕಳ್ಳಕಾಕರಿಂದ ಬಾಧೆ ಇದ್ದೇ ಇದೆ. ಮಹಾಸಾಹಸಿಕರೆಂದರೆ ಈಗಿನ ಭಯೋತ್ಪಾದಕರು. ಈ ಬಗೆಯ ಪ್ರಜಾಪೀಡಕರು ಯಾವಾಗಲೂ ಇರತಕ್ಕವರೇ. ಈಚಿನ ದಿನಗಳಲ್ಲಿ ಇವರ ವಿಜೃಂಭಣೆ ಅಧಿಕ.

ಇಲ್ಲಿ ಗಮನಿಸಬೇಕಾದದ್ದು 'ಕಾಯಸ್ಥೈಶ್ಚ ವಿಶೇಷತಃ'. ಸರ್ಕಾರಿ ಲೆಕ್ಕಪತ್ರಗಳನ್ನಿಡತಕ್ಕ ಕಾರಕೂನರು ಮತ್ತು ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು 'ಕಾಯಸ್ಥ' ವರ್ಗದವರು. ಕಾಯಸ್ಥಜಾತಿಯವರೆಂದು ಅರ್ಥವಲ್ಲ. ಈ ಜನರ ವಿಷಯದಲ್ಲಿ ರಾಜನು ವಿಶೇಷ ಎಚ್ಚರಿಕೆಯನ್ನು ವಹಿಸಬೇಕೆಂದು ಯಾಜ್ಞವಲ್ಕ್ಯರು ಹೇಳಿದ್ದಾರೆ.

ಚಾಟರೇ ಮೊದಲಾದವರು ಸರ್ಕಾರದ ಶಾಖೆಗೆ ಸೇರಿದ ಅಂತರಂಗದವರಲ್ಲ. ಅವರ ವಿಷಯದಲ್ಲಿ ಪ್ರಜೆಗಳೂ ಸಾಕಷ್ಟು ಎಚ್ಚರಿಕೆಯಿಂದಿರಲು ಸಾಧ್ಯ. 'ಕಾಯಸ್ಥವರ್ಗ'ದವರ ವಿಷಯ ಹಾಗಲ್ಲ. ಪ್ರಜೆಗಳೆಲ್ಲ ಈ ವರ್ಗದವರನ್ನು ನಂಬಿ ಆಶ್ರಯಿಸಿಕೊಂಡಿರಬೇಕಾಗುತ್ತದೆ. ಇವರು ಸರ್ವವ್ಯಾಪಿಗಳಾಗಿ ರಾಜಾಶ್ರಯದಲ್ಲಿಯೇ

ಇದ್ದು ರಾಜರಕ್ಷಣಾ ಕವಚವನ್ನು ತೊಟ್ಟಿರುತ್ತಾರೆ. ಇವರಿಂದಾಗುವ ಅಂತರಂಗಪೀಡೆಯನ್ನು ಹೊರಗೆಳೆಯುವುದು ಶಕ್ಯವಲ್ಲ.

**ಕಾಯಸ್ಥೇನೋದರಸ್ಥೇನ ಮಾತೃಮಾಂಸಂ ನ ಭಕ್ಷಿತಂ ।**
**ನ ತತ್ರ ಕರುಣಾ ಹೇತುಃ, ತತ್ರ ಹೇತುರದಂತತಾ ॥**

"ಕಾಯಸ್ಥನು ತಾಯಿಯ ಹೊಟ್ಟೆಯಲ್ಲಿದ್ದಾಗ ಅವಳ ಮಾಂಸವನ್ನೇ ಕಿತ್ತು ತಿನ್ನಲಿಲ್ಲ. ಹಾಗೆ ತಿನ್ನದಿರಲು ತಾಯಿಯ ವಿಷಯದಲ್ಲಿರಬೇಕಾದ ಕಾರುಣ್ಯ ಕಾರಣವಲ್ಲ. ಮತ್ತೇನೆಂದರೆ, ಗರ್ಭದಲ್ಲಿದ್ದಾಗ ಆತನಿಗೆ ಹಲ್ಲುಗಳಿರಲಿಲ್ಲ!"

ಈ ಎಲ್ಲ ಪೀಡೆಗಳನ್ನು ತಪ್ಪಿಸಿ ರಾಜ್ಯವನ್ನಾಳಬೇಕಾದದ್ದು ರಾಜನ ಸ್ವತಃಸಿದ್ಧವಾದ ಕರ್ತವ್ಯ. ಅವನ್ನು ಧರ್ಮಶಾಸ್ತ್ರವು ಪುನರುಚ್ಚರಿಸಿರುವುದೇಕೆ? ಇವನ್ನು ಯಾವ ರಾಜನು ತಪ್ಪಿಸುವುದಿಲ್ಲವೋ, ತಪ್ಪಿಸಲು ಅಸಮರ್ಥನೋ ಅವನು ರಾಜನಾಗಿರಲು ಅನರ್ಹನೆಂದು ಘೋಷಿಸುವುದಕ್ಕಾಗಿ.

**ದುರ್ಲಭಂ ತ್ರಯಮೇವೈತದ್ ದೈವಾನುಗ್ರಹಹೇತುಕಂ ।**
**ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥೧೩॥**

— *ವಿವೇಕಚೂಡಾಮಣಿ, ೩*

"ಮನುಷ್ಯಜನ್ಮ, ಮೋಕ್ಷದಲ್ಲಿ ಅಭಿಲಾಷೆ, ಮಹಾತ್ಮರ ಸಂಪರ್ಕ - ಇವು ಮೂರು ಜೀವರಿಗೆ ದುರ್ಲಭವಾದವು. ದೈವಾನುಗ್ರಹವಿದ್ದರೆ ಮಾತ್ರ ಇವು ದೊರೆಯುತ್ತವೆ."

ಪುನರ್ಜನ್ಮವಿದೆಯೆಂದು ನಂಬುವ ಎಲ್ಲ ದಾರ್ಶನಿಕರೂ ನರಜನ್ಮವು ದುರ್ಲಭವೆಂದು ಒಪ್ಪುತ್ತಾರೆ. ಇಲ್ಲದಿದ್ದರೆ ಯಾರಿಗೆ ಯಾವ ಯೋನಿಯಲ್ಲಿ ಜನ್ಮವೆಂಬ ನಿರ್ಣಯವಾಗದೆ, ದರ್ಶನಶಾಸ್ತ್ರದ ಅಡಿಗಲ್ಲು ಕುಸಿದುಹೋಗುತ್ತದೆ. ಆದ್ದರಿಂದ ಅವರವರ ಕರ್ಮಾನುಗುಣವಾಗಿ ವಿಭಿನ್ನ ಯೋನಿಗಳಲ್ಲಿ ಹುಟ್ಟುತ್ತಾರೆಂದು ಆಸ್ತಿಕದರ್ಶನವು ಏಕಾಭಿಪ್ರಾಯವನ್ನು ತಳೆಯಿತು.

ಮಾನವನಾಗಿ ಜನಿಸಿದರೂ ಅವನ ಪಶುಸ್ವಭಾವವು ಹೋಗಿ, ಆತನು ವಿಚಾರೋನ್ಮುಖನಾಗಲು ಹಲವಾರು ಜನ್ಮಗಳನ್ನು ಕಳೆಯಬೇಕಾಗುತ್ತದೆ. ಹುಟ್ಟು-ಸಾವುಗಳ ಘೋರತೆಯನ್ನು ಮನಸ್ಸಿಗೆ ತಂದುಕೊಳ್ಳಲು ಸಹ ನಮಗೀಗ

ಬಿಡುವಿಲ್ಲ. ಬೆಳಗಾದರೆ ಏಳು, ತಿನ್ನು, ದುಡಿ, ತಿನ್ನು, ಮಲಗು - ಎಂಬ ಯಾಂತ್ರಿಕ ಚಕ್ರದ ಅರೆಗಾಲುಗಳಾಗಿ ಸುತ್ತುತ್ತಿರುವುದೇ ಮನುಷ್ಯಪ್ರಾಣಿಯ ಜೀವನ. ಈ ಚಕ್ರದಿಂದ ಬಿಡುಗಡೆ ಹೊಂದಲು ಎಲ್ಲಿಯೋ, ಯಾರಿಗೋ, ಯಾವಾಗಲೋ ಒಬ್ಬೊಬ್ಬರಿಗೆ ಇಚ್ಛೆ ಬರಬಹುದು. ಇದೇ ಮುಮುಕ್ಷುತೆ. "ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ" (ಗೀತಾ, ೭-೩).

ಶ್ರೇಯೋಭಾಗಿಯಾದವನಿಗೆ ಮೊದಲು ಮಾನವಜನ್ಮ, ಆಮೇಲೆ ಮುಮುಕ್ಷುತೆ, ಅನಂತರ ಮಹಾಪುರುಷರ ಸಹವಾಸ - ಇವು ಕ್ರಮವಾಗಿ ದೊರಕಬೇಕು. ಇವುಗಳಲ್ಲಿ ಮೊದಲನೆಯದು ನಮ್ಮ ಕೈಯಲ್ಲಿಲ್ಲವೆಂಬುದು ಸ್ಪಷ್ಟವಾಗಿದೆ. ಎರಡನೆಯದೂ ನಮ್ಮ ಯತ್ನಕ್ಕೆ ಒಳಪಡದು. ಯತ್ನಿಸುವ ಇಚ್ಛೆಯೇ ಹುಟ್ಟದಿದ್ದಾಗ ಯತ್ನ ನಡೆಯುವುದು ಹೇಗೆ? ಮೂರನೆಯದೂ ಅಷ್ಟೆ. ಯಾರನ್ನೋ ನಂಬಿ ಮುಗ್ಗರಿಸಿ ಪ್ರಪಾತದಲ್ಲಿ ಬೀಳುವುದು ಆಶ್ಚರ್ಯವಲ್ಲ. ಇವು ಮೂರೂ ಒಂದೆಡೆ ಸೇರ ತಕ್ಕದ್ದು ಭಗವಂತನ ಕೃಪೆಯಿಂದ ಮಾತ್ರ. ಆದ್ದರಿಂದಲೇ ಇದು 'ದೈವಾನುಗ್ರಹಹೇತುಕ'.

ಒಂದೊಂದು ಕ್ಷಣವನ್ನೂ ಸದುಪಯೋಗಪಡಿಸಿಕೊಳ್ಳಬೇಕೆಂದು ಮಾನವನಿಗೆ ಎಚ್ಚರಿಕೆಯನ್ನು ನೀಡಿ, ಬಾಳಿನ ಶ್ರೇಷ್ಠತೆಯನ್ನು ಮನಗಾಣಿಸಿ, ಸನ್ಮಾರ್ಗದಲ್ಲಿ ಶ್ರದ್ಧೆಯನ್ನು ಹುಟ್ಟಿಸಿ ಬೆಳಗಿಸುತ್ತದೆ ದರ್ಶನಶಾಸ್ತ್ರ. ಇದು ವೈರಾಗ್ಯವನ್ನು ಬೋಧಿಸಿ ಜೀವನಶ್ರದ್ಧೆಯನ್ನು ಕೆಡಿಸುತ್ತದೆ ಎಂಬುದು ಮೂರ್ಖಾಲಾಪ.

**ಪ್ರಥಮೇ ನಾರ್ಜಿತಾ ವಿದ್ಯಾ ದ್ವಿತೀಯೇ ನಾರ್ಜಿತಂ ಧನಂ ।**
**ತೃತೀಯೇ ನಾರ್ಜಿತಂ ಪುಣ್ಯಂ ಚತುರ್ಥೇ ಕಿಂ ಕರಿಷ್ಯಸಿ ॥೧೪॥**

— *ಸುಭಾಷಿತರತ್ನ-ಸಮುಚ್ಚಯ*

"ವಯಸ್ಸಿನ ಮೊದಲನೆಯ ಭಾಗದಲ್ಲಿ (ಬಾಲ್ಯದಲ್ಲಿ) ವಿದ್ಯೆಯನ್ನು ಕಲಿಯಲಿಲ್ಲ. ಎರಡನೆಯ ಭಾಗದಲ್ಲಿ (ಯೌವನದಲ್ಲಿ) ಹಣವನ್ನು ಗಳಿಸಲಿಲ್ಲ. ಮೂರನೆಯದಾದ ಇಳಿವಯಸ್ಸಿನಲ್ಲಿ ಪುಣ್ಯವನ್ನು ಆರ್ಜಿಸಲಿಲ್ಲ. ಇನ್ನು ನಾಲ್ಕನೆಯ ಭಾಗವಾದ ಮುಪ್ಪು ಬಂದಾಗ ಏನುತಾನೆ ಮಾಡುವೆ?"

ಮನುಷ್ಯನ ಆಯುಸ್ಸು ನೂರು ವರ್ಷಗಳೆಂದಾಗ ಇದರ ಮೊದಲನೆಯ ಭಾಗ ಇಪ್ಪತ್ತೈದು ವರ್ಷ. ಈ ಸಮಯವು ವಿದ್ಯಾಭ್ಯಾಸಕ್ಕೆ ಶ್ರೇಷ್ಠವಾದದ್ದು.

ಮುಂದಿನ ಜೀವನದ ತಳಹದಿ ಈ ವಯಸ್ಸಿನಲ್ಲಿ ಸ್ಥಾಪಿತವಾಗಬೇಕು. ವಿದ್ಯೆಯೆಂದರೆ ಜ್ಞಾನ, ತಿಳಿವಳಿಕೆ. ಯಾವುದರ ಜ್ಞಾನ? ಮನುಷ್ಯತ್ವವನ್ನು ಸಾರ್ಥಕಪಡಿಸಿಕೊಳ್ಳಲು ಬೇಕಾದ ಉತ್ತಮ ಗುಣಸ್ವಭಾವಗಳೊಂದು, ಜೀವನಕ್ಕೆ ಆವಶ್ಯಕವಾದ ಧನದ ಆರ್ಜನೆ ಇನ್ನೊಂದು - ಇವೆರಡು ಮಾನವನ ಗುರಿಗಳು. ಈ ಗುರಿಯನ್ನು ಯಾವುದು ಸಾಧಿಸಿಕೊಡಬಲ್ಲದೋ ಅದರ ಜ್ಞಾನ, ವಿದ್ಯೆ. ಬರಿಯ ಅಕ್ಷರಜ್ಞಾನವು ವಿದ್ಯೆಯಲ್ಲ. ಓದುಬರಹಗಳಿಲ್ಲದ ಮಾತ್ರದಿಂದ ವಿದ್ಯಾವಂತರಲ್ಲವೆನ್ನಲೂ ಆಗದು. ಅಕ್ಷರಸ್ಥರಲ್ಲದಿದ್ದರೂ ಉತ್ತಮ ಗುಣಶೀಲರಾಗಿ ಸ್ವಸ್ಥಜೀವನವನ್ನು ಸಾಗಿಸುವ ಹಳ್ಳಿಗರನ್ನು ಇಂದೂ ಕಾಣಬಹುದು. ಆದರೆ ಅಕ್ಷರಜ್ಞಾನವನ್ನೂ ಗಳಿಸಿಕೊಂಡಲ್ಲಿ ಅವರ ವಿಚಾರಶಕ್ತಿಯು ಇನ್ನೂ ಬೆಳೆದು ಜೀವನವು ಭವ್ಯವೂ ಪೂರ್ಣವೂ ಆಗುತ್ತದೆಯೆನ್ನುವುದರಲ್ಲಿ ಸಂದೇಹವಿಲ್ಲ.

ಹಣವಾದ ಮೇಲೆ ಪುಣ್ಯದ ಸರದಿ. ಇಲ್ಲಿ ವಯೋವಿಭಾಗವು ಮುಖ್ಯವಾದ್ದಲ್ಲ. ಸತ್ಯ, ಅಹಿಂಸೆ, ಪರೋಪಕಾರಬುದ್ಧಿ, ಪ್ರಾಮಾಣಿಕತೆ, ದೈವಭಕ್ತಿ, ರಾಷ್ಟ್ರಭಕ್ತಿ - ಮುಂತಾದ ಗುಣಗಳನ್ನು ಬೆಳೆಸಿಕೊಳ್ಳುವುದೇ ಪುಣ್ಯಕಾರ್ಯ. ಇದು ಜೀವನದ ಉದ್ದಕ್ಕೂ ವ್ಯಾಪಿಸಿಕೊಂಡು ಇರಬೇಕಾದದ್ದು.

ಜೀವೋತ್ಕರ್ಷವನ್ನು ಸಾಧಿಸಲು ಬೇಕಾದ ವಸ್ತುಜ್ಞಾನವೇ ವಿದ್ಯೆ. ಈ ಉತ್ಕರ್ಷವನ್ನು ಸಾರವತ್ತಾಗಿ ವಿಸ್ತರಿಸಲು ಬೇಕಾದ ಸಾಧನವಾಗುತ್ತದೆ ಧನ. ಜೀವೋತ್ಕರ್ಷವೆಂಬ ಪುಣ್ಯದ ಗುರಿಯನ್ನು ಪಡೆಯಲು ವಿದ್ಯೆಯಾಗಲಿ, ಧನವಾಗಲಿ ಉಪಯೋಗಕ್ಕೆ ಬಾರದೆಹೋದಲ್ಲಿ, ಚತುರ್ಥೇ ಕಿಂ ಕರಿಷ್ಯಸಿ — ಮುಪ್ಪು ಸಾವುಗಳೆಂಬ ಯಮದೂತರು ಬಂದು ಬಾಗಿಲು ತಟ್ಟಿದಾಗ ಏನು ಮಾಡುವೆ? ಯಾರು ಈ ಯಮದೂತರನ್ನು ತಡೆದಾರು? ಅವರನ್ನು ಶಾಂತವಾಗಿ ಸ್ವಾಗತಿಸುವ ಶಕ್ತಿ ಬರಬೇಕು. ಅಂತಹ ಶಕ್ತಿ ಬರುವುದು ಪುಣ್ಯಬಲದಿಂದ. 'ನಿದ್ದೆವೊಲು ಸಾವು ಪಡೆ-ಮಂಕುತಿಮ್ಮ'.

**ಶಿವೇನ ವಚಸಾ ತ್ವಾ ಗಿರಿಶಾಚ್ಛಾ ವದಾಮಸಿ ।**
**ಯಥಾ ನಃ ಸರ್ವಮಿಜ್ಜಗದಯಕ್ಷ್ಮಗ್ಂ ಸುಮನಾ ಅಸತ್ ॥೧೫॥**

"ಹೇ ಗಿರಿಶ-ಪರಮೇಶ್ವರ, ಮಂಗಳಕರವಾದ ನುಡಿಯಿಂದ ನಿನ್ನನ್ನು ಉತ್ತಮ ರೀತಿಯಲ್ಲಿ ಸ್ತುತಿಸುತ್ತೇವೆ. ನಮ್ಮ ಈ ಜಗತ್ತೆಲ್ಲ ರೋಗರಹಿತವೂ ಒಳ್ಳೆಯ ಮನಸ್ಸುಳ್ಳದ್ದೂ ಆಗಲಿ."

ಸ್ತೋತ್ರಮಾಡುವ ಭಕ್ತರಲ್ಲಿ ಆರ್ತ, ಅರ್ಥಾರ್ಥಿ, ಜಿಜ್ಞಾಸು, ಜ್ಞಾನಿ - ಎಂಬುದಾಗಿ ನಾಲ್ಕು ಬಗೆಯವರಿದ್ದಾರೆಂದು ಭಗವದ್ಗೀತೆಯಲ್ಲಿ ಹೇಳಿದೆಯಷ್ಟೆ (೭-೧೪). 'ಸಂಕಟ ಬಂದಾಗ ವೆಂಕಟರಮಣ' ಎಂಬ ಗಾದೆಯಂತೆ ಕಷ್ಟ ಬಂದಾಗ ದೇವರಿಗೆ ಶರಣಾಗತಕ್ಕವನು ಆರ್ತ. ಇನ್ನೊಬ್ಬ ಅರ್ಥಾರ್ಥಿ : ಯಾವುದೋ ಇಷ್ಟಾರ್ಥವನ್ನು ಪಡೆಯುವುದಕ್ಕಾಗಿ ಪ್ರಾರ್ಥಿಸತಕ್ಕವನು. ಆರ್ತನಿಗಿಂತ ಇವನು ಸ್ವಲ್ಪ ಮೇಲ್ಮಟ್ಟದವನು. ಈಶ್ವರನಿಗೆ ಫಲಾಪೇಕ್ಷೆಯಿಂದ ಇವನು ಶರಣಾದವನು. ಈ ಇಬ್ಬರು ಭಕ್ತರೂ ಸಹ ಸುಕೃತಿಗಳೆಂದೇ ಭಗವಂತನ ಹೇಳಿಕೆ ಇದೆ. ಸುಕೃತವನ್ನು ಮಾಡದೆ ಆಸ್ತಿಕ್ಯಬುದ್ಧಿ ಹುಟ್ಟದು.

ಈಶ್ವರನ ಸ್ವರೂಪ ಯಾವುದು? - ಎಂದು ಆತ್ಮತತ್ತ್ವವನ್ನರಿಯುವುದಕ್ಕಾಗಿಯೇ ಭಗವಂತನಿಗೆ ಶರಣಾದವನು ಜಿಜ್ಞಾಸು ಭಕ್ತ. ಆತ್ಮತತ್ತ್ವವನ್ನರಿತಮೇಲೂ ಭಕ್ತನಾಗಿರತಕ್ಕವನು ಜ್ಞಾನಿಯಾದ ಭಕ್ತ. ಇವನು ಸರ್ವಶ್ರೇಷ್ಠನಾದ ಭಕ್ತ.

ವೇದದ್ರಷ್ಟಾರನಾದ ಋಷಿಯ ಮುಖದಿಂದ ಬಂದದ್ದು ಮೇಲ್ಕಂಡ ಪ್ರಾರ್ಥನಾ ರೂಪವಾದ ವೇದವಾಣಿ. ಋಷಿಯೆಂದರೆ ಜ್ಞಾನಿಯೇ. ಋಷಿಯು ತನಗಾಗಿ ಏನನ್ನೂ ಕೇಳುತ್ತಿಲ್ಲ. ಈ ಜಗತ್ತಿನಲ್ಲಿರತಕ್ಕವರೆಲ್ಲರೂ ಆರೋಗ್ಯಭಾಗ್ಯದಿಂದ ಉಲ್ಲಾಸಗೊಂಡಿರಲಿ, ಎಲ್ಲರಲ್ಲಿಯೂ ಸೌಮನಸ್ಯವು ನೆಲೆಸಲಿ ಎಂಬುದು ಈ ಪ್ರಾರ್ಥನೆಯ ತಿರುಳು. ನಃ ಸರ್ವಂ ಜಗತ್ - ನಮ್ಮ ಸಮಸ್ತ ಜಗತ್ತು. ಈ ಜಗತ್ತು ನನ್ನೊಬ್ಬನದಲ್ಲ, ಸಕಲಮಾನವರಿಗೂ ಸಕಲಪ್ರಾಣಿಗಳಿಗೂ ಸೇರಿದ್ದು. ಜಾತಿ, ಮತ, ಪಂಥಗಳ ಭೇದವಿಲ್ಲದೆ ಸರ್ವಪ್ರಜೆಗಳೂ ನಮ್ಮವರು, ನಾನೇ ಅವರು - ಎಂಬ ಭಾವ ಇದರಲ್ಲಡಗಿದೆ. ಎಲ್ಲರೂ ದೈಹಿಕ ಬಾಧೆಗಳಿಂದ ಮುಕ್ತರಾಗಬೇಕು. ದೈಹಿಕ ಆರೋಗ್ಯ ಮಾತ್ರವಲ್ಲ, ಮಾನಸಿಕ ಆರೋಗ್ಯವೂ ಬೇಕು. ಲೋಭ, ಹಿಂಸಾಪ್ರವೃತ್ತಿ, ಕ್ರೌರ್ಯ, ಅಸೂಯೆ - ಮೊದಲಾದವು ಮಾನಸ ರೋಗಗಳು. ಅವೆಲ್ಲವೂ ತೊಲಗಿ ಮನಸ್ಸು ನಿರ್ಮಲವಾಗಲಿ, ಎಲ್ಲರಲ್ಲಿಯೂ ಸೌಮನಸ್ಯವು ನೆಲೆಸಲಿ - ಎಂದು ಋಷಿವಾಣಿ ಪರಮೇಶ್ವರನನ್ನು ಪ್ರಾರ್ಥಿಸುತ್ತಿದೆ. ಹಿಂದೂಗಳ ವೈದಿಕ ಪ್ರಾರ್ಥನೆ ಇದು. ಜಗತ್ತಿನ ಇನ್ನೊಂದು ಮತದಲ್ಲಿ ವಿಶ್ವಕಲ್ಯಾಣವನ್ನು ಚಿಂತಿಸುವ ಇಂತಹ ಪ್ರಾರ್ಥನೆ ಇದ್ದಿರಬಹುದೆ?

**ಸಂತೋಷಸ್ತ್ರಿಷು ಕರ್ತವ್ಯಃ ಕಲತ್ರೇ ಭೋಜನೇ ಧನೇ ।**
**ತ್ರಿಷು ಚೈವ ನ ಕರ್ತವ್ಯೋಽಧ್ಯಯನೇ ಜಪದಾನಯೋಃ ॥೧೬॥**

— *ಸಮಯೋಚಿತಪದ್ಯ-ರತ್ನಮಾಲಾ*

"ತನ್ನ ಹೆಂಡತಿ, ಭೋಜನ, ಧನ - ಈ ಮೂರು ವಿಷಯಗಳಲ್ಲಿ ಮನುಷ್ಯನಿಗೆ ತೃಪ್ತಿ ಇರಬೇಕು. ಆದರೆ ಜ್ಞಾನಾರ್ಜನೆ, ಜಪ, ದಾನ - ಈ ಮೂರರಲ್ಲಿ ಇಷ್ಟು ಸಾಕು ಎಂಬ ತೃಪ್ತಿ ಇರಬಾರದು."

ಆಸೆಗೆ ಮಿತಿ ಇಲ್ಲ. ಒಂದು ಆಸೆ ಪೂರೈಸಿತೆಂದರೆ, ಅದು ಇನ್ನೂ ಚಿಗುರಿ ಮೇಲೆದ್ದು ಕವಲೊಡೆಯುತ್ತದೆ. ಕೀರ್ತಿ, ಅಧಿಕಾರಗಳ ಹಂಬಲ ಎಲ್ಲಕ್ಕಿಂತ ಪ್ರಬಲವಾದದ್ದು. ರಾಷ್ಟ್ರದ ನಾಯಕರಲ್ಲಿ ಅದು ಪ್ರಬಲವಾಯಿತೆಂದರೆ ನರಳತಕ್ಕವರು ಜನಸಾಮಾನ್ಯರು. ರಾವಣ, ದುರ್ಯೋಧನ, ಅಲೆಕ್ಸಾಂಡರ್, ಹಿಟ್ಲರ್ ಪ್ರಭೃತಿಗಳು ಕೀರ್ತಿ, ಅಧಿಕಾರಗಳ ಲಾಲಸೆಯಿಂದ ಅನ್ಯರನ್ನೂ ಕಷ್ಟಕ್ಕೆ ಈಡುಮಾಡಿ ತಾವೂ ಮಣ್ಣುಮುಕ್ಕಿದರು.

ಆಸೆಯಿಂದ ಮುಕ್ತರಾದವರು ಯಾರೂ ಇಲ್ಲವಾದರೂ ಅದು ಹುಚ್ಚುಹುಚ್ಚಾಗಿ ಓಡದಂತೆ ಹಿಡಿಯುವ ಒಂದು ಲಗಾಮು ಬೇಕು. ತೃಪ್ತಿಯೇ ಆ ಲಗಾಮು.

ಮದುವೆ ದೈವಕಾರಿತವೆಂಬುದು ಭಾರತೀಯರ ನಂಬಿಕೆ. ದಾಂಪತ್ಯದಲ್ಲಿ ವಿರಸ ಹುಟ್ಟಿದರೆ ಅದರ ಪರಿಣಾಮ ಘೋರವಾಗುವುದಲ್ಲದೆ ಶಾಶ್ವತವೂ ಆಗಿಬಿಡುತ್ತದೆ. ಏಕಪತ್ನೀವ್ರತ, ಪಾತಿವ್ರತ್ಯ - ಇವು ಒಂದು ಇನ್ನೊಂದಕ್ಕೆ ಪ್ರೇರಕ, ಪೋಷಕ. ಹಿರಿಯರು ಗೊತ್ತುಮಾಡಿದ ವಿವಾಹವನ್ನು ದೂರತಕ್ಕವರು ಇಂದಿನ ಪ್ರೇಮವಿವಾಹವು ಎಷ್ಟು ಸಫಲವಾಗಿದೆ? - ಎಂಬುದಕ್ಕೆ ಉತ್ತರ ಹೇಳಬೇಕು.

ಹಸಿವು ಅಳಿಯಬೇಕು, ಆರೋಗ್ಯ ಉಳಿಯಬೇಕು - ಇವೆರಡು ದೃಷ್ಟಿಗಳೇ ಭೋಜನದ ವಿಷಯದಲ್ಲಿ ಮುಖ್ಯವಾದವು. ಜಿಹ್ವಾಚಾಪಲ್ಯವು ಅಂಟಿಕೊಂಡಿತೆಂದರೆ ಅದಕ್ಕೆ ಮಿತಿಯೇ ಇರುವುದಿಲ್ಲ. ತುಷ್ಟಿಯೂ ಇಲ್ಲ, ಪುಷ್ಟಿಯೂ ಇಲ್ಲ. ಭೋಜನವೆಂದರೆ ಸುಖಭೋಗವೆಂದೂ ಅರ್ಥವಾಗುತ್ತದೆ. ಆಗ ಜಿಹ್ವೆಯದನ್ನು ಮಾತ್ರವಲ್ಲ, ಎಲ್ಲ ಇಂದ್ರಿಯಗಳ ಚಾಪಲ್ಯವನ್ನೂ ಇದು ಒಳಗೊಳ್ಳುತ್ತದೆ. ಎಲ್ಲ ಸದ್ಗುಣಗಳಿಗೂ ಮಸಿ ಬಳಿಯತಕ್ಕದ್ದು ಹಣದ ದುರಾಸೆ.

ಕಳತ್ರ, ಭೋಜನ, ಧನ - ಇವು ಬೇಡವೆನ್ನುವುದಿಲ್ಲ ಈ ಸುಭಾಷಿತ. ಎಷ್ಟು ಲಭ್ಯವೋ ಅಷ್ಟರಲ್ಲಿ ತೃಪ್ತಿಯಿರಲಿ ಎನ್ನುತ್ತದೆ.

ಜ್ಞಾನಾರ್ಜನೆ, ಜಪ, ದಾನ - ಈ ಮೂರರಲ್ಲಿ ತೃಪ್ತಿ ಇರಬಾರದು. ಮನುಷ್ಯನಿಗೆ ಜ್ಞಾನಕ್ಕಿಂತ ಹೆಚ್ಚಿನ ಆಸ್ತಿ ಬೇರೆಯಿಲ್ಲ. ಭಗವಂತನ ನಾಮಜಪಕ್ಕಿಂತ ಕಲ್ಯಾಣಕರವಾದದ್ದು ಬೇರೆಯಿಲ್ಲ. ಜ್ಞಾನದಾನ, ಶ್ರಮದಾನ - ಮೊದಲಾದ

ಪರೋಪಕಾರ ಕೃತಿಗಳೆಲ್ಲವೂ ದಾನದ ಮಡಿಲಲ್ಲಿ ಸೇರುತ್ತವೆ. 'ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ'. (ಗೀತಾ, ೧೮-೫)

**ಗುರುಂ ಪ್ರಯೋಜನೋದ್ದೇಶಾತ್ ಅರ್ಚಯಂತಿ ನ ಭಕ್ತಿತಃ ।**
**ದುಗ್ಧದಾತ್ರೀತಿ ಗೌರ್ಗೇಹೇ ಪೋಷ್ಯತೇ ನ ತು ಧರ್ಮತಃ ॥೧೭॥**

— *ದೃಷ್ಟಾಂತಕಲಿಕಾ*

"ಪ್ರಯೋಜನಾಪೇಕ್ಷೆಯಿಂದ ಗುರುವನ್ನು ಗೌರವಿಸುತ್ತಾರೆ, ಭಕ್ತಿಯಿಂದಲ್ಲ. ಹಾಲು ಕೊಡುತ್ತದೆಂದು ಮನೆಯಲ್ಲಿ ಹಸುವನ್ನು ಸಾಕುತ್ತಾರೆಯೇ ಹೊರತು, ಗೋರಕ್ಷಣೆ ಧರ್ಮವೆಂದಲ್ಲ."

ವಿಶಾಖದತ್ತನ ಮುದ್ರಾರಾಕ್ಷಸ ನಾಟಕದ ಮಾತು - 'ನ ಪ್ರಯೋಜನಮಂತರಾ ಸ್ವಪ್ನೇಽಪಿ ಚೇಷ್ಟತೇ ಚಾಣಕ್ಯಃ - ಪ್ರಯೋಜನವಿಲ್ಲದೆ ಕನಸಿನಲ್ಲಿಯೂ ಚಾಣಕ್ಯನು ಅಲ್ಲಾಡುವುದಿಲ್ಲ!" ಎಂದು. ಈ ಮಾತನ್ನು ಚಾಣಕ್ಯನೇ ಹೇಳುವುದು. ತೀವ್ರವಾದ ಬುದ್ಧಿಶಕ್ತಿ ಮತ್ತು ರಾಜಕಾರಣಕೌಶಲಗಳ ಮಾತು ಅದು. ಅವನು ಕುಟಿಲನೀತಿಯನ್ನು ಅನುಸರಿಸಿದ್ದು ಧರ್ಮರಕ್ಷಣೆಗಾಗಿಯೇ ಹೊರತು ಸ್ವಾರ್ಥಕ್ಕಾಗಿ ಅಲ್ಲ. ಚಂದ್ರಗುಪ್ತನನ್ನು ರಾಜಪದವಿಗೇರಿಸಿದ ಮೇಲೆ ಸಹ ಅವನು ವಾಸವಾಗಿದ್ದುದು ಒಂದು ಮುರುಕಲು ಗುಡಿಸಲಿನಲ್ಲಿ. ಆ ಗುಡಿಸಲು ಹೀಗಿತ್ತು:

**ಅಹೋ! ರಾಜಾಧಿರಾಜ ಮಂತ್ರಿಣೋ ವಿಭೂತಿಃ !**
**ಉಪಲಶಕಲಮೇತದ್ ಭೇದಕಂ ಗೋಮಯಾನಾಂ**
**ವಟುಭಿರುಪಹೃತಾನಾಂ ಬರ್ಹಿಷಾಂ ಸ್ತೂಪಮೇತತ್ ।**
**ಶರಣಮಪಿ ಸಮಿದ್ಭಿಃ ಶುಷ್ಯಮಾಣಾಭಿರಾಭಿಃ**
**ವಿನಮಿತಪಟಲಾಂತಂ ದೃಶ್ಯತೇ ಜೀರ್ಣಕುಡ್ಯಮ್ ॥**

"ಆಹಾ! ರಾಜಾಧಿರಾಜನಿಗೆ ಮಂತ್ರಿಯಾದವನ ವೈಭವ ಇದು!

ಗೋಮಯದ ಬೆರಣಿಗಳನ್ನು ಒಡೆಯುವ ಕಲ್ಲು ಇಲ್ಲಿದೆ. ಇಲ್ಲಿ ನೋಡಿದರೆ ವಟುಗಳು ತಂದುಹಾಕಿರುವ ದರ್ಭೆಗಳ ಪಿಂಡಿ. ಒಣಗಲೆಂದು ತಂದು ಪೇರಿಸಿರುವ ಸಮಿತ್ತುಗಳ ಹೊರೆಯಿಂದ ಗುಡಿಸಲಿನ ಸೂರು ಕುಸಿದುಹೋಗಿದೆ. ಬಿರುಕುಬಿಟ್ಟ ಹಳೆಯ ಗೋಡೆಯ ಗುಡಿಸಲು ಇದು!"

ಚಾಣಕ್ಯನ ಪ್ರಯತ್ನವೆಲ್ಲವೂ ಧರ್ಮಚೋದಿತವಾದ ಕರ್ತವ್ಯನಿಷ್ಠೆಯಿಂದ ನಡೆಯಿತು. ಕಾರ್ಯಸಿದ್ಧಿಯಾದ ಮೇಲೆ ಆತನು ಅಮಾತ್ಯರಾಕ್ಷಸನನ್ನೇ ಪ್ರಧಾನಮಂತ್ರಿಯನ್ನಾಗಿ ನೇಮಿಸಿ ತಾನು ತಪೋವನಕ್ಕೆ ಹೊರಟುಹೋಗುತ್ತಾನೆ.

ಹಸುವನ್ನು ಸಾಕುವುದು ಹಾಲಿಗಾಗಿ, ಕೊಟ್ಟಿಗೆ ಗೊಬ್ಬರಕ್ಕಾಗಿ. ಈ ಕಾಲದಲ್ಲಿ ಮಾಂಸಕ್ಕಾದರೂ ಆದೀತು. ಗೋರಕ್ಷಣೆ ಧರ್ಮವೆಂಬ ನಂಬಿಕೆ ಅಳಿಸಿಹೋಗಿದೆ. ಪಂಡಿತ್ ನೆಹರು ಅವರು "ನನಗೆ ಗೋವೂ ಒಂದೇ, ಕುದುರೆಯೂ ಒಂದೇ" ಎಂದು ಹೇಳಿದ್ದುಂಟು.

ದಲಿತರ ಉದ್ಧಾರ ಮಾಡುತ್ತೇವೆ, ಬಡತನವನ್ನು ನಿರ್ಮೂಲಗೊಳಿಸುತ್ತೇವೆ - ಎಂದು ರಾಜಕೀಯ ಪಕ್ಷದವರು ಐವತ್ತು ವರ್ಷಗಳಿಂದ ಘೋಷಿಸುತ್ತಲೇ ಬಂದಿದ್ದಾರೆ. ಇಂದು ಉದ್ಧಾರವಾಗಿರುವವರು ಯಾರು, ಯಾರ ಬಡತನ ನಿರ್ಮೂಲವಾಯಿತು - ಎಂಬುದೇನೂ ಗುಟ್ಟಾಗಿ ಉಳಿದಿಲ್ಲ. ಈ ಕಳಿಂಗನೀತಿಯನ್ನು ಜನರು ಅರ್ಥಮಾಡಿಕೊಳ್ಳುವುದಿಲ್ಲ -

**ಆಶಾಂ ಬಲವತೀಂ ಕುರ್ಯಾತ್ ತಾಂ ಚ ವಿಘ್ನೇನ ಯೋಜಯೇತ್ ।**
**ವಿಘ್ನಂ ಸಹೇತುಕಂ ಬ್ರೂಯಾತ್ ಹೇತುಂ ಚ ಬಲವತ್ತರಮ್ ॥**
**ಪುನರಾಶಾಂ ಪ್ರಜನಯೇತ್ ತಾಂ ಚ ಕಾಲಾವಲಂಬಿನೀಂ ।**
**ಏಷಾ ಕಲಿಂಗನೀತಿಃ ಸ್ಯಾತ್ ಸರ್ವಸಿದ್ಧಿಪ್ರದಾಯಿನೀ ॥**

"ಜನರಿಗೆ ಬಲವಾದ ಆಸೆಯನ್ನು ಹುಟ್ಟಿಸಬೇಕು. ಅದನ್ನು ಸಾಧಿಸಲು ವಿಘ್ನವಿದೆಯೆಂದು ಆಮೇಲೆ ಸೇರಿಸುತ್ತಿರಬೇಕು. ವಿಘ್ನಕ್ಕೆ ಕಾರಣವೇನೆಂಬುದನ್ನು ತರುವಾಯ ತಿಳಿಸಬೇಕು. ಕಾರಣವು ಪ್ರಬಲವಾದ್ದೆಂದು ಮನದಟ್ಟು ಮಾಡಿಕೊಡಬೇಕು. ಮತ್ತೆ ಆಸೆಯನ್ನು ಚಿಗುರಿಸಬೇಕು. ಫಲವನ್ನು ನೀಡಲು ಕೆಲವು ಕಾಲ ಬೇಕು ಎಂದು ಹೇಳಬೇಕು. ಇದು ಕಳಿಂಗನೀತಿ; ಸರ್ವಸಿದ್ಧಿಪ್ರದಾಯಿನಿ."

ಕಣಿಕನು ಧೃತರಾಷ್ಟ್ರನಿಗೆ ಹೇಳಿದ ರಾಜನೀತಿ ಇದು.

**ಕಾಲಕ್ರಮೇಣ ಜಗತಃ ಪರಿವರ್ತಮಾನಾ**
**ಚಕ್ರಾರಪಂಕ್ತಿರಿವ ಗಚ್ಛತಿ ಭಾಗ್ಯಪಂಕ್ತಿಃ ॥೧೮॥**

— *ಸ್ವಪ್ನವಾಸವದತ್ತ, ೧-೪*

**ಜಗದ ಭಾಗ್ಯದ ಪಂಕ್ತಿಯೆಂಬುದು ಭರದೆ ಕಾಲಕ್ರಮದೊಳು ।**
**ಉರುಳುತಿರ್ಪುದು ಮತ್ತೆ ಆ ಚಕ್ರಾರಪಂಕ್ತಿಯ ತೆರದೊಳು ॥**

*(ಪ್ರೊ॥ ಎಸ್. ವಿ. ಪರಮೇಶ್ವರಭಟ್ಟರ ಅನುವಾದ)*

ಚಕ್ರ = ಗಾಲಿಯ, ಅರ = ಅರೆಕಾಲುಗಳ, ಪಂಕ್ತಿ = ಸಾಲು. ಗಾಡಿಯು ಸಾಗುವಾಗ ಗಾಲಿಯ ಅರೆಕಾಲುಗಳು ಕೆಳಗೆ ಮೇಲೆ ಸುತ್ತುತ್ತಿರುತ್ತವೆ. ಕೆಳಗಿದ್ದ ಅರೆಕಾಲು ಮರುಕ್ಷಣದಲ್ಲಿ ಮೇಲೆ ಹೋಗುತ್ತದೆ. ಮೇಲಿದ್ದುದು ಕೆಳಗೆ ಬರುತ್ತದೆ. ವಾಸವದತ್ತೆಯೆಂಬ ರಾಣಿ ಒಂದಾನೊಂದು ನಿಮಿತ್ತದಿಂದ ಪರಸ್ಥಳದಲ್ಲಿ ಕಷ್ಟದಲ್ಲಿದ್ದಾಗ ಅವಳನ್ನು ಸಮಾಧಾನಪಡಿಸುತ್ತ ಮಂತ್ರಿಯಾದ ಯೌಗಂಧರಾಯಣನು ಹೇಳುವ ಮಾತಿದು. ಇಂತಹದೇ ಒಂದು ಮಾತು ಕಾಳಿದಾಸನ ಮೇಘಸಂದೇಶದಲ್ಲಿ ಬರುತ್ತದೆ. ಶಾಪವಶದಿಂದ ದೂರದಲ್ಲಿದ್ದ ಯಕ್ಷನು ವಿರಹತಪ್ತೆಯಾದ ತನ್ನ ಕಾಂತೆಗೆ ಸಂದೇಶವನ್ನು ಕಳಿಸುವಾಗ ಹೇಳುತ್ತಾನೆ -

**ನೀಚೈರ್ಗಚ್ಛತ್ಯುಪರಿ ಚ ದಶಾ ಚಕ್ರನೇಮಿಕ್ರಮೇಣ ॥**

— ಎಂದು. ನೇಮಿಯೆಂದರೆ ಗಾಲಿಯ ಅಂಚುಪಟ್ಟಿ, ಹಳಿ. ಭಾಸನು ಅರೆಕಾಲುಗಳ ದೃಷ್ಟಾಂತವನ್ನು ಕೊಟ್ಟರೆ ಕಾಳಿದಾಸನು ಹಳಿಯನ್ನು ದೃಷ್ಟಾಂತವಾಗಿ ಉದಾಹರಿಸಿದ್ದಾನೆ.

ಎಲ್ಲರೂ ಕಾಲಚಕ್ರದ ಸುಳಿಯಲ್ಲಿ ಸಿಕ್ಕಿದವರೇ. ಮಾನವನ ಸುಖ, ಅಧಿಕಾರ, ಧನ - ಯಾವುದೂ ಸ್ಥಿರವಲ್ಲ. ಅಂತೆಯೇ ಕಷ್ಟ, ಬಡತನ, ರೋಗರುಜಿನಗಳೂ ಸ್ಥಿರವಲ್ಲ. ಅವು ಶಾಶ್ವತವಾಗಿ ತನಗೆ ಅಂಟಿಕೊಂಡಿವೆಯೋ ಎಂಬಂತೆ ಸುಖ ಬಂದಾಗ ಸೊಕ್ಕಿ ಮೆರೆಯುತ್ತಾನೆ, ಕಷ್ಟ ಬಂದಾಗ ಅರಗಿನಂತೆ ಕರಗಿ ಕೊರಗುತ್ತಾನೆ. ಹಗಲುರಾತ್ರಿಗಳಂತೆ ಜೀವನದಲ್ಲಿ ಬಂದುಹೋಗತಕ್ಕ ಇವನ್ನು ಹಗಲುರಾತ್ರಿಗಳನ್ನು ಒಗ್ಗಿಸಿಕೊಂಡಂತೆ ಒಗ್ಗಿಸಿಕೊಳ್ಳಲಾರ. ಗಾಡಿಯ ಚಕ್ರದಂತೆ ಮಾನವನ ಭಾಗ್ಯದುರ್ಭಾಗ್ಯಗಳೆರಡೂ ಉರುಳುತ್ತವೆ. ಈ ಉರುಳಾಟ ಯಾವ ಒಬ್ಬ ವ್ಯಕ್ತಿಯನ್ನೂ, ಕುಟುಂಬವನ್ನೂ, ಗ್ರಾಮವನ್ನೂ, ರಾಷ್ಟ್ರವನ್ನೂ ಬಿಟ್ಟದ್ದಲ್ಲ. ಇಂದಿರಾಗಾಂಧಿಯವರಾಗಲಿ ಅವರ ಮಕ್ಕಳಾಗಲಿ ಅಷ್ಟು ಎತ್ತರಕ್ಕೆ ಏರುವರೆಂದೂ ಅಷ್ಟೇ ಬೇಗ ದುರಂತಕ್ಕೊಳಗಾಗಿ ಕುಸಿಯುವರೆಂದೂ ಯಾರು ಊಹಿಸಿದ್ದರು? ಹಿಟ್ಲರನ ಜರ್ಮನಿ, ಸ್ಟಾಲಿನನ ರಷ್ಯಾ ಏನಾದವು? ಆಕಾಶದವರೆಗೆ ಅಬ್ಬರಿಸುತ್ತ

ಸುದ್ದಿ ಮಾಡಿದ ಸದ್ದಾಂ ಸಾಹೇಬನ ಉಸಿರಿನ ಸದ್ದೂ ಅಡಗಿತು. ಆಶ್ಚರ್ಯವೇನೆಂದರೆ ಇದನ್ನೆಲ್ಲ ನೋಡಿ ಅನುಭವಿಸುತ್ತಿರುವ ಜನರೇ ಜನ್ಮಾಂಧರಂತೆ ಅಮರರಂತೆ ವರ್ತಿಸುತ್ತಿರುವುದು.

ಈ ಐವತ್ತು ವರ್ಷಗಳಲ್ಲಿ ನಮ್ಮ ಭಾರತದೇಶ ಹೇಗೆಹೇಗೆ ಉರುಳುತ್ತಿದೆ ಎಂಬುದನ್ನು ಗಮನಿಸಿದ್ದೇವೆಯೆ? ಇದರ ಭಾಗ್ಯಪಂಕ್ತಿ ವೇಗವಾಗಿ ಸುತ್ತುತ್ತಿದೆ. ಹಿಂದೆ ನೂರು ರೂಪಾಯಿ ನೋಟನ್ನು ಕಾಣದವನು ಇಂದು ಅದನ್ನು ಯಃಕಶ್ಚಿತ್ ಎಂದು ತಿಳಿಯುತ್ತಿದ್ದಾನೆ. ಷೇರುಪೇಟೆಯಲ್ಲಿ ಕೈಕೈ ಬದಲಾಯಿಸಿ ಕೋಟಿಗಟ್ಟಲೆ ಹಣವನ್ನು ಸಂಪಾದಿಸಬಹುದು. ಬುದ್ಧಿಗೂ ಶ್ರಮವಿಲ್ಲ, ದೇಹಕ್ಕೂ ಶ್ರಮವಿಲ್ಲ. ಇಂತಹ ಗಳಿಕೆಯಾಗಲಿ, ತಂತ್ರದಿಂದ ಏರಿದ ಗದ್ದುಗೆಯಾಗಲಿ ಬೇಸಿಗೆ ಬಂದಾಗ ಮಂಜುಗಡ್ಡೆಯಂತೆ ಕರಗಿಹೋಗುತ್ತದೆ - ಎಂಬುದನ್ನು ಎಷ್ಟುಜನ ಮನವರಿಕೆ ಮಾಡಿಕೊಂಡಿದ್ದಾರೆ? ಭೂಗ್ರಹವೇ ಪ್ರತಿಕ್ಷಣದಲ್ಲಿ ಸೂರ್ಯನಿಗೆ ಉರುಳುಸೇವೆ ಸಲ್ಲಿಸುತ್ತಿರುವಾಗ ಇದರಲ್ಲಿರುವ ಮಾನವಕೀಟಗಳು ಎಷ್ಟುಬಾರಿ ಲಾಗಹಾಕುತ್ತವೆಯೊ!

ಈ ಉರುಳಾಟದಲ್ಲಿ ನವೆಯುತ್ತಿರುವ ಮಾನವನು ಅಚಲವಾದ ಒಂದು ಚೈತನ್ಯವನ್ನು ನಂಬಿ ಕೈಹಿಡಿದು ಪಾರಾಗಲು ಹವಣಿಸುತ್ತಿರುವುದು ಸ್ವಾಭಾವಿಕ. ಅಂತಹ ನಿತ್ಯಚೈತನ್ಯವನ್ನೇ ದೇವರೆಂದು ತಿಳಿದು ಕೈನೀಡಿ ಮನಃಶಾಂತಿಯನ್ನು ಪಡೆಯಲು ಬಯಸುತ್ತಿದ್ದಾನೆ. ಅದೂ ಬೇಡವೆಂದು ನಂಬಿಕೆಗೆ ಕೊಡಲಿಪೆಟ್ಟು ಹಾಕುತ್ತಲೇ ಇದ್ದಾರೆ ವಿಚಾರವಾದಿಗಳೆಂದು ಕರೆದುಕೊಳ್ಳುವ ಮೇಧಾವಿಗಳು. ಹೀಗೆ ಗಿರಕಿ ಹೊಡೆಯುತ್ತಿರುವುದೇ ಮನುಷ್ಯನು ಪಡೆದುಕೊಂಡುಬಂದ ಭಾಗ್ಯವಾಗಿರಬೇಕು.

**ಅರ್ಥ ಏವ ಅಭಿಜನಹೇತುಃ ।**
**ಅಭಿರುಚಿರೇವ ದಾಂಪತ್ಯಹೇತುಃ ॥**
**ಅನೃತಮೇವ ವ್ಯವಹಾರಜಯಹೇತುಃ ।**
**ಅಭಯ-ಪ್ರಗಲ್ಭೋಚ್ಚಾರಣಮೇವ ಪಾಂಡಿತ್ಯಹೇತುಃ ॥೧೯॥**

— *ವಿಷ್ಣುಪುರಾಣ, ೪-೨೪-೭೪*

(ಕಲಿಯುಗದಲ್ಲಿ) "ಉತ್ತಮವಂಶವೆನ್ನಿಸಲು ಹಣವೇ ಕಾರಣವಾಗುತ್ತದೆ. ಅಭಿರುಚಿಯೊಂದೇ ದಂಪತಿಗಳಾಗಲು ಕಾರಣ. ವ್ಯವಹಾರದಲ್ಲಿ ಜಯಗಳಿಸಲು ಸುಳ್ಳು ಮಾತ್ರವೇ ಸಾಧನ. ಹೆದರಿಕೆಯಿಲ್ಲದೆ ಪ್ರೌಢವಾಗಿ ಹೇಳಿಬಿಡುವುದೇ ಪಾಂಡಿತ್ಯಕ್ಕೆ ನಿಮಿತ್ತ."

ಅಭಿಜನವೆಂದರೆ ವಂಶ, ಕುಲವೆಂದರ್ಥ. ಅದು ಜಾತಿಯಲ್ಲ. ಮನೆತನ ಎನ್ನಬಹುದು. ಒಬ್ಬ ಪುರುಷನೋ ಸ್ತ್ರೀಯೋ ಮಹಾಕಾರ್ಯವನ್ನು ಸಾಧಿಸಿ ಲೋಕೋತ್ತರವಾದ ಕೀರ್ತಿಯನ್ನು ಗಳಿಸಿದ್ದರೆ ಆ ವ್ಯಕ್ತಿಯ ವಂಶದವರೆಂದು ಹೆಮ್ಮೆಪಡುವುದುಂಟು. ಇದೇನೂ ಒಣಹೆಮ್ಮೆಯಲ್ಲ. ವಂಶಪ್ರವರ್ತಕನಾದ ವ್ಯಕ್ತಿಯ ಶ್ರೇಷ್ಠಗುಣಗಳು ವಂಶಜಾತರಲ್ಲಿಯೂ ಇಳಿದುಬಂದಿರುತ್ತವೆಯೆಂಬುದು ಲೋಕದ ನಿರೀಕ್ಷೆ. ಆ ವಂಶಕ್ಕೆ ಕೆಟ್ಟ ಹೆಸರು ಬರದಂತೆ ನಡೆದುಕೊಳ್ಳಲೇಬೇಕೆಂಬ ದೃಢಸಂಕಲ್ಪವೂ ಆತನಲ್ಲಿರುತ್ತದೆ. ಆ ಮಹಾವ್ಯಕ್ತಿಯ ಸಾಧನೆಗಳು ನೆನಪಾಗಿ ಹೃದಯದಲ್ಲಿ ಅನುರಣಿಸುತ್ತಿರಲೆಂದು ವಂಶಾನುಗುಣವಾಗಿ ರಾಘವ, ಕಾಕುತ್ಸ್ಥ, ಭಾರತ - ಮುಂತಾದ ಹೆಸರುಗಳಿಂದ ವಂಶಜಾತರನ್ನು ವ್ಯವಹರಿಸುವ ಪದ್ಧತಿ ಬಂದಿತು. ಗಾರ್ಗಿ, ಮೈತ್ರೇಯಿ, ಜಾನಕಿ - ಮುಂತಾದ ಶಬ್ದಗಳು ವಂಶದ ಆಭಿಜಾತ್ಯವನ್ನು ಸೂಚಿಸುತ್ತವೆ. ಶ್ರೀರಾಮನ ಮಗನಾದ ಕುಶನು ರಾಜ್ಯಭಾರ ಮಾಡುತ್ತಿರುವಾಗ ಒಂದು ರಾತ್ರಿ ಅವನ ಶಯ್ಯಾಗೃಹದಲ್ಲಿ ಅಯೋಧ್ಯಾಧಿದೇವತೆ ಸ್ತ್ರೀರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆ. ಕುಶನು ವಿಸ್ಮಯದಿಂದ ನೀನು ಯಾರೆಂದು ಕೇಳುತ್ತ ಹೇಳುವ ಮಾತಿದು -

**ಆಚಕ್ಷ್ವ ಮತ್ವಾ ವಶಿನಾಂ ರಘೂಣಾಂ ಮನಃ ಪರಸ್ತ್ರೀವಿಮುಖಪ್ರವೃತ್ತಿ ॥**

— *ರಘುವಂಶ, ೧೬-೮*

"ಜಿತೇಂದ್ರಿಯರಾದ ರಘುವಂಶದವರ ಮನಸ್ಸು ಪರಸ್ತ್ರೀಯರ ವಿಷಯದಲ್ಲಿ ವಿಮುಖವಾಗಿರುತ್ತದೆ - ಎಂಬುದನ್ನು ತಿಳಿದುಕೊಂಡು ಉತ್ತರ ಹೇಳು!"

ವಾಸಿಷ್ಠ, ವೈಶ್ವಾಮಿತ್ರ ಮುಂತಾದ ಗೋತ್ರನಾಮಗಳು ವಸಿಷ್ಠಾದಿಋಷಿಗಳ ಗುಣಗಳನ್ನು ನೆನಪಿಗೆ ತರುವುದಕ್ಕಾಗಿ. ಆದರೆ ಕಲಿಯುಗದಲ್ಲಿ ಪೂರ್ವಜರು ಸ್ಥಾಪಿಸಿದ ಆದರ್ಶಕ್ಕೆ ಬೆಲೆಯಿಲ್ಲ. ಹಣವಿದ್ದವನು ಉತ್ತಮಕುಲದವನಾಗಿಬಿಡುತ್ತಾನೆ - ಎನ್ನುತ್ತದೆ ವಿಷ್ಣುಪುರಾಣ.

ವಿದ್ಯೆ, ಚಾರಿತ್ರ್ಯಾದಿಗಳಿಂದ ವರನನ್ನೂ ಕುಲ, ಶೀಲಾದಿಗಳಿಂದ ವಧುವನ್ನೂ ಗೊತ್ತುಮಾಡಿಕೊಳ್ಳಬೇಕೆಂದು ಧರ್ಮಶಾಸ್ತ್ರ ಹೇಳುತ್ತದೆ. ಈಗ ಗಂಡು-ಹೆಣ್ಣುಗಳ ಕಣ್ಣುಗಳಿಗೆ ಪ್ರಿಯವಾಗಿ ಅಭಿರುಚಿ ಹುಟ್ಟಿದರೆ ಸಾಕು, ಅಭಿರುಚಿಯೇ ದಾಂಪತ್ಯವನ್ನು ಗೊತ್ತುಮಾಡಿಬಿಡುತ್ತದೆ. ಅನೃತವೆಂದರೆ ಸುಳ್ಳು ಎಂದು ಮಾತ್ರ ಅರ್ಥವಲ್ಲ. ಲಂಚ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಮುಂತಾದ ಅನಿಷ್ಟಗಳನ್ನು ಸೂಚಿಸುವ ವ್ಯಾಪಕಾರ್ಥವುಳ್ಳ ಶಬ್ದವಿದು. ಅನಾರ್ಜವ, ಕುಟಿಲಮಾರ್ಗ - ಎನ್ನಬಹುದು. ಅಧಿಕಾರಪ್ರಾಪ್ತಿ, ಚುನಾವಣೆಗಳಲ್ಲಿ ಗೆಲ್ಲುವುದು, ವಾಣಿಜ್ಯ - ಮುಂತಾದ ಲೋಕವ್ಯವಹಾರಗಳಲ್ಲಿ ಜಯವನ್ನು ಗಳಿಸಲು ಈ ಅನೃತವೇ ಮೂಲವಾಗಿರುತ್ತದೆ, ನಿಜವಾದ ಅರ್ಹತೆಯಲ್ಲ. ಅಭಯ-ಪ್ರಗಲ್ಭೋಚ್ಚಾರಣೆ ಎನ್ನುವುದಕ್ಕೆ ಬಾಯಿಬಡುಕತನ ವೆಂದು ಅಭಿಪ್ರಾಯ. ಮಾತಿಗೆ ಮಾತನ್ನೂ, ಯುಕ್ತಿಗೆ ಯುಕ್ತಿಯನ್ನೂ, ಉದಾಹರಣೆಗೆ ಪ್ರತ್ಯುದಾಹರಣೆಯನ್ನೂ ಕೊಟ್ಟು ಪ್ರೌಢವಾದ ಶಬ್ದಗಳನ್ನು ಬಳಸಿ ವಾದ ಹೂಡುವ ಕಲೆ ಕೆಲವರಿಗೆ ಒಲಿದಿರುತ್ತದೆ. ಅವರ ಮಾತಿನ ಅಬ್ಬರಕ್ಕೆ, ಬರವಣಿಗೆಯ ದಿಟ್ಟತನಕ್ಕೆ, ಹುಲಿಯನ್ನು ಕಂಡ ಹಸುವಿನಂತೆ, ನ್ಯಾಯವು ಪಲಾಯನಮಾಡುತ್ತದೆ. ಬೇಟೆಗಾರನನ್ನು ಕಂಡ ಜಿಂಕೆಯಂತೆ ಶಾಸ್ತ್ರಪಾಂಡಿತ್ಯವು ಮುದುರಿಕೊಳ್ಳುತ್ತದೆ. ಈ ಬಾಯಿಬಡುಕರು ಅಸಾಧಾರಣ ವಿದ್ವಾಂಸರೆಂಬ ಮನ್ನಣೆಗೆ ಪಾತ್ರರಾಗುತ್ತಾರೆ!

**ಖಲಃ ಕುರ್ಯಾತ್ ಖಲಂ ಲೋಕಂ ಸಂತಮನ್ಯಂ ನ ಕಶ್ಚನ ।**
**ನ ಹಿ ಶಕ್ಯಂ ಪದಾರ್ಥಾನಾಂ ಭಾವನಂ ಚ ವಿನಾಶವತ್ ॥೨೦॥**

— *ಕ್ಷತ್ರಚೂಡಾಮಣಿಕಾವ್ಯ*

"ಕೆಟ್ಟ ಮನುಷ್ಯನು ಇನ್ನೊಬ್ಬನನ್ನು ಕೆಟ್ಟವನನ್ನಾಗಿ ಮಾಡಬಲ್ಲ. ಆದರೆ ಕೆಟ್ಟವನನ್ನು ಯಾವನೂ ಒಳ್ಳೆಯವನನ್ನಾಗಿ ಮಾಡಲಾರ. ವಸ್ತುಗಳನ್ನು ಹಾಳುಮಾಡುವಷ್ಟು ಸುಲಭವಾಗಿ ಉತ್ಪಾದನೆ ಮಾಡಲು ಶಕ್ಯವಲ್ಲ."

ಕೆಟ್ಟ ಚಟಗಳು ಬೇಗ ಅಂಟಿಕೊಳ್ಳುತ್ತವೆ. ಬೀಡಿ, ಸಿಗರೇಟು, ಕುಡಿತಗಳ ಚಟವನ್ನು ಯಾರೂ ಹೇಳಿಕೊಡಬೇಕಾದ್ದಿಲ್ಲ. ನೋಡಿದರೆ ಸಾಕು, ಅದು ಬಂದು ಹಿಡಿದುಕೊಳ್ಳುತ್ತದೆ. ಬೆಳಗ್ಗೆ ತಡವಾಗಿ ಹಾಸಿಗೆಯಿಂದೇಳಬೇಕೆಂದು ಯಾರಾದರೂ ಹೇಳಿಕೊಡುತ್ತಾರೆಯೆ? ಉಷಃಕಾಲದಲ್ಲೆದ್ದು ಕಾರ್ಯಪ್ರವೃತ್ತರಾಗುವ ಜೊತೆಗಾರ

ರಿದ್ದರೂ ಆ ಸ್ವಭಾವ ತಾನಾಗಿ ಅಂಟುವುದಿಲ್ಲ. ಕರ್ಣ, ಶಕುನಿಗಳ ಸಹವಾಸದಿಂದ ದುರ್ಯೋಧನ ಸಾಕಷ್ಟು ದುರ್ವಿದ್ಯೆಗಳನ್ನು ಸಹಜವಾಗಿ ಕಲಿತ. ಆದರೆ ಭೀಷ್ಮ, ವಿದುರರಿಂದ ಅವನು ಏನನ್ನೂ ಕಲಿಯಲಿಲ್ಲ.

ಜನಸಮೂಹವನ್ನು ಪ್ರಚೋದಿಸಿ ಹಿಂಸಾಕೃತ್ಯದಲ್ಲಿ ತೊಡಗಿಸುವುದು ಕಷ್ಟವಲ್ಲ. ಪ್ರಚೋದನೆ ಶೀಘ್ರವಾಗಿ ಕೆಲಸಮಾಡುತ್ತದೆ. ಸಾಂತ್ವನಗೊಳಿಸುವುದು ಮಾತ್ರ ತುಂಬ ಕಷ್ಟ.

ಗಾಂಧಿಜೀಯವರಿಗೆ ಬಹುಮಂದಿ ಶಿಷ್ಯರಿದ್ದರು; ಭಕ್ತರಿದ್ದರು; ಮಿತ್ರರಿದ್ದರು. ಗಾಂಧಿಜೀಯವರ ಉಪದೇಶ, ಆಚಾರ, ವಿಚಾರಗಳು ಎಷ್ಟುಜನರ ಮೇಲೆ ಪರಿಣಾಮಬೀರಿದವು? ಗಾಂಧಿಜೀಯವರು ಜೀವಿಸಿದ್ದಾಗ ಅವರನ್ನು ಮೆಚ್ಚಿದ ವರೆಲ್ಲರೂ ಅವರೆದುರಿಗೆ ಬಾಗಿ ನಡೆದಿರಬಹುದು. ಆಮೇಲೆ ಗಾಂಧಿಜೀಯವರನ್ನೇ ಮರೆತರು. ಹೆದೆಯನ್ನೆಳೆದಾಗ ಬಿಲ್ಲಿನ ದಂಡ ಬಾಗಿರುತ್ತದೆ. ಬಿಲ್ಲುಗಾರನ ಕೈಯಿಂದ ಹೆದೆ ಕಳಚಿದೊಡನೆ ದಂಡವು ಸೆಟೆದುನಿಲ್ಲುತ್ತದೆ!

**ಪುರಾಣಾಂತೇ ಶ್ಮಶಾನಾಂತೇ ಮೈಥುನಾಂತೇ ಚ ಯಾ ಮತಿಃ ।**
**ಸಾ ಮತಿಃ ಸರ್ವದಾ ಚೇತ್ ಸ್ಯಾತ್ ಕೋ ನ ಮುಚ್ಯೇತ ಬಂಧನಾತ್ ॥**

— ಎಂದು ಒಬ್ಬ ದಾರ್ಶನಿಕ ಹೇಳಿದ್ದಾನೆ : "ಪುರಾಣ ಕೇಳಿದಾಗ, ಸತ್ತುಹೋದ ಪ್ರಿಯಬಂಧುವನ್ನು ಶ್ಮಶಾನದಲ್ಲಿ ಚಿತೆಗೆ ಏರಿಸಿದಾಗ, ಮೈಥುನದ ಕಡೆಯಲ್ಲಿ ಯಾವ ವೈರಾಗ್ಯಭಾವನೆ ಮನಸ್ಸಿಗೆ ಉಂಟಾಗುತ್ತದೆಯೋ ಅದು ಸರ್ವದಾ ಇರುವುದಾದರೆ, ಯಾವನಿಗೆ ತಾನೇ ಮೋಕ್ಷವು ದೊರೆಯುವುದಿಲ್ಲ?"

ಬಸ್ಸುಗಳಿಗೆ ಕಲ್ಲು ಹೊಡೆದು ಗಾಜನ್ನು ಪುಡಿಪುಡಿಮಾಡುವುದು ಒಂದು ಲೀಲೆ. ಮತ್ತೆ ಗಾಜು ಹಾಕಿಸುವಾಗ ಮಾತ್ರ ಶ್ರಮ. ಕಾಡನ್ನು ಕಡಿದು ನಗುನಗುತ್ತ ನಾಶಪಡಿಸಬಹುದು. ಆಮೇಲೆ ಎಷ್ಟು ಅತ್ತರೂ ಕಾಡಿನ ನಿರ್ಮಾಣವಾಗುವುದಿಲ್ಲ.

**ಯಥಾ ಪುಮಾನ್ ನ ಸ್ವಾಂಗೇಷು ಶಿರಃಪಾಣ್ಯಾದಿಷು ಕ್ವಚಿತ್ ।**
**ಪಾರಕ್ಯಬುದ್ಧಿಂ ಕುರುತೇ ಏವಂ ಭೂತೇಷು ಮತ್ಪರಃ ॥೨೧॥**

— *ಭಾಗವತ, ೪-೭-೫೩*

"ಮನುಷ್ಯನು ತನ್ನ ತಲೆ, ಕೈ - ಮೊದಲಾದ ಅವಯವಗಳ ವಿಷಯದಲ್ಲಿ 'ಇವು ಪರಕೀಯ' ಎಂಬ ಭಾವನೆಯನ್ನು ಎಂದಿಗೂ ತಳೆಯುವುದಿಲ್ಲ. ಹಾಗೆಯೇ ನನ್ನ ಭಕ್ತನು ಸಕಲಪ್ರಾಣಿಗಳಲ್ಲಿಯೂ 'ಇವರು ಪರಕೀಯರು, ನನ್ನವರಲ್ಲ' ಎಂಬ ಭೇದಬುದ್ಧಿಯನ್ನಿಡುವುದಿಲ್ಲ."

ದಕ್ಷಪ್ರಜಾಪತಿಗೆ ಭಗವಂತನು ಹೇಳಿದ ಬುದ್ಧಿವಾದವಿದು. ಪ್ರತಿಯೊಬ್ಬರೂ ತಮ್ಮ ಅವಯವಗಳಲ್ಲಿ ನನ್ನ ತಲೆ, ನನ್ನ ಕೈ, ನನ್ನ ಕಾಲು - ಎಂದು ಅಭಿಮಾನವನ್ನಿರಿಸಿ ಕೊಂಡಿರುತ್ತಾರೆ. 'ನನ್ನ' ಎಂಬಲ್ಲಿ 'ನಾನು' ಎಂದರೆ ಯಾರೆಂಬುದು ಗೊತ್ತಿಲ್ಲದಿದ್ದರೂ ಈ ಅಭಿಮಾನವು ಮಾತ್ರ ತಪ್ಪುವುದಿಲ್ಲ! ನನ್ನ ಮನೆ, ನನ್ನ ಮಡದಿ, ನನ್ನ ಮಕ್ಕಳು - ಎಂಬುದಕ್ಕಿಂತ ನನ್ನ ದೇಹ ಎಂಬ ಅಭಿಮಾನ ಅಧಿಕ. ಅಂಗ್ರಪ್ರತ್ಯಂಗಗಳೆಲ್ಲವೂ ಸೇರಿ ನನ್ನ ದೇಹವೆಂದೂ ದೇಹವೇ ನಾನೆಂದೂ ನಂಬಿಕೊಂಡಿರುವುದೇ ಈ ಪ್ರೀತಿಗೆ ಕಾರಣ. ಹಾಗೆಯೇ ನಿಜವಾದ ದೈವಭಕ್ತನಿಗೆ ಜಗತ್ತಿನ ಸಕಲ ಪ್ರಾಣಿವರ್ಗವೂ ತನ್ನದು, ತಾನು — ಎಂಬ ಭಾವನೆ ಹುಟ್ಟುತ್ತದೆ. ಏಕೆಂದರೆ, ಈ ಜಗತ್ತಿನಲ್ಲಿರುವ ಸಕಲ ಮನುಷ್ಯ, ಪಶುಪಕ್ಷಿ, ಕೀಟಗಳೂ ಭಗವಂತನ ಒಂದಂಶವೇ ಆಗಿವೆ. ಅಂತೆಯೇ ತಾನೂ ಜಗತ್ತಿನ ಒಂದಂಶವೇ. 'ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ' ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಉಪದೇಶಿಸಿದ್ದಾನೆ. 'ಸರ್ವಭೂತಾತ್ಮಭೂತಾತ್ಮಾ' ಎಂದು ಹೇಳಿದ್ದಾನೆ; ಸಕಲಭೂತಗಳೂ ತನ್ನ ಆತ್ಮವೆಂದಿದ್ದಾನೆ. ಕೈಯು ಕಾಲನ್ನಾಗಲಿ, ಕಾಲು ಕಣ್ಣನ್ನಾಗಲಿ ಹೇಗೆ ವಿರೋಧಿಸುವುದಿಲ್ಲವೋ, ದ್ವೇಷಿಸುವುದಿಲ್ಲವೋ, ಹಾಗೆ ಭಕ್ತನು ಎಲ್ಲರೊಡನೆ ಹೊಂದಿಕೊಂಡಿರುತ್ತಾನೆ; ಯಾರನ್ನೂ ದ್ವೇಷಿಸುವುದಿಲ್ಲ. ವೇದಾಂತದಿಂದ ಆಗುವ ಲೋಕೋಪಕಾರ ಈ ಬಗೆಯದು.

ಇದೇ ನೀತಿಯು ರಾಷ್ಟ್ರಭಕ್ತನಿಗೂ ಅನ್ವಯಿಸುತ್ತದೆ. ತನ್ನ ಜನ್ಮಭೂಮಿಯಾದ ರಾಷ್ಟ್ರವೇ ಅವನ ಆರಾಧ್ಯದೇವತೆಯಾಗಿರುತ್ತದೆ. ದೈವಭಕ್ತನಿಗೆ 'ವಸುಧೈವ ಕುಟುಂಬಕಂ' ಆಗಿದ್ದರೆ ದೇಶಭಕ್ತನಿಗೆ 'ರಾಷ್ಟ್ರಮೇವ ಕುಟುಂಬಕಂ' ಆಗಿರುತ್ತದೆ. ಈತನ ಭಕ್ತಿ ತನ್ನ ದೇಶಕ್ಕೆ ಸೀಮಿತ; ಆದರೆ ಅನ್ಯರಾಷ್ಟ್ರವನ್ನು ದ್ವೇಷಿಸದೆ ಅದರಲ್ಲಿಯೂ ಪ್ರೀತ್ಯಾದರಗಳನ್ನು ಹೊಂದಿಯೇ ಇರುತ್ತಾನೆ. ಮನುಷ್ಯನು ತನ್ನ ದೇಹದಲ್ಲಿ ಅಧಿಕವಾದ ಪ್ರೀತಿಯನ್ನಿಟ್ಟುಕೊಂಡು ತನ್ನ ಆಸ್ತಿಪಾಸ್ತಿಗಳಲ್ಲಿಯೂ ಅದನ್ನು ವಿಸ್ತರಿಸಿಕೊಂಡಿರುತ್ತಾನಷ್ಟೆ.

ಅಂತೆಯೇ ದೇಶಭಕ್ತನು ತನ್ನ ದೇಶದಲ್ಲಿ ಮೊದಲು ಅಧಿಕ ಪ್ರೀತಿಯನ್ನಿಟ್ಟು ಉಳಿದ ದೇಶಗಳಿಗೂ ಅದನ್ನೆ ವಿಸ್ತರಿಸಿಕೊಳ್ಳುತ್ತಾನೆ.

ದೇಹಕ್ಕೆ ಕೈ, ಕೈಗೆ ಮುಷ್ಟಿ, ಮುಷ್ಟಿಗೆ ಬೆರಳುಗಳಿದ್ದಂತೆ ಸಮಸ್ತ ಜಿಲ್ಲಾ, ತಾಲೂಕು, ನಗರ, ಗ್ರಾಮಗಳೂ ಪ್ರತ್ಯಂಗಗಳು - ಉಪಾಂಗಗಳು. ಎಲ್ಲ ಪ್ರಜೆಗಳೂ ರಾಷ್ಟ್ರದೇವತೆಯ ಅಂಶಗಳು. ಯಾವ ರಾಜ್ಯಕ್ಕೂ ಯಾವ ಪ್ರಜೆಗೂ ಹಿಂಸೆಯಾಗದಂತೆ, ಪಕ್ಷಪಾತವಿಲ್ಲದಂತೆ ವರ್ತಿಸತಕ್ಕವನು ನಿಜವಾದ ಅರ್ಥದಲ್ಲಿ ಭಾರತೀಯ ರಾಷ್ಟ್ರಭಕ್ತ.

ಇಂದು ನಡೆಯುವ ಜಗಳಗಳೆಷ್ಟು! ಬಡಿದಾಟ, ಹೊಡೆದಾಟ, ಭಂಡಾಟ, ಪುಂಡಾಟಗಳೆಷ್ಟು! ಪಂಜಾಬ್, ಕಾಶ್ಮೀರ, ಈಶಾನ್ಯಭಾರತದಲ್ಲಿ ನಡೆಯುತ್ತಿರುವ ಅವ್ಯಾಹತ ಹಿಂಸಾಚಾರಗಳನ್ನೇ ನೋಡಿದರೆ, ಎಡಗೈ ಬಲಗೈಯೊಡನೆ, ಎಡಗಣ್ಣು ಬಲಗಣ್ಣೊಡನೆ, ಕಿರುಬೆರಳು ಹೆಬ್ಬೆರಳಿನೊಡನೆ ಸೆಣಸುತ್ತಿವೆಯೆನ್ನಿಸುವುದಿಲ್ಲವೆ? ರಾಷ್ಟ್ರ ವಿಭಜನೆಯಾಗಿ ಪಾಕಿಸ್ತಾನ ನಿರ್ಮಾಣವಾದಾಗಲೇ ದೇಹದ ಒಂದು ಅಂಗವನ್ನು ಕತ್ತರಿಸಿದಂತಾಯಿತು. ತಲೆ ಕತ್ತರಿಸಿಹೋಗುವವರೆಗೂ ನಮಗೆ ಬುದ್ಧಿ ಬರಲಾರದೆನಿಸುತ್ತದೆ. ತಲೆ ಹೋದಮೇಲೆ ಬುದ್ಧಿ ಬರುವುದು ಯಾರಿಗೆ?

**ದ್ವೇಷ್ಯೋಽಪಿ ಸಂಮತಃ ಶಿಷ್ಟಸ್ತಸ್ಯಾರ್ತಸ್ಯ ಯಥೌಷಧಮ್ ।**
**ತ್ಯಾಜ್ಯೋ ದುಷ್ಟಃ ಪ್ರಿಯೋಽಪ್ಯಾಸೀದಂಗುಲೀವೋರಗಕ್ಷತಾ ॥೨೨॥**

— *ರಘುವಂಶ, ೧-೨೮*

"ಔಷಧವು ಕಹಿಯಾಗಿದ್ದರೂ ರೋಗಿಯು ಅದನ್ನು ಸೇವಿಸುತ್ತಾನೆ. ಹಾಗೆಯೇ ತನಗೆ ಅಪ್ರಿಯನಾಗಿದ್ದರೂ ನೀತಿವಂತನಾಗಿದ್ದರೆ ಅವನನ್ನು ದಿಲೀಪರಾಜನು ಆರಿಸಿಕೊಳ್ಳುತ್ತಿದ್ದನು. ತನಗೆ ಪ್ರಿಯನಾಗಿದ್ದರೂ ದುಷ್ಟನಾಗಿದ್ದರೆ ಅವನನ್ನು ದೂರವಿರಿಸುತ್ತಿದ್ದನು, ಹಾವು ಕಡಿದ ಬೆರಳನ್ನು ಕತ್ತರಿಸಿ ಎಸೆಯುವ ಹಾಗೆ."

ಆಡಳಿತಗಾರನು ಅಧಿಕಾರಗಳನ್ನೂ ಪ್ರಜೆಗಳನ್ನೂ ಹೇಗೆ ನೋಡಿಕೊಳ್ಳಬೇಕೆಂಬುದು ಇಲ್ಲಿ ಸೂಚಿತವಾಗಿದೆ. ದಿಲೀಪರಾಜನ ಆದರ್ಶವನ್ನು ಮೆಚ್ಚಿ ಮಹಾಕವಿ ಕಾಳಿದಾಸನು ಆತನ ರಾಜನೀತಿಯನ್ನಿಲ್ಲಿ ವರ್ಣಿಸಿದ್ದಾನೆ. ಕಾಳಿದಾಸನ ಉಪಮಾನಗಳು

ತುಂಬ ಅರ್ಥವತ್ತಾದವು. ಅವನು ಕೊಡುವ ಉಪಮಾನಕ್ಕೆ ಹೆಚ್ಚು ವಿವರಣೆ ಬೇಕಾಗುವುದಿಲ್ಲ. ಅದು ಎಲ್ಲರ ಅನುಭವಕ್ಕೆ ಬರತಕ್ಕುದೇ ಆದ್ದರಿಂದ ಗಂಭೀರವಾದ ಅರ್ಥವೂ ಸಹ ಸ್ವಯಂವೇದ್ಯವಾಗುತ್ತದೆ. ಒಂದಲ್ಲ ಒಂದು ಬಾರಿ ಎಲ್ಲರೂ ಔಷಧವನ್ನು ಕುಡಿಯಬೇಕಾಗುತ್ತದೆ. ಅದು ಕಹಿಯೋ ಒಗರೋ ಆಗಿ ದ್ವೇಷ್ಯವೆನಿಸುತ್ತದೆ. ಪಥ್ಯವನ್ನೂ ಪಾಲಿಸಬೇಕಾಗಿ ಬರುತ್ತದೆ. ಆದರೂ ಔಷಧಸೇವನೆ ರೋಗಿಗೆ ಅನಿವಾರ್ಯ. ಔಷಧಕ್ಕಾಗಿ ವೆಚ್ಚವೂ ಅಧಿಕವಾಗಬಹುದು. ಈ ಬಗೆಯ ತೊಂದರೆಯನ್ನು ಅನುಭವಿಸಲೇಬೇಕು. ರೋಗಿಯು ಹಿಂದೆಮುಂದೆ ನೋಡದೆ ಔಷಧಸೇವನೆಯನ್ನಾರಂಭಿಸುತ್ತಾನೆ. ಅಂತೆಯೇ ಅಧಿಕಾರಿಯೊಬ್ಬ ಬೇರೆಬೇರೆ ಕಾರಣ ದಿಂದ ರಾಜನ ಪ್ರೀತಿಗೆ ಪಾತ್ರನಲ್ಲದೆ ಹೋಗಿರಬಹುದು. ಅವನನ್ನು ಮುಖ್ಯವಾದ ಅಧಿಕಾರಕ್ಕೆ ಏರಿಸಿದರೆ, ತನಗೆ ಪ್ರಿಯನಾದ ಇನ್ನೊಬ್ಬನಿಗೆ ಅಧಿಕಾರವು ತಪ್ಪಿಹೋಗಬಹುದು. ಇಂತಹುದೇನಿದ್ದರೂ ದಿಲೀಪರಾಜನು ಗಣಿಸದೆ ಆತನು ದಕ್ಷನಾದ ಅಧಿಕಾರಿಯನ್ನು ಮಂತ್ರಿಪದವಿಗೋ ಇನ್ನೊಂದು ಅಧಿಕಾರಸ್ಥಾನಕ್ಕೋ ಏರಿಸಿಬಿಡುತ್ತಿದ್ದನು; ಹಿಂದೆಮುಂದೆ ನೋಡುತ್ತಿರಲಿಲ್ಲ. ಹಾಗಲ್ಲದೆ ಪಕ್ಷಪಾತಿಯಾಗಿ ಅಪ್ರಾಮಾಣಿಕನನ್ನು ಮೇಲಕ್ಕೇರಿಸಿದರೆ ಪ್ರಜೆಗಳಿಗೆ ಕಷ್ಟವೂ ತನಗೆ ಕೆಟ್ಟ ಹೆಸರೂ ಪ್ರಾಪ್ತವಾಗುತ್ತದೆ. ಜನಾಪವಾದಕ್ಕೆ ಅಂಜುತ್ತಿದ್ದ ಕಾಲ ಅದು. ಅದರಂತೆ ತನಗೆ ಪ್ರಿಯನಾದ ಒಬ್ಬ ಅಧಿಕಾರಿ ದುಷ್ಟನಾಗಿದ್ದರೆ - ಲಂಚ, ಭ್ರಷ್ಟಾಚಾರ, ದುರಾಸೆ, ಪಕ್ಷಪಾತ, ಅಪ್ರಾಮಾಣಿಕತೆ ಮುಂತಾದ ದೋಷಗಳಿಂದ ಕೂಡಿದ್ದರೆ - ಅವನನ್ನು ರಾಜನು ದೂರವಿರಿಸುತ್ತಿದ್ದನು. ತನಗೆ ಪ್ರಿಯ ಬಂಧುವಾದರೂ ಪ್ರಜೆಗಳಿಗೆ ಅಪಕಾರಿಯಾದ್ದರಿಂದ ಅವನು ದಂಡನೆಗೆ ಅರ್ಹನಾದಾನು.

ಬೆರಳು ನಮ್ಮ ಅವಯವವಾಗಿದ್ದು ಉಪಯುಕ್ತವೂ ಆಗಿದೆ, ಸೌಂದರ್ಯ ಕಾರಿಯೂ ಆಗಿದೆ. ಎಲ್ಲರಿಗೂ ತಮ್ಮ ದೇಹದ ಮೇಲೆ ವಿಶೇಷವಾದ ಪ್ರೀತಿಯಿರುವುದು ಸಹಜ. ತನ್ನ ಅವಯವವನ್ನು ಕತ್ತರಿಸಿ ಎಸೆಯಲು ಯಾವನೂ ಒಪ್ಪುವುದಿಲ್ಲ. ಒಂದು ವೇಳೆ ಕೈಬೆರಳನ್ನೋ ಕಾಲುಬೆರಳನ್ನೋ ವಿಷದ ಹಾವು ಕಡಿದರೆ ಏನಾಗುತ್ತದೆ? ಸಾವು ಬರಬಹುದು ಅಥವಾ ಬೆರಳು ಹುಣ್ಣಾಗಿ ಕೊಳೆಯಬಹುದು. ಹುಣ್ಣಾಗಿ ಕೊಳೆಯತೊಡಗಿದಾಗ ಶಸ್ತ್ರಚಿಕಿತ್ಸೆ ಅನಿವಾರ್ಯವಾಗುತ್ತದೆ. ದೇಹದ ರಕ್ಷಣೆಗಾಗಿ ಒಂದು ಬೆರಳನ್ನು ಕತ್ತರಿಸಬೇಕಾಗಿ ಬಂದರೆ ಯಾರೂ ನಿರಾಕರಿಸುವುದಿಲ್ಲ. ಹಾಗೆಯೇ ವಿಶಾಲವಾದ ರಾಜ್ಯದ ಒಳಿತಿಗಾಗಿ, ಒಬ್ಬ ಅಧಿಕಾರಿಯನ್ನು ತನಗೆ ಎಷ್ಟೇ ಪ್ರಿಯನಾಗಿದ್ದರೂ ತೆಗೆದುಹಾಕುವುದು ಅಥವಾ ದಂಡಿಸುವುದು ರಾಜನ ಪ್ರಥಮ

ಕರ್ತವ್ಯವಾಗುತ್ತದೆ. ದಿಲೀಪನ ಆಳ್ವಿಕೆ ಆ ಪ್ರಕಾರವಾಗಿತ್ತೆಂದು ತಿಳಿಸಿದ ಮಹಾಕವಿಯು ರಾಜನ ಆಳ್ವಿಕೆ ಹೇಗಿರಬೇಕೆಂಬ ಆದರ್ಶವನ್ನು ತಿಳಿಸಿಕೊಟ್ಟಿದ್ದಾನೆ. ಇದೇ ರೀತಿಯಲ್ಲಿ ನ್ಯಾಯಾಧಿಪತಿಯು ಪ್ರತಿಯೊಬ್ಬನ ಯಾವ ವೈಶಿಷ್ಟ್ಯವನ್ನೂ ಗಮನಿಸದೆ ಅಪರಾಧಕ್ಕೆ ಅನುಗುಣವಾದ ಶಿಕ್ಷೆಯನ್ನು ವಿಧಿಸಲೇಬೇಕು.

ಒಬ್ಬ ಮನುಷ್ಯನು ವೈಯಕ್ತಿಕವಾಗಿ ಪ್ರಿಯನಾಗುವುದಕ್ಕೆ ಬಾಂಧವ್ಯವೇ ಮೊದಲಾದ ಹಲವು ಕಾರಣಗಳಿರುತ್ತವೆ. ಹಾಗೆಯೇ ದ್ವೇಷ್ಯವಾಗುವುದಕ್ಕೂ ಕಾರಣಗಳಿಲ್ಲದಿಲ್ಲ. ಈಗ 'ಜಾತಿ' ಎಂಬ ನೂತನ ಕಾರಣವು ಸೇರಿಕೊಂಡಿರುವುದೊಂದು ವಿಶೇಷ. ಇದರ ನಿಮಿತ್ತದಿಂದ ಅರ್ಹನು ಅನರ್ಹನೂ ಅನರ್ಹನು ಅರ್ಹನೂ ಆಗಿಬಿಡುತ್ತಾನೆ. ಇಂದು 'ಶ್ವ'ಜನರಾಗಿದ್ದರೂ ಸ್ವಜನರಾದರೆ ಸುಜನರಾಗಿಬಿಡುತ್ತಾರೆ! (ಶ್ವ=ನಾಯಿ). ಸುಜನನು ಶ್ವಜನನಾಗಬಹುದು. ಹೀಗೆಯೇ ನಡೆದಾಗ ಸ್ವರಾಜ್ಯವು ಶ್ವರಾಜ್ಯವಾಗಿ ಪರಿಣಮಿಸಿದರೆ ಅಚ್ಚರಿಯೇನಿಲ್ಲ.

**ಚಿಂತಾಯಾಶ್ಚ ಚಿತಾಯಾಶ್ಚ ಬಿಂದುಮಾತ್ರಂ ವಿಶಿಷ್ಯತೇ ।**
**ಚಿತಾ ದಹತಿ ನಿರ್ಜೀವಂ ಚಿಂತಾ ದಹತಿ ಜೀವಿನಮ್ ॥೨೩॥**

— *ಸುಭಾಷಿತರತ್ನ-ಭಾಂಡಾಗಾರ*

"ಚಿಂತೆಗೂ ಚಿತೆಗೂ ಇರುವ ವ್ಯತ್ಯಾಸ ಒಂದು ಸೊನ್ನೆ ಮಾತ್ರ.
ಚಿತೆಯು ಪ್ರಾಣವಿಲ್ಲದ ದೇಹವನ್ನು ಸುಡುತ್ತದೆ, ಚಿಂತೆಯಾದರೋ
ಪ್ರಾಣವಿರುವ ಮನುಷ್ಯನನ್ನೇ ಸುಡುತ್ತದೆ!"

ಚಿಂತೆಗೂ ಚಿತೆಗೂ ಇರುವ ಭೇದ ಸೊನ್ನೆ. ಭೇದವಿಲ್ಲವೆಂದೇ ಅರ್ಥ. ಎರಡೂ ಸುಡುವ ಕೆಲಸವನ್ನೇ ಮಾಡುತ್ತವೆ. ಚಿಂತೆ ಸಜೀವವನ್ನೇ ಸುಡುತ್ತದೆಯಾದ್ದರಿಂದ ಚಿತೆಗಿಂತ ಪ್ರಬಲವಾದದ್ದು. ಒಬ್ಬ ಮನುಷ್ಯನ ಮನಸ್ಸು ಅಸ್ವಸ್ಥವಾಯಿತೆಂದರೆ ಪಶುವಿಗೆ ಸಮಾನನಾಗಿಬಿಡುತ್ತಾನೆ. ಚಿಂತೆಯ ಸಾಮರ್ಥ್ಯ ಅಂತಹುದು. ಮಹಾಭಾರತ ಯುದ್ಧಾರಂಭದಲ್ಲಿ ಅರ್ಜುನನಿಗೆ ಬಂದ ಚಿಂತೆ ಅಪಾರವಾದದ್ದು. ಗುರುಹಿರಿಯರನ್ನು ಕೊಂದು ರಾಜ್ಯವಾಳಬೇಕೆ? ಅಥವಾ ಯುದ್ಧದಿಂದ ಹಿಂದಕ್ಕೆ ಸರಿದು ಭಿಕ್ಷಾನ್ನದಿಂದ ಜೀವಿಸಬೇಕೆ? - ಎಂಬ ಚಿಂತೆ ಅವನದು. ಶ್ರೀಕೃಷ್ಣನು ಅವನ ಚಿಂತೆಯನ್ನು ಪರಿಹರಿಸದೆಹೋಗಿದ್ದರೆ, ಷೇಕ್‌ಸ್ಪಿಯರ್‌ನ 'ಹ್ಯಾಮ್ಲೆಟ್' ನಾಟಕದ ರಾಜಕುಮಾರನಂತೆ ಅರ್ಜುನನು ಹುಚ್ಚನಾಗಿಹೋಗುತ್ತಿದ್ದ.

ಮಾನಸಿಕ ಚಿಂತೆ ಅನೇಕ ರೋಗಗಳಿಗೆ ಕಾರಣವಾಗುತ್ತದೆಂದು ವೈದ್ಯವಿಜ್ಞಾನಿಗಳೂ ದೃಢಪಡಿಸಿದ್ದಾರೆ. ಡಾ|| ಮರ್ಚಿಸನ್ ಅವರು "ಯಕೃತ್ತಿನ ಕ್ಯಾನ್ಸರ್ ಬಂದಿರುವ ರೋಗಿಗಳನ್ನು ಪರೀಕ್ಷಿಸಿದಾಗ, ಅವರ ಕ್ಯಾನ್ಸರಿಗೆ ಚಿಂತೆಯೇ ಕಾರಣವೆಂದು ದೃಢವಾಯಿತು" ಎಂದು ಬರೆದಿದ್ದಾರೆ. ವಿಖ್ಯಾತ ಶೋಧಕರಾದ ಡಾ|| ಮಾರ್ಟಿನ್ ಅವರು ಚಿಂತೆಯಿಂದಾಗುವ ಅನರ್ಥಗಳನ್ನು ಪಟ್ಟಿಮಾಡುತ್ತ "ಚಿಂತೆಯಿಂದ ದೇಹಶಕ್ತಿಯು ಕಡಮೆಯಾಗಿ ತೂಕದಲ್ಲಿ ಹ್ರಾಸವಾಗುತ್ತದೆ. ಚಿಂತಾಗ್ರಸ್ತನು ಮಾಡುವ ಕೆಲಸಗಳೆಲ್ಲವೂ ಕೀಳುದರ್ಜೆಯವಾಗುತ್ತವೆ" ಎಂದಿದ್ದಾರೆ.

ನಿತ್ಯರೋಗಿಯಾದವನು ಚಿಂತೆಯಿಲ್ಲದೆ ಮನಸ್ಸನ್ನು ಶಾಂತವಾಗಿರಿಸಿಕೊಳ್ಳುವುದೆಂತು? ಬೃಹದಾರಣ್ಯಕೋಪನಿಷತ್ತು ಹೇಳುತ್ತದೆ - "ಏತದ್ವೈ ಪರಮಂ ತಪೋ ಯದ್ ವ್ಯಾಹಿತಸ್ತಪ್ಯತೇ" (೫-೧೧). ವ್ಯಾಹಿತವೆಂದರೆ ವ್ಯಾಧಿತ, 'ರೋಗಿ' ಎಂದರ್ಥ. ರೋಗಿಯು ಅನುಭವಿಸುವ ಯಾತನೆ ಒಂದು ತಪಸ್ಸು. ನಾನು ತಪಸ್ಸು ಮಾಡುತ್ತಿದ್ದೇನೆ, ಈ ತಪಸ್ಸಿನಿಂದ ನನ್ನ ಜನ್ಮಾಂತರ ಪಾಪಕರ್ಮ ಸವೆಯುತ್ತಿದೆ - ಎಂದು ರೋಗಿಯು ತಿಳಿಯಬೇಕೆಂದು ಉಪನಿಷದ್ವಾಕ್ಯದ ಅರ್ಥ. ಪಾಪಪುಣ್ಯಗಳನ್ನೊಪ್ಪುವ ಆಸ್ತಿಕಬುದ್ಧಿಯವನಿಗೆ ಇದರಿಂದ ಮನಶ್ಶಾಂತಿ ದೊರೆಯುತ್ತದೆ. ಆದರೆ ನಿತ್ಯರೋಗಿಗೆ ವಿಚಾರವಾದಿಗಳೆಂದುಕೊಳ್ಳುವ ನಾಸ್ತಿಕರು ಹೇಳುವ ಸಮಾಧಾನ ಯಾವುದು?

**ಅರ್ಥಾ ವೈ ವಾಚಿ ನಿಯತಾ ವಾಙ್ಮೂಲಾ ವಾಚಿ ಮಿಶ್ರಿತಾಃ ।**
**ಯೋ ವೈ ಸ್ತೇಯಯೇದ್ವಾಚಂ ಸ ಸರ್ವಸ್ತೇಯಕೃನ್ನರಃ ॥೨೪॥**

*- ನಾರದಸ್ಮೃತಿ, ೨-೨೦೫*

"ಮಾತಾಡಿದಾಗ ಅದರ ಅರ್ಥವು ನಿಯಮಬದ್ಧವಾಗಿ ತೋರುತ್ತದೆ. ಅರ್ಥಪ್ರಕಾಶನಕ್ಕೆ ಮಾತು ಮುಖ್ಯವಾದ ಸಾಧನ. ಏಕೆಂದರೆ ಅರ್ಥವು ವಾಕ್ಕಿನಲ್ಲಿ ಸೇರಿಕೊಂಡೇ ಇರುತ್ತದೆ. ಆದ್ದರಿಂದ ಯಾವಾತನು ಮಾತಿನ ಚೌರ್ಯವನ್ನೆಸಗುತ್ತಾನೋ ಅವನು ಸರ್ವವನ್ನೂ ಕದಿಯುವ ಕಳ್ಳನೇ ಸರಿ."

"ನಿತ್ಯಃ ಶಬ್ದಾರ್ಥಸಂಬಂಧಃ" ಎಂದು ಶಾಸ್ತ್ರಕಾರರ ಸಿದ್ಧಾಂತವಿದೆ. ನಾವು ಬಳಸುವ ಎಲ್ಲ ಶಬ್ದಗಳಿಗೂ ಒಂದು ಅರ್ಥವಿದ್ದೇ ಇರುತ್ತದೆ. ಹಾಗೆಯೇ ಪ್ರತಿಯೊಂದು

ವಸ್ತುವಿಗೂ ಅದನ್ನು ಹೇಳುವ ಒಂದು ಶಬ್ದವಿರುತ್ತದೆ. ಅರ್ಥವೆಂದರೆ ವಸ್ತು. ಅದನ್ನು ಪದಾರ್ಥವೆಂದು ಕರೆಯುತ್ತೇವೆ. ಪದದ ಅರ್ಥ ಪದಾರ್ಥ. ಪದ ಮತ್ತು ಅರ್ಥಗಳ ನಿತ್ಯಸಂಬಂಧವೇ 'ಪದಾರ್ಥ' ಎಂಬ ಶಬ್ದದ ರೂಢಿಗೆ ಕಾರಣ. ಶಬ್ದಾರ್ಥಗಳೆರಡೂ ಸೇರಿಕೊಂಡಿರುವುದರಿಂದ, ಶಬ್ದಚೌರ್ಯವನ್ನೆಸಗಿದಾಗ ಅರ್ಥಚೌರ್ಯವು ತನ್ನಷ್ಟಕ್ಕೆ ಆಗಿಬಿಡುತ್ತದೆ. ಆದರೆ 'ಶಬ್ದಚೌರ್ಯ' ಎಂದರೇನು? ಒಬ್ಬ ವ್ಯಕ್ತಿಗೆ ಸೇರಿದ ಹಣವನ್ನು ಅವನಿಗೆ ಗೊತ್ತಾಗದಂತೆ ಅವನ ಅನುಮತಿಯಿಲ್ಲದೆ ತೆಗೆದುಕೊಳ್ಳುವುದು ಕಳ್ಳತನ. ಆಗ ಎರಡು ಸಂಗತಿಗಳು ಘಟಿಸುತ್ತವೆ: ಆ ವ್ಯಕ್ತಿಯಿಂದ ಹಣವು ಬೇರ್ಪಡುತ್ತದೆ; ಇದು ವಿಯೋಗ. ತೆಗೆದುಕೊಂಡವನಿಗೆ ಹಣವು ಸೇರುತ್ತದೆ; ಇದು ಸಂಯೋಗ. ನಾವಾಗಿ ಹಣವನ್ನು ಕೊಟ್ಟಾಗ ಅದರಲ್ಲಿ ಒಡೆಯನ ಅನುಮತಿ ಇರುತ್ತದೆ. ಕಳ್ಳತನದಲ್ಲಿ ಇರುವುದಿಲ್ಲವೆಂಬುದಷ್ಟೇ ಭೇದ. ಕದ್ದವನೊಬ್ಬನು 'ಹಣವನ್ನು ನಾನು ಕದ್ದಿಲ್ಲ' ಎಂದಾಗ ಅವನು ಹೇಳುವ ಸುಳ್ಳು 'ಶಬ್ದಚೌರ್ಯ'ವಾಗುತ್ತದೆ. ತಾನು ಮಾಡಿದ ಅಲ್ಪಕಾರ್ಯವನ್ನು ದೊಡ್ಡದಾಗಿ ಬಣ್ಣಿಸುತ್ತ ಬಡಾಯಿ ಕೊಚ್ಚಿಕೊಳ್ಳುವುದು ಶಬ್ದಚೌರ್ಯ.

ಅಶುದ್ಧವಾದ ಅಪಶಬ್ದವನ್ನು ಬಳಸುವುದೂ ಶಬ್ದಚೌರ್ಯವೇ.

'ನಾಸ್ತ್ಯಚೋರಃ ಕವಿಜನಃ' ಎಂಬ ಯುಕ್ತಿ ಪ್ರಸಿದ್ಧವಾದದ್ದು. ಒಬ್ಬ ಮಹಾಕವಿಯ ಉದಾತ್ತ ಭಾವನೆಯನ್ನು ಇನ್ನೊಬ್ಬ ಮಹಾಕವಿ ತನ್ನ ಪ್ರತಿಭೆಯಿಂದಲೇ ಉದ್ಗರಿಸಿರುವುದೂ ಉಂಟು. ಕಾವ್ಯಜಗತ್ತಿನಲ್ಲಿ ಇದು ಕ್ಷಮಾರ್ಹವೆನಿಸಿದೆ.

ಹೆಚ್ಚು ಮಾತಾಡಿದಷ್ಟೂ ಅಸತ್ಯದ ಭಯವಿರುತ್ತದೆ. ಸತ್ಯಪಾಲನೆಗಾಗಿ ರಘುವಂಶದ ರಾಜರು ಮಿತಭಾಷಿಗಳಾಗಿದ್ದರಂತೆ. 'ಸತ್ಯಾಯ ಮಿತಭಾಷಿಣಾಂ'.

**ಪ್ರಾರಬ್ಧವ್ಯೇ ನಿರುದ್ಯೋಗಃ ಜಾಗರ್ತವ್ಯೇ ಪ್ರಸುಪ್ತಕಃ ।**
**ವಿಶ್ವಸ್ತವ್ಯೇ ಭಯಸ್ಥಾನೇ ಹಾ ! ನರಃ ಕೋ ನ ಹನ್ಯತೇ ॥೨೫॥**

— *ಗರುಡಪುರಾಣ, ೧೬-೩೧*

"ಯಾವಾಗ ಒಂದು ಕಾರ್ಯವನ್ನಾರಂಭಿಸಬೇಕೋ ಆಗ ಸುಮ್ಮನಿರುತ್ತಾನೆ; ಎಚ್ಚರವಾಗಿರಬೇಕಾದಾಗ ಕಣ್ಣುಮುಚ್ಚಿ ಮಲಗಿರುತ್ತಾನೆ; ಮತ್ತು ಭಯಪಡಬೇಕಾದ ವಸ್ತುವನ್ನು ವಿಶ್ವಾಸಯೋಗ್ಯವೆಂದು ತಿಳಿದುಬಿಟ್ಟಾಗ, ಅಯ್ಯೋ! ಆ ಮನುಷ್ಯನು ಹಾಳಾಗದೆ ಉಳಿದಾನೆ?"

ರೈತರು ಗಾಳಿ ಬೀಸುವಾಗ ಧಾನ್ಯವನ್ನು ತೂರಿ ಸ್ವಚ್ಛಪಡಿಸುತ್ತಾರೆ. ಗಾಳಿ ಬೀಸಿದಾಗ ಸುಮ್ಮನೆ ಕುಳಿತಿದ್ದರೆ ಅವರ ಕೆಲಸವಾಗುವುದು ಹೇಗೆ? ಇದನ್ನು ಅನುಲಕ್ಷಿಸಿಯೇ 'ಗಾಳಿ ಬಂದಾಗ ತೂರಿಕೋ' ಎಂಬ ಗಾದೆ ಹುಟ್ಟಿರುವುದು. ಮೇಲ್ಕಂಡ ವಚನದ ಸಂದರ್ಭವೇನೆಂದರೆ, ವಿದ್ಯಾಭ್ಯಾಸ ಮಾಡಿ ಧರ್ಮಸೂಕ್ಷ್ಮವನ್ನು ಅರಿತುಕೊಳ್ಳಬೇಕಾದ ಬಾಲ್ಯದಲ್ಲಿ ತೆಪ್ಪಗಿದ್ದು, ಧರ್ಮಕಾರ್ಯದಲ್ಲಿ ಜಾಗ್ರತನಾಗಿರಬೇಕಾದ ಪ್ರೌಢವಯಸ್ಸಿನಲ್ಲಿ ಕಣ್ಣುಮುಚ್ಚಿ ಏನನ್ನೂ ಮಾಡದೆ, ಭಯವನ್ನು ತಂದೊಡ್ಡುವ ವಿಷಯಭೋಗದಲ್ಲಿ ಶಾಶ್ವತವಿದೆಂದು ನಂಬಿಕೆಯಿಟ್ಟವನು ಇಹಪರಗಳನ್ನು ಕಳೆದುಕೊಂಡು ಕೆಡದೆ ಉಳಿಯುವನೆ? - ಎಂಬ ನೀತಿ.

ಇದು ರಾಷ್ಟ್ರದ ನಾಯಕರಾಗಿ ಆಡಳಿತಸೂತ್ರವನ್ನು ಹಿಡಿದಿರುವವರಿಗೂ ಒಪ್ಪುತ್ತದೆ. ಕಾಶ್ಮೀರದ ಸಮಸ್ಯೆ, ಪಂಜಾಬಿನ ಉಗ್ರಕೃತ್ಯ, ನಕ್ಸಲೀಯರ ಹಾವಳಿ, ಈಶಾನ್ಯಭಾರತದ ತೊಡಕು, ತಮಿಳುನಾಡಿನ ಎಲ್.ಟಿ.ಟಿ.ಇ. ನೃಶಂಸತೆ - ಇವೆಲ್ಲವೂ ಈ ಎಚ್ಚರಿಕೆಗಳನ್ನು ಗಮನಿಸದೆ ಉಪೇಕ್ಷಿಸಿದ್ದರಿಂದಲೇ ಹುಟ್ಟಿಕೊಂಡವು. ಮುಳ್ಳಿನ ಗಿಡವನ್ನು ಎಳತಿನಲ್ಲಿ ಕಿತ್ತೆಸೆಯದಿದ್ದರೆ, ಅದು ಬಲವಾಗಿ ಬೇರುಬಿಟ್ಟು ಕವಲೊಡೆದು ಮುಳ್ಳುಗಳು ಬಲಿತುಕೊಳ್ಳುತ್ತವೆ.

ಅಯೋಧ್ಯಾ ಸಮಸ್ಯೆಯನ್ನು ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಾಗಲೇ, ಯಾರ ಲಕ್ಷ್ಯಕ್ಕೂ ಬರದಂತೆ ತೊಡೆದುಹಾಕಬಹುದಾಗಿತ್ತು. ನಲವತ್ತೈದು ವರ್ಷಗಳ ಕಾಲ ಕಣ್ಣುಮುಚ್ಚಿ ಉಪೇಕ್ಷಿಸಿದ್ದರ ಫಲವನ್ನೀಗ ಅನುಭವಿಸಬೇಕಾಗಿದೆ. ಅಂತೆಯೆ, ಕಾಶ್ಮೀರದ ಸಮಸ್ಯೆಯನ್ನೂ ಇಂದಿಗೂ ಬಿಡಿಸಲಾಗಿಲ್ಲ. ಸ್ವಾತಂತ್ರ್ಯದ ಆರಂಭದಲ್ಲಿ 'ನಿರುದ್ಯೋಗ'; ಉಗ್ರವಾದಿಗಳ ಚಟುವಟಿಕೆ ಕಾಣಿಸಿದಾಗ 'ಪ್ರಸುಪ್ತಕ'; ಮೊದಲಿನಿಂದಲೂ ಕಿರುಕುಳವನ್ನೇ ಕೊಡುತ್ತಾ ಬಂದ ಪಾಕಿಸ್ತಾನವು 'ವಿಶ್ವಸ್ತವ್ಯ'.

ಭ್ರಾತೃವಾತ್ಸಲ್ಯವೆಂಬುದು ಶ್ರೇಷ್ಠವಾದ ಆದರ್ಶ ಹೌದು. ಅದು ದುರ್ದೈವದಿಂದಲೋ ದುರ್ಬುದ್ಧಿಯಿಂದಲೋ ಹಳಸಿಕೊಂಡಾಗ ಹುಟ್ಟಿದ ದಾಯಾದಮಾತ್ಸರ್ಯ ಅತಿಭೀಕರ ಪರಿಣಾಮವನ್ನು ತಂದೊಡ್ಡುತ್ತದೆ. ಮಹಾಭಾರತದ ಕಥೆ ವಿಸ್ತರಿಸಿರುವುದು ಅದನ್ನೇ.

ಸಂಸ್ಕೃತದಲ್ಲಿ 'ಭ್ರಾತೃವ್ಯ' ಎಂದರೆ 'ಸೋದರನ ಮಗ' ಎಂದು ಒಂದರ್ಥ. ಶತ್ರುವೆಂದು ಇನ್ನೊಂದರ್ಥ. ದಾಯಾದದ್ವೇಷವು ಎಷ್ಟು ಗಾಢವಾದದ್ದೆಂಬುದಕ್ಕೆ ಈ

ಶಬ್ದವೇ ಗಮಕವಾಗಿದೆ. ರಾಜನಿಗೆ ಸಹಜ, ಕೃತ್ರಿಮ ಎಂಬ ಎರಡು ಬಗೆಯ ಶತ್ರುಗಳಿರುತ್ತಾರೆಂದು ಶುಕ್ರನೀತಿ ಹೇಳುತ್ತದೆ. ನಿಷ್ಕಾರಣವಾಗಿ ಸ್ವಾಭಾವಿಕ ಶತ್ರುವಾದ ರಾಷ್ಟ್ರ ಸಹಜ ಶತ್ರು. ಅಪಕಾರ ಮಾಡಿದ ರಾಷ್ಟ್ರವು ಕೃತ್ರಿಮ ಶತ್ರು. ರಾಷ್ಟ್ರದ ಒತ್ತಿಗಿರುವ ಎಡಬಲದ ರಾಷ್ಟ್ರಗಳು ಸಹಜ ಶತ್ರುಗಳೆಂದು ನೀತಿಶಾಸ್ತ್ರ ಹೇಳಿದೆ.

**ಸುಖಾರ್ಥಿನಃ ಕುತೋ ವಿದ್ಯಾ ಕುತೋ ವಿದ್ಯಾರ್ಥಿನಃ ಸುಖಮ್ ।**
**ಸುಖಾರ್ಥೀ ವಾ ತ್ಯಜೇದ್ವಿದ್ಯಾಂ ವಿದ್ಯಾರ್ಥೀ ವಾ ತ್ಯಜೇತ್ ಸುಖಮ್ ॥೨೬॥**

— *ಮಹಾಭಾರತ, ಉದ್ಯೋಗಪರ್ವ*

"ಸುಖವನ್ನು ಬಯಸತಕ್ಕವನಿಗೆ ವಿದ್ಯೆ ಹೇಗೆ ಬಂದೀತು? ವಿದ್ಯೆಯನ್ನು ಬಯಸತಕ್ಕವನಿಗೆ ಸುಖವೆಲ್ಲಿ? ಸುಖಾರ್ಥಿಯಾಗಿದ್ದರೆ ವಿದ್ಯೆಯನ್ನು ಕೈಬಿಡಬೇಕು. ಅಥವಾ ವಿದ್ಯಾಪೇಕ್ಷೆಯಿದ್ದರೆ ಸುಖವನ್ನು ಕೈಬಿಡಬೇಕು."

ಈಗ ಎಲ್ಲೆಲ್ಲಿಯೂ ವಿದ್ಯಾಶಾಲೆಗಳಿವೆ. ವಿದ್ಯಾರ್ಥಿಗಳು ತಮ್ಮ ಮನೆಯಲ್ಲಿಯೇ ಊಟ ಉಪಚಾರ ಪಡೆದು ಕ್ಲ್ಪಪ್ತಕಾಲದಲ್ಲಿ ಶಾಲೆಗೆ ಹೋಗಿಬರಬಹುದು. ವರ್ಷದಲ್ಲಿ ಆರು ತಿಂಗಳಿಗಿಂತ ಹೆಚ್ಚು ವಿರಾಮವಿರುತ್ತದೆ. ಮನೋರಂಜನೆಗೆ ಶಾಲೆಯಲ್ಲಿಯೇ ಕ್ರೀಡೆಗಳನ್ನೇರ್ಪಡಿಸುತ್ತಾರೆ. ಮನೆಗಳಲ್ಲಿ ರೇಡಿಯೋ, ಟಿ.ವಿ. ಬಂದಮೇಲೆ ಮನೋರಂಜನೆಗೆ ಕೊರತೆಯೇನೂ ಇಲ್ಲ. ಗುರುಶುಶ್ರೂಷೆಯ ಪ್ರಶ್ನೆ ಇಲ್ಲವೇ ಇಲ್ಲ. ಪರಸ್ಥಳದವರಿಗೆ ವಿದ್ಯಾರ್ಥಿನಿಲಯಗಳುಂಟು. ಕಾಲೇಜು ವಿದ್ಯಾರ್ಥಿಗಳಿಗಂತೂ ವಿದ್ಯಾರ್ಥಿನಿಲಯಗಳಲ್ಲಿರುವಷ್ಟು ಸೌಕರ್ಯ ಮನೆಯಲ್ಲಿಯೇ ದೊರೆಯಲಿಕ್ಕಿಲ್ಲ! ಉಪಾಧ್ಯಾಯರಿಂದ ವಿದ್ಯಾರ್ಥಿಗಳಿಗೆ ಯಾವ ದಂಡನೆಯೂ ಇಲ್ಲ. ಅವರಿಗೆ ಒಂದು ಕಠಿಣ ಮಾತನ್ನೂ ಉಪಾಧ್ಯಾಯರು ಆಡುವಂತಿಲ್ಲ. ಆದರೆ ಸ್ವತಃ ಓದಬೇಕೆಂಬ ಒಂದು ಕಷ್ಟ ಉಳಿದುಕೊಂಡಿದೆ!

ಹಿಂದಿನ ಗುರುಕುಲ ಪದ್ಧತಿಯಲ್ಲಿ ತಂದೆತಾಯಿಗಳಿಗಾಗಲಿ, ರಾಜನಿಗಾಗಲಿ, ಯಾವ ಅಧಿಕಾರವೂ ಇರಲಿಲ್ಲ. ಕುಲಪತಿಯ ಮಾತೇ ಕಡೆಯ ಮಾತು. 'ವಿದ್ಯಾ ದದಾತಿ ವಿನಯಂ' - ಎಂಬುದು ಚರಮಲಕ್ಷ್ಯವಾಗಿತ್ತು. ಕಷ್ಟಸಹಿಷ್ಣುತೆ, ಧರ್ಮನಿಷ್ಠೆ, ಒಳ್ಳೆಯ ನಡತೆ - ಇವು ವಿದ್ಯಾಭ್ಯಾಸದ ಗುರಿ. ಈ ಆದರ್ಶವನ್ನು ಕೈಬಿಟ್ಟಮೇಲೆ ಮಹಾಭಾರತದ ಸೂಕ್ತಿ ಅರ್ಥಹೀನವಾಯಿತು.

ಪುಸ್ತಕಭಾರವನ್ನು ಹೊತ್ತವರೆಲ್ಲ ವಿದ್ಯಾವಂತರಲ್ಲ. ಅದು ನಿಜವಾದ ವಿದ್ಯೆಗೆ ಸಾಧನವಷ್ಟೆ. ನೀರು, ಕಟ್ಟಿಗೆಗಳು ಅಡಿಗೆ ಮಾಡಲು ಸಾಧನ. ಆದರೆ ನೀರು ಹೊರುವುದು, ಕಟ್ಟಿಗೆ ಒಡೆಯುವುದೇ ಪಾಕಶಾಸ್ತ್ರಪ್ರಾವೀಣ್ಯವಲ್ಲ.

ಹಿಂದೆ ಸರ್ಕಾರವು ಶಾಲೆಗಳನ್ನು ನಡೆಸುತ್ತಿರಲಿಲ್ಲ. ಸಂಬಳಕ್ಕಾಗಿ ಯಾರೂ ಪಾಠ ಹೇಳುತ್ತಿರಲಿಲ್ಲ. ಗುರುಸೇವೆಯೊಂದೇ ವಿದ್ಯಾರ್ಜನೆಗೆ ಮಾರ್ಗವಾಗಿತ್ತು. ಸುಖಾರ್ಥಿಗೆ ಅಂತಹ ವಿದ್ಯೆ ಬೇಕಿಲ್ಲವಾಯಿತು. ಕೃಷಿ, ವಾಣಿಜ್ಯ, ನೇಯ್ಗೆ, ಚಿನ್ನಬೆಳ್ಳಿ ಕೆಲಸ ಮುಂತಾದ ಕಸಬುಗಳಿಂದ ಮನೆಬಾಗಿಲಲ್ಲಿ ಹಣ ಸಂಪಾದಿಸಬಹುದು. ಹೀಗಿರುವಾಗ ದೂರದೂರದ ಗುರುಕುಲಕ್ಕೆ ಮಕ್ಕಳನ್ನೇಕೆ ಕಳಿಸಬೇಕು? ಅಲ್ಲಿ ಕಲಿಸುವುದು ಸಂಸ್ಕೃತದ ವಿಷಯಗಳನ್ನು. ಅದರಿಂದ ಹಣ ದೊರೆಯುತ್ತದೆಯೆ? ದೂರದೇಶಕ್ಕೆ ಹೋಗಿ, ಭಿಕ್ಷೆ ಬೇಡಿ ತಿಂದು, ನೆಲದ ಮೇಲೆ ಮಲಗಿ, ಉಪಾಧ್ಯಾಯರಿಂದ ಹೊಡೆಸಿಕೊಳ್ಳುತ್ತ ಯಾವ ಪುರುಷಾರ್ಥಕ್ಕಾಗಿ ಕ್ಲಿಷ್ಟವಾದ ತರ್ಕವ್ಯಾಕರಣಗಳನ್ನು ಕಲಿಯಬೇಕು? ಮಕ್ಕಳಿಗೆ ಕಲಿಸಬೇಕು? 'ಸುಖಾರ್ಥೀ ವಾ ತ್ಯಜೇದ್ವಿದ್ಯಾಂ' ಎಂಬ ಮೂರನೆಯ ಪಾದವೇ ಉತ್ತಮವೆನಿಸಿತು.

**ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಂ**
**ಭಾಸ್ವಾನುದೇಷ್ಯತಿ ಹಸಿಷ್ಯತಿ ಪಂಕಜಶ್ರೀಃ ।**
**ಇತ್ಥಂ ವಿಚಿಂತಯತಿ ಕೋಶಗತೇ ದ್ವಿರೇಫೇ**
**ಹಾ ಹಂತ ಹಂತ! ನಲಿನೀಂ ಗಜ ಉಜ್ಜಹಾರ ॥೨೭॥**

— *ಕುವಲಯಾನಂದ*

"ರಾತ್ರಿ ಕಳೆದುಹೋಗುವುದು; ಆಮೇಲೆ ಸುಪ್ರಭಾತವಾಗುವುದು; ಸೂರ್ಯನು ಹುಟ್ಟುತ್ತಾನೆ; ಸೊಗಸಾದ ತಾವರೆ ಅರಳುತ್ತದೆ; (ನಾನು ತಾವರೆಯ ಮಧುವನ್ನು ಕುಡಿಯುತ್ತಾ ಸ್ವತಂತ್ರವಾಗಿ ಹಾರಾಡುವೆನು) - ಎಂದು ತಾವರೆಯ ಮೊಗ್ಗಿನಲ್ಲಿ ಸಿಕ್ಕಿಕೊಂಡಿದ್ದ ದುಂಬಿ (ಸಂತೋಷದ ಸಮಯವನ್ನು ನಿರೀಕ್ಷಿಸುತ್ತ) ಆಲೋಚಿಸುತ್ತಿತ್ತು. ಅಯ್ಯೋ ಅಯ್ಯೋ! - ಆನೆಯೊಂದು ಆ ತಾವರೆಯ ಬಳ್ಳಿಯನ್ನೇ ಕಿತ್ತೆಸೆಯಿತು!"

ನಾವು ಯಾವುದನ್ನು ಬಯಸುತ್ತೇವೋ ಅದಕ್ಕೆ ಪೂರ್ತಿ ವಿರುದ್ಧವಾದ

ಘಟನೆಯೊಂದು ನಡೆದಲ್ಲಿ ಅದನ್ನು 'ವಿಷಾದನಾಲಂಕಾರ'ವೆಂದು ಕಾವ್ಯಮೀಮಾಂಸಕರು ಹೇಳುತ್ತಾರೆ. ಅದಕ್ಕೆ ಈ ಶ್ಲೋಕ ಉದಾಹರಣೆ. ವಿಷಾದವನ್ನುಂಟುಮಾಡತಕ್ಕದ್ದು ವಿಷಾದನ. ಇಂತಹ ಸಂದರ್ಭಗಳು ಒಬ್ಬ ವ್ಯಕ್ತಿಯ ಜೀವನದಲ್ಲಿ ಸಂಭವಿಸಬಹುದು. ಒಂದು ಕುಟುಂಬಕ್ಕೆ ಬಂದೆರಗಬಹುದು. ಒಂದು ರಾಷ್ಟ್ರದ ಇತಿಹಾಸದಲ್ಲಿ ವಿಷಾದನಾಲಂಕಾರಕ್ಕೆ ಉದಾಹರಣೆಯುಂಟೆಂಬುದಕ್ಕೆ ನಮ್ಮ ಭಾರತವೇ ನಿದರ್ಶನ.

ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ನಮ್ಮ ರಾಷ್ಟ್ರನಾಯಕರ ಧೀರೋದ್ಗಾರಗಳಿಗೆ ನಾವು ವಶರಾಗಿ ಪುಳಕಿತರಾಗಿದ್ದೆವು. ನಮ್ಮ ಬಡತನ, ಅಜ್ಞಾನ ಮುಂತಾದ ನೂರೆಂಟು ಕೊರತೆಗಳಿಗೆ ಆಳರಸರಾದ ಬ್ರಿಟಿಷರೇ ಹೊಣೆಯೆಂದೂ, ಅವರು ಭಾರತದಿಂದ ನಿರ್ಗಮಿಸಿದರೆ ಎಲ್ಲ ಕೊರತೆಗಳೂ ನೀಗಿ ಜೇನುಹೊಳೆ ಹರಿಯುವುದೆಂದೂ ನಂಬಿದ್ದೆವು. ಸ್ವಾತಂತ್ರ್ಯಸೂರ್ಯೋದಯವೇನೋ ಆಯಿತು. ಉದಯವಾಗುವಾಗಲೇ ಭಾರತವು ಮಣ್ಣಿನ ಗಡಿಗೆಯೋ ಎಂಬಂತೆ ಎರಡಾಗಿ ಒಡೆಯಿತು. ಹಳೆಯ ಸಾಲವೋ ಎಂಬಂತೆ ಪಿತ್ರಾರ್ಜಿತವಾದ ಆಸ್ತಿಯನ್ನು ಮಾರಿ, ಸ್ವಾತಂತ್ರ್ಯವನ್ನು ಖರೀದಿಗೆ ಕೊಂಡದ್ದಾಯಿತು. ಬೆಳಗಾಗಿ ಏಳುವಾಗಲೇ ಎಡವಿದರೆ ಅಪಶಕುನವೆನ್ನುತ್ತಾರೆ; ಶಕುನಶಾಸ್ತ್ರವು ಸತ್ಯವೆಂದು ನಾವು ರುಜವಾತುಪಡಿಸಿ ಕೊಟ್ಟಿದ್ದೇವೆ! ಯಾವ ಕೋಮುವಾರು ಭಾವನೆಯನ್ನು ತೊಡೆದುಹಾಕಲು ರಾಷ್ಟ್ರವಿಭಜನೆಯಾಯಿತೋ ಅದೇ ಕೋಮುವಾರು ಭಾವನೆ ಮತ್ತಷ್ಟು ಹುಲುಸಾಗಿ ಬೆಳೆಯಿತು. ಆರ್ಷ ಆದರ್ಶಗಳೆಲ್ಲವೂ ಪುಸ್ತಕದಲ್ಲುಳಿದವು. ಗಲಭೆಗಳು, ಹಿಂಸಾಚಾರ, ಭ್ರಷ್ಟಾಚಾರಗಳು ಭುಗಿಲೆದ್ದು ನಭೋಮಂಡಲವನ್ನಡರಿದವು.

ಈ ರಾಷ್ಟ್ರಕ್ಕೆ ಹೇಗೂ ಭವಿಷ್ಯತ್ತು ಇಲ್ಲವೆಂದೋ ಏನೋ ಎಲ್ಲರೂ ತಮ್ಮ ಭವಿಷ್ಯತ್ತನ್ನೇ ಚಿಂತಿಸತೊಡಗಿದ್ದಾರೆ. ವಿದೇಶೀಯರಿಗೆ ನಾವು ಬರೆದುಕೊಟ್ಟ ಸಾಲಪತ್ರಗಳೋ ಎಂಬಂತಿರುವ ಕರೆನ್ಸಿ ನೋಟುಗಳನ್ನು ಎಲ್ಲೆಲ್ಲಿಯೂ ಹಾರಾಡಿಸುತ್ತಿದ್ದಾರೆ. ನಿಜವಾಗಿ ನಾವು ಬೆವರು ಹರಿಸಿ ದುಡಿದ ಹಣವೇ ಅದು? ತಾವರೆಯ ಬಳ್ಳಿಯನ್ನು ಕಿತ್ತೆಸೆದ ಮದಗಜ ಯಾವುದು?

**ಕರೆದಪಾತ್ರಂಗಿತ್ತು ಪಾತ್ರನ**
**ಪರಿಹರಿಸಲೀಯೆರಡರಿಂ ಸಂ-**
**ಹರಣವಹುದಾರ್ಜಿಸಿದ ಬಲುಧನವರಸ ಕೇಳೆಂದ.**

**ಧೂಮೋ ವಾಯೋರಿವ ವಶೇ ಬಲಂ ಧರ್ಮೋಽನುವರ್ತತೇ ।**
**ಅನೀಶ್ವರೋ ಬಲೇ ಧರ್ಮೋ ದ್ರುಮೇ ವಲ್ಲೀವ ಸಂಶ್ರಿತಾ ॥១៥॥**

— *ಮಹಾಭಾರತ, ಶಾಂತಿಪರ್ವ ೧೩೪-೭*

"ಹೊಗೆಯು ಗಾಳಿಗೆ ವಶವಾಗಿ ಗಾಳಿ ಹೋದಂತೆ ಹೋಗುತ್ತದೆ. ಹಾಗೆಯೇ ಧರ್ಮವು ಬಲಕ್ಕೆ ವಶವಾಗಿ ಬಲವನ್ನು ಹಿಂಬಾಲಿಸುತ್ತದೆ. ಬಳ್ಳಿಯು ಮರವನ್ನು ಆಶ್ರಯಿಸಿಕೊಂಡಂತೆ ಬಲವನ್ನಾಶ್ರಯಿಸಿರುವ ಧರ್ಮವು ಬಲವನ್ನು ಅಲ್ಲಾಡಿಸಲು ಅಸಮರ್ಥವಾಗಿದೆ."

ಧರ್ಮವು ಬಲಕ್ಕೆ ಅಧೀನವೆಂದು ಈ ಶ್ಲೋಕ ತಿಳಿಸಿಕೊಡುತ್ತದೆ. ಇದನ್ನು ಯಾರೋ ಸಮಯಾನುಸಾರವಾಗಿ ಹೇಳಿದ್ದಾರೆಂದು ಉಪೇಕ್ಷಿಸುವಂತಿಲ್ಲ. "ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ" ಎಂದು ದೃಢವಾಗಿ ನಂಬಿದ್ದ ಭೀಷ್ಮನು ಅಷ್ಟೇ ದೃಢವಾಗಿ ಧರ್ಮವನ್ನು ನಂಬಿದ್ದ ಧರ್ಮರಾಯನಿಗೆ ಉಪದೇಶಿಸಿದ ನೀತಿ ಇದು ; ತಾನು ಮರಣಶಯ್ಯೆಯಲ್ಲಿ ಮಲಗಿದ್ದಾಗ ಹೇಳಿದ ಕಡೆಯ ಮಾತು.

ಬಲವೆಂದರೆ ದೇಹಬಲ, ಸೇನಾಬಲ, ಧನಬಲ, ಅಧಿಕಾರಬಲ - ಯಾವುದಾದರೂ ಆಗಬಹುದು. ಯಾವುದು ಇನ್ನೊಬ್ಬರ ಮೇಲೆ ತನ್ನ ಪ್ರಭಾವವನ್ನು ಒತ್ತಬಲ್ಲುದೋ ಅದೇ ಬಲ. ಸಂದರ್ಭಾನುಸಾರವಾಗಿ ಇದರ ವಿನಿಯೋಗ. ಗಾಳಿ ಬೀಸಿದ ಕಡೆ ಹೊಗೆ ಚಲಿಸುತ್ತದೆ. ಬಳ್ಳಿಗೆ ಅವಲಂಬನವಾದದ್ದು ಮರ. ಧರ್ಮವು ಬಲದ ವಿಷಯದಲ್ಲಿ ಅನೀಶ್ವರ - ಅಸಮರ್ಥ. ಬಲಶಾಲಿಯ ಮೇಲೆ ಧರ್ಮದ ಪ್ರಭಾವ ಇಲ್ಲ. ಹಾಗಾದರೆ, 'ಯಾರಲ್ಲಿ ಧರ್ಮವಿದೆಯೋ ಅವರಿಗೆ ಜಯವಾಗುತ್ತದೆ' - 'ಯತೋ ಧರ್ಮಸ್ತತೋ ಜಯಃ' ಎಂಬ ಘೋಷಣೆಗೆ ಅರ್ಥವೇನು ? ಧರ್ಮಕ್ಕೆ ಜಯವಾಗಬೇಕಾದರೆ ಧರ್ಮವನ್ನೇ ಬಲವು ಅನುವರ್ತಿಸಬೇಕಾಗುತ್ತದೆಯಲ್ಲವೆ ?

ಒಂದು ಚಕ್ರಾಧಿಪತ್ಯದ ಆಡಳಿತದ ಜವಾಬ್ದಾರಿಯನ್ನು ಹೊತ್ತಿರುವ ಯುಧಿಷ್ಠಿರನಿಗೆ ಧರ್ಮ-ಪರಾಕ್ರಮಗಳ ಮೂರ್ತಿಯೇ ಆದ ಭೀಷ್ಮನ ಉಪದೇಶವಿದು. "ನೀನೊಬ್ಬ ಧರ್ಮವನ್ನು ಪಾಲಿಸಿದರೆ ಸಾಲದು. ನಿನ್ನ ಸಮಸ್ತ ಪ್ರಜೆಗಳೂ ಧರ್ಮವನ್ನು ಪಾಲಿಸಬೇಕು. ಆಗಲೇ ನಿನ್ನ ರಾಜ್ಯ ಧರ್ಮರಾಜ್ಯವಾಗುವುದು. ನೀನು ಬಲವನ್ನು ಉಪೇಕ್ಷಿಸಬೇಡ. ನಿನಗೆ ಸದಾ ಸೇನಾಬಲ, ಆರ್ಥಿಕಬಲ, ದೇಹಬಲ, ಬುದ್ಧಿಬಲ, ಅಧಿಕಾರಬಲಗಳೆಲ್ಲ ಇರಲಿ. ಆದರೆ ನಿನ್ನಲ್ಲಿ ಧರ್ಮವು

ನೆಲೆಗೊಳ್ಳಲು ಮನೋಬಲ ಬೇಕು, ಪ್ರಜೆಗಳಲ್ಲಿ ಅದು ನೆಲೆಗೊಳ್ಳಲು ಸೇನಾದಿಗಳ ಬಲ ಬೇಕು. ಹೇಡಿಯು ಧರ್ಮವನ್ನು ರಕ್ಷಿಸಲಾರನು. ಧರ್ಮವು ಹೇಡಿಯನ್ನು ರಕ್ಷಿಸುವುದಿಲ್ಲ."

ಯುಧಿಷ್ಠಿರನ ಪಕ್ಷದಲ್ಲಿ ಧರ್ಮವಿತ್ತು. ಆದರೆ ಧರ್ಮೋಪದೇಶಕ್ಕೆ ದುರ್ಯೋಧನನು ಜಗ್ಗಲಿಲ್ಲ. ದುರ್ಬಲನ ಧರ್ಮೋಪದೇಶ ಕೈಲಾಗದ ಹೆಳವನು ಹೆದರಿಸಿದ ಹಾಗೆ. ಬಲದಿಂದಲೇ ಧರ್ಮದ ಉಳಿವು, ಪ್ರಕಾಶ, ವಿಕಾಸ. ಧರ್ಮದಿಂದ ಬಲಕ್ಕೆ ಶೋಭೆ, ತುಷ್ಟಿ, ಪುಷ್ಟಿ. ಇವೆರಡೂ ಜೋಡಿಯಾದಾಗಲೇ ಧರ್ಮಕ್ಕೆ ಜಯ.

**ಅನಿರ್ಲೋಡಿತಕಾರ್ಯಸ್ಯ ವಾಗ್ಜಾಲಂ ವಾಗ್ಮಿನೋ ವೃಥಾ ।**
**ನಿಮಿತ್ತಾದಪರಾದ್ಧೇಷೋಃ ಧಾನುಷ್ಕಸ್ಯೇವ ವಲ್ಗಿತಮ್ ॥೨೯॥**

— *ಶಿಶುಪಾಲವಧ, ೨-೨೭*

"ಕಾರ್ಯವೇನನ್ನೂ ಸಾಧಿಸದೆ ಬಹಳ ಮಾತಾಡುವ ವಾಗ್ಮಿಯ ವಾಗ್ಜಾಲವು ವ್ಯರ್ಥವೇ. ಗುರಿಗೆ ಬಾಣವನ್ನು ಹೊಡೆದು ಬೀಳಿಸಲಾರದ ಬಿಲ್ಲುಗಾರನ ಜಂಭದ ಹಾರಾಟದಂತೆ ಅದು."

"ಈಗ ಶಿಶುಪಾಲನೊಡನೆ ಯುದ್ಧಮಾಡಲು ಹೊರಡಬೇಕೆ? ಅಥವಾ ಕಾಲಪ್ರತೀಕ್ಷೆ ಮಾಡುತ್ತ ಶಾಂತಿಸಂಧಾನವನ್ನಾರಂಭಿಸಬೇಕೆ?" - ಎಂದು ನಿರ್ಣಯಿಸುವುದಕ್ಕಾಗಿ ಶ್ರೀಕೃಷ್ಣನು ಸೇರಿಸಿದ ರಹಸ್ಯಮಂತ್ರಾಲೋಚನಾಸಭೆಯಲ್ಲಿ ಬಲರಾಮನು ಹೇಳಿದ ಮಾತು ಇದು. ಕೂಡಲೇ ಶಿಶುಪಾಲನ ಮೇಲೆ ದಂಡೆತ್ತಿ ಹೋಗಿ ಅವನ ಪುಂಡಾಟಿಕೆಯನ್ನು ಅಡಗಿಸಬೇಕೆಂದೂ ಶಾಂತಿಸಂಧಾನವು ಅವನಲ್ಲಿ ಪ್ರಯೋಜನಕಾರಿಯಾಗುವುದಿಲ್ಲವೆಂದೂ ಆತನ ನಿರ್ಣಯದ ಹೇಳಿಕೆ. "ಶಿಶುಪಾಲನು ಒಂದಲ್ಲ ಎರಡಲ್ಲ ಹಲವಾರು ಅಕ್ಷಮ್ಯ ಅಪರಾಧಗಳನ್ನು ಮಾಡಿದ್ದಾನೆ. ಪರಮದ್ವೇಷದಿಂದ ನಮ್ಮನ್ನು ತುಳಿಯಲು ಕಾದಿದ್ದಾನೆ. ಆ ಹಳೆಯ ವೈರಿಯೊಡನೆ ಸಾಮ-ಸಂಧಾನಗಳು ವ್ಯರ್ಥ" - ಎಂಬುದು ಬಲರಾಮನ ನಿಲುವು.

ನಲವತ್ತೈದು ವರ್ಷಗಳಿಂದ ನಿಷ್ಕಾರಣವಾಗಿ ಭಾರತದೊಡನೆ ವೈರವನ್ನು ಸಾಧಿಸುತ್ತ, ಎರಡುಸಲ ಯುದ್ಧವನ್ನು ನಡೆಸಿ ಪೆಟ್ಟು ತಿಂದರೂ ಕಾಶ್ಮೀರದಲ್ಲಿ ಒಂದೇ ಸಮನೆ ದುಷ್ಕೃತ್ಯಗಳನ್ನು ನಡೆಸುತ್ತಿರುವ ಪಾಕಿಸ್ತಾನಕ್ಕೆ ಬಲರಾಮನ ನಿಲುವು

ಅನ್ವಯಿಸೀತೆ? ಮತ್ತೆಮತ್ತೆ ನಡೆಸಿದ ಸ್ನೇಹ-ಸಂಧಾನಗಳು ನಿಷ್ಫಲವಾದರೂ ಸಾಮವಾದದ ಮಾತನ್ನೇ ಆಡುತ್ತಿರುವ ಭಾರತ ಸರ್ಕಾರದ ಸೂತ್ರಧಾರಿಗಳು ಚಿಂತಿಸಬೇಕಾದ ವಿಷಯವಿದು. ಕಾಶ್ಮೀರದ ಮುಗ್ಧಪ್ರಜೆಗಳು ಎಷ್ಟು ವರ್ಷಗಳವರೆಗೆ ಮನೆಮಾರುಗಳನ್ನು ಬಿಟ್ಟು ಪ್ರಾಣಭಯದಿಂದ ಬೇರೆಡೆಗೆ ವಲಸೆಹೋಗಿ ಹೇಳಲಾರದ ಕಷ್ಟಕಾರ್ಪಣ್ಯಗಳಿಗೆ ಗುರಿಯಾಗಬೇಕು?

ಬಲರಾಮನು ಮೇಲ್ಕಂಡ ನೀತಿಯನ್ನು ಹೇಳುವಾಗ 'ಗ್ರಂಥಾನಧೀತ್ಯ ವ್ಯಾಕರ್ತುಮಿತಿ ದುರ್ಮೇಧಸೋऽಪ್ಯಲಂ' ಎಂದು ಇನ್ನೊಂದು ಮಾತನ್ನಾಡಿದ್ದಾನೆ. "ಪುಸ್ತಕಗಳನ್ನೋದಿ ವಿವರಿಸಿ ಉಪನ್ಯಾಸ ಮಾಡಲು ಅಲ್ಪಬುದ್ಧಿಯವರಿಗೂ ದುರ್ಬುದ್ಧಿಯವರಿಗೂ ಸಹ ಸಾಧ್ಯವಿದೆ." ಎಲ್ಲರೂ ಉಪದೇಶ ನೀಡತಕ್ಕವರೇ! ಉಪದೇಶವನ್ನು ತಮ್ಮ ಕೃತಿಯಲ್ಲಿ ಇಳಿಸಿಕೊಳ್ಳತಕ್ಕವರು ಯಾರು? ಎಷ್ಟು ಜನ? ಗಾಂಧೀತತ್ತ್ವಗಳ ವಿಚಾರಸಂಕಿರಣಗಳು ಪಂಚತಾರಾ ಹೋಟೆಲುಗಳಲ್ಲಿ ನಡೆಯುತ್ತವೆ. "ಸರ್ಕಾರವು ಕಟ್ಟುಪಾಡಿನ ಮಿತವ್ಯಯವನ್ನು ಪಾಲಿಸಲೇಬೇಕು" ಎಂದು ಬೋಧಿಸುವ ಮಂತ್ರಿಮಹೋದಯರು ಗಗನಮಾರ್ಗದಲ್ಲಿಯೇ ಸಂಚರಿಸುತ್ತಾರೆ.

**ಕಿಚ್ಚಹುದು ನಿನ್ನ ಭಾವ್ಯಕೆ ನಿನ್ನ ಪೂರ್ವಿಕವೆ**
**ಎಚ್ಚರಿರೆ ನಿನಗುಳಿವು - ಮರುಳ ಮುನಿಯ ॥**

**ಮೃಗ-ಮೀನ-ಸಜ್ಜನಾನಾಂ**
**ತೃಣ-ಜಲ-ಸಂತೋಷವಿಹಿತ-ವೃತ್ತೀನಾಮ್ ।**
**ಲುಬ್ಧಕ-ಧೀವರ-ಪಿಶುನಾಃ**
**ನಿಷ್ಕಾರಣವೈರಿಣೋ ಜಗತಿ ॥೩೦॥**

— *ನೀತಿಶತಕ, ೫೦*

"ಜಿಂಕೆಗಳು ಹುಲ್ಲು ತಿಂದು ಜೀವಿಸುತ್ತವೆ. ಮೀನುಗಳು ನೀರಿನಲ್ಲಿ ತಮ್ಮ ಬದುಕನ್ನು ಸಾಗಿಸುತ್ತವೆ. ಸಜ್ಜನರು ನ್ಯಾಯವಾದ ದುಡಿತದಿಂದ ಸಂತೋಷವಾಗಿ ತಮ್ಮ ಪಾಡಿಗೆ ಜೀವನವನ್ನು ನಡೆಸಿಕೊಂಡಿರುತ್ತಾರೆ. ಹೀಗಿದ್ದರೂ ಈ ಮೃಗ-ಮೀನ-ಸಜ್ಜನರಿಗೆ ಬೇಟೆಗಾರ-ಬೆಸ್ತ-ಚಾಡಿಖೋರರಾದ ಖಳಜನರು ನಿಷ್ಕಾರಣವಾಗಿ ಈ ಜಗತ್ತಿನಲ್ಲಿ ವೈರಿಗಳಾಗಿರುತ್ತಾರೆ."

ಬೇಟೆಗಾರ ಜಿಂಕೆಗಳನ್ನೂ ಮೊಲ ಮೊದಲಾದ ಸಾಧುಪ್ರಾಣಿಗಳನ್ನೂ ಕೊಂದುಹಾಕುತ್ತಾನೆ. ಆ ಪ್ರಾಣಿಗಳು ಇವನಿಗೆ ಮಾಡಿದ ಅಪರಾಧವೇನು? ಕಾಡಿನಲ್ಲಿ ಬೆಳೆದ ಹುಲ್ಲು, ಸೊಪ್ಪು, ಗಡ್ಡೆಗೆಣಸುಗಳನ್ನು ತಿಂದುಕೊಂಡಿರುತ್ತವೆ. ವನ್ಯಜೀವಿಗಳಿಗೂ ಹಿಂಸೆಯನ್ನು ಕೊಡದ ಮುಗ್ಧಜೀವಿಗಳು ಜಿಂಕೆಗಳು. ಮೀನುಗಳು ನೀರಿನಲ್ಲಿರುವ ಕಶ್ಮಲಗಳನ್ನು ತಿಂದು ನೀರನ್ನು ಸ್ವಚ್ಛಮಾಡಿಕೊಟ್ಟು ಮನುಷ್ಯನಿಗೆ ಸಹಕರಿಸುತ್ತವೆ; ತಮ್ಮ ಪಾಡಿಗೆ ಈಜುತ್ತ ನಲಿಯುತ್ತಿರುವ ಅವನ್ನು ಬೆಸ್ತನು ಬಲೆಹಾಕಿ ಹಿಡಿದು ಕೊಂದುಹಾಕುತ್ತಾನೆ. ಸಜ್ಜನರು ಸಂತೋಷದಿಂದ ತಮ್ಮ ಜೀವನಯಾತ್ರೆಯನ್ನು ಸಾಗಿಸುತ್ತಾರೆ, ತಮ್ಮ ನ್ಯಾಯವಾದ ದುಡಿತದಿಂದ ಬಂದುದರಲ್ಲಿಯೇ ತೃಪ್ತಿಯನ್ನು ಪಡೆದು ಬದುಕುತ್ತಾರೆ; ಆದರೆ ಯಾವುದೋ ಒಂದು ರೀತಿಯಲ್ಲಿ ಅವರಿಗೆ ಕಿರುಕುಳವನ್ನು ಕೊಟ್ಟ ಹೊರತು ಖಳಜನರಿಗೆ ತೃಪ್ತಿ ಇಲ್ಲ! ಬೀದಿಯಲ್ಲಿ ಹೋಗುವಾಗ ಮನೆಗಳ ಕಿಟಕಿಗಾಜುಗಳಿಗೆ ಕಲ್ಲನ್ನು ಎಸೆಯಬೇಕು. ದೇವರ ಮೆರವಣಿಗೆಗೆ ಸೋಡಾಬಾಟಲುಗಳನ್ನೆಸೆಯಬೇಕು.

ಪಾಕಿಸ್ತಾನವು ಭಾರತವನ್ನು 'ಆಜನ್ಮಶತ್ರು, ಪರಮಶತ್ರು' ಎಂದು ಭಾವಿಸಿ ವ್ಯವಹರಿಸುತ್ತಿದೆ. ನಿವೃತ್ತನಾದ ಒಬ್ಬ ಪಾಕಿಸ್ತಾನಿ ಸೇನಾಧಿಕಾರಿ ಭಾರತದೇಶವು 'ಆರ್ಚ್‌ಎನೆಮಿ' ಎಂದು ಹೇಳಿದ್ದ. ಯಾವ ಕಾರಣದಿಂದ ಈ ದ್ವೇಷ? ಭಾರತದ ಹಿಂದೂಗಳ ಔದಾರ್ಯದಿಂದಲೇ ಪಾಕಿಸ್ತಾನದ ಜನ್ಮವಾಯಿತೆಂಬುದು ಕಣ್ಣೆದುರಿಗೆ ನಡೆದ ಐತಿಹಾಸಿಕ ಸತ್ಯ. ಕಾಶ್ಮೀರದಲ್ಲಿ ಅವರು ನಡೆಸುತ್ತಿರುವ ದುಷ್ಕೃತ್ಯಗಳಿಗೂ ಹಿಂಸಾಚಾರಗಳಿಗೂ ಪಾರವಿಲ್ಲ. ಯಾವ ಕಾರಣದಿಂದ ಇಷ್ಟು ಕ್ರೂರವಾಗಿ ಪ್ರಜೆಗಳನ್ನು ಪೀಡಿಸಬೇಕು? ಭಾರತದಿಂದ ಯಾವ ತೊಂದರೆಯಾಗುತ್ತಿದೆಯೆಂದು ಪಾಕಿಸ್ತಾನವು ಇಷ್ಟು ವೈರವನ್ನು ಸಾಧಿಸುತ್ತಿದೆ? ಅವರ ದುರ್ನೀತಿಗೆ ಪ್ರತೀಕಾರವೇನೆಂಬುದನ್ನು ಪರಿಶೀಲಿಸಿ ಶೀಘ್ರವಾಗಿ ನಾವು ಕಾರ್ಯಪ್ರವೃತ್ತರಾಗಬೇಕು.

**ನ ಚಾಗಮಾದೃತೇ ಧರ್ಮಸ್ತರ್ಕೇಣ ವ್ಯವತಿಷ್ಠತೇ ।**
**ಋಷೀಣಾಮಪಿ ಯಜ್ಜ್ಞಾನಂ ತದಪ್ಯಾಗಮಪೂರ್ವಕಮ್ ॥೩೧॥**

— *ವಾಕ್ಯಪದೀಯ, ೧-೩೦*

"ವೇದದ ನೆರವಿಲ್ಲದೆ ಧರ್ಮದ ಸ್ವರೂಪವೂ ಎಂದಿಗೂ ವ್ಯವಸ್ಥಿತ ವಾಗುವುದಿಲ್ಲ. ಋಷಿಗಳಿಗೆ ಯಾವ ಧರ್ಮಜ್ಞಾನವಿತ್ತೋ ಅದೂ ಸಹ ವೇದಪೂರ್ವಕವಾದದ್ದೇ ಸರಿ."

ಭಾರತೀಯರು ವೇದದ ಪ್ರಾಮಾಣ್ಯವನ್ನು ಎಷ್ಟು ಗಟ್ಟಿಯಾಗಿ ನಂಬಿದ್ದರೆಂಬುದನ್ನು ಈ ಸೂಕ್ತಿಯು ಸೂಚಿಸುತ್ತದೆ. ಮಹಾವೈಯಾಕರಣನೆಂದೂ 'ಭಗವಾನ್' ಎಂಬ ಶಬ್ದದಿಂದ ಪೂಜಿತನೂ ಆದ ಭರ್ತೃಹರಿಯ ನುಡಿ ಇದು. ಮಾನವನು ಎಂತಹ ವಿದ್ವಾಂಸನಾದರೂ, ಎಷ್ಟು ಅನುಭವಶಾಲಿಯಾದರೂ, ತಪಸ್ವಿಯೇ ಆದರೂ ಭ್ರಮಪ್ರಮಾದಾದಿಗಳು ಸಂಭವಿಸುತ್ತವೆಯೆಂದೂ ಆದ್ದರಿಂದ ಈಶ್ವರೋಕ್ತವಾದ ವೇದವೇ ಪ್ರಮಾಣವೆಂದೂ ಅವರ ಗಾಢವಾದ ನಂಬಿಕೆ ಇದೆ. ಧರ್ಮಶಾಸ್ತ್ರಾದಿಗಳು ವೇದವಿರುದ್ಧವಾಗದಿದ್ದರೆ ಮಾತ್ರ ಪ್ರಾಮಾಣಿಕವೆನಿಸುತ್ತವೆ.

ಶ್ರೀರಾಮಕೃಷ್ಣಪರಮಹಂಸರೂ ರಮಣಮಹರ್ಷಿಗಳೂ ತೀವ್ರವಾದ ಧ್ಯಾನ ಮುಂತಾದ ಸಾಧನೆಗಳಿಂದಲೇ ಸಿದ್ಧಿಯನ್ನು ಪಡೆದವರು. ವೇದಬೋಧನೆಯ ಒರೆಗಲ್ಲಿಗೆ ಹಚ್ಚಿಯೇ ಅವರ ಸೂಕ್ತಿಗಳನ್ನು ನಾವು ಪ್ರಾಮಾಣಿಕವೆಂದು ಸ್ವೀಕರಿಸಿದ್ದೇವೆ. ಆರ್ಷಗ್ರಂಥಗಳಿಗೂ ಅನುಭವಾನುಸಾರಿಯಾದ ಯುಕ್ತಿಗೂ ನಿಲುಕದಿರುವ ಮಾತು ಗೌರವಾರ್ಹವಲ್ಲ. ಶುಷ್ಕತರ್ಕಕ್ಕೆ ಬೆಲೆ ಇಲ್ಲ.

ಸತ್ಯವನ್ನು ಹೇಳಬೇಕು, ಅಹಿಂಸೆ ಉತ್ತಮವಾದ ಧರ್ಮ, ದಾನವು ಶ್ರೇಷ್ಠವಾದ ಗುಣ - ಎಂಬ ನೀತಿಗೆ ಕಾರಣವೇನು? ಆತ್ಮರಕ್ಷಣೆಗಾಗಿಯೋ ಬೇರೆ ಫಲಾಪೇಕ್ಷೆಯಿಂದಲೋ ಸುಳ್ಳನ್ನೇಕೆ ಹೇಳಬಾರದು? ಮೀನುಗಳನ್ನು ಹಿಡಿದು ಸಾಗಿಸುವುದು ಪ್ರಾಣಿಹಿಂಸೆಯಲ್ಲವೆ? - ಇಂಥ ಪ್ರಶ್ನೆಗಳನ್ನು ಉತ್ತರಿಸುವುದು ಕಷ್ಟ. ಮನುಷ್ಯನು ಹೀಗೆಯೇ ಬಾಳಬೇಕೆಂದು ಯಾರು ಗೊತ್ತುಮಾಡಿದ್ದಾರೆ? ಭೋಜನಾದಿಸುಖಗಳನ್ನು ಯಥೇಚ್ಛವಾಗಿ ಅನುಭವಿಸಬಹುದಾದರೆ, ವಿಷಯಸುಖಕ್ಕೆ ಮಾತ್ರ ಕಟ್ಟುಪಾಡು ಏಕೆ? ಮನುಷ್ಯರ ಆಲೋಚನಾವಿಧಾನಗಳು ಭಿನ್ನಭಿನ್ನವಾಗಿರುವುದರಿಂದ ಒಬ್ಬರ ಹೇಳಿಕೆ ಇನ್ನೊಬ್ಬರಿಗೆ ಸಂಮತವಾಗದೆ ಮಾನವನ ನೈತಿಕಮಟ್ಟವು, ಬರಿಯ ತರ್ಕದಿಂದ, ರಸಾತಳಕ್ಕೆ ಇಳಿದುಹೋಗುತ್ತದೆ. ಇಂದು ದೇಶವು ಅದೇ ಒಣತರ್ಕವನ್ನು ಹಿಡಿದು ಸಾಗುತ್ತಿರುವಂತಿದೆ.

ತತ್ತ್ವಶೂನ್ಯಾ ರಾಜನೀತಿಃ ಶ್ರಮಹೀನಂ ಧನಾರ್ಜನಂ
ನೀತಿದೂರಂ ಚ ವಾಣಿಜ್ಯಂ ವಿನಾ ಶೀಲಂ ಚ ಶಿಕ್ಷಣಮ್
ಅಂತಃಸಾಕ್ಷಿಹತೋ ಭೋಗೋ ವಿಜ್ಞಾನಂ ಧರ್ಮದೂಷಣಂ
ಅರ್ಚನಂ ತ್ಯಾಗರಹಿತಂ ಸಪ್ತೈತಾನಿ ಮನೋಃ ಕುಲೇ
ಸಾಮಾಜಿಕಮಹಾಪಾಪಾನ್ಯುದಿತಾನಿ ಮಹಾತ್ಮನಾ ॥೩೨॥

"ತತ್ತ್ವಶೂನ್ಯವಾದ ರಾಜಕೀಯ, ಪರಿಶ್ರಮವಿಲ್ಲದ ಧನಸಂಪಾದನೆ, ನೀತಿಭ್ರಷ್ಟವಾದ ವಾಣಿಜ್ಯ, ಶೀಲವನ್ನು ಕಲಿಸದ ವಿದ್ಯಾಭ್ಯಾಸ, ಮನಃಸಾಕ್ಷಿಗೆ ವಿರುದ್ಧವಾದ ಸುಖಭೋಗ, ಧರ್ಮಬಾಹಿರವಾಗಿ ವಿಜ್ಞಾನದ ಉಪಯೋಗ, ತ್ಯಾಗವಿಲ್ಲದ ದೇವಪೂಜೆ - ಇವು ಏಳು ಮಾನವಜಾತಿಯಲ್ಲಿ ಸಂಭವಿಸುವ ಮಹಾಪಾತಕಗಳು."

ಮಹಾತ್ಮಗಾಂಧಿಯವರು ಹೇಳಿದ ಸಪ್ತಮಹಾಪಾತಕಗಳನ್ನು ಸಂಸ್ಕೃತ ಶ್ಲೋಕಗಳನ್ನಾಗಿ ಪರಿವರ್ತಿಸಿ ಮೇಲೆ ಕೊಡಲಾಗಿದೆ. ಇವುಗಳಲ್ಲಿ ಯಾವುದೇ ಒಂದು ಮಹಾಪಾತಕವೂ ಪಾತಕರಾಜನಂತಿದ್ದು ಉಳಿದ ಆರನ್ನು ರಾಜಪರಿವಾರದಂತೆ ತನ್ನ ಜೊತೆಗೆ ಕಟ್ಟಿಕೊಂಡಿರುತ್ತದೆ. ಹೀಗಿರುವಾಗ ಎಲ್ಲವೂ ಸ್ವತಃ ರಾಜನಂತೆ ವೈಭವದಿಂದ ಒಂದು ರಾಷ್ಟ್ರದಲ್ಲಿ ಮೆರೆಯತೊಡಗಿದಾಗ ಆ ರಾಷ್ಟ್ರದ ಗತಿ ಏನಾಗಬೇಕು? ಧರ್ಮಶಾಸ್ತ್ರದಲ್ಲಿ ಪಂಚ ಮಹಾಪಾತಕಗಳು ಪ್ರಸಿದ್ಧವಾದವು (ಮನುಸ್ಮೃತಿ, ೧೧-೫೪): ಬ್ರಹ್ಮಹತ್ಯೆ, ಸುರಾಪಾನ, ಕಳ್ಳತನ, ಗುರುಪತ್ನೀಗಮನ, ಮತ್ತು ಈ ಪಾತಕಗಳನ್ನು ಮಾಡತಕ್ಕವರೊಡನೆ ಸಹವಾಸ - ಇವು ಒಬ್ಬೊಬ್ಬ ವ್ಯಕ್ತಿಯನ್ನು ಅಧೋಗತಿಗೆ ತಳ್ಳತಕ್ಕವು, ಈ ಪಾತಕದ ಫಲ ಆಯಾ ವ್ಯಕ್ತಿಗೆ. ಗಾಂಧಿಜೀಯವರು ಗಣಿಸಿದ ಪಾತಕಗಳಾದರೋ ಸಾಮಾಜಿಕವಾದವು. ಈ ಪಾಪಗಳ ಪರಿಣಾಮವು ಸಮಾಜದ ಮೇಲೆ ಆಗತಕ್ಕದ್ದು. ತತ್ತ್ವಶೂನ್ಯವಾದ ರಾಜಕೀಯ ಮೊದಲಾದ ಕೆಲವು ಪಾತಕಗಳು ಸಮಾಜವನ್ನು ಶೋಷಿಸಿ ನೀತಿಭ್ರಷ್ಟವಾಗಿ ಮಾಡತಕ್ಕವು. ಶ್ರಮಹೀನ ಧನಾರ್ಜನೆ ಮೊದಲಾದ ಕೆಲವು, ಸಮಾಜದ ಶೋಷಣೆಯಿಂದ ಬಂದ ನೀತಿಗೆಟ್ಟ ವ್ಯವಹಾರಗಳು.

ಯಾವ ರಾಷ್ಟ್ರದ ಆಧ್ಯಾತ್ಮಿಕ ಸಾಧನೆಗಳನ್ನು ಸ್ವಾಮಿ ವಿವೇಕಾನಂದರು ಬಾಯ್ತುಂಬ ಹೊಗಳಿದರೋ, ಯಾವ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಗಾಂಧಿಜೀ ಮೊದಲಾದವರು ಅಹರ್ನಿಶಿ ದುಡಿದರೋ ಆ ರಾಷ್ಟ್ರವು ಸ್ವಾತಂತ್ರ್ಯವನ್ನು ಗಳಿಸುವಾಗಲೇ ಅರ್ಧಾಂಗ ಪಾರ್ಶ್ವವಾಯುರೋಗಕ್ಕೆ ಬಲಿಯಾಯಿತು. ಅಳಿದುಳಿದ ರಾಷ್ಟ್ರದಲ್ಲಿ ಗಾಂಧಿಜೀಯವರು ಗಣಿಸಿದ ಸಪ್ತ ಮಹಾಪಾತಕಗಳೂ ಪ್ರೇತಗಳಂತೆ ಕುಣಿಯತೊಡಗಿವೆ. ಪ್ರತಿದಿನ ಇವುಗಳ ಕುಣಿತ ಪ್ರಬಲವಾಗುತ್ತಲೇ ಇದೆ. ರಾಜಕೀಯ ಪಕ್ಷಗಳಲ್ಲಿ ಒಂದೆರಡು ಪಕ್ಷಗಳನ್ನು ವಿನಾಯಿಸಿ ಉಳಿದ ಪಕ್ಷಗಳು ಯಾವ ತತ್ತ್ವಭೇದವೂ

ಇಲ್ಲದೆ ಬೇರೆಬೇರೆಯಾಗಿ ಕೂಗಾಟಗಳನ್ನೆಬ್ಬಿಸಿವೆ. ತತ್ತ್ವವೇ ಇಲ್ಲದಾಗ ತತ್ತ್ವಭೇದವೆಲ್ಲಿಂದ ಬರುತ್ತದೆ? ತಮಗೆ ಕೋಗಿಲೆಯ ಬಣ್ಣವಿದೆಯೆಂದು ಕಾಗೆಗಳು ಕೂಗಾಟವನ್ನೆಬ್ಬಿಸಿದಾಗ ಯಾವ ಕಾಗೆಯ ಧ್ವನಿ ಇಂಪಾದೀತು? ಯಾವುದರಲ್ಲಿ ಪಂಚಮಸ್ವರ ಇದ್ದೀತು? ರಾಷ್ಟ್ರಭಕ್ತರು ತೀವ್ರವಾಗಿ ಆಲೋಚಿಸಬೇಕಾದ ಕಾಲ ಈಗ ಸಂನಿಹಿತವಾಗಿದೆ.

**ರೋಗೋಽಂಡಜೋಽಂಕುರೋಽಗ್ನಿಃ**
**ವಿಷಮಶ್ವತರೋ ಘುಣಾಃ ಕ್ರಿಮಯಃ ।**
**ಪ್ರಕೃತಿಕೃತಘ್ನಶ್ಚ ನರಃ**
**ಸ್ವಾಶ್ರಯಮವಿನಾಶ್ಯ ನೈಧಂತೇ ॥೩೩॥**

— *ಸುಭಾಷಿತರತ್ನ-ಭಾಂಡಾಗಾರ*

"ರೋಗ, ಹಕ್ಕಿ, ಮೊಳಕೆ, ಬೆಂಕಿ, ವಿಷ, ಹೇಸರಗತ್ತೆ, ಮರವನ್ನು ಕೊರೆಯುವ ಹುಳು, ಸೂಕ್ಷ್ಮ ಕ್ರಿಮಿ ಮತ್ತು ಪ್ರಕೃತಿಕಂಟಕನಾದ ಮನುಷ್ಯ - ಇವರೆಲ್ಲರೂ ತಮಗೆ ಆಶ್ರಯದಾತರಾದವರನ್ನೇ ನಾಶಮಾಡದೆ ವರ್ಧಿಸುವುದಿಲ್ಲ; ತಮ್ಮ ಆಶ್ರಯದಾತರನ್ನೇ ನಾಶಮಾಡಿ ವರ್ಧಿಸುತ್ತಾರೆ."

ಕೃತಘ್ನರ ಸ್ವಭಾವವನ್ನು ಮಾರ್ಮಿಕವಾಗಿ ಇಲ್ಲಿ ವರ್ಣಿಸಲಾಗಿದೆ. ರೋಗವು ದೇಹದಲ್ಲಿ ಹುಟ್ಟಿ ದೇಹದಲ್ಲಿ ಬೆಳೆದು ದೇಹವನ್ನೇ ನಾಶಮಾಡುತ್ತದೆ. ಮೊಟ್ಟೆಯು ಮುಂದೆ ಮರಿಯಾಗುವ ಜೀವದ್ರವವನ್ನು ತನ್ನೊಳಗಿಟ್ಟು ಕಾಪಾಡುತ್ತದೆ. ತನ್ನನ್ನು ರಕ್ಷಿಸಿ ಪೋಷಿಸಿದ ಮೊಟ್ಟೆಯನ್ನೊಡೆದು ಹಕ್ಕಿ ಹೊರಬರುತ್ತದೆ! ಬೀಜವನ್ನು ಧ್ವಂಸಮಾಡಿ ಮೊಳಕೆ ಬೆಳೆಯುತ್ತದೆ. ಬೆಂಕಿಯು ತನಗೆ ಆಶ್ರಯ ಕೊಡುವ ವಸ್ತುವನ್ನೇ ಸುಟ್ಟು ಬೂದಿಮಾಡಿ ವರ್ಧಿಸುತ್ತದೆ. ಅದಕ್ಕೆ 'ಆಶ್ರಯಾಶ' ಎಂದು ಹೆಸರೇ ಇದೆ; ತನಗೆ ಆಶ್ರಯವಾದ್ದನ್ನು ತಿನ್ನತಕ್ಕವನೆಂದು ಅದರ ಅರ್ಥ. ವಿಷಜಂತುಗಳನ್ನು ಮಾನವನು ಕೊಂದುಹಾಕುತ್ತಾನೆ. ಜಂತುವಿನಲ್ಲಿರುವ ವಿಷವೇ ಆ ಪ್ರಾಣಿಯ ವಧೆಗೆ ನಿಮಿತ್ತ. ಹೇಸರಗತ್ತೆ ಹುಟ್ಟಿದೊಡನೆ ಅದರ ತಾಯಿ ಸತ್ತುಹೋಗುತ್ತದೆಯಂತೆ. ಈ ಗುಂಪಿಗೆ ಚೇಳು, ಏಡಿಗಳನ್ನೂ ಸೇರಿಸಬಹುದು. ಅವುಗಳ ಮರಿಗಳು ತಾಯಿಯ ಗರ್ಭನಿರ್ಭೇದವನ್ನೆಸಗುತ್ತಲೇ ಹೊರಬರುತ್ತವೆ. ಇನ್ನು ಮರವನ್ನು ಕೊರೆಯುವ ಹುಳು, ಗೆದ್ದಲು ಮೊದಲಾದ ಕ್ರಿಮಿಗಳ ಸ್ವಭಾವ

ಎಲ್ಲರಿಗೂ ತಿಳಿದ ಸಂಗತಿ. ಕಡೆಯಲ್ಲಿ ಬರುತ್ತಾನೆ 'ಪ್ರಕೃತಿಕೃತಘ್ನನಾದ ನರ'. ಇವನು 'ಆಶ್ರಯಾಶ'ರಿಗೆಲ್ಲ ಮೂರ್ಧನ್ಯ, ಕಿರೀಟಪ್ರಾಯ! ರೋಗಾದಿಗಳೆಲ್ಲ ಉಪಮಾನ; ಮನುಷ್ಯನು ಉಪಮೇಯ.

ರೋಗ, ಬೆಂಕಿ, ವಿಷ, ಮೊಳಕೆಗಳು - ಇವೆಲ್ಲ ಜಡವಸ್ತುಗಳು. ಹಕ್ಕಿ ಮೊದಲಾದವು ವಿವೇಕರಹಿತ ಪ್ರಾಣಿಗಳು; ಅವುಗಳ ಕ್ರಿಯೆ ಸ್ವಾಭಾವಿಕವಾದದ್ದು, ಬುದ್ಧಿಪೂರ್ವಕವಾದ್ದಲ್ಲ. ಮನುಷ್ಯನ ಕೃತಘ್ನತೆಯಾದರೋ ದುರ್ಬುದ್ಧಿಯಿಂದ ಬಂದದ್ದು. ಹಣದ ಗಳಿಕೆಗಾಗಿ ಕಾಡನ್ನೇ ಕಡಿದು ನಾಶಮಾಡುವುದು, ಹೊಳೆಯ ನೀರಿಗೆ ಕೊಳಚೆಯನ್ನು ಬಿಡುವುದು 'ಪ್ರಕೃತಿಕೃತಘ್ನತೆ'. ಪರಿಸರಮಾಲಿನ್ಯ, ಜಲಮಾಲಿನ್ಯ, ವಾಯುಮಾಲಿನ್ಯಗಳೆಲ್ಲ ಕೃತಘ್ನತೆಯ ಪ್ರತೀಕಗಳು. ಭರತಖಂಡವನ್ನು ಒಂದುಗೂಡಿಸಿ ಸಕಲಭಾಷೆಗಳನ್ನೂ ತಾಯಿಯಂತೆ ಸಾಕಿ ಬೆಳೆಸಿದ ಸಂಸ್ಕೃತಭಾಷೆಯನ್ನೇ ದ್ವೇಷಿಸುವುದು ಛಲದಿಂದ ಮಾಡುತ್ತಿರುವ ಬುದ್ಧಿಪೂರ್ವಕವಾದ ಕೃತಘ್ನತೆ.

ರಾಷ್ಟ್ರದ್ರೋಹಕ್ಕಿಂತ ದೊಡ್ಡ ಕೃತಘ್ನತೆ ಯಾವುದಿದೆ? ಸಹಸ್ರಾರು ವರ್ಷಗಳಿಂದ ತನ್ನ ವಂಶಪರಂಪರೆಯನ್ನೇ ತಾಯಿಗಿಂತ ಅಧಿಕವಾಗಿ ಪೋಷಿಸಿಕೊಂಡುಬಂದ ಭಾರತಮಾತೆಯ ದೇಹವನ್ನೇ ನಿಷ್ಕರುಣೆಯಿಂದ ಸೀಳಿಹಾಕಿದವರಿಗಿಂತ ದ್ರೋಹಿಗಳು ಯಾರಿದ್ದಾರು? ಮತೀಯ ವೈಮನಸ್ಯವೆಂಬ ಅದೇ ದುಷ್ಟಶಕ್ತಿಯನ್ನು ಮತಿಪೂರ್ವಕವಾಗಿಯೇ ತಾತ್ಕಾಲಿಕ ಲಾಭಕ್ಕಾಗಿ ಬಡಿದೆಬ್ಬಿಸುತ್ತಿರುವ ರಾಜಕೀಯಸ್ಥರಿಗಿಂತ, ಬುದ್ಧಿಜೀವಿಗಳಿಗಿಂತ ಅಧಿಕಕೃತಘ್ನರನ್ನು ಈ ರಾಷ್ಟ್ರದಲ್ಲಲ್ಲದೆ ಇನ್ನೆಲ್ಲಿ ಕಾಣಲಾದೀತು? ರಾಷ್ಟ್ರೀಯ ಆಸ್ತಿಪಾಸ್ತಿಗಳ ವಿಧ್ವಂಸಕೃತ್ಯ, ಮುಷ್ಕರ, ದೊಂಬಿ, ಕೊಲೆ, ಸುಲಿಗೆಗಳೆಲ್ಲವೂ ಪ್ರಕೃತಿಕೃತಘ್ನತೆಯ ಅಪರಾವತಾರಗಳು.

ಇನ್ನೊಂದು ಮಹತ್ತಮವಾದ ಕೃತಘ್ನತೆಯುಂಟು. ಅದು ತನ್ನ ಮೂಲವನ್ನೇ, ತನ್ನ ಅಸ್ತಿತ್ವವನ್ನೇ ಅಲ್ಲಗಳೆಯುವ ನಾಸ್ತಿಕವಾದ. ಎಲ್ಲ ಅನರ್ಥ-ಅಪಾರ್ಥಗಳಿಗೂ ಅದು ತವರುಮನೆ.

ಯಥಾ ವ್ಯಾಲಗಲಸ್ಥೋऽಪಿ ಭೇಕೋ ದಂಶಾನಪೇಕ್ಷತೇ ।
ತಥಾ ಕಾಲಾಹಿನಾ ಗ್ರಸ್ತೋ ಲೋಕೋ ಭೋಗಾನಪೇಕ್ಷತೇ ॥೩೪॥

— *ಸಮಯೋಚಿತಪದ್ಯ-ಮಾಲಿಕಾ*

"ತನ್ನನ್ನು ನುಂಗುತ್ತಿರುವ ಹಾವಿನ ಗಂಟಲಿನಲ್ಲಿ ಅರ್ಧ ಸಿಕ್ಕಿಕೊಂಡಿದ್ದರೂ ಕಪ್ಪೆಯು ಕೀಟಗಳನ್ನು ತಿನ್ನಲು ಬಯಸುತ್ತದೆ. ಹಾಗೆಯೇ ಕಾಲಸರ್ಪವು ಬಂದು ಹಿಡಿದಿದ್ದರೂ ಜನರು ಸುಖಭೋಗಗಳನ್ನು ಬಯಸುತ್ತಾರೆ."

'ಜಾತಸ್ಯ ಮರಣಂ ಧ್ರುವಂ' ಎಂಬ ಮಾತನ್ನು ಎಲ್ಲರೂ ಬಲ್ಲರು. ಒಂದು ದಿನ ತನ್ನ ಸಾವು ಇದೆಯೆಂಬುದನ್ನು ಪ್ರತಿಯೊಬ್ಬನೂ ಅರಿತಿದ್ದಾನೆ. ಸಾವು ಬಂದರೆ ಎಲ್ಲವೂ ಮುಗಿದಂತೆಯೇ. ಹೆಂಡತಿ, ಗಂಡ, ಮಕ್ಕಳು, ಮನೆ, ಆಸ್ತಿ, ಚಿನ್ನ, ಬೆಳ್ಳಿ - ಎಲ್ಲವೂ ಒಟ್ಟಿಗೇ ಕೈತಪ್ಪಿಹೋಗುತ್ತದೆ. ಜನ್ಮಾಂತರವನ್ನು ಪಡೆದು ಬಂದು "ನಾನೇ ಅವನು. ಈಗ ಬೇರೆ ಕಡೆ ಹುಟ್ಟಿಬಂದಿದ್ದೇನೆ. ಈ ಹೊಲ, ನೆಲ ಎಲ್ಲವೂ ನನ್ನದು" ಎಂದು ಹೇಳಿದರೆ ಯಾರೂ ಕೇಳುವುದಿಲ್ಲ! ಇವಳು ನನ್ನ ಹೆಂಡತಿ, ಇವರು ಮಕ್ಕಳು, ಇದು ನನ್ನ ಆಸ್ತಿ - ಎಂಬ ವ್ಯಾಮೋಹ ತನ್ನ ಸಾವಿನೊಡನೆ ಸತ್ತುಹೋಗುತ್ತದೆ. ಆದರೆ ಲೋಕವು ಇದನ್ನು ಒಂದು ಕ್ಷಣಕಾಲವಾದರೂ ಪರ್ಯಾಲೋಚಿಸುತ್ತದೆಯೆ? ಹಾವಿನ ದವಡೆಯಲ್ಲಿ ಸಿಕ್ಕಿಕೊಂಡಿದ್ದರೂ ಕಪ್ಪೆಯು ಹಾರಾಡುವ ಕೀಟಗಳನ್ನು ತಿನ್ನಲು ಬಾಯಿತೆರೆಯುತ್ತದೆ. ಇನ್ನು ಸ್ವಲ್ಪಹೊತ್ತಿನಲ್ಲಿ ತನ್ನ ಗತಿ ಏನಾಗುತ್ತದೆಂಬುದನ್ನು ಅದು ತಿಳಿದುಕೊಳ್ಳುವುದಿಲ್ಲ. ಈ ವಿಷಯದಲ್ಲಿ ಕಪ್ಪೆಗಿಂತ ಮನುಷ್ಯನು ಯಾವ ರೀತಿಯಲ್ಲಿ ಅಧಿಕ? ಕಾಲಸರ್ಪದ ಹಿಡಿತದಿಂದ ಯಾವ ಸರ್ವಾಧಿಕಾರಿಯೂ ತಪ್ಪಿಸಿಕೊಳ್ಳಲಾರ. ಹಿಟ್ಲರ್, ಮುಸೊಲಿನಿ, ಸ್ಟಾಲಿನ್‌ಗಳ ಆಜ್ಞೆಗೆ ಹುಸಿ ಇರಲಿಲ್ಲ. ಆದರೆ ಕಾಲಸರ್ಪದ ಮೇಲೆ ಅವರ ಆಜ್ಞೆ ಏನೇನೂ ನಡೆಯಲಿಲ್ಲ. ಅದು ಅವರನ್ನು ಏಕಾಪೋಶನ ತೆಗೆದುಕೊಂಡಿತು.

ಭೋಜರಾಜನು ಬಾಲಕನಾಗಿದ್ದಾಗ ಅವನ ತಂದೆ ಮೃತನಾದ. ಭೋಜನ ಚಿಕ್ಕಪ್ಪ ಮುಂಜನು ತನ್ನ ಅಣ್ಣನ ರಾಜ್ಯವನ್ನು ಕಬಳಿಸಬೇಕೆಂದು ಸಂಚು ಮಾಡಿ, ಭೋಜನನ್ನು ರಹಸ್ಯವಾಗಿ ಕೊಲ್ಲಬೇಕೆಂದು ಮಂತ್ರಿಗೆ ಆಜ್ಞಾಪಿಸಿದ. ಮಂತ್ರಿಯು ಭೋಜನನ್ನು ಅರಣ್ಯಕ್ಕೆ ಕರೆದೊಯ್ದು ಸಂಗತಿಯೇನೆಂಬುದನ್ನು ತಿಳಿಸಿದ. ಆಗ ಭೋಜನು ಒಂದು ಶ್ಲೋಕವನ್ನು ಬರೆದು ಮುಂಜನಿಗೆ ಕಳಿಸಿದ. ಆ ಶ್ಲೋಕ ಇದು:

**ಮಾಂಧಾತಾ ಚ ಮಹೀಪತಿಃ ಕೃತಯುಗಾಲಂಕಾರಭೂತೋ ಗತಃ**
**ಸೇತುರ್ಯೇನ ಮಹೋದಧೌ ವಿರಚಿತಃ ಕ್ವಾಸೌ ದಶಾಸ್ಯಾಂತಕಃ ।**
**ಅನ್ಯೇ ಚಾಪಿ ಯುಧಿಷ್ಠಿರಪ್ರಭೃತಯೋ ಯಾತಾ ದಿವಂ ಭೂಪತೇ**
**ನೈಕೇನಾಪಿ ಸಮಂ ಗತಾ ವಸುಮತೀ ಮುಂಜ ತ್ವಯಾ ಯಾಸ್ಯತಿ ॥**

"ಕೃತಯುಗಕ್ಕೆ ಅಲಂಕಾರಪ್ರಾಯನಾಗಿದ್ದ ಮಾಂಧಾತಚಕ್ರವರ್ತಿಯು ಮರಣವನ್ನಪ್ಪಿಸಿದ. ಮಹಾಸಾಗರಕ್ಕೆ ಸೇತುವೆಯನ್ನು ಕಟ್ಟಿ ರಾವಣನನ್ನೇ ಸಂಹರಿಸಿದ ಶ್ರೀರಾಮನು ಈಗೆಲ್ಲಿದ್ದಾನೆ? ಯುಧಿಷ್ಠಿರನೇ ಮೊದಲಾದ ಉಳಿದೆಲ್ಲ ರಾಜರೂ ಸ್ವರ್ಗಸ್ಥರಾದರು. ಯಾರೊಡನೆಯೂ ಈ ಭೂಮಿ ಹೋಗಲಿಲ್ಲ! ಮುಂಜರಾಜ, ಇದು ನಿನ್ನೊಡನೆ ಮಾತ್ರ ಬರುವುದು!"

ಆ ಶ್ಲೋಕವನ್ನೋದಿ ಮುಂಜರಾಜನು ಪಶ್ಚಾತ್ತಾಪದಿಂದ ಗೋಳಾಡಿದನಂತೆ.

ಇದೆಲ್ಲವೂ ತಿಳಿದಿದ್ದರೂ ನಮಗೆ ತಾಪವಾಗುವುದೇ ಇಲ್ಲ. ಆಮೇಲೆ ಪಶ್ಚಾತ್ತಾಪಪಡುವುದಕ್ಕೆ ನಾವಿರುವುದೇ ಇಲ್ಲ!

ಎಷ್ಟೋ ಕೋಟಿ ರೂಪಾಯಿ ಬಂದು ಸೇರಿದ್ದರೂ ಆಸೆಗೆ ತೃಪ್ತಿಯಿಲ್ಲ. ನಟಿಯ ಕುಣಿತ ನಿಲ್ಲುತ್ತದೆ; ಆಸೆಯ ಕುಣಿತ ನಿಲ್ಲುವುದಿಲ್ಲ. ಅಷ್ಟು ಹಣ ಯಾರಿಗಾಗಿ? ಎಲ್ಲಿಗೆ ಒಯ್ಯುವುದಕ್ಕಾಗಿ? ಕಾನೂನುಗಳನ್ನು ರಚಿಸತಕ್ಕ ಪ್ರಾಜ್ಞರೆಂದು ಚುನಾಯಿತರಾದ ಶಾಸಕರೂ ಮಂತ್ರಿಗಳೂ ನೀತಿಸೂತ್ರಗಳನ್ನು ಹರಿದೆಸೆದು ಧಾವಿಸುತ್ತಿರುವಾಗ ಯಾರು ಯಾರನ್ನು ತಡೆದಾರು?

**ಅವಮಾನಂ ಪುರಸ್ಕೃತ್ಯ ಮಾನಂ ಕೃತ್ವಾ ಚ ಪೃಷ್ಠತಃ ।**
**ಸ್ವಾರ್ಥಂ ಸಮುದ್ಧರೇತ್ ಪ್ರಾಜ್ಞಃ ಸ್ವಾರ್ಥಭ್ರಂಶೋ ಹಿ ಮೂರ್ಖತಾ ॥**

ಇದೊಂದು ಕಣಿಕನೀತಿ : "ಬುದ್ಧಿಶಾಲಿಯು ಮಾನವನ್ನು ಹಿಂದಕ್ಕೆ ತಳ್ಳಿಹಾಕಿ ಅವಮಾನದ ಪತಾಕೆಯನ್ನು ಎತ್ತಿಹಿಡಿದಾದರೂ ಸ್ವಾರ್ಥವನ್ನು ಸಾಧಿಸಿಕೊಳ್ಳಬೇಕು. ಸ್ವಾರ್ಥವನ್ನು ಕಡೆಗಾಣಿಸುವುದು ಮೂರ್ಖತೆಯೇ ಸರಿ!"

ಕಲಿಯುಗದ ಮಹಿಮೆ ಇದೇ ಇರಬೇಕು.

**ಭೇದಾಭೇದೌ ಸಪದಿ ಗಲಿತೌ ಪುಣ್ಯಪಾಪೇ ವಿಶೀರ್ಣೇ**
**ಮಾಯಾಮೋಹೌ ಕ್ಷಯಮುಪಗತೌ ನಷ್ಟಸಂದೇಹವೃತ್ತೇಃ ।**
**ಶಬ್ದಾತೀತಂ ತ್ರಿಗುಣರಹಿತಂ ಪ್ರಾಪ್ಯ ತತ್ತ್ವಾವಬೋಧಂ**
**ನಿಸ್ತ್ರೈಗುಣ್ಯೇ ಪಥಿ ವಿಚರತಃ ಕೋ ವಿಧಿಃ ಕೋ ನಿಷೇಧಃ ॥೩೫॥**

— *ಸುಭಾಷಿತರತ್ನ-ಭಾಂಡಾಗಾರ*

"ತತ್ತ್ವಜ್ಞಾನ ಉಂಟಾದ್ದರಿಂದ ಭೇದ-ಅಭೇದ ಎಂಬ ಕಲ್ಪನೆಗಳು ಥಟ್ಟನೆ ಅಡಗಿದವು. ಪುಣ್ಯ-ಪಾಪಗಳೆಂಬ ಕರ್ಮಬಂಧಗಳು ಕಳಚಿಹೋದವು. ಅಜ್ಞಾನ-ವ್ಯಾಮೋಹಗಳು ಕ್ಷೀಣಿಸಿದವು. ಎಲ್ಲ ಸಂದೇಹಗಳೂ ನಿವೃತ್ತಿಹೊಂದಿದವು. ಶಬ್ದದಿಂದ ವರ್ಣಿಸಲಾಗದ, ಗುಣತ್ರಯರಹಿತವಾದ ಬ್ರಹ್ಮಸಾಕ್ಷಾತ್ಕಾರವೆಂಬ ತತ್ತ್ವಜ್ಞಾನವು ಪ್ರಾಪ್ತವಾಯಿತು. ತ್ರಿಗುಣಾತೀತವಾದ ಮಾರ್ಗದಲ್ಲಿ ಸಂಚರಿಸತಕ್ಕವನಿಗೆ ವಿಧಿ ಯಾವುದು, ನಿಷೇಧ ಯಾವುದು?"

ಈ ಶ್ಲೋಕವು ಶ್ರೀಶಂಕರಾಚಾರ್ಯವಿರಚಿತವೆಂಬ ಹೇಳಿಕೆ ಇದೆ. ಬ್ರಹ್ಮಜ್ಞಾನಿಯಾದ ಅವಧೂತನ ಸ್ಥಿತಿಯನ್ನಿಲ್ಲಿ ವರ್ಣಿಸಲಾಗಿದೆ. ಅವನಿಗೆ ಯಾವ ವಸ್ತುವಿನಲ್ಲಿಯೂ ಪರಸ್ಪರ ಭೇದವೇ ಕಾಣಿಸುವುದಿಲ್ಲ. ಮಣ್ಣು-ಚಿನ್ನ, ಬೆಳ್ಳಿ-ಕಬ್ಬಿಣ ಇವೆಲ್ಲವೂ ಅವನಿಗೆ ಬ್ರಹ್ಮಸ್ವರೂಪವಾಗಿಯೇ ತೋರುತ್ತವೆ. ಆದ್ದರಿಂದ ಭೇದಬುದ್ಧಿ ಇಲ್ಲ. ಎರಡು ವಸ್ತುಗಳಿದ್ದರೆ ಅದೂ ಇದೂ ಒಂದೇ ಎನ್ನಲು ಸಾಧ್ಯವಾದೀತು. ಎರಡು ವಸ್ತುಗಳೇ ಇಲ್ಲದಿದ್ದಾಗ, ಅದು-ಇದು ಎನ್ನುವ ವ್ಯವಹಾರಕ್ಕೆ ಅವಕಾಶವಿಲ್ಲವಾದ್ದರಿಂದ ಅಭೇದಬುದ್ಧಿಯೂ ಇಲ್ಲ. ಜ್ಞಾನಿಗೆ ಪುಣ್ಯಪಾಪಗಳ ಲೇಪವೇ ಇಲ್ಲ. ಜಗತ್ತಿನ ವಿಷಯದಲ್ಲಿ ಸಂದೇಹವು ಹೋಗಿ ನಿಶ್ಚಯಜ್ಞಾನವಾದ್ದರಿಂದ ಅಜ್ಞಾನವೂ ಇಲ್ಲ, ನನ್ನದೆಂಬ ವ್ಯಾಮೋಹವೂ ಇಲ್ಲ. ಇಂತಹ ಅವಧೂತನು ತಪ್ಪುದಾರಿ ಹಿಡಿಯುವ ಪ್ರಸಂಗವೇ ಇಲ್ಲವಾದ್ದರಿಂದ ವಿಧಿಯೂ ಬೇಕಾಗಿಲ್ಲ, ನಿಷೇಧವೂ ಬೇಕಾಗಿಲ್ಲ.

ಮಾತಿನಿಂದ ವರ್ಣಿಸಲು ಸಾಧ್ಯವಿಲ್ಲದ, ಶಬ್ದಾತೀತವಾಗಿರುವ ಒಂದು ವಸ್ತು ಇರುವುದುಂಟೆ? - ಎಂದು ಕೇಳಿದರೆ 'ಇದೆ' ಎಂದು ಧಾರಾಳವಾಗಿ ಹೇಳಬಹುದು. ನಮ್ಮ ಸರ್ಕಾರವು ಪಾಲಿಸುತ್ತಿರುವ 'ಧರ್ಮನಿರಪೇಕ್ಷತೆ - ಸೆಕ್ಯುಲರಿಸಂ' ಎಂಬ ವಸ್ತುವೇ ಅದು! ಈ ತತ್ತ್ವವು ವರ್ಣನೆಗೆ ನಿಲುಕತಕ್ಕದ್ದಲ್ಲ. ಅದು ಧರ್ಮಪ್ರೀತಿಯಲ್ಲ, ಧರ್ಮದ್ವೇಷವಲ್ಲ; ಧರ್ಮದ ಅಪೇಕ್ಷೆಯೂ ಅಲ್ಲ, ಉಪೇಕ್ಷೆಯೂ ಅಲ್ಲ. ಅದು ಧರ್ಮನಿರಪೇಕ್ಷತೆ! ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿಗಳೆಲ್ಲರೂ ಸುಖವಾಗಿ ಬಾಳಬೇಕೆಂಬುದೇ ನಮ್ಮ ಧ್ಯೇಯ. ಭೇದಬುದ್ಧಿ ಇಲ್ಲದ್ದರಿಂದಲೇ ರಾಷ್ಟ್ರವು ಇಬ್ಭಾಗವಾಗಲು ಸಂಮತಿಸಿದೆವು. ನಾಮ, ರೂಪಗಳು ಯಾವುದಿದ್ದರೇನು? ಪಾಕಿಸ್ತಾನವು ಭರತಖಂಡದಲ್ಲಿಯೇ ಇರುತ್ತದೆಯಲ್ಲವೆ? ಹಾಗೆಯೇ ಅಭೇದ ಬುದ್ಧಿಯೂ ಇಲ್ಲದ್ದರಿಂದ ಪಾಕಿಸ್ತಾನದೊಡನೆ ಹೋರಾಡಿದೆವು. ನನ್ನದೆಂಬ

ವ್ಯಾಮೋಹವಿಲ್ಲದ ಪ್ರಯುಕ್ತ, ಕಾಶ್ಮೀರಿ ಪಂಡಿತರು ಲಕ್ಷಗಟ್ಟಲೆ ನಿರಾಶ್ರಿತರಾಗಿ ಓಡಿಬಂದರೂ ನಾವು ಗಣಿಸುವುದಿಲ್ಲ. 'ವಸುಧೈವ ಕುಟುಂಬಕಂ' ಎಂಬುದೇ ನಮ್ಮ ತತ್ತ್ವವಾದ್ದರಿಂದ ಬಂಗ್ಲಾದೇಶದವರು, ಶ್ರೀಲಂಕಾದ ತಮಿಳರು ವಲಸೆ ವಲಸೆಯಾಗಿ ಬರಲಿ, ನಮ್ಮ ಆಕ್ಷೇಪಣೆ ಇಲ್ಲ. ಮಣ್ಣು-ಚಿನ್ನ ಎರಡೂ ಒಂದೇ. ಆದ್ದರಿಂದಲೇ ಮಣ್ಣಿನ ನೆಲವನ್ನು ಬಿಟ್ಟುಕೊಟ್ಟು ಚಿನ್ನದ ಗಟ್ಟಿಗಳನ್ನು ಪೇರಿಸಿಕೊಳ್ಳುತ್ತೇವೆ. ಹಣದಲ್ಲಿ ಅಭಿಮಾನವೇನೂ ಇಲ್ಲವಾದ್ದರಿಂದ ಕೋಟಿಕೋಟಿಗಟ್ಟಲೆ ಸರ್ಕಾರಿ ಹಣವನ್ನು ಮಣ್ಣಿನ ರಾಶಿಯಂತೆ ತೂರಾಡುತ್ತೇವೆ! ಕೆಲವು ವರ್ಷಗಳ ಹಿಂದೆ ದೆಹಲಿಯಲ್ಲಿ ನಮ್ಮ ಕಣ್ಣಮುಂದೆಯೇ ಸಾವಿರಾರು ಕೊಲೆಗಳು ನಡೆದವು. ನಾವು ಲಕ್ಷಿಸಿದೆವೇನು? ಎಷ್ಟೋ 'ಸ್ಕ್ಯಾಮು'ಗಳೂ ಲಂಚದ ಆಪಾದನೆಗಳೂ ಬಂದವು. ಗಮನಿಸಿದೆವೇನು? ಪುಣ್ಯಪಾಪಗಳ ಕರ್ಮಬಂಧನ ನಮಗಿಲ್ಲ! ಅಡ್ಡದಾರಿಯಿಂದ, ನುಸುಳುದಾರಿಯಿಂದ, ಕಳ್ಳದಾರಿಯಿಂದ ಶಾಸಕರು ನಮ್ಮ ಪಕ್ಷಕ್ಕೆ ಸೇರಿದರೆ ಬೇಡವೆನ್ನುತ್ತೇವೇನು? ಒಟ್ಟಿನಲ್ಲಿ ಜನರು ಸನ್ಮಾರ್ಗಕ್ಕೆ ಬಂದರಾಯಿತು! ಗುರಿ ಒಳ್ಳೆಯದಿರಬೇಕು, ದಾರಿ ಯಾವುದಾದರೇನು? ಹಿಂದೂಗಳಿಗೊಂದು ಕಾನೂನು, ಮುಸ್ಲಿಮರಿಗೊಂದು ಕಾನೂನು ಎಂದು ಕೂಗಾಡುವುದು ಅಜ್ಞಾನದಿಂದ. ಜ್ಞಾನದೃಷ್ಟಿಯಿಂದ ನೋಡಿದಾಗ ಹಿಂದೂ-ಮುಸ್ಲಿಮರಲ್ಲಿರತಕ್ಕದ್ದು ಒಂದೇ ಆತ್ಮ ಎಂಬ ತತ್ತ್ವ ತಿಳಿಯುತ್ತದೆ. ಆಗ ಎಲ್ಲ ಕೂಗಾಟವೂ ನಿಂತುಹೋಗುತ್ತದೆ. ಬೊಂಬಾಯಿಯಲ್ಲಿ ಬಾಂಬು ಆಸ್ಫೋಟದಿಂದ ಬಹಳ ಜನರು ಕೊಲೆಗೀಡಾದರು. ಕೊಲೆಗಡುಕರನ್ನೇಕೆ ಬಂಧಿಸುವುದಿಲ್ಲ? - ಎಂದು ಅಜ್ಞಾನಿಗಳು ಕೇಳುತ್ತಾರೆ. ಎಲೈ ಮೂಢ! ಕೊಲೆ ಮಾಡಿದ ಕೊಲೆಗಡುಕ ಯಾರು? ಕೊಲ್ಲಿಸಿಕೊಂಡವನು ಯಾರು? ಆತ್ಮನಿಗೆ ಮರಣವಿಲ್ಲ. 'ನಾಯಂ ಹಂತಿ ನ ಹನ್ಯತೇ'. ಅವಧೂತರಿಗೆ ಯಾವ ವಿಧಿನಿಷೇಧಗಳೂ ಇಲ್ಲ.

**ಪರೋಪಕಾರವಿಜ್ಞಾನಮಾತ್ರ-ಲಾಭೋಪಜೀವಿನಾಮ್ ।**
**ದಾಶಾನಾಮಿವ ಧೂರ್ತಾನಾಂ ಜಾಲಾಯ ಗುಣಸಂಗ್ರಹಃ ॥೩೬॥**

— *ಸುಭಾಷಿತರತ್ನ-ಭಾಂಡಾಗಾರ*

"ಪರರಿಗೆ ಯಾವಯಾವ ಉಪಕಾರಗಳನ್ನು ಮಾಡಬಹುದೆಂದು ತಿಳಿದುಕೊಳ್ಳುವ ಲಾಭದಿಂದ ಮಾತ್ರ ಜೀವಿಸತಕ್ಕ ಧೂರ್ತರು

ಸದ್ಗುಣಗಳನ್ನು ತಮ್ಮಲ್ಲಿ ಆರೋಪಿಸಿಕೊಂಡು ಪ್ರಕಟಿಸುತ್ತಾರೆ. ಬೆಸ್ತರು ಮೀನುಬಲೆಯನ್ನು ಹೆಣೆಯುವುದಕ್ಕಾಗಿ ದಾರಗಳನ್ನು ಸಂಗ್ರಹಿಸಿ ಕೊಳ್ಳುವಂತೆ ಈ ಧೂರ್ತರು ಗುಣಗಳನ್ನು ವ್ಯಕ್ತಪಡಿಸುತ್ತಾರೆ." (ಗುಣಸಂಗ್ರಹ - ಸದ್ಗುಣಗಳನ್ನು ತಮ್ಮಲ್ಲಿ ಆರೋಪಿಸಿಕೊಳ್ಳುವುದು ಮತ್ತು ದಾರಗಳನ್ನು ಸಂಗ್ರಹಿಸುವುದು.)

ಧೂರ್ತನೆಂದರೆ ವಂಚಕನೆಂದೂ ಜೂಜುಖೋರನೆಂದೂ ಧತ್ತೂರಿಗಿಡವೆಂದೂ ಮೂರು ಅರ್ಥಗಳಿವೆ. ಈ ಶಬ್ದಕ್ಕೆ 'ಧುರ್ವೀ = ಹಿಂಸಾಯಾಂ' ಎಂಬ ಧಾತು ಮೂಲ. ಈ ಮೂವರಿಂದಲೂ ಆಗತಕ್ಕದ್ದು ಹಿಂಸೆಯೇ. ವಂಚಕನು ನಂಬಿದವರಿಗೆ ಮೋಸಮಾಡುವುದರ ಮೂಲಕ ಹಿಂಸೆ ಮಾಡುತ್ತಾನೆ. ಜೂಜುಖೋರನಿಂದ ತನ್ನ ಕುಟುಂಬಕ್ಕೆ ಹಿಂಸೆ. ಧತ್ತೂರಿಗಿಡದ ಕಾಯಿ, ಹೂಗಳನ್ನು ಸೇವಿಸಿದರೆ ಅದು ಉನ್ಮಾದವನ್ನುಂಟುಮಾಡಿ ಹುಚ್ಚು ಹಿಡಿಸುತ್ತದೆ.

ಧೂರ್ತರು ವ್ಯವಹಾರದ ಎಲ್ಲ ಕ್ಷೇತ್ರಗಳಲ್ಲಿಯೂ ಇದ್ದಾರೆ. ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಮೊದಲಾದ ಸಕಲಜೀವನವೃತ್ತಿಗಳಲ್ಲಿಯೂ ವಂಚಕರಿದ್ದಾರೆ. ವೈದ್ಯಕ, ಜ್ಯೌತಿಷಗಳಲ್ಲಿದ್ದಾರೆ. ಸಾಧುಸಂತರ ವೇಷದಲ್ಲಿ ಹಣಮಾಡತಕ್ಕವರಿದ್ದಾರೆ. ವಿದ್ಯಾದಾನ ಮಾಡುತ್ತೇವೆಂದು ವಿದ್ಯಾಶಾಲೆಗಳೆಂಬ ವ್ಯಾಪಾರದ ಅಂಗಡಿಗಳನ್ನು ನಡೆಸತಕ್ಕವರಿದ್ದಾರೆ. ಧೂರ್ತತೆಯು ವಿಶ್ವರೂಪವನ್ನು ಧರಿಸಿ ಮನುಷ್ಯಜಾತಿಯನ್ನು ವ್ಯಾಪಿಸಿಕೊಂಡಿದೆ. ಪಶು ಪಕ್ಷಿ ಮೊದಲಾದ ತಿರ್ಯಗ್ ಜಂತುಗಳು ಮಾತ್ರ ವಂಚನಾವೃತ್ತಿಯನ್ನರಿಯವು.

ಈ ಕಾಲದಲ್ಲಿ ಧೂರ್ತತನಕ್ಕೆ ಹೊಸ ಆಯಾಮ ದೊರಕಿದೆ. ರಾಜಕೀಯವೆಂಬ ಹುಲುಸಾದ ಭೂಮಿ ಮೇಯತಕ್ಕವರಿಗೆ ಲಭಿಸಿದೆ. "ಎಲ್ಲ ಕೆಲಸದಲ್ಲೂ ನಷ್ಟ, ಸಂನ್ಯಾಸಿಯಾಗೋ ಭ್ರಷ್ಟ!" - ಎಂಬ ಗಾದೆ ಹಿಂದೆ ಇತ್ತು. ಈಗಲಾದರೋ "ಎಲ್ಲ ಕೆಲಸವೂ ಹೊಲಸು, ರಾಜಕೀಯದಲ್ಲಿ ನೆಲಸು!" ಎಂಬ ಗಾದೆ ಹುಟ್ಟಿಕೊಂಡಿದೆ. "ಈ ವರ್ಷ ಬಡವರಿಗೆ ೧೦ ಸಾವಿರ ಮನೆಗಳ ನಿರ್ಮಾಣ, ೧೨ ಸಾವಿರ ಶಾಲಾಕೊಠಡಿಗಳು, ೧೨ ಸಾವಿರ ಉಪಾಧ್ಯಾಯರ ನೇಮಕ - ಮಾಡಲಾಗುವುದು. ಹೊಟ್ಟೆಗಿಲ್ಲದವರಿಗೆ ಭುಕ್ತಿ, ಜೀತದಾಳುಗಳಿಗೆ ಮುಕ್ತಿ, ನಿರುದ್ಯೋಗಿಗಳಿಗೆ ಉದ್ಯೋಗಕಲ್ಪನೆಗಳಿಗಾಗಿ ಸರ್ಕಾರವು ಯೋಜನೆಗಳನ್ನು ಕೈಗೊಂಡಿದೆ" - ಎಂದು ಮಂತ್ರಿವರ್ಯರು ಬಾಯಿತುಂಬ ಹೇಳುತ್ತ ಹೋಗುತ್ತಾರೆ. ಇದು ೫೦ ವರ್ಷಗಳಿಂದ

ನಡೆಯುತ್ತಿರುವ ನಿತ್ಯಕರ್ಮ. ಪ್ರಜೋಪಕಾರಗಳಿಗೆ ವಿಳಂಬವಾಗಬಾರದೆಂದು ವಿಮಾನಗಳಲ್ಲಿಯೇ ಧಾವಿಸುತ್ತಾರೆ. ಸರ್ವಧರ್ಮಸಮನ್ವಯದ ಹಾಡನ್ನು ಹಾಡುತ್ತ, ಮಗುವನ್ನು ಚಿವುಟಿ ತೊಟ್ಟಿಲನ್ನು ತೂಗುತ್ತಾರೆ.

ರಾಷ್ಟ್ರವಿಭಜನೆಯಾದ ಮೇಲೆ ಹಿಂದೂ-ಮುಸ್ಲಿಂ ವಿವಾದ ನಿರ್ನಾಮವಾಗ ಬೇಕಾಗಿತ್ತು. ಈಗ ಆಗಿರುವುದೇನು? ಕೋಮುದ್ವೇಷದಿಂದಾದ ಮಾರಣ ಹೋಮಗಳೆಷ್ಟು? ಹೊಡೆದಾಟ ಬಡಿದಾಟಗಳೆಷ್ಟು? ಹಳ್ಳಿಹಳ್ಳಿಗಳಿಗೂ ಈ ದ್ವೇಷದ ಜ್ವಾಲಾನಲ ನಾಲಗೆಯನ್ನು ಚಾಚುತ್ತಿದೆ. ಬೆಂಕಿಗೆ ಒಣಮೆಣಸಿನಕಾಯಿಗಳನ್ನು ತುರುಕುತ್ತ “ಕೆಮ್ಮಬೇಡಿರಿ, ಕೆಮ್ಮಬೇಡಿರಿ” ಎಂದು ಉಪದೇಶಿಸಿದರೆ ನಡೆದೀತೆ? ರಾಷ್ಟ್ರದಾದ್ಯಂತ ನಡೆಯುತ್ತಿರುವ ಹಿಂಸಾಚಾರ, ಅತ್ಯಾಚಾರ, ಭ್ರಷ್ಟಾಚಾರ, ಕೊಲೆ ಸುಲಿಗೆ ದರೋಡೆ ಮುಷ್ಕರಗಳ ಮುಳ್ಳುಸರಪಳಿಗಳ ಜಾಲವನ್ನು ನೋಡಿದರೆ, ಈ ದೇಶದಲ್ಲಿ ಒಂದು ಸರ್ಕಾರವಿದೆಯೆನ್ನಿಸುತ್ತದೆಯೆ?

ಕೊಕ್ಕರೆಯ ಜಾತಿಗೆ ಸೇರಿದ ಪೆಲಿಕನ್ ಎಂಬ ಹೆಸರಿನ ಒಂದು ಬಗೆಯ ಪಕ್ಷಿಗಳಿವೆ. ಕೊಕ್ಕರೆಯಂತೆ ಅವುಗಳ ಕತ್ತು ಕೊಕ್ಕುಗಳು ನೀಳವಾಗಿರುತ್ತವೆ. ಕೊಕ್ಕಿನ ಕೆಳಗಡೆ ಬೆಸ್ತರ ಬಲೆಯಂತಿರುವ ಒಂದು ದೊಡ್ಡ ಚೀಲವಿರುತ್ತದೆ. ಮೀನುಗಳೇ ಈ ಪಕ್ಷಿಗಳ ಮುಖ್ಯ ಆಹಾರ. ಮೀನುಗಳಿರುವ ಜಾಗದಲ್ಲಿ ಸರಕ್ಕನೆ ಕೊಕ್ಕನ್ನು ನೀರಲ್ಲಿ ಮುಳುಗಿಸಿ ಆ ಚೀಲದಲ್ಲಿ ಮೀನುಗಳನ್ನು ಹಿಡಿದುಬಿಡುತ್ತವೆ. ಇದೊಂದು ಪ್ರಕೃತಿಸಿದ್ಧವಾದ ವೈಚಿತ್ರ್ಯ.

ಪೆಲಿಕನ್ ಪಕ್ಷಿಗಳಂತೆ ರಾಜಕೀಯ ಧೂರ್ತರ ಕೊರಳಲ್ಲಿ ಒಂದು ಚೀಲ ಇದ್ದೇ ಇರುತ್ತದೆ. ಅದು ಹರಿದಾಗ ಹೊಸಚೀಲವನ್ನು ಹೆಣೆದುಕೊಳ್ಳುತ್ತಾರೆ. ಪ್ರಜೆಗಳಿಗೆ ನಾವು ಮಾಡಬೇಕಾದ ಹೊಸ ಉಪಕಾರ ಯಾವುದು? ಈ ಸಲ ಚುನಾವಣಾ ಪ್ರಣಾಳಿಕೆಯನ್ನು ಯಾವ ರೀತಿ ತಯಾರಿಸೋಣ? - ಎಂದು ಹಗಲಿರುಳೂ ಚಿಂತಿಸುತ್ತ ‘ಗುಣಸಂಗ್ರಹ’ ಮಾಡುತ್ತಾರೆ. ಸಾಕಷ್ಟು ಸಂಗ್ರಹವಾದ ಮೇಲೆ ಜಾಲವನ್ನು ಹೆಣೆದು ಕೊರಳಿಗೆ ತೂಗುಹಾಕಿ ಮೀನುಗಳ ಬೇಟೆಗೆ ಸಜ್ಜಾಗುತ್ತಾರೆ.

**ದೈವಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಂ ।**
**ಸಮುದ್ರಮಥನಾಲ್ಲೇಭೇ ಹರಿರ್ಲಕ್ಷ್ಮೀಂ ಹರೋ ವಿಷಮ್ ॥೩೭॥**

— *ಸಮಯೋಚಿತಪದ್ಯ-ರತ್ನಮಾಲಿಕಾ*

"ಎಲ್ಲ ಸಂದರ್ಭಗಳಲ್ಲಿಯೂ ದೈವವು ಫಲವನ್ನು ನೀಡುತ್ತದೆ. ವಿದ್ಯೆಯಾಗಲಿ, ಪುರುಷಪ್ರಯತ್ನವಾಗಲಿ (ದೈವವನ್ನು ಮೀರಿ) ಫಲವನ್ನು ನೀಡಲಾರದು. ಹೇಗೆಂದರೆ, ಸಮುದ್ರಮಥನದಿಂದ ಹರಿಗೆ ಲಕ್ಷ್ಮಿ ದೊರಕಿದರೆ, ಹರನಿಗೆ ವಿಷವು ದೊರಕಿತು."

ದೇವಾಸುರರು ಸಮುದ್ರಮಥನಕ್ಕಾಗಿ ಕ್ಷೀರಸಮುದ್ರವನ್ನು ಕಡೆದರಂತೆ. ಮಂದರಪರ್ವತವು ಕಡೆಗೋಲಾಯಿತು. ವಾಸುಕಿಸರ್ಪವು ಹಗ್ಗವಾಯಿತು. ಘರ್ಷಣೆಯನ್ನು ತಡೆಯಲಾರದೆ ವಾಸುಕಿಯು ಹಾಲಾಹಲ ವಿಷವನ್ನು ಕಕ್ಕಿದ. ವಿಷದ ಉಗ್ರತೆಯನ್ನು ತಡೆಯಲು ಅವರಾರಿಗೂ ಸಾಧ್ಯವಾಗಲಿಲ್ಲ. ಈಶ್ವರನು ಬಂದು ಆ ವಿಷವನ್ನು ಕುಡಿದು ಜನರ ಭಯವನ್ನು ದೂರಮಾಡಿದ. ಮತ್ತೆ ಸಮುದ್ರಮಥನ ಮುಂದುವರಿಯಿತು. ಲಕ್ಷ್ಮೀದೇವಿಯು ಆವಿರ್ಭವಿಸಿದಳು, ಅವಳು ವಿಷ್ಣುವಿಗೆ ಸ್ವಯಂವರಮಾಲಿಕೆಯನ್ನು ಹಾಕಿ ಅವನನ್ನು ಮದುವೆಯಾದಳು - ಎಂದು ಪೌರಾಣಿಕ ಕಥೆ ಇದೆ.

ಅಲ್ಲದೆ ಸಮುದ್ರಮಥನಕ್ಕಾಗಿ ದೇವತೆಗಳೂ ಅಸುರರೂ ಸಮಾನವಾಗಿ ಶ್ರಮಿಸಿದ್ದಾರೆ. ಉಭಯರ ಪೌರುಷವು ಸಮನಾದರೂ ಫಲವು ಮಾತ್ರ ವಿಪರೀತ ವಾಯಿತು. ಸಮುದ್ರದಲ್ಲಿ ಹುಟ್ಟಿದ ಐರಾವತ ಮುಂತಾದ ಶ್ರೇಷ್ಠವಸ್ತುಗಳು ದೇವೇಂದ್ರನ ಪಾಲಾದವು. ಅಮೃತವು ದೇವತೆಗಳಿಗೆ ಮಾತ್ರ ದೊರಕಿತು. ಅಸುರರಿಗೆ ಏನೂ ಸಿಗಲಿಲ್ಲ. ಇದಕ್ಕೆ ನಿಮಿತ್ತವೇನು? 'ದೈವ' ಎಂದು ಉತ್ತರಿಸದೆ ಬೇರೆ ಗತಿ ಇಲ್ಲ.

ಭಾರತೀಯರ ದೃಷ್ಟಿಯಲ್ಲಿ ದೈವ-ಪೌರುಷಗಳೆರಡೂ ಕಾರ್ಯಸಿದ್ಧಿಗೆ ಆವಶ್ಯಕವಾದವು. ಆದ್ದರಿಂದಲೇ ನೀತಿಶಾಸ್ತ್ರಕಾರರು ಕೆಲವೆಡೆ ದೈವವನ್ನೂ ಕೆಲವೆಡೆ ಪೌರುಷವನ್ನೂ ವಿಶೇಷವಾಗಿ ಕೊಂಡಾಡಿದ್ದಾರೆ. "ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ" - "ದೈವವನ್ನು ಮೂಲೆಗೆ ತಳ್ಳಿ ನಿನ್ನ ಬುದ್ಧಿಶಕ್ತಿಯಿಂದ ಪೌರುಷವನ್ನು ಮೆರೆಸು" - ಇತ್ಯಾದಿ ಹಿತೋಪದೇಶಗಳು ವಿಪುಲವಾಗಿವೆ. ಇಲ್ಲಿ ವಿರೋಧವೇನೂ ಇಲ್ಲ. ದೈವವೆಂದರೆ ಜನ್ಮಾಂತರದ ಪೌರುಷವೇ ಹೊರತು ಬೇರೆಯಲ್ಲ. ದೈವವೆಂಬ ಯಾವುದೋ ದೇವತೆ ಫಲವನ್ನು ನೀಡುತ್ತ ಆಕಾಶದಲ್ಲಿ ಕುಳಿತಿರುವುದಿಲ್ಲ. "ಪೂರ್ವಜನ್ಮಕೃತಂ ಕರ್ಮ ತದ್ದೈವಮಿತಿ ಕಥ್ಯತೇ" ಎಂದು ಯೋಗವಾಸಿಷ್ಠದಲ್ಲಿದೆ. ನಾವು ಮಾಡಿದ ತಪ್ಪನ್ನು ನಾವೇ ತಿದ್ದಿಕೊಳ್ಳುವುದರಲ್ಲಿ ತಪ್ಪೇನೂ ಇಲ್ಲ. ಅದು ಅಸಂಭವವೂ ಅಲ್ಲ, ಅಶಕ್ಯವೂ ಅಲ್ಲ.

ಅದಿರಲಿ; ಆದರೆ ಒಬ್ಬನು ಮಾಡಿದ ಕರ್ಮದ ಫಲವನ್ನು ಇನ್ನೊಬ್ಬನು ಅನುಭವಿಸುವುದು ಹೇಗೆ? "ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಃ" ಎಂಬ ಗಾದೆಯೇ ಇದೆಯಲ್ಲ? ರಾವಣನು ಮಾಡಿದ ಕರ್ಮಕ್ಕೆ ಫಲವಾಗಿ ಲಂಕೆಯ ರಾಕ್ಷಸರು ಹತರಾದರು. ಹಿಟ್ಲರನ ಕರ್ಮದಿಂದ ಯೆಹೂದಿಗಳು ನರಳಿದರು. ಇಂತಹ ಸಂದರ್ಭದಲ್ಲಿ ಒಂದು ಪ್ರತ್ಯಕ್ಷವಾದ ಕರ್ಮ ಪೌರುಷವೆಂದೂ, ಇನ್ನೊಂದು ಪರೋಕ್ಷವಾದ ಕರ್ಮ ದೈವವೆಂದೂ ಹೇಳಲೇಬೇಕು. ಹಿಟ್ಲರನ ಕರ್ಮ ಪ್ರತ್ಯಕ್ಷ; ಯೆಹೂದಿಗಳ ಕರ್ಮ ಪರೋಕ್ಷ.

ಇಂತಹ ವೈಚಿತ್ರ್ಯಗಳು ಲೋಕದಲ್ಲಿ ನಡೆಯುತ್ತಲೇ ಇವೆ. ಭಾರತದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ರಾಜಕೀಯ ಹೋರಾಟದಲ್ಲಿ ಭಾಗವಹಿಸಿ ದಂಡನೆಗಳನ್ನು ಅನುಭವಿಸಿದವರು ಯಾರು? ಎಷ್ಟು ಮಂದಿ? ಸ್ವಾತಂತ್ರ್ಯದ ಫಲವನ್ನುಂಡು ವೈಭವದಿಂದ ಮೆರೆಯತಕ್ಕವರು ಯಾರು? ಎಷ್ಟು ಮಂದಿ? ಸ್ವಾತಂತ್ರ್ಯಸುಖ ಹೇಗಿದೆಯೆಂದು ನರಕೋಪಮ ಜೀವನವನ್ನು ನಡೆಸುತ್ತಿರುವ ಕಾಶ್ಮೀರಿಗಳನ್ನು ಕೇಳಬೇಕು! ಗೂಳಿಗಳಂತೆ ಗುಟರು ಹಾಕುವ ಪಾಕಿಗಳನ್ನು ಕುರಿತು "ಸ್ವಾತಂತ್ರ್ಯಕ್ಕಾಗಿ ನೀವು ಪಟ್ಟ ಶ್ರಮವೇನು?" ಎಂದು ಕೇಳಬೇಕು.

**ದಾತೃತ್ವಮುಚಿತಜ್ಞತ್ವಂ ಪ್ರಿಯವಕ್ತೃತ್ವಂ ಚ ಧೀರತಾ ।**
**ಅಭ್ಯಾಸೇನ ನ ಲಭ್ಯಂತೇ ಚತ್ವಾರಃ ಸಹಜಾ ಗುಣಾಃ ॥೩೮॥**

— *ಸುಭಾಷಿತರತ್ನ-ಭಾಂಡಾಗಾರ*

"ಉದಾರವಾಗಿ ದಾನಮಾಡುವ ಗುಣ, ಔಚಿತ್ಯವನ್ನರಿತು ವರ್ತಿಸುವುದು, ಪ್ರಿಯವಾದ ಮಾತನ್ನಾಡುವುದು ಮತ್ತು ಧೈರ್ಯ - ಇವು ಮನುಷ್ಯನಲ್ಲಿ ಸಹಜವಾಗಿ ಬರತಕ್ಕ ನಾಲ್ಕು ಗುಣಗಳು. ಅಭ್ಯಾಸದಿಂದ ಬರತಕ್ಕವುಗಳಲ್ಲ."

ಪಾತ್ರವನ್ನರಿತು ದಾನಮಾಡುವುದೊಂದು ದೊಡ್ಡ ಗುಣ. ಕೊಟ್ಟ ಹಣ ಸದ್ವಿನಿಯೋಗವಾಗಬೇಕು. ವಿದ್ಯಾರ್ಥಿನಿಲಯ, ಆಸ್ಪತ್ರೆ ನಿರ್ಮಾಣ, ರೋಗಿಗೆ ಚಿಕಿತ್ಸೆ, ಅನಾಥಾಲಯ, ಹೊಟ್ಟೆಗಿಲ್ಲದವನಿಗೆ ಅನ್ನ, ಬಟ್ಟೆಯಿಲ್ಲದವನಿಗೆ ಬಟ್ಟೆ - ಇಂತಹವುಗಳಿಗೆ ಕೊಡತಕ್ಕದ್ದು ಸದ್ವಿನಿಯೋಗವೆನಿಸುತ್ತದೆ. ಎಷ್ಟು ಕೊಡಬೇಕೆಂಬುದು

ಮುಖ್ಯವಲ್ಲ; ದಾತೃವಿನ ಮನೋಭಾವ ಮುಖ್ಯವಾದದ್ದು. ಮನುಷ್ಯನು ತನ್ನ ಆದಾಯದಲ್ಲಿ ಹತ್ತನೆಯ ಒಂದು ಭಾಗವನ್ನು ದಾನಕಾರ್ಯಕ್ಕೆ ಬಳಸಬೇಕೆಂದು ಧರ್ಮಶಾಸ್ತ್ರದ ಉಪದೇಶವಿದೆ. ಪ್ರತಿಫಲಾಪೇಕ್ಷೆ ಇಲ್ಲದೆ ಕೊಡತಕ್ಕದ್ದು ದಾನ. ಒಂದಾನೊಂದು ಫಲದ ಅಪೇಕ್ಷೆಯಿಂದಲೋ ಕೀರ್ತಿಕಾಮನೆಯಿಂದಲೋ ಕೊಡುವುದು ದಾನವಲ್ಲ; ಅದು ದುರ್ದಾನ. ರಾಜಕೀಯವಾದ ಸಾರ್ವತ್ರಿಕ ಚುನಾವಣೆಗಳಿಗೆ ಲಕ್ಷಗಟ್ಟಲೆ ಹಣ ಕೊಡತಕ್ಕವರು ಭಿಕ್ಷುಕರಿಗೆ ಒಂದು ಪೈಸೆಯನ್ನೂ ನೀಡುವುದಿಲ್ಲ. ಚುನಾವಣೆಗಾಗಿ ನೀಡುವುದು ವ್ಯಾಪಾರಿ ಮನೋಭಾವದಿಂದ. ಅವರು ನೀಡುವ ಹಣ ಜೂಜುಕಟ್ಟೆಗೆ ಹಾಕಿದ ಹಣವಿದ್ದಂತೆ.

ಔಚಿತ್ಯವೆಂದರೇನು? ಇದಕ್ಕೆ ಇದು ಉಚಿತ ಎಂದು ಸರಿಗಾಣುವ ನಡತೆ, ಹೊಂದಾಣಿಕೆ ಎನ್ನಬಹುದು. ಔಚಿತ್ಯವನ್ನರಿಯುವುದೂ ಒಂದು ಕೌಶಲ. ಏಕೆಂದರೆ ಯಾವುದು ಯಾವಾಗ ಉಚಿತವೆನ್ನುವುದು ವ್ಯವಸ್ಥಿತವಾಗಿಲ್ಲ. ಗಟ್ಟಿಯಾಗಿ ಮಾತನಾಡುವುದು, ಎದ್ದುನಿಲ್ಲುವುದು, ನಗುವುದು, ಉಪಚರಿಸುವುದು - ಇವು ಸಂದರ್ಭಾನುಸಾರ ಒಂದುಸಲ ಉಚಿತವಾಗಿದ್ದು ಮತ್ತೊಂದು ಸಂದರ್ಭದಲ್ಲಿ ಅನುಚಿತವಾಗಬಹುದು.

ಶ್ರೀರಾಮನಲ್ಲಿದ್ದ ಸದ್ಗುಣಗಳಲ್ಲಿ ಪ್ರಿಯವಾಗಿ ಮಾತನಾಡುವುದೂ ಒಂದಾಗಿತ್ತೆಂದು ವಾಲ್ಮೀಕಿಮುನಿಗಳು ವರ್ಣಿಸುತ್ತಾರೆ. ಅವನು ಯಾವಾಗಲೂ 'ಪ್ರಿಯಂವದ'. ಇನ್ನೊಬ್ಬರ ವರ್ತನೆಯಿಂದ ನಮಗೆ ಅಸಮಾಧಾನವಾದರೂ, ಕೋಪ ಬಂದರೂ ಅದನ್ನು ಕೆಟ್ಟಮಾತಿನಿಂದ ಸೂಚಿಸಬೇಕಾಗಿಲ್ಲ. ಸೌಮ್ಯವಾಗಿ ತಿಳಿಸಲು ಬರುತ್ತದೆ. ಧ್ವನಿಯನ್ನೆತ್ತರಿಸದೆ ಮೃದುವಾಗಿಯೇ ಕೋಪದ ಮಾತನ್ನಾಡಲು ಸಾಧ್ಯ. ಆಗ ಅಪ್ರಿಯವಾದ ಮಾತು ತನ್ನ ರೂಕ್ಷತೆಯನ್ನು ಕಳೆದುಕೊಂಡು ಮೆದುವಾಗಿಬಿಡುತ್ತದೆ. ಇದೂ ಒಂದು ಬಗೆಯ 'ಪ್ರಿಯಂವದತೆ'.

ನಾಲ್ಕನೆಯ ಗುಣ ಧೈರ್ಯ. ಧೈರ್ಯವೆಂದರೆ ಶತ್ರುಗಳೆದುರಿಗೆ ನುಗ್ಗಿಹೋಗುವ ಸೈನಿಕನ ಸಾಹಸವಲ್ಲ. ಕಾಡಿನಲ್ಲಿಯೋ ಕತ್ತಲೆಯಲ್ಲಿಯೋ ಒಂಟಿಯಾಗಿ ತಿರುಗಬಲ್ಲವನ ನಿರ್ಭಯತೆಯೂ ಅಲ್ಲ. ಹರ್ಷ, ಶೋಕ, ಭಯಗಳ ಪ್ರಸಂಗದಲ್ಲಿ ಹಿಗ್ಗದೆ, ಕುಗ್ಗದೆ, ಹಿಂಜರಿಯದೆ ಸಮತೋಲನವನ್ನು ಕಾಯ್ದುಕೊಳ್ಳುವ ಮನಃಸ್ಥಿತಿಯೇ ಧೈರ್ಯ. ಶ್ರೀರಾಮನು ತನಗೆ ಪಟ್ಟಾಭಿಷೇಕವಾಗುವುದೆಂದು ತಿಳಿದಾಗಲೂ ವನವಾಸಕ್ಕೆ

ಹೊರಟಾಗಲೂ ಒಂದೇ ರೀತಿ ಕಾಣಿಸಿದನೆಂದೂ ಅವನ ಮುಖದಲ್ಲಿ ಯಾವ ಬದಲಾವಣೆಯೂ ಇರಲಿಲ್ಲವೆಂದೂ ಕಾಳಿದಾಸನು ವರ್ಣಿಸಿದ್ದಾನೆ. ಲೋಕಮಾನ್ಯ ತಿಲಕರು ತಮ್ಮ ಪುತ್ರನ ಮರಣವಾರ್ತೆಯನ್ನರಿತು ಮಾಂಡಲೆ ಜೈಲಿನಿಂದ ಪುಣೆಗೆ ಬರುವಾಗ, ರಾತ್ರಿ ರೈಲಿನಲ್ಲಿ ನಿಶ್ಚಿಂತೆಯಿಂದ ನಿದ್ರಿಸಿದರಂತೆ. ಅದು ಧೀರತೆ.

ಈ ಗುಣಗಳು ಪುಸ್ತಕಗಳಿಂದ ಬರತಕ್ಕವುಗಳಲ್ಲ. ಇನ್ನೊಬ್ಬರನ್ನು ನೋಡಿ ಕಲಿಯಬಹುದಾದವುಗಳೂ ಅಲ್ಲ. ಸಹಜವಾಗಿ ಚಿತ್ತವೃತ್ತಿಯಲ್ಲಿ ಬೀಜರೂಪ ದಲ್ಲಾದರೂ ಇದ್ದರೆ, ಗ್ರಂಥಗಳನ್ನೋದಿದಾಗ ಚಿಗುರಬಲ್ಲವು.

**ಯಾವದ್ ಭ್ರಿಯೇತ ಜಠರಂ ತಾವತ್ ಸ್ವತ್ವಂ ಹಿ ದೇಹಿನಾಂ ।**
**ಅಧಿಕಂ ಯೋಽಭಿಮನ್ಯೇತ ಸ ಸ್ತೇನೋ ದಂಡಮರ್ಹತಿ ॥೩೯॥**

— *ಭಾಗವತ, ೭-೧೪-೮*

"ಉದರಪೋಷಣೆಗೆ ಎಷ್ಟು ಆವಶ್ಯಕವೋ ಅಷ್ಟು ಮಾತ್ರ ಮಾನವನ ಸ್ವತ್ತಾಗಿರುತ್ತದೆ. ಯಾರು ಅದಕ್ಕಿಂತ ಹೆಚ್ಚು ಬೇಕೆಂದು ಆಸೆಪಡುತ್ತಾನೋ ಅವನು ಕಳ್ಳ; ಅವನಿಗೆ ದಂಡನೆಯನ್ನು ವಿಧಿಸಬೇಕು."

ಪ್ರತಿಯೊಬ್ಬ ಮಾನವನಿಗೂ ಈ ಪ್ರಪಂಚದಲ್ಲಿ ಬದುಕಿರಲು ಅಧಿಕಾರವಿದೆ. ನೆಲ, ನೀರು, ಬೆಂಕಿ, ಗಾಳಿ - ಇವನ್ನು ಮನುಷ್ಯನೇನೂ ಸೃಷ್ಟಿಸಿಲ್ಲ. ಇವನ್ನು ಯೋಗ್ಯರೀತಿಯಿಂದ ಬಳಸಿಕೊಂಡು ಬದುಕಲೆಂಬುದೇ ದೈವಸಂಕಲ್ಪವಾಗಿರುತ್ತದೆ. ಮನುಷ್ಯನು ತನಗೆ ಬೇಕಾದ್ದಕ್ಕಿಂತ ಹೆಚ್ಚನ್ನು ಬಯಸುವುದೂ ಅದನ್ನು ದಕ್ಕಿಸಿಕೊಳ್ಳುವುದಕ್ಕಾಗಿ ನಾನಾ ಬಗೆಯಿಂದ ಯತ್ನಿಸುವುದೂ ಇಂದು ಎಲ್ಲೆಲ್ಲಿಯೂ ನಡೆದಿದೆ. ಅತ್ಯಾಸೆಯಿಂದ ಚೋದಿತವಾದ ಈ ಪ್ರವೃತ್ತಿಯಿಂದ ಒಂದುಕಡೆ ಸಿರಿತನವೂ ಇನ್ನೊಂದುಕಡೆ ಬಡತನವೂ ಬೆಳೆಯುತ್ತಹೋಗಿವೆ. ತನಗೆ ಬೇಕಾದ್ದಕ್ಕಿಂತ ಹೆಚ್ಚಾಗಿ ಕೂಡಿಹಾಕುವ ಪ್ರವೃತ್ತಿಯು ಮನುಷ್ಯನ ವಿನಾ ಇನ್ನಾವ ಪ್ರಾಣಿವರ್ಗದಲ್ಲಾಗಲಿ ಸಸ್ಯವರ್ಗದಲ್ಲಾಗಲಿ ಇಲ್ಲ. ಆಪತ್ಕಾಲಕ್ಕಾಗಿ ಮನುಷ್ಯನು ಕೂಡಿಡುವುದು ಹಿತಕರ ವಾದರೂ, ಅದಕ್ಕೆ ಮಿತಿ ಇರಬೇಕು. ಹತ್ತಾರು ತಲೆಮಾರಿನವರು ಬಳಸಿದರೂ ಉಳಿದುಹೋಗುವಷ್ಟು ಆಸ್ತಿಯ ಸಂಗ್ರಹಣೆ ಕಳ್ಳತನವಲ್ಲದೆ ಇನ್ನೇನು?

ಪರಕೀಯವಸ್ತುವನ್ನು ಅಕ್ರಮವಾಗಿ ತನ್ನ ವಶಕ್ಕೆ ತೆಗೆದುಕೊಳ್ಳುವುದು ಕಳ್ಳತನ. ತನ್ನ ಆವಶ್ಯಕತೆಗಿಂತ ಅಧಿಕವಾದದ್ದು ಪರಕೀಯವೆಂದೂ, ಅದನ್ನು ಬಯಸುವುದು ಸಹ ಕಳ್ಳತನವಾದ್ದರಿಂದ ದಂಡಾರ್ಹ ಅಪರಾಧವೆಂದೂ ಹಿಂದೂಧರ್ಮ ಹೇಳುತ್ತದೆ. ದುರಾಸೆಯನ್ನು ಅದುಮುವುದಕ್ಕಾಗಿ, ಬಡವರ ಕಲ್ಯಾಣಕ್ಕಾಗಿ ಇಂತಹ ನಿಷ್ಠುರವೂ ಉದಾರವೂ ಆದ ಹಿತವಚನವನ್ನು ಹಿಂದೂಧರ್ಮದ ಹೊರತಾಗಿ ಬೇರಾವ ಧರ್ಮವೂ ಬೋಧಿಸಿದಂತಿಲ್ಲ.

ಇದು ವೈಯಕ್ತಿಕವಾದ ಧಾರ್ಮಿಕ ಬೋಧೆಯಲ್ಲ. ಕಳ್ಳನಿಗೆ ದಂಡನೆಯನ್ನು ವಿಧಿಸಬೇಕಾದದ್ದು ರಾಜಧರ್ಮ. ಈಗ ರಾಜನ ಸ್ಥಾನವನ್ನು ಆಕ್ರಮಿಸಿರುವ ಸರ್ಕಾರ ಆ ಕರ್ತವ್ಯವನ್ನು ಪಾಲಿಸಬೇಕಾಗಿದೆ. ತಮ್ಮನ್ನು ಸರ್ಕಾರವೆಂದುಕೊಳ್ಳುವ ಸಚಿವರು, ಸಚಿವರನ್ನು ಬೆಂಬಲಿಸುವ ಶಾಸಕರು, ಶಾಸಕರನ್ನು ಹುರಿದುಂಬಿಸುವ ಉದ್ಯಮಪತಿಗಳು - ಎಲ್ಲರೂ ಐಶ್ವರ್ಯದ ಕಿಂಕರರಾಗಿರುವಾಗ ಈ ರಾಜಧರ್ಮ ಜಾರಿಗೆ ಬಂದೀತೆ? ಮೀನುಗಾರರು ಸಮುದ್ರದಲ್ಲಿ ಬಲೆಗಳನ್ನು ಚೆಲ್ಲಿ ಮೀನುಗಳ ರಾಶಿಯನ್ನು ಸೆಳೆದುಕೊಳ್ಳುವಂತೆ, ಈ ದುರಾಶಾಗ್ರಸ್ತರು ವಿವಿಧ ರೀತಿಯ ವಂಚನಾ ಜಾಲಗಳಿಂದ ಕೋಟಿಗಟ್ಟಲೆ ರೂಪಾಯಿಗಳನ್ನು ಸೆಳೆಸೆಳೆದು ತುಂಬಿಕೊಳ್ಳುತ್ತಿದ್ದಾರೆ. ನೀತಿಯನ್ನು ಯಾರು ಹೇಳಬೇಕು? ಯಾರು ಯಾರನ್ನು ದಂಡಿಸಬೇಕು?

ಭರ್ತೃಹರಿಯು ತನ್ನ ನೀತಿಶತಕದ ಆರಂಭದಲ್ಲಿಯೇ ನೀತಿಧರ್ಮಗಳ ಗತಿಯನ್ನು ಹೇಳಿಬಿಟ್ಟಿದ್ದಾನೆ :

> **ಬೋದ್ಧಾರೋ ಮತ್ಸರಗ್ರಸ್ತಾಃ ಪ್ರಭವಃ ಸ್ಮಯದೂಷಿತಾಃ ।**
> **ಅಬೋಧೋಪಹತಾಶ್ಚಾನ್ಯೇ ಜೀರ್ಣಮಂಗೇ ಸುಭಾಷಿತಮ್ ॥**

"ಬಲ್ಲವರು ಹೊಟ್ಟೆಕಿಚ್ಚಿನಿಂದ ನೀತಿಶಾಸ್ತ್ರಕಾರನನ್ನೇ ದೂರುತ್ತಾರೆ. ಪ್ರಭುಗಳು ದುರಹಂಕಾರದಿಂದ ಬೀಗುತ್ತಾರೆ. ಉಳಿದವರು ಅಜ್ಞಾನದಲ್ಲಿ ಮುಳುಗಿದ್ದಾರೆ. ಆದ್ದರಿಂದ ಸುಭಾಷಿತವು ನಮ್ಮ ದೇಹದೊಳಗಡೆಯೇ ಜೀರ್ಣವಾಗಿಹೋಯಿತು."

**ತಾಸ್ತು ವಾಚಃ ಸಭಾಯೋಗ್ಯಾ ಯಾಶ್ಚಿತ್ತಾಕರ್ಷಣಕ್ಷಮಾಃ ।**
**ಸ್ವೇಷಾಂ ಪರೇಷಾಂ ವಿದುಷಾಂ ದ್ವಿಷಾಮವಿದುಷಾಮಪಿ ॥೪೦॥**

"ಯಾವ ಮಾತುಗಳು ತನ್ನವರಿಗೂ ಪರರಿಗೂ ವಿದ್ವಾಂಸರಿಗೂ ವೈರಿಗಳಿಗೂ ವಿದ್ಯಾಹೀನರಿಗೂ ಸಹ ಚಿತ್ತಾಕರ್ಷಣೆಯನ್ನುಂಟು ಮಾಡಬಲ್ಲವೋ ಅಂತಹ ಮಾತುಗಳು ಸಭೆಯಲ್ಲಿ ಹೇಳಲು ಯೋಗ್ಯವಾದವು."

"ವಾಗ್ಭೂಷಣಂ ಭೂಷಣಂ" ಎಂಬಂತೆ, ಮಾತು ಮನುಷ್ಯನಿಗೆ ಒಂದು ಅಪೂರ್ವ ಶೋಭೆಯನ್ನು ತಂದುಕೊಡುವ ಶಕ್ತಿಯುಳ್ಳದ್ದು. 'ಮಾತು ಮಾಣಿಕ್ಯ', 'ಮಾತನಾಡಿದರೆ ಮುತ್ತು ಸುರಿದಂತಿರಬೇಕು', 'ಮಾತು ಬಲ್ಲವನಿಗೆ ಜಗಳವಿಲ್ಲ', 'ಮಾತನಾಡಿದರೆ ಹೋಯಿತು - ಮುತ್ತು ಒಡೆದರೆ ಹೋಯಿತು' - ಎಂಬ ಗಾದೆಗಳು ಅನುಭವದ ನುಡಿಗಳು. ಮಾತಿನಿಂದ ಬರುವ ಶೋಭೆ ಅವನ ವಾಗ್ವೈಖರಿಯನ್ನವಲಂಬಿಸುತ್ತದೆ. ಕೆಲವು ಸಭೆಗಳಲ್ಲಿ ಹೆಚ್ಚಿನ ಕಾಂತಿಯನ್ನು ತರುತ್ತದೆ. ಶೋಭಾಕರವಾದ ಒಡವೆವಸ್ತ್ರಗಳನ್ನು ವಿಶೇಷ ಸಮಯಗಳಲ್ಲಿ ಜನರು ಧರಿಸುತ್ತಾರೆ. ಮಹಾಜನರು ಸೇರಿದ ಸಭೆಗೆ ಶುಚಿಯಾದ ಯೋಗ್ಯವಸ್ತ್ರವನ್ನುಟ್ಟು ಬರುವುದು ತನಗೂ ಭೂಷಣ, ಸಭೆಗೂ ಗೌರವ. ಕೊಳಕಾದ ಹರಕುಬಟ್ಟೆಯನ್ನುಟ್ಟುಬಂದರೆ, ಅದು ಸಭೆಗೆ ಅವಮಾನ ಮಾಡಿದಂತೆ. ಸಾಮಾನ್ಯಾಲಂಕಾರವೆನಿಸಿದ ವಸ್ತ್ರದ ವಿಷಯವೇ ಹೀಗಿದ್ದಾಗ, ಅಲಂಕಾರಗಳಲ್ಲಿ ಶ್ರೇಷ್ಠವಾದ ವಾಕ್ಕು ಹೇಗಿರಬೇಡ?

ಭಾಷಣಕಾರರು ಗಮನಿಸಬೇಕಾದ ಹಿತೋಪದೇಶ ಈ ಶ್ಲೋಕದಲ್ಲಿದೆ. ಸಾರ್ವಜನಿಕ ಸಭೆಗಳಲ್ಲಿಯೂ ಶಾಸನಸಭೆಗಳಲ್ಲಿಯೂ ಕೆಲವು ಭಾಷಣಕಾರರ ಬಾಯಿಂದ ಕಟುವಾದ ವಾಕ್ಯಗಳು ನಿರರ್ಗಳವಾಗಿ ಹೊರಬರುತ್ತವೆ. ವೈಯಕ್ತಿಕ ನಿಂದೆಗಳಿಗಂತೂ ಲೆಕ್ಕವಿಲ್ಲ. ಹೇಳಬೇಕಾದ್ದನ್ನು ನಯವಾದ ಮಾತಿನಿಂದ ತಿಳಿಸಲು ಬರುವುದಿಲ್ಲವೆ? ಕೊಳಕುಮಾತು ಹೊರಬಂದರೆ ತನ್ನ ನಾಲಗೆಯೇ ಕೊಳಕಾಯಿತೆಂದು ತಿಳಿಯಬೇಕು. ತನ್ನೆದುರಿಗೆ ಮಾನ್ಯರಾದ ಸಭಾಸದರಿದ್ದಾರೆಂದೂ ಕೆಟ್ಟಮಾತು ಹೊರಬಂದರೆ ಅವರಿಗೆ ಅವಮಾನ ಮಾಡಿದಂತೆಂದೂ ತಿಳಿಯಬೇಕು. ಕಠೋರ ನುಡಿಗಳು ಸಭಾಯೋಗ್ಯವಲ್ಲ.

ರಾಜಕೀಯದವರಂತೆ ಮತಾಂಧ ಭಾಷಣಕಾರರಿಂದಲೂ ನಿಂದಾವಾಕ್ಯಗಳು ಚಿಮ್ಮುತ್ತಿರುತ್ತವೆ. ತಮ್ಮ ಮತದ ಹೆಚ್ಚುಗಾರಿಕೆಯನ್ನು ಸ್ಥಾಪಿಸಲು ಅನ್ಯಮತದೂಷಣೆಯೇ ಅವರಿಗೆ ಅವಲಂಬನ. ಶುಭ್ರವಸ್ತ್ರವನ್ನು ಧರಿಸಿದವನು ಇನ್ನೊಬ್ಬರ ಬಟ್ಟೆಗೆ ಕೆಸರನ್ನು

ಎರಚಬೇಕಾದದ್ದಿಲ್ಲ. ಆತನ ಶುಭ್ರತೆ ಜನರಿಗೆ ತಿಳಿದರೆ ಸಾಕು. ಸಭಾಸದರಿಗೆ ಏನೂ ಗೊತ್ತಿಲ್ಲವೆಂದು ಭ್ರಮಿಸುವುದೇ ಉಪನ್ಯಾಸಕರಲ್ಲಿರುವ ದೋಷ. ಸಭಾಸದರೂ ಸಹ ಬಲ್ಲವರೂ ಊಹಾಪೋಹಕುಶಲರೂ ಆಗಿರುತ್ತಾರೆಂದು ಮನಸ್ಸಿಗೆ ತಂದುಕೊಳ್ಳದವನು ಭಾಷಣ ಬಿಗಿಯುವುದಕ್ಕೆ ಹೋಗದಿರುವುದು ಒಳಿತು. 'ಸ್ಮಾರಯೇ ನ ತು ಶಿಕ್ಷಯೇ' ಎಂಬ ಶ್ರೀಮದ್ರಾಮಾಯಣದ ಸೂಕ್ತಿ ಬಹು ಮೂಲ್ಯವುಳ್ಳದ್ದು. "ನಾನು ಕೇವಲ ಜ್ಞಾಪಿಸುತ್ತಿದ್ದೇನೆ, ಹೊಸದನ್ನು ಕಲಿಸುತ್ತಿಲ್ಲ" ಎಂಬ ನುಡಿ ಎಷ್ಟು ಅರ್ಥಪೂರ್ಣವಾದದ್ದು! ನಯವಿನಯಗಳ ಗಣಿ ಇದು. ಯಶಸ್ವಿಭಾಷಣಕಾರನು ಇದನ್ನು ಗಮನದಲ್ಲಿಟ್ಟುಕೊಂಡಿರುತ್ತಾನೆ.

**ನಿದ್ರಾಸ್ಥಾನಾನಿ ತು ತ್ರೀಣಿ ಪುರಾಣಂ ಪುಸ್ತಕಂ ಜಪಃ ।**
**ಅನಿದ್ರಾಯಾಃ ಪದಂ ತ್ರೀಣಿ ದ್ಯೂತಂ ಮದ್ಯಂ ಸ್ತ್ರಿಯಸ್ತಥಾ ॥೪೧॥**

— *ಅಜ್ಞಾತಮೂಲ*

"ನಿದ್ರೆ ಬರಲು ಅವಕಾಶಗಳು ಮೂರು : ಪುರಾಣ, ಪುಸ್ತಕ, ಜಪ.
ನಿದ್ರೆ ಬಾರದಿರಲು ಕಾರಣಗಳು ಮೂರು : ಜೂಜು, ಹೆಂಡ, ಸ್ತ್ರೀಯರು."

ಮನುಷ್ಯನಿಗೆ ನಿದ್ರೆ ಬರುವುದೇಕೆ? ತಮೋಗುಣದ ಏರಿಕೆಯಾದರೆ ನಿದ್ರೆ ಬರುವುದಂತೆ. ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳು ಎಲ್ಲರಲ್ಲಿಯೂ ಇರುತ್ತವೆ. ಅವು ಇರುವ ಪ್ರಮಾಣದಲ್ಲಿ ವ್ಯತ್ಯಾಸವಿರುತ್ತದೆ. ಕೆಲವರಲ್ಲಿ ಸತ್ತ್ವ, ಕೆಲವರಲ್ಲಿ ರಜಸ್ಸು, ಕೆಲವರಲ್ಲಿ ತಮಸ್ಸು ಅಧಿಕವಾಗಿರುತ್ತದೆ. ಸತ್ತ್ವವು ಹೆಚ್ಚಾಗಿದ್ದರೆ ಸತ್ಯ, ಅಹಿಂಸೆ, ದಯೆ, ಉಪಕಾರಬುದ್ಧಿ, ತಾಳ್ಮೆ ಮೊದಲಾದವು ಎದ್ದು ಕಾಣಿಸಿಕೊಳ್ಳುತ್ತವೆ. ರಜಸ್ಸು ಅಧಿಕವಾಗಿದ್ದರೆ ಕಾಮ, ಕ್ರೋಧ, ದ್ವೇಷ, ಉತ್ಸಾಹ, ಆಸೆ ಮೊದಲಾದವು ಹೆಚ್ಚಾಗುತ್ತವೆ. ಅಜ್ಞಾನ, ಪ್ರಮಾದ, ಆಲಸ್ಯ, ನಿರುತ್ಸಾಹ ಮುಂತಾದವು ತಮೋಗುಣದ ಲಕ್ಷಣ. ಪ್ರತಿದಿನವೂ ಇವುಗಳ ಏರಿಳಿತಗಳುಂಟು.

ಇವೆಲ್ಲವೂ ಮನಸ್ಸಿನ ವ್ಯಾಪಾರಕ್ರಿಯೆ. ಇವನ್ನು ಚಿತ್ತಪ್ರವೃತ್ತಿಗಳೆನ್ನುತ್ತಾರೆ. ಇವು ಉಸಿರಾಟದಂತೆ ಸದಾ ಇರತಕ್ಕವೇ. ನಿದ್ರೆಯಲ್ಲಿ ಹೇಗೆ? ಆಗಲೂ ಚಿತ್ತವ್ಯಾಪಾರವಿರುವುದೆಂದು ಯೋಗಸೂತ್ರ ಹೇಳುತ್ತದೆ : 'ಅಭಾವಪ್ರತ್ಯಯಾಲಂಬನಾ ವೃತ್ತಿರ್ನಿದ್ರಾ' (ಪತಂಜಲಿಯ ಯೋಗಸೂತ್ರ). ಇದರ ಅರ್ಥ ಹೀಗೆ : ಸಾಮಾನ್ಯಜ್ಞಾನದ

ಅಭಾವಕ್ಕೆ ಕಾರಣವಾಗಿ ತಮೋಗುಣವನ್ನವಲಂಬಿಸಿದ ಚಿತ್ತವೃತ್ತಿಯೇ ನಿದ್ರೆ. ನಿದ್ರೆಯಲ್ಲಿ ನಮಗೆ ಲೋಕದ ಸಾಮಾನ್ಯಜ್ಞಾನ ಯಾವುದೂ ಇರುವುದಿಲ್ಲ. ಇಲ್ಲವೆಂಬುದನ್ನೇ ಅವಲಂಬಿಸಿಕೊಂಡಿರುವ ಮನೋವ್ಯಾಪಾರ ಅದು. ಆದ್ದರಿಂದಲೇ ಎಚ್ಚರವಾದ ಮೇಲೆ 'ಸುಖವಾಗಿ ನಿದ್ರಿಸಿದೆ' ಎಂಬ ನೆನಪು ಬರುತ್ತದೆ. ಸುಖವನ್ನು ಚಿತ್ತವು ಗ್ರಹಿಸದೆ ಇದ್ದಿದ್ದರೆ ನೆನಪು ಬರುತ್ತಿರಲಿಲ್ಲ.

ಸತ್ತ್ವಗುಣ ದೇವತೆಗಳದು; ರಜೋಗುಣ ಮನುಷ್ಯರದು; ರಾಕ್ಷಸರದು ತಮೋಗುಣ. ಇವುಗಳಿಗೆ ಪರಸ್ಪರ ಕಾದಾಟ ನಡೆದೇ ಇರುತ್ತದೆ. ಒಂದಲ್ಲ ಒಂದು ಸಲ ಉಳಿದೆರಡು ಗುಣಗಳನ್ನು ಹಿಮ್ಮೆಟ್ಟಿಸಿ ಇವುಗಳಲ್ಲೊಂದು ಗುಣ ತನ್ನ ಧ್ವಜವನ್ನು ಹಾರಿಸುತ್ತದೆ. ಪುರಾಣಶ್ರವಣ, ಪುಸ್ತಕಪಠನ, ಜಪಕಾರ್ಯಗಳನ್ನು ಮಾಡುವಾಗ ದೇವತಾಗುಣವಾದ ಸತ್ತ್ವವು ಎದ್ದು ಕಾಣಿಸಿಕೊಳ್ಳುತ್ತದೆ. ಸ್ವಲ್ಪಹೊತ್ತಿಗೆ ತಮೋಗುಣವು ಅದರ ಮೇಲೆ ದಾಳಿ ಮಾಡುತ್ತದೆ. ದೇವತೆಗಳನ್ನು ಕಂಡ ಮೇಲೆ ರಾಕ್ಷಸರು ಸುಮ್ಮನಿರುತ್ತಾರೆಯೆ? ತೂಕಡಿಕೆ ಪ್ರಾರಂಭವಾಗುತ್ತದೆ; ರಾಮಾಯಣಶ್ರವಣವಾದ ಮೇಲೆ 'ಸೀತೆಗೂ ರಾಮನಿಗೂ ಯಾವ ಸಂಬಂಧ?' ಎಂದು ಕೇಳುತ್ತಾನೆ ; 'ಭಾರತದಲ್ಲಿ ಹನುಮಂತ ಏಕೆ ಬಂದ?' ಎಂದು ಚಿಂತಿಸುತ್ತಾನೆ ; ಓದುವ ಪುಸ್ತಕ, ಹಿಡಿದ ಜಪಸರ ಜಾರಿ ಬೀಳುತ್ತವೆ. ರಾತ್ರಿ ನಿದ್ರೆ ಬರದಿದ್ದರೆ ನಿದ್ರೆಗುಳಿಗೆ ತಿನ್ನುವುದಕ್ಕಿಂತ ಪಠ್ಯಪುಸ್ತಕವನ್ನೋದುವುದು ಮೇಲು.

ಹಿಂದಿನ ಕಾಲದಲ್ಲಿ ಪಗಡೆ ಜೂಜು ಪ್ರಸಿದ್ಧವಾಗಿತ್ತು. ಈಗ ಇಸ್ಪೀಟು ಬಂದಿದೆ. ಹಳ್ಳಿಗಳಲ್ಲಿ ಇಸ್ಪೀಟಾಟದ 'ಕಮಿಟಿ' ಸೇರುವುದುಂಟು. 'ಕಮಿಟಿ' ಸದಸ್ಯರಿಗೆ ಹಗಲು-ರಾತ್ರಿ ಒಂದೂ ಗೊತ್ತಾಗುವುದಿಲ್ಲ. ಊಟ, ಕಾಫಿ, ತಿಂಡಿ - ಯಾವುದಕ್ಕೂ ಹೊರಗೆ ಅಡಿ ಇಡುವುದಿಲ್ಲ. 'ಕಮಿಟಿ' ನಡೆಯುವ ಜಾಗಕ್ಕೇ ಅವೆಲ್ಲ ಬರುತ್ತವೆ. ಅವನ್ನು ಒದಗಿಸತಕ್ಕವರಿಗೆ ಹಣದ ಸುಗ್ಗಿ. ಒಂದು 'ಕಮಿಟಿ' ಕೆಲವು ಸಲ ನಾಲ್ಕೈದು ದಿನಗಳವರೆಗೆ ಹಗಲುರಾತ್ರಿ ನಿರಂತರ ನಡೆದು ಕಾರ್ಯಕಲಾಪಗಳನ್ನು ಮುಗಿಸುವುದುಂಟು. ಆಗ ರಜೋಗುಣವು ತಮೋಗುಣವನ್ನು ಹೊರಗೆ ದೂಡಿರುತ್ತದೆ. 'ಕಮಿಟಿ' ಮುಗಿದಮೇಲೆ ಮತ್ತೆ ನಿರಂತರ ತಮೋಗುಣದ ಆಡಳಿತ. ಇನ್ನು ಸುರಾಪಾನದ ಕ್ಲಬ್ಬುಗಳಿಗೆ, ವೇಶ್ಯಾವಾಟಿಕೆಗೆ ನಿದ್ರೆ ಪ್ರವೇಶಿಸುವುದುಂಟೆ? ಅಲ್ಲಿ ರಜೋಗುಣದ ಹಾವಳಿ.

**ದ್ವಾತ್ರಿಂಶದ್ದಶನದ್ವೇಷಿ-ಮಧ್ಯೇ ಭ್ರಮಸಿ ನಿತ್ಯಶಃ ।**
**ತದಿದಂ ಶಿಕ್ಷಿತಂ ಕೇನ ಜಿಹ್ವೇ ಸಂಚಾರಕೌಶಲಮ್ ॥೪೨॥**

— *ಸುಭಾಷಿತರತ್ನ-ಭಾಂಡಾಗಾರ*

"ಎಲೈ ನಾಲಿಗೆಯೆ, ನಿನ್ನನ್ನು ದ್ವೇಷಿಸುವ ಮೂವತ್ತೆರಡು ಹಲ್ಲುಗಳ ಮಧ್ಯದಲ್ಲಿ ಯಾವಾಗಲೂ ಸುಖವಾಗಿ ಸುತ್ತಾಡುತ್ತಲೇ ಇರುತ್ತೀಯೆ! ಹೀಗೆ ಸಂಚರಿಸಬಲ್ಲ ಜಾಣ್ಮೆಯನ್ನು ನೀನು ಯಾರಿಂದ ಕಲಿತೆ?"

ಮನುಷ್ಯನ ಬಾಯಲ್ಲಿ ಮೂವತ್ತೆರಡು ಹಲ್ಲುಗಳಿವೆ. ಮೇಲೆ ಹದಿನಾರು, ಕೆಳಗೆ ಹದಿನಾರು. 'ದಶನ' ಶಬ್ದಕ್ಕೆ ಜಗಿಯುವುದು, ಕಚ್ಚುವುದು ಎಂದೂ ಅರ್ಥವಿದೆ. ಕಚ್ಚುವ ಕೆಲಸ ಮಾಡುವುದರಿಂದ ಹಲ್ಲಿಗೆ ದಶನವೆಂಬ ಹೆಸರು ಬಂದಿದೆ. ಇವು ನಡುವೆ ಸಿಕ್ಕಿದ ನಾಲಿಗೆಯನ್ನು ಕಚ್ಚುವುದಕ್ಕೆ ಹವಣಿಸುತ್ತವೆಯಂತೆ. ಆದರೆ ನಾಲಿಗೆ ಅವುಗಳಿಗೆ ಸಿಕ್ಕದೆ ತಪ್ಪಿಸಿಕೊಳ್ಳುತ್ತಲೇ ಇರುತ್ತದೆ. ಹಲ್ಲುಸಾಲುಗಳ ನಡುವೆ ಇದ್ದರೂ ಅವುಗಳಿಗೆ ಅದು ಸಿಗುವುದಿಲ್ಲ. ನಾಲಿಗೆಯ ಕೌಶಲ ಎಷ್ಟಿರಬಹುದು!

ಇದು ನಾಲಿಗೆಯನ್ನು ಕುರಿತು ಹೇಳಿದ ಮಾತಲ್ಲವೆಂಬುದು ಸ್ಪಷ್ಟವಾಗಿದೆ. ಪೊಲೀಸರ ಕೈಗೆ ಸಿಗದೆ ತಪ್ಪಿಸಿಕೊಳ್ಳುವ ಖದೀಮರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ ಮಾತಿದು. ಈ ಬಗೆಯ ಶ್ಲೋಕಕ್ಕೆ 'ಅನ್ಯೋಕ್ತಿ' ಎಂದು ಹೆಸರು. ಅನ್ಯರನ್ನು ಉದ್ದೇಶಿಸಿ ಬೇರೆಯವರಿಗೆ ಹೇಳಿದ ಉಕ್ತಿ. ಸಂಸ್ಕೃತದಲ್ಲಿ ಇಂತಹ ಅನ್ಯೋಕ್ತಿಗಳು ವಿಪುಲವಾಗಿವೆ. ಅನ್ಯೋಕ್ತಿಯಿಂದ ಒಬ್ಬ ವ್ಯಕ್ತಿಯನ್ನು ಸ್ತುತಿಸಬಹುದು, ನಿಂದಿಸಲೂಬಹುದು.

ದಂತಚೋರ, ಕಾಡಿನರಾಜ, ಭೀಕರವ್ಯಕ್ತಿ - ಎಂದೆಲ್ಲ ಹೆಸರುಗಳನ್ನು ಪಡೆದ ವೀರಪ್ಪನ್ ಎಂಬ ವೀರನನ್ನು ದೃಷ್ಟಾಂತವಾಗಿ ತೆಗೆದುಕೊಳ್ಳಬಹುದು. ಇಪ್ಪತ್ತು ವರ್ಷಗಳಿಂದಲಾದರೂ ಈತನು ವಿಖ್ಯಾತನಾಗಿದ್ದಾನೆ. ಪೊಲೀಸರು ಅವನನ್ನು ಹಿಡಿಯಲು ಸತತವಾಗಿ ಯತ್ನಿಸುತ್ತಿದ್ದಾರೆ. ಕರ್ನಾಟಕ ಸರ್ಕಾರ, ತಮಿಳುನಾಡು ಸರ್ಕಾರಗಳ ಪೊಲೀಸರು ನಿರಂತರ ಶ್ರಮಿಸುತ್ತಿದ್ದಾರೆ. ಕೇಂದ್ರಸರ್ಕಾರದ ದಳಗಳವರೂ ಬಂದರು. ಸಾವಿರಾರು ಜನರಿಗೆ ಚಳ್ಳೆಹಣ್ಣು ತಿನ್ನಿಸುತ್ತ ಅರಣ್ಯದಲ್ಲಿಯೇ ಸುಳಿದಾಡುತ್ತಿದ್ದಾನಲ್ಲ, ಅವನ ಚಾತುರ್ಯ ಎಷ್ಟಿರಬಹುದು?

ಷೇರು ಹಗರಣ ನಡೆಯಿತು. ಏಳೆಂಟು ಸಾವಿರ ಕೋಟಿ ರೂಪಾಯಿಗಳು

ಸದ್ದುಮಾಡದೆ ಅಡಗಿದವು. ಈ ವ್ಯವಹಾರ ಅರಣ್ಯದಲ್ಲಿ ನಡೆಯಲಿಲ್ಲ. ನಗರದಲ್ಲಿಯೇ ನಡೆದದ್ದು; ಸರ್ಕಾರದ ಕಣ್ಣೆದುರಿಗೇ ಕಚೇರಿಗಳಲ್ಲಿ, ಬ್ಯಾಂಕುಗಳಲ್ಲಿ ಈಕ್ಷಕ, ವೀಕ್ಷಕ, ಅಧೀಕ್ಷಕ, ಮಹೇಕ್ಷಕರ ಸಂಮುಖದಲ್ಲೆ ನಡೆದದ್ದು! ನಡೆಸಿದವರು ವೀರಪ್ಪನ್ ವೀರನನ್ನು ಮೀರಿಸಿದ ಮಹಾವೀರರು. ಇಂತಹ ಹಗರಣಗಳಿಗೆ ಲೆಕ್ಕವಿಲ್ಲ. ಸಹಸ್ರಶೀರ್ಷನಾದ ಪುರುಷನಿಗೆ ಸಹಸ್ರನಾಲಗೆಗಳಾದರೂ ಇರಬೇಡವೆ? ಬಂದರುಗಳಲ್ಲಿ, ವಿಮಾನನಿಲ್ದಾಣಗಳಲ್ಲಿ, ಇತರ ಸಮುದ್ರತೀರಗಳಲ್ಲಿ ನಡೆಯುವ ಕಳ್ಳಸಾಗಾಣಿಕೆದಾರರ ಜಾಣ್ಮೆ ಹಲ್ಲುಗಳ ನಡುವೆ ಸುಳಿದಾಡುವ ನಾಲಿಗೆಯ ಚಾತುರ್ಯವನ್ನು ಮೀರಿಸುತ್ತದೆ.

ರುಚಿಯಾದ ಪದಾರ್ಥವನ್ನು ನಾಲಿಗೆ ತಿರುಗಿಸಿ ಹಲ್ಲಿಗೆ ನೀಡುತ್ತದೆ. ಹಲ್ಲು ಜಗಿದು ನಾಲಿಗೆಗೆ ನೀಡುತ್ತದೆ. ಆಮೇಲೆ ನಾಲಿಗೆ 'ಗುಳುಂ' ಮಾಡಿಬಿಡುತ್ತದೆ! ಒಂದೊಂದು ವೇಳೆ ಹಲ್ಲು ನಾಲಿಗೆಯನ್ನು ಮೃದುವಾಗಿ ಕಚ್ಚಿ ಗಾಯಪಡಿಸುವುದುಂಟು. ಆದರೆ ನಾಲಿಗೆ ಬಹುಬೇಗನೆ ಚೇತರಿಸಿಕೊಂಡುಬಿಡುತ್ತದೆ. ನಾಲಿಗೆಗೂ ಹಲ್ಲಿಗೂ ಬದ್ಧದ್ವೇಷ!

ನ ಹಿ ಧರ್ಮಾರ್ಥಸಿದ್ಧ್ಯರ್ಥಂ ಪಾನಮೇವ ಪ್ರಶಸ್ಯತೇ ।
ಪಾನಾದರ್ಥಶ್ಚ ಧರ್ಮಶ್ಚ ಕಾಮಶ್ಚ ಪರಿಹೀಯತೇ ॥೪೩॥

— *ರಾಮಾಯಣ, ಕಿಷ್ಕಿಂಧಾಕಾಂಡ, ೩೩-೪೬*

"ಮದ್ಯಪಾನ ಮಾಡುವುದು ಧರ್ಮಾರ್ಥಗಳ ಸಿದ್ಧಿಯನ್ನು ಪಡೆಯಲು ಯೋಗ್ಯವಾದ್ದಲ್ಲ. ಕುಡಿತದಿಂದ ಧರ್ಮಾರ್ಥಗಳೂ ಕಾಮವೆಂಬ ಪುರುಷಾರ್ಥವೂ ಕೂಡ ನಾಶವಾಗುತ್ತವೆ."

ಕುಡಿತದಿಂದ ಧರ್ಮಾರ್ಥಗಳು ಸಿದ್ಧಿಸದಿರುವುದು ಮಾತ್ರವಲ್ಲ , ಇರತಕ್ಕವುಗಳೂ ನಾಶವಾಗುತ್ತವೆ, ಭೋಗಶಕ್ತಿಯೂ ಕ್ಷಯಿಸುತ್ತದೆ - ಎಂದು ಅಭಿಪ್ರಾಯ. ಸುಗ್ರೀವನು ಮದ್ಯಪಾನ ಮಾಡುತ್ತ ಅಂತಃಪುರದಲ್ಲಿ ಮೈಮರೆತಿದ್ದಾನೆ. ತಾನು ಮಾತುಕೊಟ್ಟಂತೆ ಸೀತಾನ್ವೇಷಣೆಗೆ ಸಹಾಯ ಮಾಡಲು ಶ್ರೀರಾಮನ ಬಳಿಗೆ ಬರಲಿಲ್ಲ. ಅವನನ್ನು ಎಚ್ಚರಿಸುವುದಕ್ಕಾಗಿ ಲಕ್ಷ್ಮಣನು ಬರುತ್ತಾನೆ. ಅವನನ್ನು ಸಂತೈಸಲು ತಾರೆ ಬಂದಾಗ ಅವಳಿಗೆ ಲಕ್ಷ್ಮಣನು ಹೇಳುವ ಮಾತಿದು. ರಾಜ್ಯಪಾಲನೆಯಲ್ಲಿ ಅನಾಸಕ್ತಿ, ವಚನಭ್ರಷ್ಟತೆ,

ಉಪಕಾರಕ್ಕೆ ಪ್ರತ್ಯುಪಕಾರ ಮಾಡದಿರುವುದು - ಇವುಗಳಿಂದ ಧರ್ಮಚ್ಯುತಿಯಾಗುತ್ತದೆ. ಬಲಶಾಲಿಯಾದ ಶ್ರೀರಾಮನ ಸ್ನೇಹವನ್ನು ಕಳೆದುಕೊಳ್ಳುವುದರಿಂದ ಅರ್ಥನಾಶ. ಧರ್ಮಾರ್ಥಗಳು ನಷ್ಟವಾದ ಮೇಲೆ ಸುಖಭೋಗಕ್ಕೆ ಸಾಮಗ್ರಿಯೂ ಕ್ಷಯಿಸುತ್ತದೆ. ಆರೋಗ್ಯಹಾನಿಯಿಂದ ದೇಹಬಲವು ಕುಗ್ಗುತ್ತದೆಯಾದ್ದರಿಂದ ಕಾಮವೂ ಸಿದ್ಧಿಸುವುದಿಲ್ಲ - ಎಂದು ಲಕ್ಷ್ಮಣನು ಹೇಳಿದ್ದಾನೆ.

ಮದ್ಯಪಾನದಿಂದಾಗುವ ಅನರ್ಥ ಸರ್ವವಿದಿತ. ಮುಖ್ಯವಾಗಿ ಇದರಿಂದ ಹಾಳಾಗತಕ್ಕವರು ಬಡವರು, ಕೂಲಿಕಾರರು. ದಿನದ ಸಂಪಾದನೆಯನ್ನೆಲ್ಲ ಪಡಖಾನೆಯ ಒಡೆಯನಿಗೆ ಒಪ್ಪಿಸಿ ಬರಿಗೈಯಲ್ಲಿ ಮನೆಗೆ ಸಾಗುತ್ತಾರೆ. ಮನೆಯಲ್ಲಿ ಹೆಂಡತಿ ಮಕ್ಕಳೊಡನೆ ಜಗಳ ತಪ್ಪಿದ್ದಲ್ಲ. ಈಚೆಗೆ ಕುಡಿತದ ಚಟ ಹೆಚ್ಚಿದೆ. ಸಂಜೆಯಾದರೆ ಬಸ್ಸುಗಳಲ್ಲಿ ಹೆಂಡದ ವಾಸನೆಯೇ. ಶಾಲಾಕಾಲೇಜುಗಳಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ಕುಡಿಯುತ್ತಾರೆಂದರೆ ನಂಬದೆ ಇದ್ದ ಕಾಲವಿತ್ತು. ಆ ಕಾಲ ಈಗ ಇಲ್ಲ. ಪಾನಮತ್ತರಾದ ವಾಹನಚಾಲಕರಿಂದಾಗುವ ಅನರ್ಥಪರಂಪರೆ ಎಷ್ಟು!

ಸುರಾಪಾನವು ಪಂಚಮಹಾಪಾತಕಗಳಲ್ಲಿ ಸೇರಿದೆಯೆಂದು ಧರ್ಮಶಾಸ್ತ್ರಗಳು ಹೇಳುತ್ತವೆ. ಹೆಂಡ ಕುಡಿದವನು ಭ್ರಷ್ಟನೆಂದು ದೂರವಿರಿಸುವ ಪದ್ಧತಿ ಸ್ವಾತಂತ್ರ್ಯಪೂರ್ವದಲ್ಲಿತ್ತು. ಸ್ವಾತಂತ್ರ್ಯ ಬಂದ ಮೇಲೆ ಹೆಂಡವು ಚಹಾ-ಕಾಫಿಗಳ ಗುಂಪಿನಲ್ಲಿ ಸೇರಿಹೋಗಿದೆ. ಆರಂಭದಲ್ಲಿ ಮದ್ಯಪಾನನಿರೋಧದ ಆರ್ಭಟ ಮೊಳಗುತ್ತಿತ್ತು. ಉತ್ತರನ ಪೌರುಷ ಎಷ್ಟು ಹೊತ್ತಿನವರೆಗೆ! ಗಾಂಧಿಜೀಯನ್ನು ಎಷ್ಟು ದಿನಗಳವರೆಗೆ ನೆನೆಸಿಕೊಳ್ಳುತ್ತ ಶೋಕಾಚರಣೆ ಮಾಡಬೇಕು? ಸರ್ಕಾರದ ಟ್ರೆಜರಿಗೂ ತಮ್ಮ ಕಿಸೆಗೂ ಆಪ್ಯಾಯಮಾನವಾಗುತ್ತಿರುವಾಗ ಪಾನನಿರೋಧ ಯಾರಿಗೆ ಬೇಕಾಗಿದೆ? ಪ್ರಜೆಗಳಿಗೆ ಹೆಂಡ, ವಿದೇಶೀಯ ಮದ್ಯ ಅರಸರಿಗೆ.

**ಪೀತ್ವಾ ಪೀತ್ವಾ ಪುನಃ ಪೀತ್ವಾ ಯಾವತ್ ಪತತಿ ಭೂತಲೇ ।**
**ತಾವತ್ ಪಿಬೇತ್ ಪುನಃ ಪೀತ್ವಾ ಪುನರ್ಜನ್ಮ ನ ವಿದ್ಯತೇ ॥**

ಈ ದೇಶದಲ್ಲಿ ನೀತಿಭ್ರಷ್ಟತೆ ಎದ್ದೆದ್ದು ಕುಣಿಯುತ್ತಿರುವುದಕ್ಕೆ ಮೂಲಕಾರಣ ಹೆಂಡ. ಹೆಂಡವನ್ನು ಹಂಚುತ್ತಿರುವವರಿಗೆ ಬಡವರ ಉದ್ಧಾರವೆಂಬುದು ಕನಸಿನ ಗಂಟು, ನೀರಿನ ಮೇಲಿನ ಬರಹ; ಆಕಾಶದಲ್ಲಿ ಅರಳಿದ ಹೂ, ಜರಡಿಗೆ ತುಂಬಿದ ಹಾಲು. ಬಡವನ ಕೈಗೆ ಬಂದ ಹಣ ಪಡಖಾನೆಯ ಗಡವನ ಕೈಚೀಲಕ್ಕೆ ಸೇರುತ್ತದೆ.

**ಅನುಕೂಲಾಂ ವಿಮಲಾಂಗೀಂ**
**ಕುಲಜಾಂ ಕುಶಲಾಂ ಸುಶೀಲಸಂಪನ್ನಾಂ ।**
**ಪಂಚಲಕಾರಾಂ ಭಾರ್ಯಾಂ**
**ಪುರುಷಃ ಪುಣ್ಯೋದಯಾಲ್ಲಭತೇ ॥೪೪॥**

— *ಸಮಯೋಚಿತಪದ್ಯ-ಮಾಲಿಕಾ*

"ಅನುಕೂಲೆಯೂ ವಿಮಲವಾದ ಅಂಗವುಳ್ಳವಳೂ ಸತ್ಕುಲಪ್ರಸೂತಳೂ ಕುಶಲಬುದ್ಧಿಯವಳೂ ಸುಶೀಲೆಯೂ ಆದ - ಹೀಗೆ ಐದು ಲಕಾರಗಳಿಂದ ಕೂಡಿದ - ಮಡದಿಯನ್ನು ಪುರುಷನು ತನ್ನ ಪುಣ್ಯ ಬಲದಿಂದ ಮಾತ್ರ ಪಡೆಯುತ್ತಾನೆ."

ಪತಿಯ ಇಚ್ಛೆ, ಬಯಕೆ, ಸ್ವಭಾವಗಳನ್ನರಿತು ಅವುಗಳಿಗೆ ಹೊಂದಿಕೊಂಡು ನಡೆಯತಕ್ಕವಳು ಅನುಕೂಲೆ. ಇದೊಂದು ಪತ್ನಿಯಲ್ಲಿರಬೇಕಾದ ಶ್ರೇಷ್ಠಗುಣವೆಂದು ಭಾರತೀಯರು ತಿಳಿದಿದ್ದರು. ಇತರ ಗುಣಗಳಲ್ಲಿ ಯಾವ ನ್ಯೂನತೆಯಿದ್ದರೂ ಇದು ಅದೆಲ್ಲವನ್ನೂ ಮರೆಸಿಬಿಡಬಲ್ಲದು. ಸರ್ವಜ್ಞಕವಿಯು 'ಇಚ್ಛೆಯಾನರಿವ ಸತಿಯಾಗೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ' ಎಂದು ಹೇಳಿದ್ದಾನೆ. ಅಂಗಗಳಲ್ಲಿ ಮಲವಿಲ್ಲದವಳು ವಿಮಲಾಂಗಿ. ಮಲವು ಎರಡು ವಿಧ : ಅಂಗವಿಕಲತೆ, ಅಂಗವಿಕಾರ - ಒಂದು ವಿಧ ; ಯಾವುದಾದರೂ ರೋಗ ಇನ್ನೊಂದು. ಈ ಎರಡು ವಿಧದ ಮಲವು ಇರಬಾರದೆಂದು ಅಭಿಪ್ರಾಯ. ಕುರೂಪಿಯಾಗಿರಬಾರದು, ಮತ್ತು ರೋಗಿಷ್ಠೆಯಾಗಿರ ಬಾರದು. ಅವಳು ಸುಂದರಿಯಾಗಿರಬೇಕೆಂದು ನೀತಿಶಾಸ್ತ್ರಕಾರನು ಹೇಳಲಿಲ್ಲ. ಇದು ಗಮನಿಸಬೇಕಾದ ಸಂಗತಿ. ಅವಳು ಸತ್ಕುಲಪ್ರಸೂತಳಾಗಿರಬೇಕು. ಕುಲವೆಂದರೆ ಜಾತಿಯಲ್ಲ ; ತಾಯಿತಂದೆಗಳು ಉತ್ತಮ ಚಾರಿತ್ರವುಳ್ಳವರಾದರೆ ಆ ಕನ್ಯೆ ಕುಲಜಳೇ. ಒಳ್ಳೆಯ ನಡೆತೆಯವರು ಎಲ್ಲ ಜಾತಿಯಲ್ಲಿಯೂ ಇರುತ್ತಾರೆ. ಒಳ್ಳೆಯ ನಡತೆ ರಕ್ತಗತವಾಗಿ ಬಂದಿದ್ದರೆ ಅದು ದೃಢವಾಗಿ ನಿಲ್ಲುತ್ತದೆ. ಅಲ್ಲದೆ ನಮ್ಮ ಬಾಂಧವ್ಯವೂ ಪ್ರಶಂಸನೀಯವಾಗಿರಬೇಕಾದದ್ದು ಅಪೇಕ್ಷಣೀಯ. ಅವಳು ಗೃಹಕೃತ್ಯವನ್ನು ಜಾಣ್ಮೆಯಿಂದ ನಡೆಸಿಕೊಂಡುಹೋಗುವ ಕೌಶಲವನ್ನು ಪಡೆದಿರಬೇಕೆಂದು ಸರ್ವರೂ ಬಯಸತಕ್ಕದ್ದೇ. ಇನ್ನು ಸೌಶೀಲ್ಯವಂತೂ ಸರ್ವರಿಗೂ ಆದರಣೀಯವಾದ ಗುಣ. ಅನುಕೂಲಾ, ಸುಶೀಲಸಂಪನ್ನಾ - ಇವೆರಡು ಪರಮೋತ್ತಮ ಗುಣಗಳು. ಇವುಗಳ ನಡುವೆ ಉಳಿದ ಮೂರು ಗುಣಗಳು ಅಡಕವಾಗಿಬಿಡುತ್ತವೆ.

'ಪಂಚಲಕಾರಾಂ' ಎಂದರೆ 'ಲ'ಕಾರವಿರುವ ಅನುಕೂಲಾ ಮೊದಲಾದ ಐದು ಶಬ್ದಗಳಿಂದ ವಾಚ್ಯಳಾದವಳು ಎಂದರ್ಥ.

ಹೆಂಡತಿಯು ರೂಪವತಿಯಾಗಿರಬೇಕೆಂದು ನೀತಿಶಾಸ್ತ್ರಕಾರನು ಹೇಳಲಿಲ್ಲ. 'ಭಾರ್ಯಾ ರೂಪವತೀ ಶತ್ರುಃ' ಎಂದೂ ಹೇಳಿದ್ದುಂಟು. ಅವಳು ನೌಕರಿ ಮಾಡಿ ಹಣ ಸಂಪಾದಿಸಬೇಕೆಂದು ಹೇಳಲಿಲ್ಲ. ತೀರಾ ಅನಿವಾರ್ಯ ಸನ್ನಿವೇಶವಿದ್ದ ಹೊರತು - ಗಂಡಹೆಂಡತಿಯರಿಬ್ಬರೂ ದುಡಿಯಲು ಹೊರಟರೆ ಗೃಹಕೃತ್ಯ, ಗೃಹಸುಖ, ಮಕ್ಕಳ ಪೋಷಣೆ ಹೇಗಿರುತ್ತದೆಯೆಂಬುದು ಅನುಭವಿಸತಕ್ಕವರಿಗೆ ತಿಳಿದೇ ಇದೆ. ನಿರುದ್ಯೋಗ ತುಂಬಿದ ರಾಷ್ಟ್ರದಲ್ಲಿ ಒಂದು ಸಂಸಾರಕ್ಕೆ ದುಪ್ಪಟ್ಟು ಆದಾಯ, ಪಕ್ಕದ ಮನೆಯವರಿಗೆ ಒಂದು ಹೊತ್ತಿನ ಕೂಳಿಗೂ ಗತಿಯಿಲ್ಲ - ಎಂಬ ಏರುಪೇರಿನ ಸಮಾಜದ ದುಃಸ್ಥಿತಿಗೆ ಗಂಡಹೆಂಡಿರಿಬ್ಬರ ದ್ರವ್ಯಾರ್ಜನರೂಢಿಯ ಪ್ರಾಚುರ್ಯ ಕಾರಣವಾದೀತು. ಇಲ್ಲಿ ಆಳವಾದ ಚಿಂತನೆಗೆ ವಿಷಯ ಉಂಟು.

**ಅವಗಚ್ಛತಿ ಮೂಢಚೇತನಃ**
**ಪ್ರಿಯನಾಶಂ ಹೃದಿ ಶಲ್ಯಮರ್ಪಿತಮ್ ।**
**ಕೃತಧೀಸ್ತು ತದೇವ ಮನ್ಯತೇ**
**ಕುಶಲದ್ವಾರತಯಾ ಸಮುದ್ಧೃತಮ್ ॥೪೫॥**

— *ರಘುವಂಶ, ೮-೮೮*

"ಪ್ರಿಯಜನರ ಸಾವು ತನ್ನ ಎದೆಗೆ ನೆಟ್ಟ ಚೂರಿಯಾಯಿತೆಂದು ವಿಚಾರಶೂನ್ಯನಾದ ಮೂಢನು ತಿಳಿಯುತ್ತಾನೆ. ವಿವೇಕಿಯಾದರೋ ಅದನ್ನೇ ತನ್ನ ಒಳ್ಳೆಯದಕ್ಕಾಗಿ ಬಾಗಿಲು ತೆರೆದಂತಾಯಿತೆಂದು ಭಾವಿಸುತ್ತಾನೆ."

ಪತ್ನಿಯಾದ ಇಂದುಮತಿಯು ಸಾವನ್ನಪ್ಪಿದಾಗ ಶೋಕಾವಿಷ್ಟನಾದ ಅಜಮಹಾರಾಜನನ್ನು ಸಂತೈಸುವುದಕ್ಕಾಗಿ ವಸಿಷ್ಠರು ಹೇಳಿಕಳಿಸಿದ ಹಿತವಚನವಿದು. ಸಾವು ಗಂಡಹೆಂಡಿರನ್ನೂ, ತಾಯಿಮಕ್ಕಳನ್ನೂ, ಅಣ್ಣತಮ್ಮಂದಿರನ್ನೂ ಅಗಲಿಸುವುದು ನಿಶ್ಚಯ. ಇದು ಎಲ್ಲರಿಗೂ ಗೊತ್ತಿದ್ದರೂ ಪ್ರಿಯಜನರು ಸತ್ತಾಗ ಶೋಕ-ಮೋಹಗಳು ಬಂದು ಕವಿದುಕೊಳ್ಳುತ್ತವೆ. ಶೋಕಿಸಿದ್ದರಿಂದ ಸತ್ತವರೇನೂ ಬದುಕಿ ಬರುವುದಿಲ್ಲ. ಈ ತರ್ಕವು ನಿಜವಾದರೂ ಮನುಷ್ಯನ ತಲೆಗೆ ಹತ್ತುವುದಿಲ್ಲ. ಶೋಕ-ಮೋಹಗಳು

ತರ್ಕಮಾಡಿ ಬರುವುದಿಲ್ಲ. ತರ್ಕಕ್ಕೆ ನಿಲುಕುವುದಿಲ್ಲ. ರೈಲ್ವೆ ಪ್ರಯಾಣಿಕರು ಜೊತೆಗಾರರಾಗುತ್ತಾರೆ, ತಮ್ಮ ತಮ್ಮ ನಿಲ್ದಾಣ ಬಂದೊಡನೆ ಇಳಿದುಹೋಗುತ್ತಾರೆ - ಎಂಬುದು ಯಾರಿಗೆ ಗೊತ್ತಿಲ್ಲ?

ಇಂಥ ಸಂದರ್ಭದಲ್ಲಿ ಶೋಕತಪ್ತರನ್ನು ಹಿರಿಯರು ಸಂತೈಸುತ್ತಾರೆ. ಶೋಕ-ಮೋಹಗಳ, ಕ್ರೋಧ-ಲೋಭಗಳ ವೇಗವನ್ನು ತಡೆಹಿಡಿಯುವುದಕ್ಕಾಗಿ, ತಗ್ಗಿಸುವುದಕ್ಕಾಗಿ, ನೀತಿಶಾಸ್ತ್ರಗಳು ಪ್ರವೃತ್ತವಾಗಿವೆ. ಕುದುರೆ ಓಡಿದ ಕಡೆಗೆ ರಥವೂ ಹೋಗಲೆಂದಾದರೆ ಸಾರಥಿ ಏಕೆ ಬೇಕು? ನೀತಿಶಾಸ್ತ್ರವನ್ನೋದದ ಮಾನವನ ಜೀವನ ಡ್ರೈವರಿಲ್ಲದ ರೈಲುಬಂಡಿಯ ಹಾಗೆ.

ಮಡದಿ ಸತ್ತದ್ದು ಶೋಕಪ್ರಸಂಗವಾದರೂ, ಎಷ್ಟು ದಿನ ಶೋಕಾಚರಣೆ? ಅಜರಾಜನು ರಾಜ್ಯಭಾರದ ಕರ್ತವ್ಯವನ್ನು ಮೂಲೆಗೊತ್ತಿ ದುಃಖದ ಬಂದಿಯಾಗಿ ಬಿಟ್ಟಿದ್ದಾನೆ. ಅವನ ಕರ್ತವ್ಯಭ್ರಷ್ಟತೆಯನ್ನು ಜ್ಞಾಪಿಸಿ, ಕರ್ತವ್ಯದಲ್ಲಿ ಅವನನ್ನು ತೊಡಗಿಸುವುದಕ್ಕಾಗಿ ವಸಿಷ್ಠರು ಹೀಗೆ ಬುದ್ಧಿ ಹೇಳಬೇಕಾಯಿತು. ಕಾಡಿನಲ್ಲಿ ಸೀತಾಪಹರಣವಾದಾಗ ಶ್ರೀರಾಮನು ಶೋಕಿಸುತ್ತ ಕೈಕಟ್ಟಿ ಕುಳಿತನೇನು? ಮುಂದೆ ಮತ್ತೆ ದುರ್ಧರವಾದ ಸೀತಾಪರಿತ್ಯಾಗ ದುಃಖದಿಂದ ಬೆಂದುಹೋದರೂ ರಾಜ್ಯಪಾಲನೆಯ ಕರ್ತವ್ಯದಿಂದ ವಿಮುಖನಾದನೇನು?

ಚಿತ್ತಕ್ಷೋಭೆಯನ್ನು ಹಿಡಿತದಲ್ಲಿರಿಸುವುದು ನೀತಿಶಾಸ್ತ್ರದ ಉದ್ದೇಶ. ಮುಳ್ಳಿನ ದಾರಿಯಲ್ಲಿ ನಡೆಯತಕ್ಕವನು ಕಾಲಿಗೆ ಚಪ್ಪಲಿ ಹಾಕಿಕೊಳ್ಳಬೇಕು. ಜೀವನಪಥದಲ್ಲಿ ಸಾಗತಕ್ಕವನು ತನ್ನ ಚಿತ್ತಕ್ಕೆ ವಿವೇಕದ ಕವಚವನ್ನು ಹೊದಿಸಿರಬೇಕು. ಉದಾತ್ತ ಧ್ಯೇಯಗಳನ್ನಿರಿಸಿಕೊಂಡವನು ಲೋಕದ ಆಕರ್ಷಣೆಗಳಿಗೆ ಒಳಗಾಗುವುದೇ ಇಲ್ಲ. ಗಂಟುಬಿದ್ದ ಒಂದು ಆಕರ್ಷಣೆಯು ದೈವಿಕವಾಗಿ ತೊಲಗಿದಾಗ, ದೈವವೇ ಒಂದು ಸಂಕೋಲೆಯನ್ನು ಕಳಚಿತೆಂದು ಸಮಾಧಾನಚಿತ್ತನಾಗುತ್ತಾನೆ.

ಮರಣಂ ಪ್ರಕೃತಿಃ ಶರೀರಿಣಾಂ
ವಿಕೃತಿರ್ಜೀವಿತಮುಚ್ಯತೇ ಬುಧೈಃ ।
ಕ್ಷಣಮಪ್ಯವತಿಷ್ಠತೇ ಶ್ವಸನ್
ಯದಿ ಜಂತುರ್ನನು ಲಾಭವಾನಸೌ ॥೩೬॥

— *ರಘುವಂಶ, ೮-೮೭*

"ಮನುಷ್ಯರಿಗೆ-ಪ್ರಾಣಿಗಳಿಗೆ ಮರಣವು ಪ್ರಕೃತಿಯಾಗಿದೆ, ಜೀವಿತವು ವಿಕೃತಿಯಾಗಿದೆ - ಎಂದು ವಿದ್ವಾಂಸರು ಹೇಳುತ್ತಾರೆ. ಆದ್ದರಿಂದ ಒಬ್ಬನು ಒಂದು ಕ್ಷಣಕಾಲ ಬದುಕಿದರೂ ಅಷ್ಟು ಲಾಭವನ್ನು ಗಳಿಸಿದವನಾಗುತ್ತಾನೆ."

ತನ್ನ ಪ್ರಿಯಪತ್ನಿಯಾದ ಇಂದುಮತಿಯು ಆಕಸ್ಮಿಕವಾಗಿ ಮೃತಳಾದಾಗ, ಅಜಮಹಾರಾಜನು ಶೋಕಾಕುಲನಾಗುತ್ತಾನೆ. ಅವನು ರಾಜಕಾರ್ಯದಲ್ಲಿಯೂ ತೊಡಗದೆ ಜಡನಂತೆ ಆಗಿಬಿಡುತ್ತಾನೆ. ಆಗ ದೂರದಲ್ಲಿನ ಕುಲಗುರುಗಳಾದ ವಸಿಷ್ಠರು ರಾಜನನ್ನು ಸಂತೈಸಲು ಒಂದು ಸಂದೇಶವನ್ನು ಕಳಿಸುತ್ತಾರೆ. ಆ ಸಂದೇಶದಲ್ಲಿ ಮೇಲ್ಕಂಡ ಶ್ಲೋಕವಿದೆ.

ಜೀವಿಗಳಿಗೆ ಮರಣವೇ ಪ್ರಕೃತಿ, ಬದುಕಿರುವುದೇ ವಿಕೃತಿ - ಎಂದರೇನು? ಮಲ್ಲಿನಾಥನ 'ಸಂಜೀವಿನೀ' ವ್ಯಾಖ್ಯಾನದಲ್ಲಿ ಮರಣವು ಪ್ರಕೃತಿಯೆಂದರೆ ಸ್ವಭಾವವೆಂದೂ ನಿಶ್ಚಿತವಾಗಿ ಬರತಕ್ಕದ್ದೆಂದೂ, ಜೀವಿತವು ವಿಕೃತಿಯೆಂದರೆ ಯಾದೃಚ್ಛಿಕವೆಂದು ಬರೆದಿದೆ. ಬದುಕು ಸ್ಥಿರವಾದ್ದಲ್ಲ, ಯಾವ ಕ್ಷಣದಲ್ಲಾದರೂ ಅದು ಕೊನೆಗಾಣಬಹುದು - ಎಂದು ಅಭಿಪ್ರಾಯ. ಇದೇನೋ ಸರಿಯೇ. ಆದರೆ ಲೋಕದಲ್ಲಿ ಎಲ್ಲರಿಗೂ ಗೊತ್ತಿರುವ ಈ ಸಂಗತಿಯನ್ನು ವಿದ್ವಾಂಸರು ತಿಳಿಸಿಕೊಡಬೇಕಾಗಿದೆಯೆ? ವಸಿಷ್ಠರು ಹೊಸದಾಗಿ ಹೇಳಿಕಳಿಸಬೇಕೆ? ಅಲ್ಲದೆ ಶಾಶ್ವತ-ಅಶಾಶ್ವತ ಎಂದು ಸರಳವಾಗಿ ಹೇಳದೆ ಕವಿಯು 'ಪ್ರಕೃತಿ', 'ವಿಕೃತಿ' ಶಬ್ದಗಳನ್ನು ಬಳಸಿದುದರ ಆಶಯವೇನೆಂಬುದನ್ನು ಇದರಿಂದ ಹೊರಪಡಿಸಿದಂತಾಗುವುದಿಲ್ಲ.

ಒಂದು ವಸ್ತುವಿನ ಸಹಜವಾದ ಸ್ಥಿತಿ ಪ್ರಕೃತಿ. ಕ್ರಿಯೆಯಿಂದ ಅಥವಾ ಇನ್ನೊಂದು ವಸ್ತುವಿನ ಸಂಪರ್ಕದಿಂದ ಆಗುವ ಬದಲಾವಣೆಯ ಸ್ಥಿತಿ ವಿಕೃತಿ. ಮಣ್ಣು ಪ್ರಕೃತಿ; ಗಡಿಗೆ ವಿಕೃತಿ. ಬೀಜವು ಪ್ರಕೃತಿ; ಮೊಳಕೆಯು ವಿಕೃತಿ. ಕೆಲವು ವಿಕೃತಿಗಳು ಕ್ರಿಯಾಸಂಬಂಧವನ್ನು ತೊರೆದಾಗ ಸಹಜಸ್ಥಿತಿಗೆ ಮರಳುತ್ತವೆ. ರಬ್ಬರಿನ ತುಂಡಿನಲ್ಲಿ ಸ್ಥಿತಿಸ್ಥಾಪಕತ್ವಶಕ್ತಿ ಇದೆ. ಅದು ಎರಡು ಅಂಗುಲ ಉದ್ದವಿದೆಯೆನ್ನೋಣ. ಆ ತುಂಡನ್ನು ಎಳೆದರೆ ನಾಲ್ಕು ಅಂಗುಲ ಉದ್ದವಾದೀತು. ನಾಲ್ಕು ಅಂಗುಲ ಉದ್ದ ವಿಕೃತಿ. ಅದರ ಎಳೆತವನ್ನು ಕೈಬಿಟ್ಟಾಗ ತನ್ನ ಪ್ರಕೃತಿಯಾದ ಎರಡು ಅಂಗುಲ ಉದ್ದಕ್ಕೆ ಮರಳುತ್ತದೆ. ತಣ್ಣಗಿರುವುದು ನೀರಿನ ಪ್ರಕೃತಿ. ಬೆಂಕಿಯನ್ನು ತಾಗಿಸಿದಾಗ ಬಿಸಿಯಾಗುತ್ತದೆ. ಬೆಂಕಿಯನ್ನು ತೆಗೆದರೆ ತಾನಾಗಿ ತಣ್ಣನೆಯ ಸ್ಥಿತಿಯನ್ನು ಪಡೆಯುತ್ತದೆ.

ಒಟ್ಟಿನಲ್ಲಿ ಪ್ರಕೃತಿಯು ಸಹಜಸ್ಥಿತಿ. ಆ ಸ್ಥಿತಿಗೆ ತರಲು ಪ್ರಯತ್ನ ಬೇಕಾಗಿಲ್ಲ ; ವಿಕೃತಿಗೆ ಮಾತ್ರ ಪ್ರಯತ್ನ ಬೇಕು.

ಹಾಗೆಯೇ ಶರೀರವಂತನಾದ ಮನುಷ್ಯನಿಗೆ ಬದುಕಿರಲು ಅನ್ನ, ನೀರು ಬೇಕು. ಪ್ರಯತ್ನದಿಂದ ಜೀವವನ್ನುಳಿಸಿಕೊಳ್ಳಬೇಕು. ಅನ್ನ-ನೀರಿನ ಸೇವನೆಯನ್ನು ಬಿಟ್ಟರೆ ಸಾವು ತಾನಾಗಿ ಬರುತ್ತದೆ. ಸಾವಿಗಾಗಿ ಬೇರೆ ಯಾವ ಪ್ರಯತ್ನವೂ ಬೇಡ. ಬದುಕಿಗಾಗಿ ಮಾತ್ರ ಪ್ರಯತ್ನ ಬೇಕು. ಎಲ್ಲ ಪ್ರಾಣಿಗಳ ಗತಿಯೂ ಇದೇ. ಆಹಾರವಿಲ್ಲದಿದ್ದರೆ ಸಾವು ಸಹಜ. ಗಿಡ, ಮರ, ಬಳ್ಳಿಗಳ ಗತಿಯೂ ಇದೇ. ಗರ್ಭವೂ ಸಹ ತಾಯಿಯ ಒಡಲಿನಲ್ಲಿದ್ದು ಬೇಕಾದ ಆಹಾರವನ್ನು ಸೆಳೆದುಕೊಳ್ಳುತ್ತದೆ. ಹಸಿವು-ಬಾಯಾರಿಕೆ ಎಂಬ ರೋಗಕ್ಕೆ ಅನ್ನ-ನೀರು ಔಷಧ. ಔಷಧವಿಲ್ಲದಿದ್ದರೆ ರೋಗಿಯು ಸಾಯುವಂತೆ, ಪ್ರತಿಯೊಂದು ಜೀವಿಯೂ ಅನ್ನ-ನೀರು ಎಂಬ ಔಷಧವನ್ನು ತೆಗೆದುಕೊಳ್ಳದಿದ್ದರೆ ಮರಣ ನಿಶ್ಚಿತ. ಕ್ಯಾನ್ಸರ್ ರೋಗಿಯು ಚಿಕಿತ್ಸೆಯಿಂದ ಎಷ್ಟು ದಿನ ಬದುಕಿದ್ದರೆ ಅಷ್ಟೇ ಲಾಭವೆಂದು ತಿಳಿದುಕೊಳ್ಳುವಂತೆ, ಮನುಷ್ಯನು ಎಷ್ಟು ಕಾಲ ಬದುಕಿದ್ದರೆ ಅಷ್ಟೇ ಲಾಭವೆಂದು ತಿಳಿದು ಕರ್ತವ್ಯನಿಷ್ಠನಾಗಬೇಕು. ಒಂದು ಕ್ಷಣವನ್ನೂ ವ್ಯರ್ಥಮಾಡಬಾರದು. "ಇಷ್ಟು ದಿನ ಇಂದುಮತಿಯು ಬದುಕಿದ್ದಳಲ್ಲ, ಅದೇ ನಿನಗಾದ ಲಾಭವೆಂದು ತಿಳಿ. ಅವಳು ತನ್ನ ನಿಜಸ್ಥಿತಿಗೆ ಮರಳಿದ್ದಕ್ಕಾಗಿ ವ್ಯಥೆಪಡಬೇಡ" - ಎಂಬುದು ವಸಿಷ್ಠರ ಉಪದೇಶದ ಇಂಗಿತ.

ಪ್ರಸಿದ್ಧ ವಿಜ್ಞಾನಿ ಡಾರ್ವಿನ್ ಮಹಾಶಯನು "Death is the rule; life is the exception" ಎಂದು ಹೇಳಿದ್ದಾನೆ. ಮರಣವು ಉತ್ಸರ್ಗನಿಯಮ, ಎಲ್ಲ ವಸ್ತುಗಳಿಗೂ ಅನ್ವಯಿಸತಕ್ಕದ್ದು. ಜೀವಿತವು ವಿನಾಯಿತಿಯನ್ನು ಕೊಡುವ ಅಪವಾದ ಶಾಸ್ತ್ರ. ಅಪವಾದವು ಹಿಂದಕ್ಕೆ ಸರಿದಾಗ ಉತ್ಸರ್ಗನಿಯಮವು ಸ್ವತಃ ಪ್ರವರ್ತಿಸುತ್ತದೆ. ಡಾರ್ವಿನ್ನನಿಗಿಂತ ಎಷ್ಟೋ ಶತಕಗಳ ಹಿಂದೆ ಇದ್ದ ಕಾಳಿದಾಸನು ಈ ನಿಯಮವನ್ನು ತಿಳಿದಿದ್ದನೆಂಬುದು ವಿಶೇಷ. ಮರಣವು ಪ್ರಕೃತಿ; ಜೀವಿತವು ವಿಕೃತಿ.

**ದೇಹದಂಡನಮಾತ್ರೇಣ ಕಾ ಮುಕ್ತಿರವಿವೇಕಿನಾಂ ।**
**ವಲ್ಮೀಕತಾಡನಾದೇವ ಮೃತಃ ಕೋಽತ್ರ ಮಹೋರಗಃ ॥೪೭॥**

*— ಗರುಡಪುರಾಣ, ೧೬-೬೨*

"ದೇಹವನ್ನು ದಂಡಿಸಿದ ಮಾತ್ರದಿಂದ ಅವಿವೇಕಿಗಳಿಗೆ ಮುಕ್ತಿಯಾದೀತೆ? ಹುತ್ತವನ್ನು ಬಡಿದ ಮಾತ್ರದಿಂದ ಒಳಗಿರುವ ಘಟಸರ್ಪವು ಸತ್ತದ್ದುಂಟೇನು?"

ಮನುಷ್ಯನು ತನ್ನ ದೇಹದ ಸ್ವಚ್ಛತೆಗಾಗಿ ಸ್ನಾನಮಾಡುತ್ತಾನೆ. ಬಟ್ಟೆಯನ್ನು ಒಗೆದು ಶುಭ್ರಪಡಿಸುತ್ತಾನೆ. ತನ್ನ ಪರಿಸರವನ್ನು ಶುಭ್ರವಾಗಿರಿಸಲು ಪ್ರಯತ್ನಿಸುತ್ತಾನೆ. ಸ್ವಚ್ಛತೆಯನ್ನು ಬಯಸತಕ್ಕವರು ಅದರಲ್ಲಿ ಆಸಕ್ತಿಯನ್ನು ವಹಿಸುವುದು ಸಹಜ. ಅದು ಆವಶ್ಯಕವೂ ಹೌದು. ಸ್ವಚ್ಛತೆಯೆನ್ನುವುದು ದೈವೀಸಂಪತ್ತು. ಸ್ವಚ್ಛತೆಯಿದ್ದಲ್ಲಿ ದೇವರ ಸಾಂನಿಧ್ಯವಿರುತ್ತದೆಯಂತೆ.

ಇದೆಲ್ಲವೂ ಬಹಿರಂಗಶುದ್ಧಿ. ಅಂತರಂಗಶುದ್ಧಿಯೆಂಬುದೊಂದಿದೆ. ಅದೇ ಮನಸ್ಸಿನ ಶುದ್ಧಿ, ಚಿತ್ತಶುದ್ಧಿ. ದ್ವೇಷ, ಅಸೂಯೆ, ಮದ, ಅಹಂಕಾರ, ಲೋಭ, ಹಿಂಸೆ - ಮೊದಲಾದವು ಚಿತ್ತದ ಕೊಳೆಗಳೆಂದೂ ಇವು ನಿರ್ಮೂಲವಾಗಬೇಕೆಂದೂ ದೊಡ್ಡವರು ಹೇಳುತ್ತ ಬಂದಿದ್ದಾರೆ. ಮನೆಯನ್ನು ಸ್ವಚ್ಛಪಡಿಸಿದರೆ ಮನವು ಸ್ವಚ್ಛವಾದೀತೇನು? ಬಟ್ಟೆಯನ್ನೊಗೆದರೆ ಹೊಟ್ಟೆಕಿಚ್ಚು ಸಡಿಲೀತೇನು?

'ಕಾ ಮುಕ್ತಿರವಿವೇಕಿನಾಂ' ಎಂದು ಮೇಲ್ಕಂಡ ನೀತಿಶ್ಲೋಕದಲ್ಲಿದೆ. ಮುಕ್ತಿ ಎಂದರೆ ಬಿಡುಗಡೆ. ಯಾವುದರಿಂದ ಬಿಡುಗಡೆ? ಈ ಪ್ರಶ್ನೆಗೆ ಎರಡು ಬಗೆಯ ಉತ್ತರವನ್ನು ನೀಡಬಹುದು. ಸಂಸಾರಬಂಧನದಿಂದ ಬಿಡುಗಡೆ - ಎಂದು ಒಂದು ಬಗೆಯ ಉತ್ತರ. ಆಗ ಮುಕ್ತಿಯೆಂದರೆ ಮೋಕ್ಷವೆಂದರ್ಥ. ಮೋಕ್ಷವನ್ನು ಬಯಸತಕ್ಕವನಿಗೆ ಚಿತ್ತಶುದ್ಧಿ ಅತ್ಯಾವಶ್ಯಕ. ಕಾಮ, ಕ್ರೋಧ, ದ್ವೇಷ ಮುಂತಾದ ಚಿತ್ತದ ಕೊಳೆಯನ್ನು ಅವನು ದೂರಮಾಡಿ ದೈವೀಸಂಪತ್ತನ್ನು ಬೆಳೆಸಿಕೊಳ್ಳಬೇಕು. ಬರಿಯ ಉಪವಾಸ ವ್ರತಗಳು, ಆಹಾರನಿಯಮ, ತಣ್ಣೀರು ಸ್ನಾನ - ಮುಂತಾದ ದೇಹದಂಡನೆಯಿಂದಷ್ಟೆ ಮೋಕ್ಷವು ದೊರಕದು. ದೇಹದಂಡನೆಯು ಚಿತ್ತದ ದಂಡನೆಯಲ್ಲಿ, ಇಂದ್ರಿಯನಿಗ್ರಹದಲ್ಲಿ ಪರ್ಯವಸಾನಗೊಳ್ಳಬೇಕು.

**ದಂಡಿಸದೆ ದೇಹವನು ಖಂಡಿಸದೆ ಕರಣವನು**
**ಉಂಡುಂಡು ಸ್ವರ್ಗವೇರುವೆಡೆ ಅದನೇನು**
**ಮುಂಡೆಯಾಳುವಳೆ ಸರ್ವಜ್ಞ ||**

ದೇಹದಂಡನೆಗೆ ಗಮ್ಯವಾದದ್ದು ಕರಣಗಳ (ಇಂದ್ರಿಯಗಳ) ಖಂಡನೆ.

ಮೋಕ್ಷದ ಮಾತಿರಲಿ, 'ದುರ್ಗುಣಗಳಿಂದ ಬಿಡುಗಡೆ' ಎಂದು ವ್ಯಾವಹಾರಿಕವಾಗಿಯೂ 'ಮುಕ್ತಿ' ಶಬ್ದಕ್ಕೆ ಅರ್ಥ ಮಾಡಬಹುದು. ದೈಹಿಕವಾದ ಯಾವ ಶಿಕ್ಷೆಯನ್ನು ಕೊಟ್ಟರೂ ವಿವೇಕಶೂನ್ಯರಾದ ಮೂರ್ಖರ ಮನಸ್ಸು ಬದಲಾಯಿಸುವುದಿಲ್ಲ. ಕಳ್ಳನಿಗೆ ಎಷ್ಟು ಸಲ ಶಿಕ್ಷೆಯಾದರೂ ಅವನು ಕಳ್ಳತನವನ್ನು ಬಿಡುವುದೇ ಇಲ್ಲ. ಅಂತಹ ಮೂರ್ಖರನ್ನು, ಅಪರಾಧಿ ಮನೋವೃತ್ತಿಯವರನ್ನು ತಿದ್ದುವುದು ಕಷ್ಟ. ವೈಜ್ಞಾನಿಕವಾದ ಮಾನಸ ಶಿಕ್ಷಣವು ಸ್ವಲ್ಪ ಫಲವನ್ನಾದರೂ ಕೊಡಬಹುದು.

ಬಾಹ್ಯವೇಷಕ್ಕಿಂತ ಅಂತರಂಗದ ನಿಯತಿಯೇ ಮುಖ್ಯವಾದದ್ದೆಂದು ತಾತ್ಪರ್ಯ. ಗಾಂಧಿಟೋಪಿಯನ್ನು ಹಾಕಿದ ಮಾತ್ರದಿಂದ ಮಸ್ತಕದಲ್ಲಿ ಗಾಂಧಿ ಮನೋಭಾವ ಉದಿಸುವುದಿಲ್ಲ. ಖಾಕಿ ವಸ್ತ್ರವನ್ನು ಧರಿಸಿದ ಮಾತ್ರದಿಂದ ಕಾನೂನಿನ ರಕ್ಷಣೆಯಾಗುವುದಿಲ್ಲ. ಕಾವಿಬಟ್ಟೆಯನ್ನುಟ್ಟರೆ ವೈರಾಗ್ಯವು ಬಂದು ನೆಲೆಸಿಬಿಡುವುದೂ ಇಲ್ಲ.

**ಆಯುರ್ವಿತ್ತಂ ಗೃಹಚ್ಛಿದ್ರಂ ಸಾಹಸಂ ಮಂತ್ರಮೌಷಧಂ ।**
**ತಪೋ ದಾನಾವಮಾನೌ ಚ ನವ ಗೋಪ್ಯಾನಿ ಕಾರಯೇತ್ ॥೪೮॥**

— *ಸಮಯೋಚಿತಪದ್ಯ-ಮಾಲಿಕಾ*

"ಆಯುಸ್ಸು, ಹಣ, ಮನೆಯ ಒಳಜಗಳ, ದುಡುಕಿನಿಂದಾದ ಕಾರ್ಯ, ಮಂತ್ರ, ಔಷಧ, ತಪಸ್ಸು, ದಾನ, ಅವಮಾನ - ಈ ಒಂಬತ್ತನ್ನು ರಹಸ್ಯವಾಗಿ ಇಟ್ಟಿರಬೇಕು."

ತನ್ನ ಆಯುಸ್ಸು ಎಷ್ಟೆಂದು ಗೊತ್ತಿದ್ದರೆ ಅದನ್ನು ಇನ್ನೊಬ್ಬರಿಗೆ ತಿಳಿಸಬಾರದು. ಜ್ಯೌತಿಷವನ್ನು ಬಲ್ಲವನಾದರೆ ಇನ್ನೊಬ್ಬರ ಆಯುಸ್ಸನ್ನು ಹೇಳಬಾರದು. ಕೇಳಿದವರ ಮೇಲೆ ಅದು ಕೆಟ್ಟ ಪರಿಣಾಮವನ್ನುಂಟುಮಾಡಬಹುದು. ತನ್ನಲ್ಲಿರುವ ಹಣವನ್ನೂ ತನ್ನ ಆದಾಯವನ್ನೂ ತಿಳಿಸುವುದೂ ಲೋಕನೀತಿಯಲ್ಲ. ಇನ್ನೊಬ್ಬರ ಸಂಬಳವೆಷ್ಟೆಂದು ಕೇಳುವುದು ಸಹ ಶಿಷ್ಟ ವ್ಯವಹಾರವಲ್ಲ. ಮನೆಗಳಲ್ಲಿ ಏನಾದರೊಂದು ಒಡಕು ಇರುವುದು ಸಹಜ. ಗಂಡಹೆಂಡತಿಯರಲ್ಲಿ, ತಂದೆಮಕ್ಕಳಲ್ಲಿ, ಅಣ್ಣತಮ್ಮಂದಿರಲ್ಲಿ ಅಭಿಪ್ರಾಯಭೇದವಿರುತ್ತದೆ. ಎಲ್ಲರ ಮನೆಯ ದೋಸೆಯಲ್ಲಿಯೂ ತೂತು ಇರುತ್ತದೆ. ಅದನ್ನು ತಮ್ಮಲ್ಲಿ ಪರಿಹರಿಸಿಕೊಳ್ಳಬೇಕಲ್ಲದೆ ಹೊರಗಿನವರಿಗೆ ಹೇಳಿದರೆ,

ನಮ್ಮ ನ್ಯೂನತೆಯನ್ನೇ ಜನರು ದೊಡ್ಡದುಮಾಡಿ ಆಡಿಕೊಳ್ಳಲಾರಂಭಿಸುತ್ತಾರೆ. ಸಮಯಸಾಧಕರು ಅದರಿಂದ ದುರ್ಲಾಭವನ್ನೂ ಪಡೆದಾರು.

ಸಾಹಸವೆಂದರೆ ವಿವೇಚನೆಯಿಲ್ಲದೆ ದುಡುಕಿನಿಂದ ಮಾಡುವ ಕೃತ್ಯ. ಎಂತಹ ವಿವೇಕಿಯಾಗಿದ್ದರೂ ಜೀವನದಲ್ಲಿ ಎಡವತಕ್ಕ ಸಂದರ್ಭವಿರುತ್ತದೆ. ಕಾಮ-ಕ್ರೋಧಗಳಿಗೆ ವಶನಾಗಿ ಅಕಸ್ಮಾತ್ ಒಂದು ತಪ್ಪುಕೆಲಸವನ್ನು ಮಾಡಿರುತ್ತಾನೆ. ಹಾಗೆ ತಪ್ಪುಮಾಡುವುದು ಅವನ ಸ್ವಭಾವವೇನಲ್ಲ. ತಾನು ಮಾಡಿದ್ದಕ್ಕೆ ಅವನಿಗೆ ಪಶ್ಚಾತ್ತಾಪವೂ ಆಗಿರುತ್ತದೆ. ಅದನ್ನು ಇನ್ನೊಬ್ಬರಿಗೆ ತಿಳಿಸಿದರೆ ಹತ್ತಾರು ಜನರ ಕಿವಿಗೆ ಬಿದ್ದು ಈತನ ವಿಷಯದಲ್ಲಿ ಕೆಟ್ಟ ಅಭಿಪ್ರಾಯವೇ ಮೂಡಬಹುದು. ತಪ್ಪುಹುಡುಕುವ ಲೋಕಕ್ಕೆ ಕ್ಷಮಿಸುವ ಗುಣವಿರುವುದಿಲ್ಲ. ಗುರುವಿನಿಂದ ಉಪದಿಷ್ಟವಾದ ಮಂತ್ರವನ್ನು ರಹಸ್ಯವಾಗಿಡದಿದ್ದರೆ ಅದರ ಶಕ್ತಿಯೇ ಹೋಗಿಬಿಡುತ್ತದೆಯೆಂಬ ನಂಬಿಕೆ ಇದೆ. ಮಂತ್ರವೆಂದರೆ ಇಬ್ಬರು ಸೇರಿ ಮಾಡಿದ ಒಂದು ಕಾರ್ಯತಂತ್ರ. ರಾಜಕಾರ್ಯಕ್ಕೆ ವಿಶೇಷವಾಗಿ ಸಂಬಂಧಿಸಿದ್ದು ಇದು. ಮೊದಲೇ ಇದನ್ನು ಬಹಿರಂಗಪಡಿಸತಕ್ಕದ್ದಲ್ಲ. Official Secret ಎಂಬುದು ಎಲ್ಲ ಸರ್ಕಾರಗಳಲ್ಲಿಯೂ ಉಂಟು. ಇದಕ್ಕೆ ಸಂಸ್ಕೃತದಲ್ಲಿ 'ಅಷಡಕ್ಷೀಣ' ಎಂದು ಹೇಳುತ್ತಾರೆ. ಆರು ಕಣ್ಣುಗಳಿಗೆ ಗೋಚರವಲ್ಲದ್ದು ಅಷಡಕ್ಷೀಣ. ಇಬ್ಬರಿಗೆ ಮಾತ್ರ ತಿಳಿದಿರುವುದು ಎಂದರ್ಥ. ಔಷಧವು ಯಾವುದೆಂಬುದನ್ನು ರೋಗಿಗೆ ವೈದ್ಯನು ತಿಳಿಸಬಾರದಂತೆ. ತನ್ನ ವ್ಯಾಧಿಯು ಪ್ರಬಲವಾದ್ದೆಂದೂ ಅದಕ್ಕೆ ಬೆಲೆಬಾಳುವ ಔಷಧವೇ ಬೇಕೆಂದೂ ರೋಗಿಯು ತಿಳಿದುಕೊಂಡಿರುತ್ತಾನೆ. ಚಿಕ್ಕ ಔಷಧದಿಂದಲೇ ಅದಕ್ಕೆ ಪರಿಹಾರ ಸಿಗಬಹುದು. ರೋಗವು ಗುಣವಾಗಲು ರೋಗಿಯ ನಂಬಿಕೆ ಮುಖ್ಯವಾದದ್ದು. ಒಬ್ಬನಿಗೆ ಮೂರ್ಛೆಯ ರೋಗವಿತ್ತು. ವೈದ್ಯರು ರೋಗಿಯನ್ನು ಪರೀಕ್ಷಿಸಿ ಘನವಾದ ಔಷಧವೇ ಬೇಕೆಂದು ಹೇಳಿ ಚಿಕಿತ್ಸೆ ಮಾಡಿದರು. ಒಂದು ತಿಂಗಳಿನಲ್ಲಿ ಪೂರ್ತಿ ಗುಣವಾಯಿತು. ವೈದ್ಯರು ಕೊಟ್ಟದ್ದು ಬಿ-ಕಾಂಪ್ಲೆಕ್ಸ್ ಮಾತ್ರೆ. ರೋಗಿಯ ಮೂರ್ಛಾರೋಗ ಬರಿಯ ಮಾನಸಿಕ ಪರಿಣಾಮವಾಗಿತ್ತು.

ತನ್ನ ತಪಃಶಕ್ತಿಯನ್ನು ಯಾರೂ ತಿಳಿಸುವುದಿಲ್ಲ. ಜನರ ಅಪಹಾಸ್ಯಕ್ಕೆ ಕಾರಣವಾದೀತೆಂಬ ಭಯ ಅದರಲ್ಲಿದೆ. ತಾನು ಮಾಡಿದ ದಾನ ಮುಂತಾದ ಪುಣ್ಯಕಾರ್ಯವನ್ನು ಹೇಳಿಕೊಂಡರೆ ಪುಣ್ಯವೇ ಕ್ಷೀಣಿಸುತ್ತದೆಯೆಂದು ಧರ್ಮಶಾಸ್ತ್ರವು ಹೇಳುತ್ತದೆ. ನಹುಷರಾಜನು ನಾನಾ ಪುಣ್ಯಕಾರ್ಯಗಳನ್ನು ಮಾಡಿ ಸ್ವರ್ಗಕ್ಕೆ ಹೋದ. ದೇವೇಂದ್ರನಿಗೆ ಸರಿಸಮಾನವಾಗಿ ಮೆರೆಯುತ್ತಿದ್ದ. ದೇವೇಂದ್ರನು ಒಂದು ಸಲ

ನಹುಷನನ್ನು ಆತನು ಮಾಡಿದ ಪುಣ್ಯಕಾರ್ಯವೇನೆಂದು ಕೇಳಿದನಂತೆ. ನಹುಷನು ಭೂಲೋಕದಲ್ಲಿ ತಾನು ಮಾಡಿದ್ದನ್ನೆಲ್ಲ ಉಸುರಿದ. ಅವನ ಪುಣ್ಯ ಕ್ಷೀಣಿಸಿತು. ದೇವೇಂದ್ರನು ಒಡನೆಯೇ ಅವನನ್ನು ಸ್ವರ್ಗದಿಂದ ತಳ್ಳಿದನಂತೆ.

ದೇವಸ್ಥಾನಕ್ಕೆ ಒಂದು ಟ್ಯೂಬ್‌ಲೈಟ್ ಕೊಟ್ಟರೂ 'ಇಂಥವರ ಸೇವೆ' ಎಂದು ಈಗ ತಮ್ಮ ಹೆಸರನ್ನು ಬರೆಸಿಕೊಳ್ಳುತ್ತಾರೆ. ತನಗಾದ ಅವಮಾನವನ್ನು ಯಾವನು ಹೇಳಿಕೊಂಡಾನು?

ಈ ಒಂಬತ್ತು ಗುಟ್ಟಾಗಿರಬೇಕಾದವು.

**ಅಮಂತ್ರಮಕ್ಷರಂ ನಾಸ್ತಿ ನಾಸ್ತಿ ಮೂಲಮನೌಷಧಂ ।**
**ಅಯೋಗ್ಯಃ ಪುರುಷೋ ನಾಸ್ತಿ ಯೋಜಕಸ್ತತ್ರ ದುರ್ಲಭಃ ॥೪೯॥**

— *ಸುಭಾಷಿತರತ್ನ-ಭಾಂಡಾಗಾರ*

"ಮಂತ್ರವಾಗದ ಅಕ್ಷರವಿಲ್ಲ. ಔಷಧವಾಗದ ಮೂಲಿಕೆ ಇಲ್ಲ. ಕಾರ್ಯಸಮರ್ಥನಾಗದ ಮನುಷ್ಯನಿಲ್ಲ. ಆದರೆ ಪ್ರಯೋಜನಕಾರಿಯಾಗುವಂತೆ ಇದನ್ನು ಜೋಡಿಸತಕ್ಕವನು ದುರ್ಲಭ."

ಅಕಾರದಿಂದ ಹಕಾರದವರೆಗಿನ ಎಲ್ಲ ಅಕ್ಷರಗಳೂ ಮಂತ್ರಗಳಲ್ಲಿ ಇರುತ್ತವೆ. ಈ ಅಕ್ಷರಗಳಿಂದಲೇ ವೇದಗಳೂ ಶಾಸ್ತ್ರಗಳೂ ಕಾವ್ಯಸಾಹಿತ್ಯಗಳೂ ನಿರ್ಮಿತವಾದದ್ದು. ಸಮಸ್ತ ವಾಙ್ಮಯವೂ ಅಕ್ಷರಗಳ ಜೋಡಣೆಯೇ ಆಗಿದೆ. ಅಂ, ಯಂ, ರಂ, ಕ್ಷಂ, ಹ್ರೀಂ - ಮುಂತಾದ ಬೀಜಾಕ್ಷರಗಳೆಲ್ಲವೂ ಮಂತ್ರಗಳಾಗಿ ಉಪಯುಕ್ತವಾಗುತ್ತವೆ. ಆದರೆ ಅವುಗಳ ಜೋಡಣೆ ಹೇಗೆ? ಯಾವುದಕ್ಕೆ ಯಾವ ಫಲ? - ಎಂಬುದನ್ನರಿತವರು ವಿರಳ. ಉದಾಹರಣೆಗೆ, ಅಕಾರವನ್ನೂ ಅಕ್ಷರಮಾಲೆಯ ಕಡೆಯಲ್ಲಿರುವ ಹಕಾರವನ್ನೂ ಸೇರಿಸಿದರೆ 'ಅಹಂ' ಎಂದಾಗುತ್ತದೆ. ಈ ಶಬ್ದವು ಸಮಸ್ತ ಅಕ್ಷರಗಳಿಗೆ ಮತ್ತು ಸಮಸ್ತ ವಿಶ್ವಕ್ಕೆ ಪ್ರತಿನಿಧಿ. ಅಹಂ - ನಾನು, ಸಃ - ಆತನು (ಪರಮಾತ್ಮನು). ಈ ಮೂರು ಅಕ್ಷರಗಳ ಯೋಜನೆಯಿಂದ ಅಜಪಾಮಂತ್ರವು ನಿಷ್ಪನ್ನವಾಗುತ್ತದೆ.

ಔಷಧಿಯೆಂದರೆ ವನಸ್ಪತಿ, ಗಿಡ, ಬಳ್ಳಿ ಮೊದಲಾದ ಮೂಲಿಕೆ. ಇದರಿಂದಾದದ್ದು ಔಷಧ. ಪ್ರತಿಯೊಂದು ಮೂಲಿಕೆಯೂ ಔಷಧಕ್ಕೆ ಬರತಕ್ಕದ್ದೇ.

ಕೆಲವು ಸ್ವತಂತ್ರವಾಗಿ, ಕೆಲವು ಅನ್ಯಮೂಲಿಕೆಗಳೊಡನೆ ಸಂಮಿಶ್ರವಾಗಿ ರೋಗಹರವಾಗುತ್ತವೆ. ವ್ಯರ್ಥವಾದ ಗಿಡ, ಬಳ್ಳಿಗಳು ಒಂದೂ ಇಲ್ಲ. ಅಷ್ಟೇಕೆ, ವ್ಯರ್ಥವಾದ ಒಂದೇ ಒಂದು ಜೀವಿಯಾಗಲಿ, ಜಡವಸ್ತುವಾಗಲಿ, ಜಗತ್ತಿನಲ್ಲಿರಲಾರದು. ಒಂದು ಮಹಾಯಂತ್ರದಲ್ಲಿ ಉಪಯೋಗವಿಲ್ಲದ ಒಂದು ಕೀಲನ್ನೂ ಯಂತ್ರನಿರ್ಮಾತನು ಸೇರಿಸಿರುವುದಿಲ್ಲ. ಭಗವಂತನ ಸೃಷ್ಟಿ ಬಂಜೆಯಲ್ಲ.

ಭಾರತದಲ್ಲಿ ಅಗಾಧವಾದ ಜನಸಂಖ್ಯೆ ಇದೆ. ಈ ಜನಶಕ್ತಿಯನ್ನು ನಾವು ಬಳಸಿಕೊಳ್ಳಲಾರದೆ ಹೋಗಿದ್ದೇವೆ. ಬಡತನ, ಅಜ್ಞಾನಗಳಿಗೆ ಜನಸಂಖ್ಯೆಯ ಹೆಚ್ಚಳವೇ ಕಾರಣವೆಂದು ನಮ್ಮ ನಾಯಕರು ಘೋಷಿಸುತ್ತಿದ್ದಾರೆ. ಸಾಧನಸಂಪತ್ತೇ ನಮಗೆ ತೊಡರುಗಾಲನ್ನಿಡುತ್ತದೆ. ಹೊಲದ ಆಧಿಕ್ಯವೇ ಸರಿಯಾಗಿ ಕೃಷಿಮಾಡಲು ಅಡ್ಡಿಯಾಗಿದೆ ಎಂದು ಹೇಳಿದಂತೆ ಇದು. ಜಪಾನೀಯರಿಗೆ ಕೃಷಿಭೂಮಿ ಅಲ್ಪವಾದ್ದರಿಂದಲೇ ಹೆಚ್ಚು ಬೆಳೆಯಲು ಸಾಧ್ಯವಾಯಿತಲ್ಲವೆ! ಸಮರ್ಥರಾದ ಯೋಜಕರಿದ್ದರೆ ಭಿಕ್ಷುಕರಿಂದಲೂ ಕುಂಟ, ಕುರುಡರಿಂದಲೂ ಸಂಪದಭಿವೃದ್ಧಿಯನ್ನು ಮಾಡಿಸಲು ಶಕ್ಯವಿದೆ. ಕಳ್ಳಸಾಗಾಣಿಕೆದಾರ ವೀರಪ್ಪನ್ ದುರ್ಮಾರ್ಗದಲ್ಲಿ ತಾನು ಎಷ್ಟು ಸಮರ್ಥನೆಂಬುದನ್ನು ತೋರಿಸಿಕೊಟ್ಟಿದ್ದಾನೆ. ಅವನನ್ನು ಸನ್ಮಾರ್ಗದಲ್ಲಿ ಯೋಜಿಸಿದ್ದರೆ ಅತ್ಯಂತ ದಕ್ಷ ಪೊಲೀಸ್ ಅಧಿಕಾರಿಯಾಗುತ್ತಿದ್ದ.

**ಅಯೋಗ್ಯಃ ಪುರುಷೋ ನಾಸ್ತಿ, ಯೋಜಕಸ್ತತ್ರ ದುರ್ಲಭಃ॥**

**ಅಸಂಕಲ್ಪಾಜ್ಜಯೇತ್ ಕಾಮಂ ಕ್ರೋಧಂ ಕಾಮವಿವರ್ಜನಾತ್ ।**
**ಅರ್ಥಾನರ್ಥೇಕ್ಷಯಾ ಲೋಭಂ ಭಯಂ ತತ್ತ್ವಾವಮರ್ಶನಾತ್ ॥೫೦॥**

— *ಭಾಗವತ, ೭-೧೫-೨೨*

"ಒಂದು ವಸ್ತು ಬೇಕೆಂದು ಸಂಕಲ್ಪಿಸದಿರುವ ಮೂಲಕ ಕಾಮವನ್ನು ಗೆಲ್ಲಬೇಕು. ಕಾಮವನ್ನು ತ್ಯಜಿಸುವುದರ ಮೂಲಕ ಕ್ರೋಧವನ್ನು ಗೆಲ್ಲಬಹುದು. ಹಣವು ಅನರ್ಥಕಾರಿಯೆಂದು ವೀಕ್ಷಿಸುವುದರಿಂದ ಲೋಭವನ್ನು ಗೆಲ್ಲಬಹುದು. ತತ್ತ್ವದ ವಿಮರ್ಶೆಯಿಂದ ಭಯವನ್ನು ಜಯಿಸಬೇಕು."

ಕಾಮ, ಕ್ರೋಧ, ಲೋಭ, ಭಯ - ಇವು ನಾಲ್ಕೂ ಮನುಷ್ಯನಿಗೆ ಕಷ್ಟವನ್ನು ತಂದೊಡ್ಡತಕ್ಕವು. ಇವನ್ನು ಜಯಿಸಬೇಕೆಂದು ಎಲ್ಲ ಸಂತರೂ ಉಪದೇಶಿಸುತ್ತಲೇ ಬಂದಿದ್ದಾರೆ. ಇವು ಕೆಟ್ಟ ಗುಣಗಳೆಂದು ಮನುಷ್ಯನಿಗೆ ಗೊತ್ತಿದೆ. ಆದರೂ ಇವನ್ನು ತ್ಯಜಿಸಲಾರದೆ ಪರಿತಪಿಸುತ್ತಾನೆ. ಕಾಮ-ಕ್ರೋಧಾದಿಗಳು ಮನೋವಿಕಾರಗಳು. ಒಂದು ಬಗೆಯ ಮನೋರೋಗಗಳೆನ್ನಬಹುದು. ರೋಗದ ಕಾರಣವು ತಿಳಿದರೆ ಚಿಕಿತ್ಸೆ ಮಾಡುವುದು ಸುಲಭ.

ಕಾಮವೆಂದರೆ ಪ್ರಿಯವಾದ ವಸ್ತುವಿನ ಆಸೆ. ಆ ವಸ್ತು ತನಗೆ ಬೇಕೆಂದು ಸಂಕಲ್ಪಿಸಿಕೊಳ್ಳುವುದರಿಂದ ಆಸೆ ಹುಟ್ಟಿ ಚಿಗುರಿ ಬಳ್ಳಿಯಾಗಿ ಹಬ್ಬಿಕೊಳ್ಳುತ್ತದೆ. ಅದು ಬೇಕೆಂದು ಸಂಕಲ್ಪಿಸಿಕೊಳ್ಳದಿರುವುದೇ ಕಾಮವನ್ನು ಗೆಲ್ಲುವ ಉಪಾಯ.

**ಕಾಮ ಜಾನಾಮಿ ತೇ ಮೂಲಂ ಸಂಕಲ್ಪಾತ್ತ್ವಂ ಹಿ ಜಾಯಸೇ ।**
**ನ ತ್ವಾಂ ಸಂಕಲ್ಪಯಿಷ್ಯಾಮಿ ತೇನ ತ್ವಂ ನ ಭವಿಷ್ಯಸಿ ॥**

— ಎಂದು ಸುಭಾಷಿತಶ್ಲೋಕವಿದೆ. "ಎಲೈ ಕಾಮ, ನಿನ್ನ ಮೂಲವೇನೆಂಬುದು ನನಗೆ ಗೊತ್ತಿದೆ. ಸಂಕಲ್ಪದಿಂದಲ್ಲವೆ ನೀನು ಹುಟ್ಟುವುದು. ಆ ವಸ್ತು ಬೇಕೆಂದು ನಾನು ಸಂಕಲ್ಪಿಸಿಕೊಳ್ಳುವುದೇ ಇಲ್ಲ! ಆಗ ನೀನು ಇರುವುದೇ ಇಲ್ಲ!"

ಕಾಮವನ್ನು ಗೆದ್ದರೆ ಕ್ರೋಧವನ್ನು ಗೆದ್ದಂತೆಯೇ. ಕಾಮಕ್ಕೆ ಅಡ್ಡಿ ಬಂದರೆ ಅದೇ ಕ್ರೋಧವಾಗಿ ಪರಿಣಮಿಸುತ್ತದೆ. ನಮ್ಮ ಇಚ್ಛೆಗೆ ವಿರುದ್ಧವಾದದ್ದು ಘಟಿಸಿದಾಗಲೇ ಸಿಟ್ಟು ಬರುತ್ತದೆ. ಘರ್ಷಣೆಯಿಂದ ಕಾಮ ಹುಟ್ಟುತ್ತದೆ.

ಲೋಭಕ್ಕೆ ಕಾರಣವಾದದ್ದು ಹಣ, ಆಸ್ತಿ. ಸುಗಮ ಜೀವನಕ್ಕೆ ಹಣವು ಎಲ್ಲರಿಗೂ ಆವಶ್ಯಕವೇ. ಆವಶ್ಯಕವಾದ್ದಕ್ಕಿಂತ ಹೆಚ್ಚನ್ನು ಗಳಿಸಿ ಉಳಿಸಿಕೊಳ್ಳುವುದು ಲೋಭ. ಇದು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದದ್ದು. ಹಣವು ಬಳಕೆಗಾಗಿಯೇ ಹೊರತು ಪೆಟ್ಟಿಗೆಯಲ್ಲಿ ತುಂಬಿಡುವುದಕ್ಕಲ್ಲ. ಇದನ್ನರಿಯದೆ ಉಳಿಸಿಕೊಂಡ ಧನಸಂಚಯದಿಂದ ಆಗುವ ಅನರ್ಥಗಳನ್ನು ಸೂಕ್ಷ್ಮವಾಗಿ ಪರಿಭಾವಿಸಿದಾಗ ಧನಲೋಭವು ಹಿಂದೆ ಸರಿಯುತ್ತದೆ. ಔದಾರ್ಯವೆಂಬ ಶುಭಗುಣವು ತಲೆದೋರುತ್ತದೆ.

ಅಧರ್ಮವಾದೀತೆಂದು ಅಂಜುವುದು ಭಯವಲ್ಲ. ಅದು ಮನೋನಿಗ್ರಹ; ಧೀರತೆ. ಅದರಲ್ಲಿ ಮನಸ್ಸಿನ ನಡುಕವಿಲ್ಲ. ಒಳ್ಳೆಯ ಕೆಲಸಕ್ಕೆ ಅಂಜುವುದು ಭಯ.

ಸಾವು ಅನಿವಾರ್ಯವಾದ ಪ್ರಾಣಿಧರ್ಮ. ಅದಕ್ಕೆ ಅಂಜುವುದೂ ಭಯವೇ. ಈ ಹೆದರಿಕೆ ಮಾನವನ ಶತ್ರು. ಎಷ್ಟೇ ಕಷ್ಟವಾದರೂ ಧರ್ಮವು ಶ್ರೇಯಸ್ಕರವೆಂಬ ತತ್ತ್ವವನ್ನು ವಿಮರ್ಶಿಸಿದಾಗ ಮೊದಲನೆಯ ಭಯವು ನೀಗುತ್ತದೆ. ಚಳಿ, ಮಳೆ, ಬಿಸಿಲು - ಪ್ರಕೃತಿಧರ್ಮಗಳೆಂಬ ವಿವೇಚನೆಯಿಂದ ಅವನ್ನು ಸಹಿಸಿಕೊಳ್ಳುವಂತೆ, ಮರಣವೂ ಅನಿವಾರ್ಯವಾದ ಪ್ರಾಣಿಧರ್ಮವೆಂಬ ವಿವೇಚನೆಯಿಂದ ಎರಡನೆಯ ಭಯವನ್ನು ನೀಗಿಕೊಳ್ಳಬೇಕು. ತತ್ತ್ವಜ್ಞಾನಿಗೆ ಯಾವ ಭಯವೂ ಇಲ್ಲ.

ನಾಧರ್ಮಶ್ಚರಿತೋ ಲೋಕೇ ಸದ್ಯಃ ಫಲತಿ ಗೌರಿವ ।
ಶನೈರಾವರ್ತ್ಯಮಾನೋ ಹಿ ಕರ್ತುರ್ಮೂಲಾನಿ ಕೃಂತತಿ ॥೫೧॥

*— ಮಹಾಭಾರತ, ಆದಿಪರ್ವ, ೮೦-೨*

"ಅಧರ್ಮವನ್ನಾಚರಿಸಿದರೆ, ಹಸುವು ಶೀಘ್ರದಲ್ಲಿ ಫಲವನ್ನು ಕೊಟ್ಟು ಬಿಡುವಂತೆ, ಲೋಕದಲ್ಲಿ ಅಧರ್ಮವು ಶೀಘ್ರದಲ್ಲಿಯೇ ಫಲವನ್ನು ಕೊಟ್ಟುಬಿಡುವುದಿಲ್ಲ. ಅದು ಮೆಲ್ಲನೆ ಫಲಾಭಿಮುಖವಾಗಿ ಕರ್ತನ ಬುಡವನ್ನೇ ಕತ್ತರಿಸಿಹಾಕುತ್ತದೆ."

ಜನರು ಸುಳ್ಳು, ಮೋಸ, ಸಂಚು, ಭ್ರಷ್ಟಾಚಾರಾದಿಗಳಿಂದ ತಮ್ಮ ಇಷ್ಟಾರ್ಥವನ್ನು ಸಾಧಿಸಿಕೊಳ್ಳುತ್ತಾರೆ. ಇಂತಹ ಜನರ ಸಂಖ್ಯೆ ಈಗಲಂತೂ ಅಧಿಕವಾಗಿದೆ. ಅವರು ಹಣ, ಅಧಿಕಾರ - ಮೊದಲಾದವುಗಳನ್ನು ಗಳಿಸಿ ಸುಖವಾಗಿಯೇ ಇರುವುದನ್ನು ನಾವು ಕಾಣುತ್ತೇವೆ. ಅವರನ್ನು ಕಂಡು ಇತರರಿಗೂ ದುರ್ಮಾರ್ಗದಿಂದ ಹಣವನ್ನು ಸಂಪಾದಿಸುವ ಇಚ್ಛೆ ಪ್ರಬಲವಾಗುತ್ತದೆ. ಲಂಚ, ವಂಚನೆ, ದರೋಡೆಗಳ ಹಾವಳಿ ದಿನೇ ದಿನೇ ಹೆಚ್ಚುವುದಕ್ಕೆ ಜನರ ದುರಾಸೆಯೇ ಕಾರಣವಾಗಿರುತ್ತದೆ. "ಈ ಕಾಲದಲ್ಲಿ ಸತ್ಯ, ಧರ್ಮಗಳಿಗೆ ಬೆಲೆ ಇಲ್ಲ. ಧರ್ಮ-ಅಧರ್ಮ, ನ್ಯಾಯ-ಅನ್ಯಾಯವೆಂದು ಎಣಿಸುತ್ತಿದ್ದರೆ ನಾವು ಕಷ್ಟದಲ್ಲಿಯೇ ಕೊಳೆಯಬೇಕಾಗುತ್ತದೆ" ಎಂಬ ಭಾವನೆ ಬೆಳೆಯುತ್ತಿದೆ. ದುರ್ಮಾರ್ಗದಲ್ಲಿ ಧನ, ಅಧಿಕಾರಗಳನ್ನು ಸಂಪಾದಿಸಿ ವೈಭವದಿಂದ ಮೆರೆಯುತ್ತಿರುವ ಜನರು ಇವರಿಗೆ ಆದರ್ಶಪುರುಷರು. ಅನ್ಯಾಯವನ್ನು ನಡೆಸಿದ್ದರಿಂದ ಈ ಜನರಿಗೆ ಯಾವ ತೊಂದರೆಯಾಗಿದೆ? - ಎಂಬ ಪ್ರಶ್ನೆ ಪ್ರಜಾಸಾಮಾನ್ಯನಲ್ಲಿ ಹುಟ್ಟಿರುವುದು ಆಶ್ಚರ್ಯವಲ್ಲ.

ಮೇಲ್ಕಂಡ ನೀತಿಶ್ಲೋಕವು ಶುಕ್ರಾಚಾರ್ಯನು ವೃಷಪರ್ವನೆಂಬ ರಾಜನಿಗೆ ಹೇಳಿದ್ದು. ಹಸುವಿಗೆ ಪೌಷ್ಟಿಕವಾದ ತಿನಿಸನ್ನು ಕೊಟ್ಟರೆ ಅದು ಹೆಚ್ಚು ಹಾಲನ್ನು ಕೊಡುವುದು ಎಲ್ಲರ ಅನುಭವದಲ್ಲಿದೆ. ಈ ತಿನಿಸು ಶೀಘ್ರದಲ್ಲಿ ಫಲವನ್ನು ನೀಡುತ್ತದೆ. ಅಧರ್ಮವು ಹಾಗಲ್ಲ. ಅದು ಕೂಡಲೇ ತನ್ನ ಪ್ರತಾಪವನ್ನು ತೋರಿಸದು. ಏಕೆಂದರೆ, ಕರ್ತನ ಯಾವುದೋ ಒಂದು ಸುಕೃತವು ಪುಣ್ಯಫಲವನ್ನು ನೀಡಲು ಆರಂಭಿಸಿರುತ್ತದೆ. ಅದು ಕಳೆಯುವವರೆಗೆ ಕಾಯುತ್ತದೆ. ಇದು ಧರ್ಮಕಾರ್ಯಕ್ಕೂ ಉಪಲಕ್ಷಣ. ಪುಣ್ಯಕಾರ್ಯವೂ ಕೂಡಲೇ ಫಲವನ್ನು ನೀಡುವುದಿಲ್ಲ.

ರಾವಣ, ದುರ್ಯೋಧನಾದಿಗಳೇ ಉದಾಹರಣೆ. ಅವರು ವೈಭವದಿಂದಲೇ ಬಹಳ ಕಾಲ ಬಾಳಿದರು. ಅವರ ಸುಕೃತವು ಮುಗಿಯಲಾಗಿ ದುಷ್ಕೃತವು ಒಟ್ಟಿಗೆ ಫಲವನ್ನು ನೀಡಿತು. ಬಂಧುಬಳಗಸಹಿತವಾಗಿ ನಾಶವಾದರು. ಅಧರ್ಮವು ಅವರ ಬುಡವನ್ನೇ ಕತ್ತರಿಸಿಹಾಕಿತು. ನಳ, ಹರಿಶ್ಚಂದ್ರಾದಿಗಳ ಸುಕೃತವೂ ಅವರಿಗೆ ಕಾಲಾಂತರದಲ್ಲಿ ಫಲವನ್ನು ನೀಡಿತು. ಪಾಪಕೃತ್ಯವು ಒಡನೆಯೇ ತನ್ನ ಫಲವನ್ನು ಕೊಡುವುದಾಗಿದ್ದಲ್ಲಿ ಯಾರೂ ಪಾಪಕೃತ್ಯವನ್ನು ಮಾಡುತ್ತಲೇ ಇರಲಿಲ್ಲ.

ಅಧರ್ಮವು ಮಂದವಿಸರ್ಪಿವಿಷ ('ಸ್ಲೋ ಪಾಯಿಸನ್')ವಿದ್ದಂತೆ. ಈ ವಿಷವು ನರನಾಡಿಗಳಲ್ಲಿ ವ್ಯಾಪಿಸಿ ಜೀವಕಣಗಳನ್ನು ಕೆಡಿಸಿ ಒಂದು ದಿನ ಬಹಿರಂಗವಾಗಿ ವಿಜೃಂಭಿಸುತ್ತದೆ. ಅಂತಹ ರೋಗವನ್ನು ಯಾವ ವೈದ್ಯನೂ ಗುಣಪಡಿಸಲಾರ.

**ಅತಃ ಪರೀಕ್ಷ್ಯ ಕರ್ತವ್ಯಂ ವಿಶೇಷಾತ್ ಸಂಗತಂ ರಹಃ ।**
**ಅಜ್ಞಾತಹೃದಯೇಷ್ವೇವಂ ವೈರೀಭವತಿ ಸೌಹೃದಮ್ ॥೫೨॥**

— *ಅಭಿಜ್ಞಾನಶಾಕುಂತಲ, ೫-೨೪*

"ಆದ್ದರಿಂದ ಒಬ್ಬರೊಡನೆ ಸ್ನೇಹವನ್ನು ಮಾಡಿಕೊಳ್ಳಬೇಕಾದರೆ, ಅದರಲ್ಲಿಯೂ ರಹಸ್ಯವಾಗಿ ದಾಂಪತ್ಯಸಂಬಂಧವನ್ನು ಬೆಳೆಸಬೇಕಾದರೆ, ಸರಿಯಾಗಿ ಪರೀಕ್ಷಿಸಿ ಮುಂದುವರಿಯಬೇಕು. ಒಬ್ಬರ ಹೃದಯವನ್ನು ತಿಳಿಯದೆ ಮಾಡಿಕೊಂಡ ಸ್ನೇಹವೇ ಈ ರೀತಿಯಲ್ಲಿ ವೈರಿಯಾಗಿಬಿಡುತ್ತದೆ."

ದುರ್ವಾಸಮುನಿಯ ಶಾಪದಿಂದಾದ ಮರವೆಯಿಂದ ದುಷ್ಯಂತನು ಶಕುಂತಲೆಯನ್ನು ತನ್ನ ಪತ್ನಿಯೆಂದು ಸ್ವೀಕರಿಸದೆ ನಿರಾಕರಿಸುತ್ತಾನೆ. ಆಗ ಶಕುಂತಲೆ ತನ್ನನ್ನು ದುಷ್ಯಂತನು ವಂಚಿಸಿ ಕಷ್ಟಕ್ಕೆ ಈಡುಮಾಡಿದನೆಂದು ಅಳುತ್ತಾಳೆ. ಅವಳನ್ನು ಕಳಿಸಲು ಬಂದ ಕಣ್ವಮುನಿಯ ಶಿಷ್ಯನಾದ ಶಾರ್ಙ್ಗರವನು ಆಗ ಹೇಳುವ ಮಾತಿದು. ಹೀಗೆ ಗುಟ್ಟಿನಲ್ಲಿ ಮಾಡಿಕೊಂಡ ಚಾಪಲ್ಯಕೃತ್ಯವು ತಿರಸ್ಕೃತವಾಗಿ ತನ್ನನ್ನೇ ಸುಡುತ್ತದೆ - ಎಂದು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾನೆ. ನಮ್ಮ ಯುವಕ-ಯುವತಿಯರು ಇದರಿಂದ ಪಾಠವನ್ನು ಕಲಿತರೆ, ಎಷ್ಟೋ ಇಕ್ಕಟ್ಟಿನ ಪ್ರಸಂಗಗಳಿಂದ ಪಾರಾಗಬಹುದು.

ಸಂಪೂರ್ಣ ವಿಶ್ವಾಸಯೋಗ್ಯನಾದವನು ಮಿತ್ರ. ಈರ್ವರ ಗುಣಸ್ವಭಾವಗಳಲ್ಲಿ ಸಾಮ್ಯವಿದ್ದಾಗ ಮೈತ್ರಿ ಬೆಳೆಯುತ್ತದೆ. ಸುಖದುಃಖಗಳೆರಡರಲ್ಲಿಯೂ ಸ್ನೇಹಿತನು ಸಮಭಾಗಿಯಾಗಿರುತ್ತಾನೆ. ಪ್ರತಿಫಲಾಪೇಕ್ಷೆಯಿಂದಾದದ್ದು ಸ್ನೇಹವಲ್ಲ. ನಿಮಿತ್ತಾಂತರದಿಂದಾದ ದೀರ್ಘಕಾಲದ ಪರಿಚಯವೂ ಸ್ನೇಹವಲ್ಲ. ಒಂದು ಶಾಲೆಯಲ್ಲಿಯೋ ಕಛೇರಿಯಲ್ಲಿಯೋ ಸೇರುವುದರಿಂದ ಇಬ್ಬರಿಗೆ ದೃಢವಾದ ಪರಿಚಯವೇನೋ ಏರ್ಪಡುತ್ತದೆ. ಅವರಿಗೆ ವರ್ಗವಾದಾಗ ಅಥವಾ ನಿವೃತ್ತಿಯಾದಾಗ ಈ ಪರಿಚಯ ಸಡಿಲುತ್ತದೆ. ಸ್ನೇಹವು ಸಡಿಲುವಂತಹುದಲ್ಲ. ಎಣ್ಣೆಯ ಜಿಡ್ಡಿಗೆ ಸ್ನೇಹವೆಂದು ಹೆಸರಿದೆ. ಜಿಡ್ಡಿನಂತೆ ಅಂಟಿಕೊಳ್ಳತಕ್ಕದ್ದು ಮೈತ್ರಿ. ಅದು ತಾನಾಗಿ ಹೋಗತಕ್ಕದ್ದಲ್ಲ.

ರಾಜಕೀಯದಲ್ಲಿ ಸ್ನೇಹವಾಗಲಿ, ದ್ವೇಷವಾಗಲಿ ಶಾಶ್ವತವಲ್ಲ - ಎಂದು ರಾಜಕೀಯಸ್ಥರು ಹೇಳುತ್ತಾರೆ. ಅದು ಸ್ನೇಹವೂ ಅಲ್ಲ, ದ್ವೇಷವೂ ಅಲ್ಲ ; ಸ್ವಾರ್ಥದಿಂದ ಪ್ರೇರಿತವಾದ ಮತ್ತು ಫಲಾಪೇಕ್ಷೆಯಾದ ಒಂದು ವ್ಯವಹಾರತಂತ್ರ ಅದು. ಅದನ್ನು ಕಲ್ಪಿತಸ್ನೇಹವೆಂದೋ ಕಲ್ಪಿತದ್ವೇಷವೆಂದೋ ಹೇಳಬಹುದು. ಅದನ್ನು ಸೂಚಿಸುವ ಸರಿಯಾದ ಶಬ್ದವು ಕಾಣಸುವುದಿಲ್ಲ.

ಬಾಂಧವ್ಯವೂ ಸ್ನೇಹವೂ ಒಂದೇ ಅಲ್ಲ. ಬಂಧುಗಳೆಲ್ಲರೂ ಸ್ನೇಹಿತರಾಗಲಾರರು. ಬಾಂಧವ್ಯದಲ್ಲಿ ಎರಡು ಬಗೆಯುಂಟು. ಹುಟ್ಟಿನಿಂದ ಬಂದದ್ದು ಒಂದು. ಮದುವೆಯ ಕಟ್ಟಿನಿಂದ ಬಂದದ್ದು ಇನ್ನೊಂದು. ಬಾಂಧವ್ಯದ ನಿರ್ವಹಣೆಯಲ್ಲಿ ಸಾಮಾಜಿಕವಾದ ಹೊಣೆ ಇದೆ. ಸ್ನೇಹದ ನಿರ್ವಹಣೆಯಲ್ಲಿ ಹೃದಯದ ಹೊಣೆ

ಇದೆ. ದಾಂಪತ್ಯದಲ್ಲಿ ಸಾಮಾಜಿಕವಾದ ಮತ್ತು ಹಾರ್ದಿಕವಾದ ಎರಡು ಹೊಣೆಗಳೂ ಇವೆ. ಆದ್ದರಿಂದಲೇ - ದಾಂಪತ್ಯದಲ್ಲಿ ಹೊಣೆಯು ಅಧಿಕವಾಗಿರುವುದರಿಂದಲೇ - "ಪರೀಕ್ಷ್ಯ ಕರ್ತವ್ಯಂ ವಿಶೇಷಾತ್ ಸಂಗತಂ ರಹಃ" ಎಂದು ವಿಶೇಷ ಪರೀಕ್ಷೆಯನ್ನು ಹೇಳಿದ್ದು ಅರ್ಥವತ್ತಾಗಿದೆ.

**ನಾತ್ಮಾನಮವಮನ್ಯೇತ ಪೂರ್ವಾಭಿರಸಮೃದ್ಧಿಭಿಃ ।**
**ಆಮೃತ್ಯೋಃ ಶ್ರಿಯಮನ್ವಿಚ್ಛೇತ್ ನೈನಾಂ ಮನ್ಯೇತ ದುರ್ಲಭಾಮ್ ॥೫೩॥**

*— ಮನುಸ್ಮೃತಿ, ೪-೧೩೭*

"ಇದುವರೆಗೂ ಇಷ್ಟವಾದದ್ದು ಸಮೃದ್ಧವಾಗಿ ದೊರಕಲಿಲ್ಲವೆಂದು ಹಿಂದಿನ ಕೊರತೆಯನ್ನು ನೆನೆಸಿಕೊಂಡು ಯಾರೂ ತಮ್ಮನ್ನು ನಿಂದಿಸಿಕೊಳ್ಳಬಾರದು. ಇಷ್ಟವಾದ ಸಂಪತ್ತಿಗಾಗಿ ಸಾಯುವವರೆಗೂ ಯತ್ನಿಸುತ್ತಲೇ ಇರಬೇಕು. ಅದು ತನಗೆ ದುರ್ಲಭವೆಂದು ಯಾರೂ ಬಗೆಯಬಾರದು."

ಆಧುನಿಕ ವಿಚಾರವಾದಿಗಳಿಂದ 'ದೈವವಾದಿ'ಯೆಂದು ನಿಂದೆಗೆ ಗುರಿಯಾದ ಮನುಮಹಾಶಯನ ಹಿತವಚನವಿದು. ಜೀವನದಲ್ಲಿ ನಿರಾಶರಾದವರಿಗೆ ಉತ್ಸಾಹವನ್ನು ಚಿಮ್ಮಿಸಿ ಕಾರ್ಯೋನ್ಮುಖರನ್ನಾಗಿ ಮಾಡಲು ಇದಕ್ಕಿಂತ ಹೆಚ್ಚಿನದಾದ ಇನ್ನೊಂದು ಉಪದೇಶವಿರಲಾರದು. ಸಮೃದ್ಧಿ, ಶ್ರೀ - ಎಂಬ ಶಬ್ದಗಳು ಅನೇಕಾರ್ಥಗರ್ಭಿತ ವಾದವು. ಹಣ, ವಿದ್ಯೆ, ಕೀರ್ತಿ, ಆರೋಗ್ಯ, ಅಧಿಕಾರ - ಮುಂತಾದ್ದರಲ್ಲಿ ಯಾವ ಯಾವ ಅಭ್ಯುದಯವನ್ನು ಮನುಷ್ಯನು ಬಯಸುತ್ತಾನೋ ಆ ಎಲ್ಲ ಅಭ್ಯುದಯಗಳನ್ನೂ ಈ ಶಬ್ದಗಳು ಲಕ್ಷಿಸುತ್ತವೆ. ಯಾವ ಉದ್ಯೋಗಕ್ಕೆ ಕೈಯಿಟ್ಟರೂ ಸೋಲನ್ನು ಮಾತ್ರ ಕಂಡವರು ಅನೇಕರಿರಬಹುದು. ಅವರಿಗೆ ಕೈಹಿಡಿದದ್ದು ದಕ್ಕದೆಹೋಗಿರಬಹುದು. ಅದರಿಂದ ಮನುಷ್ಯನು ನಿರಾಶನಾಗಿ "ಅಯ್ಯೋ, ನಾನು ದುರ್ದೈವಿ, ದುರ್ಭಾಗ್ಯ" ಎಂದು ತನ್ನನ್ನು ಹಳಿದುಕೊಳ್ಳುವುದುಂಟು. ಎಲ್ಲೆಡೆಯೂ ನಷ್ಟವೇ ಸಂಭವಿಸಿದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳತಕ್ಕ ನಿರಾಶಾವಾದಿಗಳೂ ಇದ್ದಾರೆ. ಒಂದು ಜೇಡರಹುಳು ಬಲೆಯನ್ನು ಹೆಣೆಯುವಾಗ ದಾರವು ಮತ್ತೆ ಮತ್ತೆ ಕಿತ್ತುಹೋಗುತ್ತಿತ್ತಂತೆ. ಆದರೂ ಅದು ಕೈಬಿಡದೆ ಪ್ರಯತ್ನಿಸಿ ಬಲೆಯನ್ನು ನೆಯ್ದೇಬಿಟ್ಟಿತೆಂದೂ, ಅದನ್ನು ಕಂಡು

ನಿರಾಶನಾಗಿದ್ದ ರಾಜನೊಬ್ಬನು ಮತ್ತೆ ಪ್ರಯತ್ನಿಸಿ ಶತ್ರುಗಳನ್ನು ಗೆದ್ದು ತನ್ನ ರಾಜ್ಯವನ್ನು ಪಡೆದುಕೊಂಡನೆಂದೂ ಕಥೆಯುಂಟು.

ವಿದ್ಯೆಯೂ ಬಹುಪ್ರಯತ್ನಲಭ್ಯವಾದದ್ದು. ಭಾರವಿ, ಮಲ್ಲಿನಾಥ, ನಾಗೇಶಭಟ್ಟ - ಮೊದಲಾದವರು, ವಿದ್ಯೆಯು ತಲೆಗೆ ಹತ್ತದೆ ಜನರ ನಿಂದೆಗೆ ಗುರಿಯಾದರೆಂದೂ ಅನಂತರ ದೇಶಾಂತರಕ್ಕೆ ಹೋಗಿ ಹಠದಿಂದ ವಿದ್ಯಾಭ್ಯಾಸ ಮಾಡಿ ವಿಖ್ಯಾತ ವಿದ್ವಾಂಸರಾದರೆಂದೂ ಪ್ರಸಿದ್ಧಿಯುಂಟು. ಅದೃಷ್ಟವಾದವು ಮನುಷ್ಯನ ಪೌರುಷವಾದಕ್ಕೆ ವಿರುದ್ಧವಾದ್ದಲ್ಲ. ಅದೃಷ್ಟವಾದವು ಕರ್ಮವಾದವನ್ನವಲಂಬಿಸಿದೆ. ನಮಗೆ ಯಾವಯಾವ ಅಡ್ಡಿ-ಆತಂಕಗಳು ಬಂದರೂ ಅವುಗಳಿಗೆ ನಾವೇ ಹೊಣೆಯೆಂದೂ ನಮ್ಮ ಪೂರ್ವಕರ್ಮಗಳಿಂದಲೇ ಅವು ಕಾಣಿಸಿಕೊಳ್ಳುತ್ತವೆಂದೂ ಕರ್ಮವಾದವು ತಿಳಿಸುತ್ತದೆ. ನಾವು ಗಳಿಸಿದ್ದನ್ನು ನಾವೇ ಅಳಿಸಿಹಾಕಬೇಕು. ನಾವು ತಿಂದದ್ದನ್ನು ನಾವೇ ಅರಗಿಸಿಕೊಳ್ಳಬೇಕು. ನಾವು ಕಟ್ಟಿದ್ದನ್ನು ನಾವೇ ಬಿಚ್ಚಬೇಕು. ದುಷ್ಟವಾದ ಆಹಾರವಿಹಾರಗಳಿಂದ ಆರೋಗ್ಯವನ್ನು ಕೆಡಿಸಿಕೊಂಡವನು ಪಥ್ಯಚಿಕಿತ್ಸೆಗಳಿಂದ ಮತ್ತೆ ಆರೋಗ್ಯವನ್ನು ಪಡೆಯಬೇಕಾಗುತ್ತದೆ. ನಮ್ಮ ಕಷ್ಟಕ್ಕೆ ಯಾವ ದೈವವೂ ಕಾರಣವಲ್ಲ, ನಮ್ಮ ಕರ್ಮವೇ ಕಾರಣವೆಂಬುದೇ ಕರ್ಮವಾದದ ತಿರುಳು. ಹೊಣೆಯು ನಮ್ಮ ಮೇಲೆಯೇ ಉಳಿದಾಗ ಪುನಃ ಕಾರ್ಯೋನ್ಮುಖರಾಗಿ ಪ್ರಯತ್ನಿಸುವುದೇ ದಾರಿಯಲ್ಲದೆ ಬೇರೊಂದು ಮಾರ್ಗವೇ ಉಳಿಯುವುದಿಲ್ಲ. ವಿಶ್ವಾಮಿತ್ರನು ತನ್ನ ಕರ್ಮಶೇಷದಿಂದ ಕ್ಷತ್ರಿಯರಾಜನಾಗಿ ಹುಟ್ಟಿದ; ತನ್ನ ಪೌರುಷದಿಂದಲೇ ಪೂರ್ವಸಂಚಿತವನ್ನು ತುಳಿದು ಬ್ರಹ್ಮರ್ಷಿಯಾದನೆಂದು ಪುರಾಣಕಥೆ ಇದೆ. ಅದೃಷ್ಟವಾದವು ಪೌರುಷವಾದದ ಪ್ರತಿಷ್ಠೆಗೆ ನೆಲಗಟ್ಟು.

ಪ್ರಜ್ಞಯಾ ಮಾನಸಂ ದುಃಖಂ ಹನ್ಯಾಚ್ಛಾರೀರಮೌಷಧೈಃ ।
ಏತದ್ವಿಜ್ಞಾನಸಾಮರ್ಥ್ಯಂ ನ ಬಾಲೈಃ ಸಮತಾಮಿಯಾತ್ ॥೫೪॥

— *ಮಹಾಭಾರತ, ಸ್ತ್ರೀಪರ್ವ, ೨-೨೧*

"ಮಾನಸಿಕವಾದ ದುಃಖವನ್ನು ವಿಚಾರಶಕ್ತಿಯಿಂದ ಹೋಗಲಾಡಿಸಿ ಕೊಳ್ಳಬೇಕು. ದೇಹಕ್ಕೆ ಬಂದ ಆಪತ್ತನ್ನು ಔಷಧಗಳಿಂದ ಗುಣಪಡಿಸಿ

ಕೊಳ್ಳಬೇಕು. ಬುದ್ಧಿಸಾಮರ್ಥ್ಯವೆಂದರೆ ಇದೇ. ಇದನ್ನು ಬಿಟ್ಟು ಬಾಲಿಶರಂತೆ ವರ್ತಿಸಬಾರದು."

ಮಹಾಭಾರತಯುದ್ಧದಲ್ಲಿ ಧೃತರಾಷ್ಟ್ರನ ಎಲ್ಲ ಮಕ್ಕಳೂ ಬಂಧುಗಳೂ ಮಡಿದುಹೋದರು. ಆಗ ಕುರುಡನಾದ ಈ ವೃದ್ಧನು ಶೋಕಸಂತಪ್ತನಾಗಿ ಅಳತೊಡಗಿದ. ಯಾರಿಗೂ ಅವನನ್ನು ಸಂತೈಸಲಾಗಲಿಲ್ಲ. ವಿದುರನು ಬಂದು ಧೃತರಾಷ್ಟ್ರನಿಗೆ ಸಮಾಧಾನದ ಮಾತುಗಳನ್ನಾಡುತ್ತಾನೆ. ವಿದುರನು ಹೇಳಿದ ಮಾತುಗಳಲ್ಲಿ ಈ ಶ್ಲೋಕ ಒಂದು.

ಮನುಷ್ಯನಿಗೆ ಬರುವ ಕಷ್ಟವು ಎರಡು ವಿಧ. ದೇಹಕ್ಕೆ ಒದಗುವ ರೋಗರುಜಿನಗಳು ಒಂದು. ಇದು ಶರೀರಸಂಬಂಧಿ. ಪ್ರಿಯಜನರ ಸಾವು, ಧನಹಾನಿ, ಗೃಹನಾಶ ಮೊದಲಾದವು ಇನ್ನೊಂದು. ಇದರಿಂದಾಗುವ ಶೋಕವು ಮಾನಸಿಕ. ಇವು ಪ್ರಾಪ್ತವಾದಾಗ ಪರಿಹಾರವೇನೆಂದು ಚಿಂತಿಸಿ ಚಿಕಿತ್ಸೆ ಮಾಡಬೇಕಲ್ಲದೆ ಸುಮ್ಮನೆ ಶೋಕಿಸುತ್ತಿರುವುದು ಬುದ್ಧಿಶಾಲಿಯ ಲಕ್ಷಣವಲ್ಲ.

ಮುಪ್ಪು ಶರೀರಸಂಬಂಧಿಯೇ ಆದರೂ ಅದಕ್ಕೆ ಔಷಧದಿಂದ ಪರಿಹಾರ ದೊರೆಯದು. ಆಗ ಮನುಷ್ಯನು ಏನು ಮಾಡುತ್ತಾನೆ? "ಎಲ್ಲರಿಗೂ ಮುಪ್ಪು ಬರುತ್ತದೆ. ಇದು ಅಪರಿಹಾರ್ಯ. ಹಾಗೆಯೇ ನನಗೂ ಬಂದಿದೆ. ಕಾಲಗತಿಗೆ ನಾವು ಬಗ್ಗಲೇಬೇಕು" - ಎಂದು ವಿಚಾರದಿಂದ ತನ್ನನ್ನು ಸಂತೈಸಿಕೊಳ್ಳುತ್ತಾನೆ. ಹಾಗೆಯೇ ಸಾವೂ ಸಹ ಪ್ರಾಣಿಮಾತ್ರಕ್ಕೆ ಅನಿವಾರ್ಯವಾದದ್ದು. ಈ ಸಂದರ್ಭದಲ್ಲಿ ವಿದುರನ ನೀತಿಬೋಧೆ ಮನನೀಯವಾದುದು. "ಮಹಾರಾಜ, ಈ ಶೋಕಪ್ರಸಂಗವು ಆಕಸ್ಮಿಕವಲ್ಲ. ಯುದ್ಧವಾದರೆ ಇಂತಹ ಅನರ್ಥಗಳು ಸಂಭವಿಸುತ್ತವೆಯೆಂದು ಭೀಷ್ಮಾದಿಗಳು ಮೊದಲೇ ಎಚ್ಚರಿಸಿದ್ದರು. ನಾನೂ ನಿನಗೆ ಹೇಳಿದ್ದೆ. ಯಾರ ಮಾತನ್ನೂ ನೀನು ಕೇಳಲಿಲ್ಲ. ಇದು ಸ್ವಯಂಕೃತಾಪರಾಧ. ಯುದ್ಧಕ್ಕಾಗಿ ನೆರೆದ ಉಭಯಪಕ್ಷದವರೂ ನಿನ್ನ ಬಂಧುಗಳೇ. ಯುದ್ಧದಲ್ಲಿ ಸಾವು ನಿಶ್ಚಿತವೆಂದು ನಿನಗೆ ಗೊತ್ತಿಲ್ಲವೆ? ನಿನ್ನ ಮಕ್ಕಳಂತೆ ಲಕ್ಷಾಂತರ ಜನರು ಸತ್ತಿದ್ದಾರೆ. ಪಾಂಡವರ ಮಕ್ಕಳೆಲ್ಲರೂ ಹತರಾದರು. ಸಾರ್ವಜನಿಕವಾದ ದುಃಖಪ್ರಸಂಗದಲ್ಲಿ ನೀನೊಬ್ಬನು ಶೋಕಿಸುವುದು ತರವಲ್ಲ. ಹುಟ್ಟುವ ಮೊದಲು ಅವರು ಯಾರಾಗಿದ್ದರೋ, ಮುಂದೆ ಯಾರಾಗುತ್ತಾರೋ! ನಡುವಿನ ದಿನಗಳ ಸಂಬಂಧಕ್ಕಾಗಿ ಅಳುವುದು ಧೀರನ ಲಕ್ಷಣವಲ್ಲ" - ಇತ್ಯಾದಿ.

ಅರ್ಜುನನಿಗೂ ಯುದ್ಧಾರಂಭದಲ್ಲಿ ಇದೇ ಬಗೆಯ ಶೋಕ ಆವರಿಸಿತ್ತು. ಅವನದು ಭವಿಷ್ಯಚ್ಚಿಂತನೆ. ಶ್ರೀಕೃಷ್ಣನ ಉಪದೇಶವನ್ನು ಕೇಳಿದಾಗ ಅವನ ಶೋಕವು ಸರಿಯಿತು. ಧೃತರಾಷ್ಟ್ರನದು ಗತವಿಷಯದ ಶೋಕ. ಗತವು ಗತವೇ. ಅದನ್ನು ಚಿಂತಿಸಿ ಫಲವಿಲ್ಲ. ಹಿರಿಯರ ಉಪದೇಶವನ್ನು ಕೇಳದ ಧೃತರಾಷ್ಟ್ರನು ಕಣ್ಣಿನಿಂದ ಮಾತ್ರವಲ್ಲ, ವಿಚಾರಶಕ್ತಿಯಿಂದಲೂ ಕುರುಡನಾದ.

**ತೀಕ್ಷ್ಣಧಾರೇಣ ಖಡ್ಗೇನ ವರಂ ಜಿಹ್ವಾ ದ್ವಿಧಾ ಕೃತಾ ।**
**ನ ತು ಮಾನಂ ಪರಿತ್ಯಜ್ಯ ದೇಹಿ ದೇಹೀತಿ ಭಾಷಣಮ್ ॥೫೫॥**

— *ಸುಭಾಷಿತರತ್ನ-ಭಾಂಡಾಗಾರ*

"ಮಾನ ಮರ್ಯಾದೆಗಳನ್ನು ಬಿಟ್ಟು 'ದೇಹಿ, ದೇಹಿ' ಎಂದು ಹೇಳುವುದಕ್ಕಿಂತ, ಹರಿತವಾದ ಕತ್ತಿಯಿಂದ ತನ್ನ ನಾಲಗೆಯನ್ನು ಸೀಳಿಕೊಳ್ಳುವುದು ಉತ್ತಮ."

ದೇಹಿ=ಕೊಡು ಎಂದು ಇನ್ನೊಬ್ಬರನ್ನು ಬೇಡುವುದು ಹೀನವೃತ್ತಿ. ತನ್ನ ಪೌರುಷಕ್ಕೆ ತಾನೇ ಧಿಕ್ಕಾರವನ್ನು ಹೇಳಿಕೊಂಡಂತೆ ಅದು. ದೇಹಿ ಎಂದು ಬೇಡುವುದರಲ್ಲಿ ಅನೇಕ ಬಗೆಗಳುಂಟು. ದುಡಿಯುವ ಶಕ್ತಿ ಇದ್ದರೂ ಹೊಟ್ಟೆಪಾಡಿಗಾಗಿ ಬೇಡುವುದು ಒಂದು. ಅಂಗವಿಕಲತೆಯಿಂದ ದುಡಿಯಲಾರದೆ ಬೇಡುವುದು ಇನ್ನೊಂದು. ಇವೆರಡೂ ಭಿಕ್ಷುಕವೃತ್ತಿಗಳೇ ಆದರೂ, ಮೊದಲನೆಯದು ನಿಂದ್ಯವಾದದ್ದು. ಈ ಎರಡು ಬಗೆಯವರೂ ಭಿಕ್ಷುಕರೇ.

ಭಿಕ್ಷುಗಳೆಂಬ ಇನ್ನೊಂದು ವರ್ಗವಿದೆ. ವಿರಕ್ತರಾದ ಸಾಧುಸಂನ್ಯಾಸಿಗಳು ಈ ವರ್ಗದವರು. ಧರ್ಮಶಾಸ್ತ್ರವೇ ಇವರಿಗೆ ಭಿಕ್ಷಾವೃತ್ತಿಯನ್ನು ಮಾನ್ಯಮಾಡಿದೆ. ವಿದ್ಯಾರ್ಥಿಗಳು ಭಿಕ್ಷಾನ್ನದಿಂದ ಜೀವಿಸಬೇಕೆಂದು ಸಹ ಶಾಸ್ತ್ರವು ವಿಧಿಸಿದೆ. ಭಾರತೀಯರ ದೃಷ್ಟಿಯಲ್ಲಿ ಈ ಜನರು ನಿಂದನೀಯರಲ್ಲ, ಮಾನನೀಯರು. ಭಿಕ್ಷಾವೃತ್ತಿನಿಷೇಧದ ಕಾನೂನಿಗೆ ಈ ವರ್ಗದವರನ್ನು ಒಳಪಡಿಸುವುದು ಯುಕ್ತವಲ್ಲ.

ಆಪತ್ಕಾಲದಲ್ಲಿ ಇನ್ನೊಬ್ಬರಿಂದ ಸಹಾಯವನ್ನು ಬೇಡುವ ಪರಿಸ್ಥಿತಿ ಕೆಲವರಿಗೊದಗಬಹುದು. ಇದು ನಿಂದ್ಯವಲ್ಲವಾದರೂ ಮಾನಶಾಲಿಯಾದವನಿಗೆ ಕೈಯೊಡ್ಡುವ

ಪ್ರಸಂಗ ಬಂದದ್ದರಿಂದ ಮನಸ್ಸಿಗೆ ಸಂಕೋಚವಾಗದೆ ಇರುವುದಿಲ್ಲ. ಮುಂದೆ ಸಾಧ್ಯವಾದರೆ ಅದನ್ನು ವಾಪಸ್ಸು ಕೊಟ್ಟುಬಿಡುವುದು ಉತ್ತಮಪಕ್ಷ. ಅದು ಬೇರೆಬೇರೆ ಪರಿಸ್ಥಿತಿಯನ್ನು ಅವಲಂಬಿಸುತ್ತದೆ. ಇನ್ನು ವಿದ್ಯಾಶಾಲೆ, ಚಿಕಿತ್ಸಾಲಯ, ವೃದ್ಧಾಶ್ರಮ - ಮುಂತಾದ ಜನೋಪಕಾರಿ ಕಾರ್ಯಗಳಿಗಾಗಿ ಸಹಾಯಧನವನ್ನು ಬೇಡುವುದಿದೆ. ಇದು ಪರಾರ್ಥಕ್ಕಾಗಿ ಬೇಡಿಕೆಯೇ ಹೊರತು ಸ್ವಾರ್ಥಕ್ಕಾಗಿ ಅಲ್ಲ. ಪರಾರ್ಥಕ್ಕಾಗಿ ಮಾಡುವ ಈ ವಿಧದ ಯಾಚನೆ ಸ್ತುತ್ಯವೇ ಸರಿ. ಈ ಯಾಚನೆಯಿಂದ ಶ್ರೀಮಂತರಲ್ಲಿ ಔದಾರ್ಯದ ಪ್ರವೃತ್ತಿಯುಂಟಾಗುತ್ತದೆ. ಅವರು ಕೊಡಿಟ್ಟ ಹಣವೂ ಸಾರ್ಥಕವಾಗುತ್ತದೆ.

ಈಗ ರಕ್ತದಾನ, ನೇತ್ರದಾನ, ಮೂತ್ರಕೋಶದಾನ - ಮುಂತಾದ ಹೊಸಬಗೆಯ ದಾನಗಳು ಬಂದಿವೆ. ಅವುಗಳಿಗಾಗಿ ಬೇಡಿಕೆ ಇರುವುದರಿಂದ ಈ ದಾನಗಳು ಹುಟ್ಟಿಕೊಂಡಿವೆ. ಅನಿವಾರ್ಯವಾದ ಸಂಕಟಪ್ರಸಂಗವಾದ್ದರಿಂದ ಇವುಗಳಿಗಾಗಿ ಯಾಚನೆ ನಿಂದ್ಯವೆನಿಸುವುದಿಲ್ಲ. ಯಾಚನೆಯಿಂದ ದಾನಕ್ರಿಯೆ ಹುಟ್ಟುತ್ತದೆ. ಯಾಚನೆಗೆ ಪ್ರತಿಕ್ರಿಯೆ ದಾನ.

ದಾನವೆಂದರೆ ಆ ದ್ರವ್ಯದ ಮೇಲಿನ ಸ್ವಾಮ್ಯವನ್ನು ಪ್ರತಿಫಲಾಪೇಕ್ಷೆ ಇಲ್ಲದೆ ಇನ್ನೊಬ್ಬರಿಗೆ ವಹಿಸಿಕೊಡುವುದು. ಆ ದ್ರವ್ಯವನ್ನು ಕಾಲಾಂತರದಲ್ಲಿ ಹಿಂದಕ್ಕೆ ಪಡೆಯುವುದಾದರೆ ಅದು ದಾನವಲ್ಲ. ಹಾಗಾದರೆ ಸಾಲವನ್ನು ಕೊಡುವುದು ದಾನವೆ? ಸಾಲವನ್ನು ಕೇಳುವುದು ಯಾಚನೆಯೆ? ಸಾಲವನ್ನು ಕೊಡುವಾಗ ತಾತ್ಕಾಲಿಕವಾಗಿ ಧನದ ಸ್ವಾಮ್ಯವನ್ನು ಇನ್ನೊಬ್ಬನಿಗೆ ವಹಿಸಿಕೊಡುತ್ತಾನೆ. ಅದನ್ನು ಹಿಂದಿರುಗಿಸಬೇಕಾಗುತ್ತದೆ. ಅದು ದಾನವಲ್ಲ. ಆದರೆ ಸಾಲವನ್ನು ಬೇಡುವುದು ಯಾಚನೆಯೇ ಸರಿ. ಕೊಂಚ ಮೇಲ್ಮಟ್ಟದ ಭಿಕ್ಷಾವೃತ್ತಿ!

ಸರ್ಕಾರವು ಇಂತಹ ಮೇಲ್ಮಟ್ಟದ ಭಿಕ್ಷಾವೃತ್ತಿಯನ್ನು ಈಗ ಮಾಡುತ್ತಿದೆ. ತನ್ನ ಯೋಜನೆಗಾಗಿ ತನ್ನ ರಾಷ್ಟ್ರದ ಪ್ರಜೆಗಳಿಂದಲೇ ಸಾಲವೆತ್ತುವುದು ಉತ್ತಮಪಕ್ಷ. ಏಕೆಂದರೆ, ನಮ್ಮ ರಾಷ್ಟ್ರದ ಧನ ನಮ್ಮ ದೇಶದಲ್ಲಿಯೇ ವಿನಿಯೋಗವಾಗಿ ಇಲ್ಲಿಯೇ ಉಳಿದುಕೊಂಡಿರುತ್ತದೆ. ಅದು ಸಾಲದೆಂದು ಪರರಾಷ್ಟ್ರಗಳಿಗೆ 'ದೇಹಿ' ಎಂದು ಸರ್ಕಾರವು ಕೈಯೊಡ್ಡುತ್ತಿದೆ. ಇದೊಂದು ದೈನ್ಯವೃತ್ತಿ. ರಾಷ್ಟ್ರದ ಅಭಿಮಾನಕ್ಕೆ ಭಂಗವನ್ನು ತರತಕ್ಕದ್ದು. ರಾಷ್ಟ್ರದ ಮಾನವನ್ನೇ ಬದಿಗೆ ತಳ್ಳುವ ಜಘನ್ಯವೃತ್ತಿ ಇದು.

**ಜ್ಯೌತಿಷಂ ಜಲದೇ ಮಿಥ್ಯಾ ಮಿಥ್ಯಾ ಶ್ವಾಸಿನಿ ವೈದ್ಯಕಮ್ ।**
**ಯೋಗೋ ಬಹ್ವಶನೇ ಮಿಥ್ಯಾ ಮಿಥ್ಯಾಜ್ಞಾನಂ ಚ ಮದ್ಯಪೇ ॥೫೭॥**

— *ಸಮಯೋಚಿತಪದ್ಯ-ಮಾಲಿಕಾ*

"ಮೋಡವು ಯಾವಾಗ ಮಳೆ ಸುರಿಸುತ್ತದೆ ಎಂಬ ವಿಷಯದಲ್ಲಿ ಜ್ಯೋತಿಃಶಾಸ್ತ್ರವು ಸುಳ್ಳಾಗುತ್ತದೆ. ಗೂರಲು (ಆಸ್ತಮಾ) ರೋಗಿಯಲ್ಲಿ ವೈದ್ಯಶಾಸ್ತ್ರವು ಸುಳ್ಳಾಗುತ್ತದೆ. ಮಿತಿಮೀರಿ ತಿನ್ನತಕ್ಕವನಲ್ಲಿ ಯೋಗವು ಫಲವನ್ನು ನೀಡದು. ಹೆಂಡಕುಡುಕನಲ್ಲಿ ಜ್ಞಾನವು ಮಿಥ್ಯೆ."

ಜ್ಯೋತಿಃಶಾಸ್ತ್ರದಲ್ಲಿ ಫಲ, ಗಣಿತ - ಎಂದು ಎರಡು ವಿಭಾಗವಿದೆ. ಇವುಗಳಲ್ಲಿ ಗಣಿತವು ಸದಾ ಸತ್ಯವಾಗಿಯೇ ಇರುತ್ತದೆ. ಸೂರ್ಯೋದಯ, ಸೂರ್ಯಾಸ್ತ, ಗ್ರಹಣ ಮುಂತಾದದ್ದು ಗಣಿತಕ್ಕೆ ಸೇರಿದ್ದು. ಈ ವಿಷಯದ ಭವಿಷ್ಯವು ಎಂದಿಗೂ ಸುಳ್ಳಾಗದು. ಆದರೆ ಜ್ಯೌತಿಷಿಯ ಅರಬರೆ ಜ್ಞಾನ, ಅವನಿಗೆ ಒದಗಿಸಿದ ಜಾತಕದಲ್ಲಿರುವ ದೋಷ - ಮುಂತಾದ ಕಾರಣಗಳಿಂದ ಫಲಜ್ಯೌತಿಷವು ಅನೇಕ ವೇಳೆ ಸುಳ್ಳಾಗುವುದುಂಟು. ಮಳೆ ಬರುವ ಕ್ಷೇತ್ರ ಅತಿ ವಿಸ್ತಾರವಾದದ್ದು. ಯಾವ ದೇಶಕ್ಕೆ ಯಾವಾಗ ಮುಂತಾದ ಭೌತಿಕ ಕಾರಣಗಳೂ ಅಡ್ಡಿಯಾಗುವುದರಿಂದ 'ಜ್ಯೌತಿಷಂ ಜಲದೇ ಮಿಥ್ಯಾ' ಎಂಬ ಉದ್ಗಾರವು ಹೊರಟಿತು. ಒಂದು ಹಣತೆಯಲ್ಲಿ ಎಣ್ಣೆಯ ದೀಪ ಉರಿಯುತ್ತಿದೆ ಎನ್ನೋಣ. ಹಣತೆಯಲ್ಲಿರುವ ಎಣ್ಣೆಯ ಪ್ರಮಾಣವನ್ನು ನೋಡಿ ಆ ದೀಪವು ಎಷ್ಟು ಹೊತ್ತು ಉರಿಯುತ್ತದೆ ಎಂದು ನಿರ್ಣಯಿಸಿ ಹೇಳಲು ಸಾಧ್ಯವಿದೆ. ದೀಪ ಉರಿಯುವಾಗ ಜೋರಾಗಿ ಗಾಳಿ ಬೀಸಿದರೆ? ಕೈಯಿಂದ ಯಾರಾದರೂ ದೀಪವನ್ನು ಆರಿಸಿಬಿಟ್ಟರೆ? ಆಗ ನಮ್ಮ ಲೆಕ್ಕಾಚಾರವು ಸುಳ್ಳಾಗುವುದು ಸಹಜ.

ಔಷಧಗಳಿಂದ ರೋಗವು ಗುಣವಾಗುತ್ತದೆ ಎನ್ನುವುದೂ ಒಂದು ಬಗೆಯ ಭವಿಷ್ಯವೇ. ಎಷ್ಟೋ ರೋಗಗಳು ಗುಣವಾಗದಿರುವುದೂ ಉಂಟು. ಗೂರಲು (ಉಬ್ಬಸ) ಅದಕ್ಕೊಂದು ಪ್ರಚುರವಾದ ನಿದರ್ಶನ. ಔಷಧವು ತಾತ್ಕಾಲಿಕವಾಗಿ ಗೂರಲನ್ನು ಹಿಮ್ಮೆಟ್ಟಿಸುತ್ತದೆ. ಔಷಧದಿಂದ ಪೂರ್ತಿಯಾಗಿ ಗುಣಹೊಂದಿದ ಉಬ್ಬಸ ರೋಗಿಯನ್ನು ನಾವು ಕಂಡಿಲ್ಲ. ಶ್ವಾಸಿಯೆಂದರೆ ಉಬ್ಬಸರೋಗಿ.

ಯೋಗಾಭ್ಯಾಸಿಗೆ ಮಿತವಾದ ಪಥ್ಯಾಹಾರವು ಆವಶ್ಯಕ. ಆಹಾರದಲ್ಲಿ ಕಟ್ಟುಪಾಡಿಲ್ಲದ ಹೊಟ್ಟೆಬಾಕನಿಗೆ ಯೋಗಾಭ್ಯಾಸದಿಂದ ಯಾವ ಪ್ರಯೋಜನವೂ ಇಲ್ಲ. ಅವನು ಯೋಗಾಭ್ಯಾಸವನ್ನು ಮಾಡುವುದೂ ಶಕ್ಯವಲ್ಲ. ನಿದ್ರೆ, ಜಾಗರಣೆ, ದೈಹಿಕಶ್ರಮ - ಮೊದಲಾದ ಎಲ್ಲ ವಿಷಯಗಳಿಗೂ ಇದು ಅನ್ವಯಿಸುತ್ತದೆ. 'ಅತಿ ಸರ್ವತ್ರ ವರ್ಜಯೇತ್.'

**ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು।**
**ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥**

- ಎಂಬ ಭಗವದ್ಗೀತಾವಚನವು ಕರ್ಮಯೋಗಿಗೂ ಅನ್ವಯಿಸುತ್ತದೆ.

ಇದು ಸರಿ, ಇದು ತಪ್ಪು - ಎಂದು ವಿವೇಚಿಸಿ ಕಾರ್ಯಪ್ರವೃತ್ತನಾಗುವ ಶಕ್ತಿಯು ಜ್ಞಾನದಿಂದ ಲಭಿಸುತ್ತದೆ. ವಿವೇಚನಾಶಕ್ತಿಯೇ ಜ್ಞಾನದ ಫಲ. ಈ ಶಕ್ತಿ ಹೆಂಡಕುಡುಕನಲ್ಲಿರುವುದಿಲ್ಲ. ಮದ್ಯವು ಮೆದುಳಿನ ಕ್ರಿಯೆಯನ್ನೇ ಏರುಪೇರು ಮಾಡಿಬಿಡುತ್ತದೆ. ಮದ್ಯದ ಅಮಲಿನಲ್ಲಿರತಕ್ಕವನಿಗೆ ತಾನು ಹಿಂದೆ ಕಲಿತದ್ದೂ ಉಪಯೋಗಕ್ಕೆ ಬರುವುದಿಲ್ಲ. ಆಗ ತಿಳಿಯಹೇಳುವುದೂ ಫಲಕಾರಿಯಲ್ಲ. ವಿವೇಚನಾಶಕ್ತಿಯೇ ಅವನಲ್ಲಿ ಅಳಿದುಹೋಗಿರುತ್ತದೆ. ಆದ್ದರಿಂದ 'ಮಿಥ್ಯಾ ಜ್ಞಾನಂ ಚ ಮದ್ಯಪೇ'. ತಾತ್ಪರ್ಯವೇನೆಂದರೆ, ಮಾನವನಿರ್ಮಿತ ಸಕಲ ಶಾಸ್ತ್ರವ್ಯವಸ್ಥೆಗೂ ಅಪವಾದವಿದೆ. ಎಲ್ಲ ವ್ಯವಸ್ಥೆಗಳ ಕಾರ್ಯವ್ಯಾಪ್ತಿಗೂ ಮಿತಿ ಇದೆ. ಏಕೆಂದರೆ ಮಾನವನು ಸರ್ವಜ್ಞನೂ ಅಲ್ಲ, ಸರ್ವಶಕ್ತನೂ ಅಲ್ಲ.

**ಅಂಗಂ ಗಲಿತಂ ಪಲಿತಂ ಮುಂಡಂ**
**ದಶನವಿಹೀನಂ ಜಾತಂ ತುಂಡಮ್ ।**
**ವೃದ್ಧೋ ಯಾತಿ ಗೃಹೀತ್ವಾ ದಂಡಂ**
**ತದಪಿ ನ ಮುಂಚತ್ಯಾಶಾಪಿಂಡಮ್ ॥೫೭॥**

— *ಶ್ರೀಶಂಕರಾಚಾರ್ಯರ 'ಭಜಗೋವಿಂದಸ್ತೋತ್ರ'*

"ಶರೀರದ ಒಂದೊಂದು ಅಂಗವೂ ಜರ್ಜರಿತವಾಯಿತು. ಬಾಯಲ್ಲಿದ್ದ ಹಲ್ಲುಗಳು ಉದುರಿಹೋದವು. ಈ ಮುದುಕನು ದೊಣ್ಣೆಯನ್ನೂರಿ ನಡೆಯಬೇಕಾಗಿದೆ. ಆದರೂ ಆಸೆಗಳ ರಾಶಿಯು ಇವನನ್ನು ಬಿಡುತ್ತಿಲ್ಲ!"

ಶೀರ್ಣವಾಗಿ ಜರ್ಜರಿತವಾಗುವುದರಿಂದಲೇ ದೇಹಕ್ಕೆ 'ಶರೀರ'ವೆಂಬ ಹೆಸರಿದೆ. ವಯಸ್ಸಾದ ಮೇಲೆ ಎಲ್ಲ ಅವಯವಗಳೂ ಶೀರ್ಣವಾಗಿ ವಿಶ್ರಾಂತಿಯನ್ನು ಬಯಸುತ್ತವೆ. ಆದರೂ ಆಸೆಯೆಂಬುದು ಕೃತಕಸಾಧನಗಳನ್ನಾದರೂ ಅಳವಡಿಸಿ ಇವನನ್ನು ಕೆಲಸಕ್ಕೆ ದಬ್ಬುತ್ತವೆ. ಕಣ್ಣು ಕಾಣದಿದ್ದರೆ ಕನ್ನಡಕವನ್ನೇರಿಸುತ್ತಾನೆ. ಕಿವಿ ಕೇಳದಿದ್ದರೆ ಶ್ರವಣಯಂತ್ರವನ್ನು ಕಿವಿಗೆ ಜೋಡಿಸುತ್ತಾನೆ. ಹಲ್ಲು ಉದುರಿದರೆ ಹಲ್ಲು ಕಟ್ಟಿಸುತ್ತಾನೆ. ನರೆತಕೂದಲಿಗೆ ಕಪ್ಪುಬಣ್ಣವನ್ನು ಹಚ್ಚಿಕೊಳ್ಳುವುದೂ ಉಂಟು. ನಡೆಯಲಾಗದಿದ್ದರೆ ದೊಣ್ಣೆಯನ್ನೂರುತ್ತಾನೆ. ಪ್ರಕೃತಿಯೇ ವಿರುದ್ಧವಾಗಿ ಬೇಡ ವೆನ್ನುತ್ತಿದ್ದರೂ, ಕೃತಕಸಾಧನಗಳಿಂದ ಆಸೆಯನ್ನು ಪೂರೈಸಿಕೊಳ್ಳಲು ಹವಣಿಸುತ್ತಾನೆ. ಆಸೆಯ ಪ್ರಭಾವ ಇಂತಹದು.

ಆಶಾಪಿಂಡದ ಜಿಗುಟುತನಕ್ಕೆ ನಮ್ಮ ರಾಜಕೀಯಸ್ಥರು ಸಾಕಷ್ಟು ಉದಾಹರಣೆಗಳನ್ನೊದಗಿಸುತ್ತಾರೆ. ಒಂದು ಪಕ್ಷದಲ್ಲಿ ಬೇಳೆ ಬೇಯದಿದ್ದಾಗ ಇನ್ನೊಂದು ಪಕ್ಷಕ್ಕೆ ಹಾರುತ್ತಾರೆ; ಅಲ್ಲಿಯೂ ಆಸೆ ಸಫಲವಾಗದಿದ್ದಾಗ ಮತ್ತೊಂದು ಪಕ್ಷಕ್ಕೆ ಜಿಗಿಯುತ್ತಾರೆ. 'ಆಯಾರಾಮ್‌ಗಯಾರಾಮ್'ಗಳೆಲ್ಲರೂ ಪೂರೈಸಲಾಗದ ಆಸೆಯ ಹಿಡಿತಕ್ಕೆ ಸಿಕ್ಕಿದವರು. ಎಲ್ಲಿಯೂ ತಮ್ಮ ಇಚ್ಛೆಯಂತೆ ನಡೆಯದೆಹೋದಾಗ 'ರಾಜಕೀಯ ಸಂನ್ಯಾಸ'ವನ್ನು ಸ್ವೀಕರಿಸುತ್ತಾರೆ. ಸಮಯ ಸಿಕ್ಕಿದೊಡನೆ ಆಶಾವಧುವಿನ ಕೈಹಿಡಿದು 'ಶಿಸ್ತಿನ ಸಿಪಾಯಿ'ಗಳಾಗಿ 'ರಾಷ್ಟ್ರಸೇವೆ'ಗೋಸ್ಕರ ಪೂರ್ವಾಶ್ರಮಕ್ಕೆ ಹಿಂದಿರುಗುತ್ತಾರೆ.

'ನ ಮುಂಚತ್ಯಾಶಾಪಿಂಡಂ' ಎಂಬ ಮಾತಿಗೆ ಎರಡು ಬಗೆಯಲ್ಲಿ ಅರ್ಥಮಾಡಲು ಸಾಧ್ಯವಿದೆ. "ಆಸೆಯ ರಾಶಿಯು ಇವನನ್ನು ಬಿಡುವುದಿಲ್ಲ" ಎಂಬುದೊಂದು; "ಇವನು ಆಸೆಯ ರಾಶಿಯನ್ನು ಬಿಡುವುದಿಲ್ಲ" ಎಂಬುದು ಇನ್ನೊಂದು. ಇವೆರಡರ ಅಭಿಪ್ರಾಯವೂ ಒಂದೇ ಅಲ್ಲವೆ? - ಎಂದರೆ 'ಅಲ್ಲ' - ಎಂದು ಸೂಕ್ತಿವ್ಯಾಪ್ತಿಯ 'ವಿಶ್ವಾಮಿತ್ರ'ನು ಹೇಳುತ್ತಾನೆ. ತನ್ನದೇ ಒಂದು ಉದಾಹರಣೆಯನ್ನು ಕೊಡುತ್ತಾನೆ. ಈತನಿಗೆ ನಶ್ಯ ಸೇದುವ ಚಟವಿತ್ತು. ಒಮ್ಮೆ ವಿದೇಶಕ್ಕೆ ಹೋದಾಗ ನಶ್ಯದ ಆಸೆ ಬಿಟ್ಟುಹೋಯಿತು. ಏಕೆಂದರೆ ಅಲ್ಲಿ ನಶ್ಯವೇ ಸಿಗುತ್ತಿರಲಿಲ್ಲ! ಕೆಲವು ತಿಂಗಳ ಮೇಲೆ ಈ ದೇಶಕ್ಕೆ ಹಿಂದಿರುಗಿ ಬಂದೊಡನೆ ಮತ್ತೆ ನಶ್ಯದ ಆಶಾಪಿಂಡವು ಬಂದು ಗುಂಟುಬಿತ್ತು. ಈತನೇ ಆ ಚಟವನ್ನು ತೊರೆದು ಬಿಟ್ಟಿದ್ದಿದ್ದರೆ, ಮುಂದೆ ಹೋಗೆಂದು ಕಳಿಸಿದ ಭಿಕ್ಷುಕನಂತೆ, ಅದು ಮತ್ತೆ ಬರುತ್ತಿರಲಿಲ್ಲ.

ಆದ್ದರಿಂದ ಒಂದು ವಸ್ತು ನಿಲುಕದೆಹೋದಾಗ, ನರಿಗೆ ದ್ರಾಕ್ಷಿಹಣ್ಣಿನ ಗೊಂಚಲು ಹುಳಿಯಾಗಿ ಕಂಡಂತೆ ಆಗಿ, ಹಿಂದಕ್ಕೆ ಸರಿಯುತ್ತದೆ, ಬಿಟ್ಟು ಹೋಗಿರುವುದಿಲ್ಲ. ಇನ್ನೊಂದು ದ್ರಾಕ್ಷಿಯ ಬಳ್ಳಿ ಕಂಡಾಗ ಮತ್ತೆ ನೆಗೆಯಲು ಪ್ರಾರಂಭವಾಗುತ್ತದೆ. ಅಭಾವವೈರಾಗ್ಯವು ಆಶಾತ್ಯಾಗವಲ್ಲ. ಇಷ್ಟವಸ್ತು ಎದುರಿಗಿದ್ದಾಗ ನಾವೇ ಮಾಡುವ ತ್ಯಾಗವೇ ನಿಜವಾದ ತ್ಯಾಗ.

**ಸಿಂಹಾದೇಕಂ ಬಕಾದೇಕಂ ಷಟ್ ಶುನಸ್ತ್ರೀಣಿ ಗರ್ದಭಾತ್ ।**
**ವಾಯಸಾತ್ ಪಂಚ ಶಿಕ್ಷೇಚ್ಚ ಚತ್ವಾರಿ ಕುಕ್ಕುಟಾದಪಿ ॥೫೮॥**

"ಸಿಂಹದಿಂದ ಒಂದು ಗುಣವನ್ನೂ, ಕೊಕ್ಕರೆಯಿಂದ ಒಂದನ್ನೂ, ನಾಯಿಯಿಂದ ಆರನ್ನೂ, ಕತ್ತೆಯಿಂದ ಮೂರನ್ನೂ, ಕಾಗೆಯಿಂದ ಆರು ಗುಣಗಳನ್ನೂ, ಕೋಳಿಯಿಂದ ಸಹ ನಾಲ್ಕು ಗುಣಗಳನ್ನೂ ಮನುಷ್ಯನು ಕಲಿತುಕೊಳ್ಳಬೇಕು."

ತಾನು ಮಾಡಬೇಕಾದ ಕೆಲಸ ದೊಡ್ಡದಿರಲಿ ಅಥವಾ ಚಿಕ್ಕವಿಷಯವೇ ಆಗಿರಲಿ, ಅದನ್ನು ಉಪೇಕ್ಷಿಸದೆ ಮನಸ್ಸಿಟ್ಟು ವ್ಯವಸ್ಥಿತವಾಗಿ ಮಾಡತಕ್ಕದ್ದು. ಇದು ಸಿಂಹದಿಂದ ಕಲಿತುಕೊಳ್ಳಬೇಕಾದ ಗುಣ. ಸಿಂಹಕ್ಕೆ ಒಂದು ಮೊಲ ಕಾಣಿಸಲಿ, ಆನೆಯೇ ಎದುರುಬೀಳಲಿ, ಅವುಗಳ ಮೇಲೆ ಒಂದೇ ಬಗೆಯ ರಭಸದಿಂದ ದಾಳಿ ಮಾಡುವುದಂತೆ. ಕೊಕ್ಕರೆಯು ಮೀನು ಹಿಡಿಯುವುದಕ್ಕಾಗಿ ಸ್ವಲ್ಪವೂ ಅಲ್ಲಾಡದೆ ಏಕಾಗ್ರತೆಯಿಂದ ಕುಳಿತಿರುತ್ತದೆ. ಹೀಗೆ ಮನುಷ್ಯನು ಕಾರ್ಯದಲ್ಲಿ ಉದ್ಯುಕ್ತನಾದಾಗ ಏಕಾಗ್ರಚಿತ್ತದಿಂದ ಅದನ್ನು ನಡೆಸಬೇಕು. ಈ ಏಕಾಗ್ರತೆ ಕೊಕ್ಕರೆಯಿಂದ ಕಲಿಯಬೇಕಾದ ಗುಣ.

ಅಲ್ಪಾಹಾರ, ದೊರೆತದ್ದರಲ್ಲಿಯೇ ತೃಪ್ತಿ, ಸರಿಯಾಗಿ ನಿದ್ರಿಸುವುದು, ಚುರುಕುತನ, ಸ್ವಾಮಿಭಕ್ತಿ, ಶೌರ್ಯ - ಇವು ನಾಯಿಯಿಂದ ಕಲಿತುಕೊಳ್ಳಬೇಕಾದವು. ಕತ್ತೆಯಿಂದ ಕಲಿತುಕೊಳ್ಳಬೇಕಾದವು ಮೂರು: ವಿಶ್ರಾಂತಿಯಿಲ್ಲದೆ ಕೆಲಸದ ಹೊರೆಗೆ ಜಗ್ಗದೆ ಮಾಡುತ್ತಿರುವುದು, ಚಳಿ-ಸೆಕೆಗಳನ್ನು ಲಕ್ಷಿಸದಿರುವುದು, ಯಾವಾಗಲೂ ಕುಗ್ಗದೆ-ಹಿಗ್ಗದೆ ಸಂತೋಷದಲ್ಲಿರುವುದು.

ಕಾಗೆಯು ಮೈಥುನಕ್ರಿಯೆಯನ್ನು ಗೂಢವಾಗಿ ಜನರಿಗೆ ಕಾಣಿಸದಂತೆ ಆಚರಿಸುತ್ತದೆ. ಅದನ್ನು ಯಾರೂ ಕಂಡದ್ದಿಲ್ಲ. ಈ ವಿಷಯದಲ್ಲಿ ಕೋಳಿ ಗುಬ್ಬಚ್ಚಿಗಳಂತೆ

ಕಾಗೆ ನಡೆದುಕೊಳ್ಳುವುದಿಲ್ಲ. ಹಾಗೆ ಯಾವುದೋ ಬಗೆಯ ಪ್ರಣಯಚೇಷ್ಟೆಯನ್ನೂ ಮನುಷ್ಯನು ಜನರೆದುರಿಗೆ ನಡೆಸತಕ್ಕದ್ದಲ್ಲ. ಇಂಥ ಗೂಢತೆ, ಧೈರ್ಯದಿಂದ ಮುಂದೆ ನುಗ್ಗುವುದು, ಸಮಯಾನುಸಾರವಾಗಿ ವಾಸಕ್ಕೋಸ್ಕರ ಒಂದು ನೆಲೆಯನ್ನು ಕಲ್ಪಿಸಿಕೊಳ್ಳುವುದು, ಸದಾ ಎಚ್ಚರಿಕೆಯಲ್ಲಿರುವುದು ಮತ್ತು ಆಲಸ್ಯವಿಲ್ಲದೆ ಕೆಲಸಮಾಡುವುದು - ಇವು ಐದು ಕಾಗೆಯಿಂದ ಕಲಿತುಕೊಳ್ಳಬೇಕಾದ ಗುಣಗಳು.

ವೈರಿಯೊಡನೆ ಹಿಂಜರಿಯದ ಹೋರಾಟ, ಪ್ರಾತಃಕಾಲ ಬಹಳ ಮೊದಲೇ ಏಳುವ ರೂಢಿ, ಬಂಧುಮಿತ್ರರಿಂದೊಡಗೂಡಿದ ಭೋಜನ, ಸ್ತ್ರೀಯರನ್ನು ಆಪತ್ತಿನಿಂದ ರಕ್ಷಿಸುವುದಕ್ಕಾಗಿ ನಿರ್ಭಯದ ಯುದ್ಧ - ಇವು ಹುಂಜದಿಂದ ಕಲಿಯಬೇಕಾದವು.

ಇವೆಲ್ಲವೂ ಆಯಾ ಪ್ರಾಣಿಗಳ ಹುಟ್ಟುಗುಣಗಳು. ಇವನ್ನು ಮನುಷ್ಯನು ಪಶುಪಕ್ಷಿಗಳಿಂದ ಕಲಿಯಬೇಕಾಗುತ್ತದೆಯೆಂದರೆ, ಮನುಷ್ಯನ ಹೆಗ್ಗಳಿಕೆ ಏನು? 'ಜ್ಞಾನೇನ ಹೀನಃ ಪಶುಭಿಃ ಸಮಾನಃ' ಎಂಬ ವಚನವಿದೆ. ಬುದ್ಧಿಶಕ್ತಿಯೊಂದೇ ಮನುಷ್ಯನ ಹೆಗ್ಗಳಿಕೆ. ಅದು ಒಳ್ಳೆಯಗುಣವನ್ನೂ ತಂದೀತು, ಕೆಟ್ಟಗುಣವನ್ನೂ ತಂದೀತು. ಕೇಡಿಗರೇನೂ ದಡ್ಡರಲ್ಲ. ಮನುಷ್ಯಜಾತಿಯಲ್ಲಿರುವ ಸಹಜಗುಣ ಇನ್ನಾವುದು? ಎಲ್ಲ ಪ್ರಾಣಿಗಳಲ್ಲಿರುವಂತೆ ಸ್ವಾರ್ಥ ಒಂದೇ ಮಾನವನ ಹುಟ್ಟುಗುಣ. ವ್ಯಾಮೋಹವಾತ್ಸಲ್ಯಗಳ ಕವಚವನ್ನು ಬದಿಗಿರಿಸಿ ನೋಡಿದಾಗ ಮಗುವಿನಲ್ಲಿಯೂ ಇದು ಕಂಡುಬರುತ್ತದೆ. ಒಳ್ಳೆಯಗುಣಗಳಲ್ಲಿ ಕೆಲವು ಶಿಕ್ಷಣದಿಂದ ಬಂದವು, ಕೆಲವು ಆತನ ಜನ್ಮಾಂತರ ಸಂಸ್ಕಾರದಿಂದ ಬಂದವು. ಸರ್ವಮಾನವ ಜಾತಿಯಲ್ಲಿಯೂ ಸಮಾನವಾಗಿರತಕ್ಕ ಒಳ್ಳೆಯ ಗುಣ ಯಾವುದೂ ಮನುಷ್ಯನಲ್ಲಿ ಕಂಡುಬರುವುದಿಲ್ಲ.

**ದ್ವಾವಿಮೌ ಕಂಟಕೌ ತೀಕ್ಷ್ಣೌ ಶರೀರಪರಿಶೋಷಿಣೌ ।**
**ಯಶ್ಚಾಧನಃ ಕಾಮಯತೇ ಯಶ್ಚ ಕುಪ್ಯತ್ಯನೀಶ್ವರಃ ॥೩೯॥**

— *ಮಹಾಭಾರತ, ಉದ್ಯೋಗಪರ್ವ, ೩೩-೫೬*

"ದೇಹವನ್ನು ಒಣಗಿಸಿಬಿಡುವ ಎರಡು ತೀಕ್ಷ್ಣವಾದ ಮುಳ್ಳುಗಳಿವೆ. ಯಾವುವೆಂದರೆ, ತಾನು ದರಿದ್ರನಾಗಿದ್ದು ಹೆಚ್ಚಿನದನ್ನು ಬೇಡುವ ಬಯಕೆಯೊಂದು, ಕೈಲಾಗದವನು ಕೋಪಿಸಿಕೊಳ್ಳುವುದು ಇನ್ನೊಂದು."

ಬದುಕಿನ ದಾರಿ ಸುಗಮವೇನಲ್ಲ. ಇದರಲ್ಲಿ ಏರು, ತಗ್ಗು, ಕೊರಕಲುಗಳು ಬಹಳ. ಮುಳ್ಳುಗಳೂ ಇವೆ. ಆಸೆಯೆಂಬ ಒಂದು ಪಾಶವು ಜನರನ್ನು ಆ ದಾರಿಯಲ್ಲಿ ಎಳೆದುಕೊಂಡು ಹೋಗುತ್ತಿದೆ. ವಿಚಾರಮಾಡಿದಾಗ ಒಂದು ದಿನದಲ್ಲಿ ಮನುಷ್ಯನು ಕಷ್ಟಪಡುವ ಸಮಯ ಅಧಿಕ, ಸುಖದ ಕಾಲ ಅತ್ಯಲ್ಪ. ಆದರೆ ಅಭ್ಯಾಸಬಲದಿಂದ ಕಷ್ಟವನ್ನೀತನು ಗಣಿಸುವುದಿಲ್ಲ. ಕಳೆದುಹೋದ ಸುಖವನ್ನು ಮೆಲುಕುಹಾಕುತ್ತ, ಬರುವ ಸುಖವನ್ನು ನೆನೆಸಿಕೊಳ್ಳುತ್ತ ದುಡಿಯುವುದು ಇವನಿಗೆ ಒಗ್ಗಿಹೋಗಿದೆ. ರೈತನು ಹೊಲದಲ್ಲಿ, ಕಾರ್ಮಿಕನು ಕಾರ್ಖಾನೆಯಲ್ಲಿ ದುಡಿಯುತ್ತಲೇ ಇರುತ್ತಾನೆ. ಜಟ್ಟಿಯು ವ್ಯಾಯಾಮಶಾಲೆಯಲ್ಲಿ ಮೈಯನ್ನು ದಂಡಿಸುತ್ತಲೇ ಸುಖಪಡುತ್ತಾನೆ! "ಕೈ ಕೆಸರಾದರೆ ಬಾಯಿಗೆ ಮೊಸರು" ಎಂಬ ಗಾದೆಯಿದೆಯಷ್ಟೆ. ಈ ವಿಶ್ವಾಸದಿಂದ ಜೀವನಚಕ್ರವು ಎಡೆಬಿಡದೆ ಸಾಗುತ್ತಲೇ ಇದೆ.

ಬದುಕಿನ ದಾರಿಯಲ್ಲಿ ತುಳಿಯಬೇಕಾದ ಮುಳ್ಳುಗಳಲ್ಲಿ ಎರಡು ಮುಳ್ಳುಗಳು ತೀಕ್ಷ್ಣವಾದವುಗಳೆಂದು ಈ ಶ್ಲೋಕ ತಿಳಿಸುತ್ತದೆ. ಇವು ಇತರ ಮುಳ್ಳುಗಳಂತೆ ಥಟ್ಟನೆ ಚುಚ್ಚಿಕೊಳ್ಳುವುದಿಲ್ಲ. ಕೂಡಲೇ ಕಿತ್ತುಹಾಕಬಹುದಾದವುಗಳೂ ಅಲ್ಲ. ಇವು ಕ್ರಮವಾಗಿ ವ್ಯಾಪಿಸಿ ದೇಹವನ್ನು ಒಣಗಿಸತಕ್ಕವು.

ಹಣದ ವ್ಯಾಮೋಹ ಎಲ್ಲರಿಗೂ ಇರುತ್ತದೆ. ದುರ್ದೈವದಿಂದ ಕೆಲವರಿಗೆ ಹಣವು ಕೈಹತ್ತುವುದೇ ಇಲ್ಲ. ಯಾವ ಉದ್ಯೋಗಕ್ಕೆ ಕೈಹಾಕಿದರೂ ನಷ್ಟವೇ. ಅವರು ಇಲ್ಲಿ 'ಅಧನ'ರು. ಅಂಥವರಿಗಿರುವ ಆಸೆ 'ಶರೀರಪರಿಶೋಷಿ'. ಇದ್ದುದರಲ್ಲಿ ತೃಪ್ತಿಪಡುವುದೇ ಅದಕ್ಕೆ ಔಷಧ. ಈ ಔಷಧವನ್ನು ಜನರು ಬಲ್ಲರು. ಶ್ರೀಮಂತರಿಗೆ, ದೊಡ್ಡ ಅಧಿಕಾರದಲ್ಲಿರತಕ್ಕವರಿಗೆ - ಇರುವ ಹಣದ ವ್ಯಾಮೋಹ ಬಲು ದೊಡ್ಡದು. ಅದು ವಿಪರೀತ ಸ್ವಭಾವದ ಯುಗದಲ್ಲಿ ಕೈಗೂಡಿಬಿಡುತ್ತದೆ. ಇದೇ ಕಲಿಯುಗದ ವೈಶಿಷ್ಟ್ಯ.

"ಬಡವನ ಸಿಟ್ಟು ದವಡೆಗೆ ಮೂಲ" ಎಂಬ ಗಾದೆಯುಂಟು. ಕೈಲಾಗದವನು ಕೋಪಿಸಿಕೊಂಡಹಾಗೆಲ್ಲ ತೊಂದರೆಯಲ್ಲಿ ಸಿಕ್ಕಿಕೊಳ್ಳುತ್ತಲೇ ಇರುತ್ತಾನೆ. ಇವನ ಕೋಪ ಎಂದಿಗೂ ಫಲಿಸುವುದಿಲ್ಲ. ಬೆರಣಿಯಲ್ಲಿರುವ ಬೆಂಕಿಯಂತೆ ಒಳಗೊಳಗೇ ದೇಹವನ್ನು ಸುಡುತ್ತದೆ. ಇದಕ್ಕೆ ಸಹನೆಯೇ ಮದ್ದು. ಬಲಶಾಲಿಯ ಕೋಪವಾದರೋ ಫಲಿಸುತ್ತದೆ. ತಾತ್ಪರ್ಯವೇನೆಂದರೆ, ಬಡವರು ಏನನ್ನೂ ಬಯಸದೆ ತೃಪ್ತರಾಗಿರಬೇಕು;

ಅಧಿಕಾರವಿಲ್ಲದ ಪ್ರಜೆಗಳು ಗೊಣಗದೆ ಶಾಂತರಾಗಿರಬೇಕು. ಆಗ ನಮಗೆ ದೃಢವಾದ ಮತ್ತು ಪ್ರಬಲ ಸರ್ಕಾರ ದೊರೆಯಬಹುದು.

**ದಂಡಸ್ಯೈವ ಭಯಾತ್ ಸರ್ವೇ ಧರ್ಮೇ ತಿಷ್ಠಂತಿ ಜಂತವಃ ।**
**ಪರಸ್ಪರಂ ತು ಖಾದೇಯುರ್ಯದಿ ದಂಡೋ ನ ರಕ್ಷಯೇತ್ ॥೬೦॥**

— *ಮಹಾಭಾರತ*

"ದಂಡನೆಯ ಭಯದಿಂದಲೇ ಸಕಲ ಪ್ರಾಣಿಗಳೂ ಧರ್ಮಮಾರ್ಗದಲ್ಲಿ ನಿಲ್ಲುತ್ತವೆ. ದಂಡವು ರಕ್ಷಿಸದೆಹೋದರೆ ಈ ಜನರು ಒಬ್ಬರನ್ನೊಬ್ಬರು ತಿಂದುಬಿಡುತ್ತಿದ್ದರು."

ಧರ್ಮವು ಜಗತ್ತನ್ನು ರಕ್ಷಿಸುತ್ತದೆ. ಧರ್ಮವೇ ಪ್ರಜಾವರ್ಗಕ್ಕೆ ಊರುಗೋಲು - ಎಂಬುದು ಹಳೆಯ ಮಾತು; ಸರ್ವದಾ ಹೊಸದಾಗಿಯೇ ಇರತಕ್ಕ ಹಳೆಯ ಮಾತು. ಧರ್ಮದ ಒಂದು ಕಾರ್ಯ ಅಪರಾಧಿಗಳಿಗೆ ದಂಡನೆ. ಇದಿಲ್ಲದಿದ್ದರೆ ತಪ್ಪುಮಾಡುವುದಿರಲಿ, ಜನರು ತಮ್ಮ ಕರ್ತವ್ಯವನ್ನೂ ಪಾಲಿಸುತ್ತಿರಲಿಲ್ಲ. ತೈತ್ತಿರೀಯೋಪನಿಷತ್ತು ಹೇಳುತ್ತದೆ: "ಭೀಷಾಽಸ್ಮಾದ್ ವಾತಃ ಪವತೇ...": "ಪರಮಾತ್ಮನ ಭಯದಿಂದ ಗಾಳಿ ಬೀಸುತ್ತದೆ; ಭಯದಿಂದಲೇ ಸೂರ್ಯನು ಹುಟ್ಟುತ್ತಾನೆ; ಆದ್ದರಿಂದಲೇ ಇಂದ್ರನು ಮಳೆ ಸುರಿಸುತ್ತಾನೆ; ಬೆಂಕಿ ಸುಡುತ್ತದೆ; ಮೃತ್ಯು ಓಡುತ್ತ ಹೋಗಿ ತನ್ನ ಕರ್ತವ್ಯವನ್ನು ಪಾಲಿಸುತ್ತದೆ!"

ದಂಡನೆಯನ್ನು ವಿಧಿಸತಕ್ಕವರು ಯಾರು? ರಾಜ, ಸರ್ಕಾರ. ರಾಜನೇ ಅಧರ್ಮಿಷ್ಠನಾದಾಗ, ಸರ್ಕಾರವೇ ದುರ್ಮಾರ್ಗಕ್ಕೆ ಇಳಿದಾಗ, ಜನರಿಗೆ ಧರ್ಮದ ಭಯ ತಪ್ಪಿಹೋಗುತ್ತದೆ. ಈಗ ನಡೆಯುತ್ತಿರುವುದು ಇದೇ. ಧರ್ಮಪುರುಷನಿಗೆ ನಾಲ್ಕು ಪಾದಗಳಿವೆಯಂತೆ. ಕೃತಯುಗದಲ್ಲಿ ಈತನು ನಾಲ್ಕು ಕಾಲುಗಳನ್ನು ಊರಿ ನಡೆಯುತ್ತಿದ್ದ. ತ್ರೇತಾಯುಗದಲ್ಲಿ ಒಂದು ಕಾಲು ಕುಂಟಾಯಿತು. ದ್ವಾಪರಯುಗದಲ್ಲಿ ಇನ್ನೊಂದು ಕಾಲೂ ಕುಂಟಾಯಿತು; ಎರಡು ಕಾಲುಗಳಲ್ಲಿ ಹಾರಿ ನಡೆಯುತ್ತಿದ್ದ. ಕಲಿಯುಗದಲ್ಲಿ ಮೂರು ಕಾಲುಗಳೂ ಹೋದವು; ಒಂದೇ ಕಾಲಿನ ಮೇಲೆ ನಿಂತಿದ್ದಾನಂತೆ. ಅದರ ಅರ್ಥವೇನು? ಒಂದು ಪಾಲು ಧರ್ಮ, ಮೂರು ಪಾಲು ಅಧರ್ಮ. ಅಂತೂ ಒಂಟಿಗಾಲಿನಿಂದ ನಿಂತಿರುವುದರಿಂದ ನಾವಿನ್ನೂ ಬದುಕಿದ್ದೇವೆ.

ದಂಡೋ ದಮನಾತ್ - ಎಂದು ಈ ಶಬ್ದದ ವ್ಯುತ್ಪತ್ತಿ. ಅಪರಾಧಿಗಳನ್ನು ದಮನ ಮಾಡತಕ್ಕದ್ದು ದಂಡ. ದಮವೆಂದರೆ ಕೈ, ಕಾಲು, ನಾಲಿಗೆ ಮುಂತಾದ ಬಾಹ್ಯೇಂದ್ರಿಯಗಳ ನಿಗ್ರಹ. ದಂಡವು ಈ ಬಾಹ್ಯೇಂದ್ರಿಯಗಳನ್ನು ನಿಗ್ರಹಿಸಬಲ್ಲದು. ಕಳ್ಳತನವನ್ನು ತಪ್ಪಿಸೀತು. ರಸ್ತೆಯ ಎಡಭಾಗದಲ್ಲಿಯೇ ಹೋಗುವಂತೆ ಮಾಡೀತು. ಕೆಟ್ಟ ಮಾತಾಡತಕ್ಕವರನ್ನು ದಂಡಿಸೀತು. ಆದರೆ ದುರ್ಮಾರ್ಗಿಗಳ ಮನೋಭಾವವನ್ನು ಅದು ತಿದ್ದಲಾರದು. ಜುಲ್ಮಾನೆಯಾಗಲಿ, ಕಾರಾಗೃಹವಾಗಲಿ - ಬಾಹ್ಯೇಂದ್ರಿಯಗಳ ದಮನಕ್ಕೆ ಕಾರಣವಾಗಬಹುದು, ಅದು ಜನರ ಮನೋಭಾವವನ್ನು ತಿದ್ದಲಾರದು. ಅದಕ್ಕೆ ಶಮ ಬೇಕು. ಶಮವೆಂದರೆ ಮನಸ್ಸಿನ ನಿಗ್ರಹ. ಮನೋಭಾವವನ್ನು ತಿದ್ದುವುದೇ ಶಮ. ಅದು ಕಾನೂನಿನಿಂದ ಆಗತಕ್ಕದ್ದಲ್ಲ. ಅದು ಜನರಲ್ಲಿ ಧರ್ಮ ನಿಷ್ಠೆಯನ್ನು ಬೆಳೆಸುವುದರಿಂದ ಆಗುತ್ತದೆ. ಧರ್ಮದೃಷ್ಟಿಯನ್ನು ಬೆಳೆಸಬೇಕಾದವರು ಉಪಾಧ್ಯಾಯರು, ಸಾಹಿತಿಗಳು, ಧರ್ಮಾಚಾರ್ಯರು. ಉತ್ತಮ ಕಾವ್ಯಸಾಹಿತ್ಯ, ಧಾರ್ಮಿಕ ಉಪನ್ಯಾಸ ಮತ್ತು ಧಾರ್ಮಿಕ ಗ್ರಂಥಗಳ ಪಾತ್ರ ಈ ದಿಶೆಯಲ್ಲಿ ಬಹುದೊಡ್ಡದು.

> ನಾನ್ಯತ್ರ ವಿದ್ಯಾತಪಸೋಃ ನಾನ್ಯತ್ರೇಂದ್ರಿಯನಿಗ್ರಹಾತ್ ।
> ನಾನ್ಯತ್ರ ಲೋಭಸಂತ್ಯಾಗಾತ್ ಶಾಂತಿಂ ಪಶ್ಯಾಮಿ ತೇಽನಘ ॥೬೧॥
>
> — *ಮಹಾಭಾರತ, ಉದ್ಯೋಗಪರ್ವ, ೩೬-೫೧*

> “ಮಹಾರಾಜ, ವಿದ್ಯೆ-ತಪಸ್ಸುಗಳಿಲ್ಲದೆ, ಇಂದ್ರಿಯನಿಗ್ರಹವನ್ನು ಮಾಡದೆ, ಲೋಭವನ್ನೂ ಸಂಪೂರ್ಣವಾಗಿ ತ್ಯಜಿಸದೆ ಇರುವಾಗ, ನಿನಗೆ ಶಾಂತಿಯು ಹೇಗೆ ದೊರಕೀತೆಂಬುದು ನನಗೆ ತಿಳಿಯದು.”

ಧೃತರಾಷ್ಟ್ರನಿಗೆ ವಿದುರನ ಉಪದೇಶವಿದು. ಕುರು-ಪಾಂಡವರ ಯುದ್ಧವು ನಿಶ್ಚಿತವಾದಾಗ ಧೃತರಾಷ್ಟ್ರನಿಗೆ ನಿದ್ರೆಯೇ ಬರುವುದಿಲ್ಲ. ರಾತ್ರಿಯೇ ವಿದುರನನ್ನು ಕರೆಸಿಕೊಂಡು “ವಿದುರ, ನನ್ನ ಮನಸ್ಸು ಸದಾ ಉದ್ವಿಗ್ನವಾಗಿರುತ್ತದೆ. ನಿದ್ರೆ ಹತ್ತುವುದಿಲ್ಲ. ಚಿತ್ತಶಾಂತಿಯೇ ಇಲ್ಲವಾಯಿತು” ಎಂದು ಹೇಳಿದಾಗ ವಿದುರನು ಹೀಗೆ ನುಡಿದಿದ್ದಾನೆ.

ಬೇಕಾದಷ್ಟು ಭೋಗಸಾಮಗ್ರಿಗಳನ್ನು ಮನುಷ್ಯನು ನಿರ್ಮಿಸಿಕೊಂಡಿದ್ದಾನೆ.

ಈ ವಿಜ್ಞಾನಯುಗದಲ್ಲಂತೂ ಇವು ಸಹಸ್ರಮುಖವಾಗಿ ಬೆಳೆಯುತ್ತಿವೆ. ಅಂಗಡಿ ಬೀದಿಗಳಲ್ಲಿ ಯಥೇಚ್ಛವಾಗಿ ದೊರಕುವ ಈ ವಸ್ತುಗಳನ್ನು ಕೊಂಡು ತಂದು ಮನೆಯಲ್ಲಿ ತುಂಬಿಕೊಳ್ಳುತ್ತಿದ್ದೇವೆ. ಆದರೆ 'ಶಾಂತಿ' ಎಂಬ ಒಂದು ಪದಾರ್ಥವು ಯಾವ ಅಂಗಡಿಯಲ್ಲಿಯೂ ದೊರೆಯುವುದಿಲ್ಲ! "ಶಾಂತಿರಸ್ತು, ತುಷ್ಟಿರಸ್ತು, ಪುಷ್ಟಿರಸ್ತು" ಎಂದು ಎಲ್ಲರೂ ಹೇಳತಕ್ಕವರೇ. ಶುಭಕಾರ್ಯಗಳಿಂದ ಇವು ದೊರಕಲೆಂದು ಪುರೋಹಿತರು ಹೇಳಿದರೆ, ಭೌತಿಕ ವಸ್ತುಗಳಿಂದ ನಿಶ್ಚಿತವಾಗಿ ದೊರಕುತ್ತವೆಯೆಂದು ಸರ್ಕಾರದವರು ಹೇಳುತ್ತಾರೆ. ಇವರಿಬ್ಬರಿಗಿರುವ ವ್ಯತ್ಯಾಸ ಇದು.

ವಿದ್ಯೆ, ತಪಸ್ಸು, ಇಂದ್ರಿಯನಿಗ್ರಹ, ಲೋಭತ್ಯಾಗ - ಇವು ನಾಲ್ಕೂ ಚಿತ್ತಶಾಂತಿಗೆ ಕಾರಣಗಳೆಂದಿದೆ, ವಿದುರನೀತಿ. ಭೌತಿಕಸಾಮಗ್ರಿಯೊಂದನ್ನೂ ಶಾಂತಿಗೆ ಕಾರಣವೆಂದು ಅವನು ಹೇಳಲಿಲ್ಲ. ಧೃತರಾಷ್ಟ್ರನಿಗೆ ಅವುಗಳ ಕೊರತೆಯೂ ಇರಲಿಲ್ಲ. ಧರ್ಮ-ಅಧರ್ಮ, ನೀತಿ-ಅನೀತಿ, ಒಳ್ಳೆಯದು-ಕೆಟ್ಟದು, ಕರ್ತವ್ಯ-ಅಕರ್ತವ್ಯ ಎಂದು ವಿಂಗಡಿಸಿ ತಿಳಿದುಕೊಳ್ಳುವುದು ವಿದ್ಯೆ. ಸದ್ಗುಣಗಳನ್ನು ಅಳವಡಿಸಿಕೊಂಡು ದುರ್ಗುಣಗಳನ್ನು ತ್ಯಜಿಸಲು ಮಾಡುವ ಸತತ ಪ್ರಯತ್ನವೇ ತಪಸ್ಸು. ಇದು ಎರಡನೆಯ ಹಂತ. ಈ ಪ್ರಯತ್ನ ಮಾಡುವಾಗ ನಮ್ಮ ಇಂದ್ರಿಯಗಳು ಅಡ್ಡಿಪಡಿಸಿ ನಮ್ಮನ್ನು ಅಡ್ಡದಾರಿಗೆ ಎಳೆಯುತ್ತವೆ. ಅವನ್ನು ಬಲವಂತವಾಗಿ ತಡೆಹಿಡಿಯುವುದು ಇಂದ್ರಿಯನಿಗ್ರಹ. ಇವು ಮೂರನ್ನೂ ಗಳಿಸಿಕೊಂಡಾಗ ಮಾತ್ರ ದುರಾಸೆಯೆಂಬ ಲೋಭದ ತ್ಯಾಗವು ಸಾಧ್ಯವಾಗುತ್ತದೆ. ಹಣ, ಆಸ್ತಿ, ಅಧಿಕಾರ ಮುಂತಾದವುಗಳಲ್ಲಿ ಅತ್ಯಧಿಕವಾದ ದುರಾಸೆಯೆಂಬುದು ಹುಟ್ಟುಗುಣವಾಗಿ ನಮ್ಮಲ್ಲಿ ಸೇರಿಕೊಂಡಿರುತ್ತದೆ. ಈ ದುರಾಸೆಯನ್ನು ತ್ಯಜಿಸಿದ ಹೊರತು ಚಿತ್ತಶಾಂತಿಯು ದೊರಕದು; ಶಾಂತಿಯೆಂಬುದು ಬರಿಯ ಕನಸಾಗಿ ಉಳಿಯುತ್ತದೆ.

ಧೃತರಾಷ್ಟ್ರನಿಗೆ ವಿದ್ಯೆ ಇತ್ತು; ಇದು ನೀತಿ, ಇದು ಅನೀತಿ ಎಂಬುದರ ಅರಿವಿತ್ತು. ಸದ್ಗುಣಗಳನ್ನು ಅಳವಡಿಸಿಕೊಳ್ಳಲು ಅವನು ಪ್ರಯತ್ನಿಸಿಯೂ ಇದ್ದಾನೆ. ಆದರೆ ಇಂದ್ರಿಯನಿಗ್ರಹವಿಲ್ಲದೆ, ಪುತ್ರವ್ಯಾಮೋಹದಿಂದಾದ ಲೋಭವನ್ನು ಅವನು ತ್ಯಜಿಸಲಾರದೆಹೋದ. ಇದೇ ಅವನ ದುರಂತ.

**ಅಧಮಾ ಧನಮಿಚ್ಛಂತಿ ಧನಂ ಮಾನಂ ಚ ಮಧ್ಯಮಾಃ ।**
**ಉತ್ತಮಾ ಮಾನಮಿಚ್ಛಂತಿ ಮಾನೋ ಹಿ ಮಹತಾಂ ಧನಮ್ ॥೬೨॥**

— *ಚಾಣಕ್ಯನೀತಿ, ೮-೧*

"ಅಧಮರು ಹಣವನ್ನು ಮಾತ್ರ ಬಯಸುತ್ತಾರೆ. ಮಧ್ಯಮರು ಹಣ, ಮಾನ ಎರಡನ್ನೂ ಬಯಸುತ್ತಾರೆ. ಉತ್ತಮರು ಮಾನವೊಂದನ್ನೇ ಲೆಕ್ಕಿಸುತ್ತಾರೆ. ಏಕೆಂದರೆ, ಮಹಾತ್ಮರಾದ ಉತ್ತಮರಿಗೆ ಮಾನವೊಂದೇ ಮುಖ್ಯವಾದ ಧನ."

ಸಮಾಜದಲ್ಲಿ ಎಲ್ಲ ಸಜ್ಜನರಿಗೂ ಒಂದು ಗೌರವದ ಸ್ಥಾನವಿರುತ್ತದೆ. ತಮ್ಮ ಕರ್ತವ್ಯವನ್ನು ಯಾರು ಪಾಲಿಸಿಕೊಂಡಿರುತ್ತಾರೋ ಅವರಿಗೆ ಇದು ಸಹಜವಾಗಿ ಲಭ್ಯವಾಗಿರುತ್ತದೆ. ಪರೋಪಕಾರವೇ ಮೊದಲಾದ ಸದ್ಗುಣಗಳು ಸೇರಿದ್ದರೆ ಅದು ಇನ್ನೂ ಅಧಿಕವಾಗುತ್ತದೆ. ಸಮಾಜದಲ್ಲಿ ತನ್ನ ಸ್ಥಾನವೇನೆಂಬುದನ್ನು ಆ ವ್ಯಕ್ತಿಯು ಗುರುತಿಸಿಕೊಂಡಿರುತ್ತಾನೆ. ಇದೇ ಆತ್ಮಗೌರವ. ಇದನ್ನೇ ಮಾನವೆನ್ನುವುದು. 'ಮಾನಶ್ಚಿತ್ತಸಮುನ್ನತಿಃ' ಎಂದು ಅಮರಕೋಶದಲ್ಲಿದೆ. ಅದು ಮನಸ್ಸಿನ ಒಂದು ಉತ್ಕರ್ಷ; ಸೆಲ್ಫ್-ರೆಸ್ಪೆಕ್ಟ್ ಎನ್ನಬಹುದು. ಮಾನಕ್ಕೆ ಅರ್ಹತೆಯುಳ್ಳವನು ಮಾನ್ಯ. ಆತ್ಮಾಭಿಮಾನ, ಸ್ವಾಭಿಮಾನ - ಇವೆಲ್ಲ ಮಾನದ ಅರ್ಥವಿವರಣೆಗಳು.

ಮರ್ಯಾದೆಯೆಂದರೇನು? ನ್ಯಾಯಮಾರ್ಗಕ್ಕೆ ಅಂಟಿಕೊಂಡಿರುವುದು ಮರ್ಯಾದೆ. ಧರ್ಮಮಾರ್ಗದಿಂದ ವಿಚಲಿತರಾಗದಿರುವುದು ಮರ್ಯಾದೆ. ಶ್ರೀರಾಮವನ್ನು 'ಮರ್ಯಾದಾಪುರುಷೋತ್ತಮ'ನೆಂದು ಹೊಗಳುವುದು ಈ ಅಭಿಪ್ರಾಯದಿಂದ. ಮರ್ಯಾದೆಯಿಂದ ಮಾನಕ್ಕೊಂದು ಶೋಭೆಯುಂಟಾಗುತ್ತದೆ. ಸಜ್ಜನರು ಬಯಸುವುದು ಮಾನ-ಮರ್ಯಾದೆಗಳನ್ನು.

ಮಾನವು ಅಹಂಕಾರವಲ್ಲ. ಇತರರಿಗಿಂತ ತಾನು ಅಧಿಕನೆಂಬ ಗರ್ವದ ಮನೋಭಾವ ಅಹಂಕಾರ. ಅಧಿಕಾರ, ಧನ, ವಿದ್ಯೆ - ಮೊದಲಾದ್ದರಲ್ಲಿ ತಾನು ಹೆಚ್ಚೆಂಬ ನಂಬಿಕೆ ಅಹಂಕಾರದಲ್ಲಿದೆ. ಮಾನವಾದರೋ ಅಧಿಕಾರಾದಿಗಳಿಂದ ತನಗೆ ಲಭ್ಯವಾದ ಸ್ಥಾನ ಯಾವುದೆಂಬುದನ್ನು ಮಾತ್ರ ಗುರುತಿಸಿಕೊಂಡಿರುತ್ತದೆ. ಅನ್ಯರ ವಿಷಯದಲ್ಲಿ ತುಚ್ಛಭಾವನೆ ಅದರಲ್ಲಿಲ್ಲ. ಅಹಂಕಾರವು ಮಾತ್ರ ಅನ್ಯರನ್ನು ಕೀಳೆಂದು ತಿಳಿಯುತ್ತದೆ. ಮಾನಶೀಲನು ತನ್ನ ಕೀರ್ತಿಗೆ ಕಳಂಕ ಬಾರದಂತೆ ಎಚ್ಚರವಾಗಿರುತ್ತಾನೆ. ಅಹಂಕಾರಿಗೆ ಅದರ ಕಡೆ ಗಮನವಿರಬೇಕಾದ್ದಿಲ್ಲ.

ಇಂದು ಮಾನದ ಮೌಲ್ಯವು ಕುಸಿದುಹೋಯಿತು. ಬಳಕೆಯ ಮಾಲುಗಳ ಮೌಲ್ಯವು ಏರಿತು. ಮಾನದ ಮೌಲ್ಯವು ಕುಸಿದಾಗ ಎಲ್ಲ ನೀತಿ-ನಿಯಮಗಳೂ ಪಾತಾಳಕ್ಕೆ ಇಳಿದಂತೆಯೇ. ಆತ್ಮಾಭಿಮಾನವಿಲ್ಲದವರಿಗೆ ರಾಷ್ಟ್ರಾಭಿಮಾನವಿದ್ದೀತೆ?

'ಜನ್ಮಿನೋ ಮಾನಹೀನಸ್ಯ ತೃಣಸ್ಯ ಚ ಸಮಾ ಗತಿಃ' - 'ಮಾನಹೀನನಾದ ಮಾನವನು ಹುಲ್ಲುಕಡ್ಡಿಗೆ ಸಮಾನ' - ಎಂದೊಬ್ಬ ಸುಭಾಷಿತಕಾರನು ಹೇಳುತ್ತಾನೆ. 'ಮಾನೇನ ಹೀನಾಃ ಶುನಕೈಃ ಸಮಾನಾಃ' ಎಂದು ಇನ್ನೊಬ್ಬ ಹೇಳಿದ್ದಾನೆ. ಶುನಕದ ಉಪಮಾನ ಸರಿಯಲ್ಲ. ಶುನಕಕ್ಕೂ ಆತ್ಮಾಭಿಮಾನ ಇದೆ! ಬೀದಿಯಲ್ಲಿ ಮಲಗಿದ ನಾಯಿಯನ್ನು ಕೋಲಿನಿಂದ ತಿವಿದು ನೋಡಿ; ಅದು 'ಗುರ್' ಎನ್ನುತ್ತ ಎದ್ದು ನಿಲ್ಲುತ್ತದೆ.

**ವಿದೇಶೇಷು ಧನಂ ವಿದ್ಯಾ ವ್ಯಸನೇಷು ಧನಂ ಮತಿಃ ।**
**ಪರಲೋಕೇ ಧನಂ ಧರ್ಮಃ ಶೀಲಂ ತು ನಿಖಿಲಂ ಧನಮ್ ॥೬೩॥**

— *ಸುಭಾಷಿತರತ್ನ-ಭಾಂಡಾಗಾರ*

"ದೇಶಾಂತರಕ್ಕೆ ಹೋದಾಗ ವಿದ್ಯೆಯೇ ಧನ. ಆಪತ್ಕಾಲದಲ್ಲಿ ಬುದ್ಧಿಯೇ ಧನ. ಪರಲೋಕದಲ್ಲಿ ಧರ್ಮವೇ ಧನ. ಶೀಲವಾದರೋ ಸರ್ವತ್ರ ಸಮಸ್ತಧನವೂ ಆಗಿರುತ್ತದೆ."

ಸುಖಜೀವನಕ್ಕೆ ಸಾಧನವಾದದ್ದು ಹಣ. ಹಣದ ಸಂಪಾದನೆಗೆ ಹಲವು ಮಾರ್ಗಗಳಿವೆ. ಕೃಷಿ, ವ್ಯಾಪಾರ, ಕೈಗಾರಿಕೆ, ಅಧ್ಯಾಪನ - ಇತ್ಯಾದಿ. ಪರದೇಶದಲ್ಲಿ ಯಾವುದು ಸಾಧ್ಯ? ಜಮೀನಿಲ್ಲದೆ ಕೃಷಿ ಇಲ್ಲ. ಮೂಲಧನವಿಲ್ಲದೆ ವ್ಯಾಪಾರಾದಿಗಳೂ ನಡೆಯುವುದಿಲ್ಲ. ಅಲ್ಲಿ ವಿದ್ಯೆಯು ಮಾತ್ರ ಉಪಯೋಗಕ್ಕೆ ಬರುತ್ತದೆ. 'ವಿದ್ಯಾಧನಂ ಸರ್ವಧನಪ್ರಧಾನಂ' - ಆಪತ್ತುಗಳು ಬಂದಾಗ ಬರಿಯ ವಿದ್ಯೆ ಕುಂಟುತ್ತದೆ; ಆಗ ಮತಿ ಬೇಕು. ಮನನದಿಂದಾಗುವ ವಿವೇಚನಾಶಕ್ತಿಯೇ ಮತಿ. ಇದನ್ನು ಬುದ್ಧಿಯೆನ್ನಬಹುದು. ಇದಿಲ್ಲದವರನ್ನು ಹಣವೂ ರಕ್ಷಿಸದು. ಬುದ್ಧಿಶಕ್ತಿಯು ಮನುಷ್ಯನನ್ನು ಆಪತ್ತಿನಿಂದ ಪಾರುಮಾಡಬಲ್ಲದು. ಇದು ಮೊದಲನೆಯದಾಗಿ ದುಡುಕನ್ನು ತಡೆಯುತ್ತದೆ.

ಇನ್ನು ಮರಣಾನಂತರ ಪರಲೋಕದಲ್ಲಿ ರಕ್ಷಿಸತಕ್ಕದ್ದು ಯಾವುದು? ಇವನು ಸಂಪಾದಿಸಿದ ಹಣ, ಆಸ್ತಿ - ಎಲ್ಲವೂ ಇಲ್ಲಿಯೇ ಉಳಿಯುತ್ತದೆ. ಚಿತೆಗೆ ಏರಿಸುವಾಗ ಉಟ್ಟ ಬಟ್ಟೆಯನ್ನೂ ಕಿತ್ತುಕೊಳ್ಳುತ್ತಾರೆ. ಇವನ ಜೊತೆಗೆ ಬರತಕ್ಕದ್ದು ಧರ್ಮವೊಂದೇ. 'ಧರ್ಮಸ್ತಮನುಗಚ್ಛತಿ'. ಧರ್ಮಕ್ಕೆ ಮಾತ್ರ ಪರಲೋಕದಲ್ಲಿ ಬೆಲೆ. "ನಾನು ಭಾರಿ

ಶ್ರೀಮಂತ. ನನ್ನ ಬ್ಯಾಂಕ್ ಖಾತೆಯಲ್ಲಿ ಕೋಟಿಗಟ್ಟಲೆ ಹಣ ಇದೆ. ನಾನು ವಿದ್ವಾಂಸ, ನಾನು ಬುದ್ಧಿಶಾಲಿ. ನಾಲ್ಕು ಸಲ ಮಂತ್ರಿಯಾದ ಅನುಭವ ಇದೆ, ಪ್ರಧಾನಿಯಾಗಿ ರಾಷ್ಟ್ರವನ್ನೇ ಆಳಿದ್ದೇನೆ..." ಎಂದರೆ ಅಲ್ಲಿ ನಡೆಯುವುದಿಲ್ಲ. "ನೀನು ಮಾಡಿದ ಧರ್ಮಕಾರ್ಯ ಯಾವುದು? ನಿನ್ನ ಖಾತೆಯಲ್ಲಿ ಎಷ್ಟು ಧರ್ಮ ಇದೆ?" ಎಂದು ಯಮರಾಯನು ಕೇಳುತ್ತಾನೆ!

ಶೀಲವಾದರೋ ನಿಖಿಲ ಸಂಪತ್ತು. ಸರ್ವತ್ರ ಇರಬೇಕಾದ ಮಹಾಗುಣ. ಕೆಟ್ಟನಡತೆಯವನಿಗೆ ಹಣವು ಅನರ್ಥಕಾರಿ. ಅವನ ವಿದ್ಯೆಗೆ ಯಾವ ಗೌರವವೂ ಇಲ್ಲ. ದುಃಶೀಲನು ಬುದ್ಧಿವಂತನಾದರೂ ಜನರು ಅವನನ್ನು ದೂರವಿಡುತ್ತಾರೆ. ಅಹಂಕಾರ, ದರ್ಪ, ತಿರಸ್ಕಾರ, ಅಸಡ್ಡೆಗಳಿಂದ ಮಾಡುವ ಧರ್ಮಕಾರ್ಯವೂ ನಿಷ್ಫಲ. ಅದು ಬೂದಿಯಲ್ಲಿ ಹೋಮ ಮಾಡಿದಂತೆ.

ಧರ್ಮ-ಶೀಲಗಳಿಗಿರುವ ವ್ಯತ್ಯಾಸವೇನು? ಯಾವ ವ್ಯತ್ಯಾಸವನ್ನೂ ಕಾಣದೆ ಈ ಶಬ್ದಗಳನ್ನು ಸಂಕೀರ್ಣವಾಗಿ ಬಳಸುವುದುಂಟು. ಯಾರಿಗೆ ಪರಲೋಕದಲ್ಲಿ ವಿಶ್ವಾಸವಿಲ್ಲವೋ ಅವರಿಗೆ ಧರ್ಮವೂ ಶೀಲವೆನಿಸುತ್ತದೆ. ಪ್ರಕೃತದಲ್ಲಾದರೋ, ಯಾವುದರಿಂದ ಪುಣ್ಯವು ಲಭಿಸುವುದೋ, ಯಾವುದಕ್ಕೆ ಯಮರಾಯನು ಬೆಲೆಯನ್ನು ನೀಡುವನೋ ಅದು ಧರ್ಮ. ಅರ್ಹರಾದವರಿಗೆ ಅನ್ನವಸ್ತ್ರಾದಿಗಳ ದಾನ, ಬಡವರಿಗೆ ಉಪಕಾರ, ರೋಗಿಗಳ ಶುಶ್ರೂಷೆ, ಜನೋಪಕಾರಿಯಾದ ಸಾರ್ವಜನಿಕ ಕಾರ್ಯ, ಶಾಸ್ತ್ರವಿಹಿತವಾದ ವಿಧಿಗಳ ಆಚರಣೆ - ಮುಂತಾದದ್ದು ಧರ್ಮ. ಶೀಲವೆಂದರೆ ಒಳ್ಳೆಯ ನಡತೆ, ಸೌಜನ್ಯ ಎನ್ನಬಹುದು. ಪ್ರೀತಿ, ಸ್ನೇಹ, ಮಾತಿನಲ್ಲಿ ನಯ, ತಾಳ್ಮೆ, ಹೊಟ್ಟೆಕಿಚ್ಚು ಪಡದಿರುವುದು, ಸತ್ಯ, ಶುಚಿತ್ವ, ಗುರುಹಿರಿಯರಲ್ಲಿ ವಿನಯ - ಮೊದಲಾದ ಸದ್ಗುಣಗಳು ಶೀಲವೆನಿಸುತ್ತವೆ. ಮನುಷ್ಯನಿಗೆ ಇದು ಸರ್ವೋತ್ತಮವಾದ ಧನ. ಶೀಲವಿಲ್ಲದಾಗ ಹಣ, ವಿದ್ಯೆ, ಬುದ್ಧಿಗಳಿಗೆ ಶೋಭೆ ಇಲ್ಲ. ಶೀಲವಿಲ್ಲದ ಧರ್ಮಕಾರ್ಯ ನಿಷ್ಫಲ.

> ಕಾವ್ಯಂ ಯಶಸೇಽರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ ।
> ಸದ್ಯಃ ಪರನಿರ್ವೃತಯೇ ಕಾಂತಾಸಂಮಿತತಯೋಪದೇಶಯುಜೇ ॥೬೪॥
>
> — ಕಾವ್ಯಪ್ರಕಾಶ

"ಕಾವ್ಯದ ಪ್ರಯೋಜನಗಳು ಇವು - ಕೀರ್ತಿ, ಧನಪ್ರಾಪ್ತಿ, ವ್ಯವಹಾರ ಜ್ಞಾನ, ಅಶುಭನಿವೃತ್ತಿ, ಒಡನೆಯೇ ಪರಮಾನಂದದ ಅನುಭವ ಮತ್ತು ಕಾಂತಾಸಂಮಿತೆಯಿಂದ ಹಿತೋಪದೇಶ."

ಮಮ್ಮಟನು ಕಾವ್ಯಮೀಮಾಂಸಕ. ಕಾವ್ಯದ ಗುಣದೋಷಗಳನ್ನು ಪರೀಕ್ಷಿಸಿ ತಿಳಿಸತಕ್ಕ ರಸಿಕನಾದ ವಿದ್ವಾಂಸ. ಕಾವ್ಯಪ್ರಕಾಶವೆಂಬ ತನ್ನ ಗ್ರಂಥದಲ್ಲಿ ಕಾವ್ಯದಿಂದಾಗುವ ಈ ಪ್ರಯೋಜನಗಳನ್ನು ಸಾರವತ್ತಾಗಿ ಸಂಗ್ರಹಿಸಿ ಹೇಳಿದ್ದಾನೆ. ಉತ್ತಮ ಕಾವ್ಯರಚನೆಯಿಂದ ಕವಿಗೆ ಕೀರ್ತಿ ಬರುತ್ತದೆಯೆಂಬುದು ನಿಶ್ಚಿತ. ಅದರಿಂದ ಆತನಿಗೆ ಧನಪ್ರಾಪ್ತಿಯೂ ಆಗಬಹುದು. ಉಳಿದ ಪ್ರಯೋಜನಗಳು ಕಾವ್ಯಾಭ್ಯಾಸಿಗಳಿಗೆ ಬರತಕ್ಕವು. ಕವಿಯು ಸೂಕ್ಷ್ಮದರ್ಶಿಯಾಗಿರುತ್ತಾನಾದ್ದರಿಂದ ಲೋಕವ್ಯವಹಾರವು ಹೇಗಿರುತ್ತದೆಯೆಂಬುದನ್ನೂ, ಯಾವ ಜನರೊಡನೆ ಹೇಗೆ ನಡೆದುಕೊಳ್ಳಬೇಕೆಂಬುದನ್ನೂ ತೋರಿಸಿಕೊಡಬಲ್ಲನು. ರಾಮಾಯಣಾದಿ ಪುಣ್ಯಕಾವ್ಯಗಳ ಪಠನದಿಂದ ತಮ್ಮ ಕಷ್ಟಗಳ ಪರಿಹಾರವಾಗುತ್ತದೆ ಎಂದೂ ಜನರಲ್ಲಿ ನಂಬಿಕೆ ಇದೆ. ಮುಖ್ಯವಾದ ಕಾವ್ಯಪ್ರಯೋಜನವೆಂದರೆ ಓದುವಾಗಲೇ ಆಗುವ ಆನಂದ. ರಸಿಕನಿಗೆ ಕಾವ್ಯದಿಂದಾಗುವ ಆನಂದ ಎಣೆಯಿಲ್ಲದ್ದು. ಶ್ರಮವಿಲ್ಲದೆ, ವ್ಯಯವಿಲ್ಲದೆ, ಆರೋಗ್ಯಕ್ಕೆ ಕುಂದಿಲ್ಲದೆ, ಕುಳಿತಲ್ಲಿಯೇ ಪರಮಸಂತೋಷವನ್ನು ಉಂಟುಮಾಡಿ ಹೃದಯವನ್ನು ಆಪ್ಯಾಯನಗೊಳಿಸತಕ್ಕದ್ದು ಉತ್ತಮ ಕಾವ್ಯ ಒಂದೇ.

ಮಹಾಕವಿ ಬಾಣಭಟ್ಟನು ಕಾದಂಬರಿಯೆಂಬ ಗದ್ಯಕಾವ್ಯವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ಅದನ್ನೋದಿದ ಒಬ್ಬ ಸಹೃದಯನು ಹೇಳಿದ ಮಾತು ಇದು : - "ಕಾದಂಬರೀರಸಜ್ಞಾನಾಮಾಹಾರೋಽಪಿ ನ ರೋಚತೇ" : "ಕಾದಂಬರಿಯ ರಸವನ್ನು ಆಸ್ವಾದಿಸತಕ್ಕವರಿಗೆ ಆಹಾರವೂ ರುಚಿಸುವುದಿಲ್ಲ"! ಇಲ್ಲೊಂದು ಚಮತ್ಕಾರವಿದೆ. 'ಕಾದಂಬರಿ'ಯೆಂದರೆ ಹೆಂಡವೆಂದು ಇನ್ನೊಂದು ಅರ್ಥ. ಅದರಂತೆ ಆಕರ್ಷಕವಾದದ್ದು ಬಾಣನ ಕಾದಂಬರಿ.

ನಮಗೆ ಹಿತೋಪದೇಶವನ್ನು ಮಾಡತಕ್ಕವರು ಮೂವರು : ಪ್ರಭು, ಮಿತ್ರ ಮತ್ತು ಪ್ರಿಯಳಾದ ಪತ್ನಿ. ತಂದೆ, ತಾಯಿ, ಗುರು - ಮೊದಲಾದ ಹಿರಿಯರು ಪ್ರಭುಗಳು. ಇವರ ಆಜ್ಞಾರೂಪವಾದ ನುಡಿಗಳು, ವೇದಶಾಸ್ತ್ರಾದಿಗಳು ಪ್ರಭುಸಂಮಿತೆಗೆ ಸೇರುತ್ತವೆ. ಸ್ನೇಹಿತರ ಹಿತಬೋಧೆ, ಮಿತ್ರಸಂಮಿತೆಗೆ ಸೇರುತ್ತದೆ. ಸುಭಾಷಿತಗಳು ಈ ಪ್ರಕಾರದವು.

ಸಚ್ಚಾರಿತ್ರಳೂ ಪ್ರಿಯಳೂ ಆದ ಮಡದಿ ತನ್ನ ಗಂಡನಿಗೆ ಬುದ್ಧಿಹೇಳಿ ಅವನನ್ನು ದಾರಿಗೆ ತರಬಲ್ಲಳು. ಅವಳ ಬುದ್ಧಿವಾದವು ಪ್ರಿಯವಾಗಿದ್ದು ಅತ್ಯಂತ ಪರಿಣಾಮಕಾರಿಯಾಗಿರುತ್ತದೆ. ಈ ಬುದ್ಧಿವಾದವೇ ಕಾಂತಾಸಂಮಿತೆ. ಇದು ಪ್ರಭುಸಂಮಿತೆಗಿಂತ, ಮಿತ್ರಸಂಮಿತೆಗಿಂತ ಪ್ರಭಾವಶಾಲಿ! ಈ ಪ್ರಕಾರದಿಂದ ಕಾವ್ಯವು ಓದುಗನ ಮೇಲೆ ತನ್ನ ಮುದ್ರೆಯನ್ನೊತ್ತುತ್ತದೆ. ಆದ್ದರಿಂದಲೇ ಉತ್ತಮವಾದ ಕಾವ್ಯಸಾಹಿತ್ಯವು ಯಾವುದೆಂಬುದನ್ನು ಓದುಗನು ಮೊದಲು ಆರಿಸಿಕೊಳ್ಳಬೇಕು.

**ನಿಃಶೀರ್ಷಾಂಘ್ರಿರ್ನಟ ಇವ ಪುನಃ ಕೋऽಪಿ ಜಂತುರ್ನಟಿತ್ವಾ ।**
**ನೋ ಜಾನೀಮೋ ಭವಜವನಿಕಾಂ ತರ್ಹಿತಃ ಕ್ವ ಪ್ರಯಾತಿ ॥೬೫॥**

— *ಕ್ಷೇಮೇಂದ್ರ*

"ತಲೆಕಾಲುಗಳಿಲ್ಲದ, ಯಾವನೋ ಒಬ್ಬನು ಬಂದು (ಜಗದ್ರಂಗ ಸ್ಥಳದಲ್ಲಿ) ನಟನಂತೆ ನರ್ತಿಸಿ, ಸಂಸಾರದ ಪರದೆಯ ಹಿಂದೆ ಮರೆಯಾಗಿ ಬಿಡುತ್ತಾನೆ. ಆಮೇಲೆ ಎಲ್ಲಿಗೆ ಹೋಗುತ್ತಾನೋ ನಮಗೆ ಗೊತ್ತಿಲ್ಲ!"

ಈ ಜಗತ್ತಿನಲ್ಲಿ ನಡೆಯುವುದೆಲ್ಲವೂ ಪರೀಕ್ಷಿಸಿದರೆ ಒಂದು ನಾಟಕವೇ. ಹುಟ್ಟಿದಂದಿನಿಂದ ಸಾಯುವವರೆಗೆ ಮನುಷ್ಯನ ನಾಟ್ಯವು ನಡೆಯುತ್ತಲೇ ಇರುತ್ತದೆ. ಪುರುಷಪಾತ್ರ ಸ್ತ್ರೀಪಾತ್ರಗಳಿವೆ. ಬಾಲಕರು, ವೃದ್ಧರು, ರೋಗಿಗಳು, ವ್ಯಾಪಾರಿಗಳು, ಕೊಳ್ಳುವವರು - ಎಲ್ಲರೂ ತಮ್ಮ ಪಾತ್ರಗಳನ್ನು ನಾನಾ ರೀತಿಯಲ್ಲಿ ಅಭಿನಯಿಸುತ್ತಿದ್ದಾರೆ. ಆಟ, ಊಟ, ಪಾಠ, ದುಡಿತ, ಹೋರಾಟ, ಸೋಲು, ಗೆಲವು - ಎಲ್ಲವೂ ಅಭಿನಯದ ನಾನಾ ಪ್ರಕಾರಗಳು. ನಾವು ನಾಟಕವೆಂದು ಯಾವುದನ್ನು ಹೇಳುತ್ತೇವೋ ಅದು ನಾಟಕದೊಳಗಿನ ನಾಟಕ. ಅದನ್ನು 'ಲೋಕಾನುಚರಿತ'ವೆಂದು ಭರತನು ನಾಟ್ಯಶಾಸ್ತ್ರದಲ್ಲಿ ಕರೆದಿದ್ದಾನೆ. ಲೋಕದಲ್ಲಿ ನಡೆಯುವ ಚರಿತ್ರೆಯ ಅನುಕರಣವೇ ನಾಟಕ. ಇದರ ಪ್ರತಿಬಿಂಬ ಅದು, ಅದರ ಪ್ರತಿಬಿಂಬ ಇದು. ಜೀವನದಂತೆ ನಾಟಕ, ನಾಟಕದಂತೆ ಜೀವನ. ನಮ್ಮ ವ್ಯವಹಾರವೇ ನಾಟಕದಲ್ಲಿ ಪ್ರದರ್ಶನ ಗೊಳ್ಳುತ್ತದೆ.

ಜೀವನವನ್ನು ನಾಟಕಕ್ಕೆ ಹೋಲಿಸುವ ಉದ್ದೇಶವು ತತ್ತ್ವಬೋಧದ ದೃಷ್ಟಿಯಿಂದ. ವೇಷಕಟ್ಟಿದ ನಟನ ಹಾಗೆ ಮನುಷ್ಯಚರಿತ್ರೆಯೆಲ್ಲ ಒಂದು ದೊಂಬರಾಟ. ಇದರಲ್ಲಿ

ಮಾನವನು 'ಮಂಕುತಿಮ್ಮನ ಕಗ್ಗ'ದಲ್ಲಿ ಹೇಳಿದಂತೆ ಎದ್ದೆದ್ದು ಬೀಳುತ್ತಾನೆ, ಗುದ್ದಾಡಿ ಸೋಲುತ್ತಾನೆ, ಗದ್ದಲವ ತುಂಬಿ ಪ್ರಸಿದ್ಧನಾಗುತ್ತಾನೆ. ವಿಶೇಷವೇನೆಂದರೆ ಜೀವನನಾಟಕದಲ್ಲಿ ನಟರೇ ಪ್ರೇಕ್ಷಕರು, ಪ್ರೇಕ್ಷಕರೇ ನಟರು!

ಈ ಪಾತ್ರಧಾರಿ 'ನಿಃಶೀರ್ಷಾಂಘ್ರಿ'. ತಲೆಯಿಲ್ಲ, ಕಾಲಿಲ್ಲ. ಮುಂಡದಂತೆ ಎದ್ದು ಬಿದ್ದು ಹೊರಳಾಡಿ ಉರುಳಾಡುವುದೇ ಅಭಿನಯ. ಗೊತ್ತುಗುರಿಯಿಲ್ಲದ ನಾಟಕವಿದು. ಬುದ್ಧಿಯಿಲ್ಲದವನ ಅಭಿನಯ, ಕಾಲಿಲ್ಲದವನ ಕುಣಿತ. ಜ್ಞಾನವೂ ಇಲ್ಲ, ಜ್ಞಾನಾನುಗುಣವಾದ ಕರ್ಮವೂ ಇಲ್ಲವೆಂದರ್ಥ. ಆದಿಯೂ ಇಲ್ಲ ಅಂತ್ಯವೂ ಇಲ್ಲ ಈ ನಾಟಕಕ್ಕೆ. ಇಂತಹ ಅಭಿನಯವನ್ನು ನೀಡಿ ಮುಗಿಸಿ ಪರದೆಯ ಹಿಂದೆ ಹೋಗಿಬಿಡುತ್ತಾನೆ. ತಿರುಗಿ ಬರುವುದೇ ಇಲ್ಲ. ಎಲ್ಲಿಗೆ ಹೋಗುತ್ತಾನೋ ಅದೂ ತಿಳಿಯದು. ಎಲ್ಲಿಂದ ಬಂದಿದ್ದನೆಂದೂ ಗೊತ್ತಿಲ್ಲ.

ಇದರ ನೀತಿ ಯಾವುದು? ವೇಷಕಟ್ಟಿದ ನಟನಂತೆ ನಿನ್ನ ಕರ್ತವ್ಯವನ್ನು ಸರಿಯಾಗಿ ಅಭಿನಯಿಸು. ನಾಟಕದ ಹರಿಶ್ಚಂದ್ರನಂತೆ, ಚಂದ್ರಮತಿಯಂತೆ ಕಷ್ಟ ಬಂದಾಗ ಅಳು, ಸುಖ ಬಂದಾಗ ನಗು. ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ. ನಟನು ಅಂತರಂಗದಲ್ಲಿ ಅಳುವುದೂ ಇಲ್ಲ, ನಗುವುದೂ ಇಲ್ಲ. ನಿನ್ನನ್ನು ನಟನೆಂದು ಭಾವಿಸಿಕೊಂಡಾಗ ಸುಖ-ದುಃಖ, ಲಾಭ-ನಷ್ಟ, ಜಯ-ಅಪಜಯ ಎಲ್ಲವೂ ಸಮವಾಗಿಬಿಡುತ್ತವೆ.

**ಮಾರ್ಜಾಲಭಕ್ಷಿತೇ ದುಃಖಂ ಯಾದೃಶಂ ಗೃಹಕುಕ್ಕುಟೇ ।**
**ನ ತಾದೃಜ್ ಮಮತಾಶೂನ್ಯೇ ಕಲವಿಂಕೇಽಥ ಮೂಷಕೇ ॥೬೬॥**

— *ಪ್ರಬೋಧಚಂದ್ರೋದಯ*

"ಮನೆಯಲ್ಲಿ ಸಾಕಿದ ಕೋಳಿಯನ್ನು ಬೆಕ್ಕು ತಿಂದರೆ ದುಃಖವಾಗುತ್ತದೆ. ಆದರೆ ಗುಬ್ಬಚ್ಚಿಯನ್ನೋ, ಇಲಿಯನ್ನೋ ಬೆಕ್ಕು ತಿಂದಾಗ ಆ ರೀತಿ ದುಃಖವಾಗುವುದಿಲ್ಲ. ಏಕೆಂದರೆ, ಅವುಗಳಲ್ಲಿ ನಮಗೆ ಮಮತೆ ಇರುವುದಿಲ್ಲ."

ಇದು ನನ್ನದು, ಇವರು ನನ್ನವರು - ಎಂಬ ಅಭಿಮಾನ ಮಮತ್ವ. ಇದು ಪ್ರೀತಿಯಿದ್ದಲ್ಲಿ ಬರತಕ್ಕ ಗುಣ. ಪ್ರೀತಿಯಿಲ್ಲದಿರುವಾಗ ನಮಗೆ ಸಂಬಂಧಿಸಿದ್ದಾದರೂ ಮಮತ್ವಬುದ್ಧಿ ಇರುವುದಿಲ್ಲ. ತಂದೆತಾಯಿಗಳಿಗೆ ತಮ್ಮ ಮಕ್ಕಳಲ್ಲಿ ಸಹಜವಾಗಿ

ಮಮತ್ವವಿರುತ್ತದೆ. ಪ್ರೀತಿಯೇ ಇದಕ್ಕೆ ಕಾರಣ. ಒಂದು ವಸ್ತುವಿನಲ್ಲಿ ಪ್ರೀತಿ ನಮಗೇಕೆ ಹುಟ್ಟುತ್ತದೆ? ಆ ವಸ್ತುವಿನಿಂದ ನಮಗೆ ಸಂತೋಷವಾಗುವುದರಿಂದ ಪ್ರೀತಿ ಹುಟ್ಟುತ್ತದೆ. ನಮಗಾಗುವ ಸುಖವು ಪ್ರೀತಿಗೆ ಕಾರಣ. ಪ್ರೀತಿಯು ಮಮತ್ವಕ್ಕೆ ಕಾರಣ. ಸುಖಕ್ಕೆ ಭಂಗ ಬಂದಾಗ ಪ್ರೀತಿಯು ಹೋಗಿ ದ್ವೇಷವು ಹುಟ್ಟುತ್ತದೆ. ಆಗ ಮಮತ್ವವು ದೂರ ಸರಿಯುತ್ತದೆ. ದ್ವೇಷ ಹುಟ್ಟುವುದಕ್ಕೆ ತನಗಾದ ದುಃಖವು ನಿಮಿತ್ತ.

ಸಾಕಿದ ಕೋಳಿಯಿಂದ ತನಗೆ ಪ್ರಯೋಜನವಿದೆಯಾದ್ದರಿಂದ ಅದರಲ್ಲಿ ಪ್ರೀತಿ ಇದೆ. ಬೆಕ್ಕು ಅದಕ್ಕೆ ಘಾತುಕವಾದ್ದರಿಂದ ದುಃಖವಾಗಿ ಬೆಕ್ಕಿನ ಮೇಲೆ ದ್ವೇಷ ಹುಟ್ಟುತ್ತದೆ. ಗುಬ್ಬಚ್ಚಿಯು ಮನೆಯಲ್ಲಿ ಗೂಡು ಕಟ್ಟಿ ಕೋಳಿಯಂತೆಯೇ ಸುಳಿದಾಡುತ್ತದೆ. ಅದರಲ್ಲಿ ಮಮತೆ ಇಲ್ಲವಾದ್ದರಿಂದ ದುಃಖವಾಗದು. ಇಲಿಯನ್ನು ಬೆಕ್ಕು ಅಪಹರಿಸಿದಾಗ ಸಂತೋಷವೇ ಆಗುತ್ತದೆ. ಏಕೆಂದರೆ, ಇಲಿಯ ಮೇಲೆ ಈತನಿಗೆ ದ್ವೇಷವಿರುತ್ತದೆ.

ಕೈಕೇಯಿಗೆ ಶ್ರೀರಾಮನಲ್ಲಿ ಮೊದಲು ಪ್ರೀತಿ ಇತ್ತು. ಮಂಥರೆ ಅವನಿಗೆ ಪಟ್ಟಾಭಿಷೇಕ ಮಾಡುತ್ತಾರೆಂಬ ಸುದ್ದಿಯನ್ನು ಹೇಳಿದಾಗ, ಸಂತೋಷದಿಂದ ಒಂದು ಹಾರವನ್ನೇ ಕೊರಳಿಂದ ತೆಗೆದು ಮಂಥರೆಗೆ ಪಾರಿತೋಷಿಕವಾಗಿ ನೀಡಿದಳು. ಅನಂತರ ಮಂಥರೆಯ ದುರ್ಬೋಧನೆಯಿಂದ ಶ್ರೀರಾಮನ ಮೇಲೆ ದ್ವೇಷವೇ ಹುಟ್ಟಿಬಿಟ್ಟಿತು. ಆತನಿಂದ ತನಗೂ ತನ್ನ ಮಗನಾದ ಭರತನಿಗೂ ಕಷ್ಟವೇ ಪ್ರಾಪ್ತವಾಗುತ್ತದೆಯೆಂಬ ಭ್ರಮೆಯೇ ಅದಕ್ಕೆ ಕಾರಣ.

ಮಮತ್ವವಿರುವುದರಿಂದಲೇ ಮಕ್ಕಳ ಹಿತಕ್ಕಾಗಿ ತಂದೆಯು ಪ್ರಯತ್ನಿಸುತ್ತಾನೆ. ಈ ಮಮತ್ವವು ತನಗೆ, ತನ್ನ ಕುಟುಂಬಕ್ಕೆ ಸೀಮಿತವಾಗುವುದು ಬರಿಯ ಸ್ವಾರ್ಥವಾಗುತ್ತದೆ. ಇಂತಹ ಸ್ವಾರ್ಥವು ಪಶುಪಕ್ಷಿಗಳಲ್ಲಿಯೂ ಇದೆ. ಮನುಷ್ಯನ ವೈಶಿಷ್ಟ್ಯವೇನು? ಈ ಮಮತೆಯು ವಿಸ್ತೃತವಾಗಬೇಕು. ಅದು ದೇಶದ ಆದ್ಯಂತದವರೆಗೆ ವ್ಯಾಪಿಸಬೇಕು. ಈ ದೇಶ ನನ್ನದು, ಈ ಎಲ್ಲ ಜನರೂ ನನ್ನವರು - ಎಂಬ ಮಮತೆ ಇಲ್ಲದವರು ರಾಷ್ಟ್ರರಕ್ಷಕರಲ್ಲ, ರಾಷ್ಟ್ರಭಕ್ಷಕರು. ಅಂಥವರು ಆಡಳಿತಗಾರರಾಗಬಾರದು. ಅವರ ಕೈಗೆ ಆಡಳಿತವು ಸಿಕ್ಕಿತೆಂದರೆ, ಸ್ಕ್ಯಾಮುಗಳ ಮೇಲೆ ಸ್ಕ್ಯಾಮುಗಳು ಸಂಭವಿಸುತ್ತಲೇ ಇರುತ್ತವೆ. ಸಂಕುಚಿತವಾದ ಮಮಕಾರ ಯಾರಿಗೂ ಒಳ್ಳೆಯದಲ್ಲ; ಅದು ವಿಸ್ತೃತವಾಗಿ ಹರಡಿದಷ್ಟೂ ತನ್ನ ಕಲ್ಯಾಣವೂ ಆಗುವುದು, ಅನ್ಯರ ಕಲ್ಯಾಣವೂ ಆಗುವುದು.

**ಕವಿತ್ವಸ್ಯ ಗಾಂಭೀರ್ಯಮೌದಾರ್ಯಮೃದ್ಧೇಃ**
**ಪ್ರಭುತ್ವಸ್ಯ ಶೌರ್ಯಂ ಗುರುತ್ವಸ್ಯ ವಿದ್ಯಾಮ್ ।**
**ಮಹಾವಂಶ್ಯತಾಯಾಃ ಸದಾಚಾರಪೂರ್ತಿಂ**
**ಮಹತ್ತ್ವಸ್ಯ ಸೌಲಭ್ಯಮಾಕಲ್ಪಮಾಹುಃ ॥೬೭॥**

— *ವಿಶ್ವಗುಣಾದರ್ಶ, ೩೪೪*

"ಕವಿತ್ವಕ್ಕೆ ಗಾಂಭೀರ್ಯವು ಭೂಷಣ. ಐಶ್ವರ್ಯಕ್ಕೆ ಉದಾರವಾಗಿ ದಾನ ಮಾಡುವುದು ಭೂಷಣ. ದೇಶದ ಒಡೆತನಕ್ಕೆ ಶೌರ್ಯವೇ ಭೂಷಣ. ಗುರುತ್ವಕ್ಕೆ ವಿದ್ಯೆಯೂ, ಮಹಾವಂಶದಲ್ಲಿ ಹುಟ್ಟಿದ್ದಕ್ಕೆ ಸದಾಚಾರವೂ, ಮಹತ್ತ್ವಕ್ಕೆ ಸೌಲಭ್ಯವೂ ಅಲಂಕಾರಗಳೆಂದು ಬಲ್ಲವರು ಹೇಳುತ್ತಾರೆ."

ಗಾಂಭೀರ್ಯವು ಶಬ್ದಾರ್ಥಗಳೆರಡರಲ್ಲಿಯೂ ಇರತಕ್ಕ ಒಂದು ವಿಶೇಷ ಗುಣ; ಉದಾತ್ತ ಶಬ್ದರಚನೆಯಿಂದ ವ್ಯಕ್ತವಾಗುವ ಅರ್ಥದ ಪ್ರೌಢಿ. ಆಕಾರ, ಸ್ವಭಾವ, ಮಾತು, ಕೃತಿಗಳಲ್ಲಿ ಒಂದು ವೈಶಿಷ್ಟ್ಯವಿರತಕ್ಕವನನ್ನು ಗಂಭೀರಸ್ವಭಾವದವನು ಎನ್ನುತ್ತೇವೆ. ಆ ವೈಶಿಷ್ಟ್ಯವು ಕಾವ್ಯದಲ್ಲಿದ್ದರೆ ಗಾಂಭೀರ್ಯವೆನಿಸಿ ಕಾವ್ಯಕ್ಕೆ ಅಲಂಕಾರವಾಗುತ್ತದೆ. ಐಶ್ವರ್ಯವಿರತಕ್ಕವನಲ್ಲಿ ಔದಾರ್ಯವಿದ್ದರೆ, ಹೂವಿಗೆ ಸುಗಂಧವಿದ್ದಂತೆ ಒಂದು ಶೋಭೆಯನ್ನೀಯುತ್ತದೆ. ಸುಗಂಧದಂತೆ ಅವನ ಕೀರ್ತಿಯೂ ಹರಡಿ ಜನರಿಗೆ ಸಂತೋಷವನ್ನೀಯುತ್ತದೆ. ನಿರ್ಗಂಧಕುಸುಮವು ಪೂಜೆಗೆ ಯೋಗ್ಯವಲ್ಲ; ವಿದ್ಯೆಯಿಲ್ಲದವನು ಗುರುವೇ ಅಲ್ಲ.

ರಾಷ್ಟ್ರದ ಆಡಳಿತವನ್ನು ವಶದಲ್ಲಿಟ್ಟುಕೊಂಡವನು ಪ್ರಭು. ರಾಷ್ಟ್ರದ ರಕ್ಷಣೆ ಪ್ರಭುವಿನ ಪ್ರಧಾನ ಕಾರ್ಯ. ದೇಶದೊಳಗಿನ ಅಂತಃಶತ್ರುಗಳಿಂದ, ದೇಶದ ಹೊರಗಿನ ಬಹಿಃಶತ್ರುಗಳಿಂದ ಪ್ರಜೆಗಳಿಗೆ ರಕ್ಷಣೆ ಬೇಕು. ಉಳಿದ ಸೌಕರ್ಯಗಳಲ್ಲಿ ಬಹುಭಾಗವನ್ನು ಪ್ರಜೆಗಳು ತಾವೇ ಕಲ್ಪಿಸಿಕೊಳ್ಳಬಲ್ಲರು. ಶೌರ್ಯದ ಫಲವೇ ರಕ್ಷಣೆ. ವಿರಾಟರಾಜನ ಗೋವುಗಳನ್ನು ಅಪಹರಿಸಿದ್ದಕ್ಕಾಗಿ ಕೌರವರೊಡನೆ ಭಾರಿ ಯುದ್ಧವೇ ನಡೆದು, ಕೌರವರಿಗೆ ದಂಡನೆಯಾಯಿತು. (ಕಾಶ್ಮೀರದಲ್ಲಿ ಗೋವುಗಳ ಜೊತೆಗೆ ಮನುಷ್ಯರನ್ನೇ ಶತ್ರುಗಳು ಅಪಹರಿಸುತ್ತಿದ್ದಾರೆ, ದೇಶದೊಳಗೆ ನುಗ್ಗಿ ಬಂದು ಪ್ರಜೆಗಳನ್ನು ಹೆದರಿಸಿ ಕೊಲ್ಲುತ್ತಿದ್ದಾರೆ, ಅದಿರಲಿ.)

ಅಂತಃಶತ್ರುಗಳನ್ನೂ ನಮ್ಮ ಸರ್ಕಾರವು ನಿಗ್ರಹಿಸಲಾರದೆಹೋಗಿದೆ. ಪ್ರತಿದಿನವೂ ತಪ್ಪದೆ ನಡೆಯುತ್ತಿರುವ ಕೊಲೆ, ಸುಲಿಗೆ, ದರೋಡೆಗಳು ಒಂದು ಕಡೆ; ಹವಾಲಾ ಹಗರಣ ಮುಂತಾದ ಹೊರಲಾರದ ಹಗರಣಗಳ ಹೊರೆ ಇನ್ನೊಂದು ಕಡೆ. ಇವೆಲ್ಲ ಸರ್ಕಾರದ ಶೌರ್ಯದ ಚಿಹ್ನೆಗಳೆ? ಭ್ರಷ್ಟಾಚಾರಗಳ ವಿಶ್ವರೂಪವು ಆಡಳಿತಗಾರರನ್ನೇ ಅಪ್ಪಿಕೊಳ್ಳುತ್ತಿದೆಯಲ್ಲ!

ಒಬ್ಬ ವ್ಯಕ್ತಿಗೆ ಕೀರ್ತಿಶಾಲಿಗಳಾದ ಪೂರ್ವಜರ ವಂಶವಿರುವಂತೆ, ಸರ್ಕಾರಕ್ಕೂ ಸಹ ಮಹಿಮಾನ್ವಿತರಾದ ಪೂರ್ವಜರ ಪರಂಪರೆಯಲ್ಲಿ ಬಂದ ವಂಶವಿರುತ್ತದೆ. ಪೂರ್ವಜರ ಎಲ್ಲ ಗುಣಗಳನ್ನೂ ಅಳವಡಿಸಿಕೊಳ್ಳಲಾಗದೆ ಇದ್ದರೂ ಸದಾಚಾರವಾದರೂ ಇದ್ದರೆ ವಂಶಕ್ಕೆ ಭೂಷಣವಾದೀತು. ಲೋಕಮಾನ್ಯ ತಿಲಕ್, ವೀರ ಸಾವರ್ಕರ್, ಮಹಾತ್ಮ ಗಾಂಧಿ, ಸರ್ದಾರ್ ಪಟೇಲ್ ಮುಂತಾದ ನಾಯಕರ ಶಿಷ್ಯಪರಂಪರೆಯಲ್ಲಿ ಬಂದ ಈಗಿನ ಸರ್ಕಾರಗಳಲ್ಲಿ ಆ ಮಹಾಪುರುಷರ ಎಷ್ಟನೆಯ ಒಂದಂಶವಿದ್ದಿರಬಹುದು?

ಇನ್ನು ಕಾವಲುಗಾರರ ರಕ್ಷಣೆಯೆಂಬ ವಜ್ರಕವಚದಲ್ಲಿ ಭದ್ರವಾಗಿರುವ ವಿ.ವಿ.ಐ.ಪಿ. ಮಹತ್ತ್ವವುಳ್ಳವರ ದರ್ಶನಸೌಲಭ್ಯವಾದರೂ ಜನರಿಗೆ ದೊರಕೀತೆ?

**ಕಿಂ ನು ಮೇ ಸ್ಯಾದಿದಂ ಕೃತ್ವಾ ಕಿಂ ನು ಮೇ ಸ್ಯಾದಕುರ್ವತಃ ।**
**ಇತಿ ಸಂಚಿಂತ್ಯ ಮನಸಾ ಪ್ರಾಜ್ಞಃ ಕುರ್ವೀತ ವಾ ನವಾ ॥೬೮॥**

— *ಸುಭಾಷಿತಮಂಜರೀ*

"ಈ ಕಾರ್ಯವನ್ನು ಮಾಡಿದರೆ ನನಗೆ ಯಾವ ಪ್ರಯೋಜನವಾದೀತು? ಇದನ್ನು ಮಾಡದಿದ್ದರೆ ಏನಾಗುವುದು? - ಎಂದು ವಿಮರ್ಶಿಸಿ, ಆಮೇಲೆ ಪ್ರಾಜ್ಞನಾದವನು ಅದನ್ನು ಮಾಡಬೇಕು, ಇಲ್ಲವೇ ಬಿಟ್ಟುಬಿಡಬೇಕು."

ಕಾರ್ಯಾಕಾರ್ಯವಿವೇಕವಿರಬೇಕು - ಎಂದು ಹೇಳುವುದುಂಟು. ಇದು ಮಾಡಲು ಅರ್ಹವಾದದ್ದೇ ಅಥವಾ ಮಾಡಬಾರದುದೇ ಎಂಬ ವಿವೇಚನೆ ಅದು. ಅನಂತರ ಕರ್ತವ್ಯಪ್ರಜ್ಞೆಗೆ ಅವಕಾಶ. ಕಾರ್ಯವೆಂಬುದು ನಿಶ್ಚಯವಾದ ಮೇಲೆ ಅದನ್ನು ಹೇಗೆ ಮಾಡಬೇಕು, ಯಾವಾಗ - ಇತ್ಯಾದಿ ವಿಚಾರ ಉದಿಸುತ್ತದೆ.

ಬರವಣಿಗೆಯೂ ಒಂದು ಕಾರ್ಯವೇ. ಈ ಕಾಲದಲ್ಲಿ ಬರೆಯುವ ಚಾಪಲ್ಯ ಜನರಿಗೆ ಅಧಿಕವಾಗಿದೆ. ಕಾಗದ, ಲೇಖನಿಗಳು ಯಥೇಚ್ಛವಾಗಿ ದೊರೆಯುವುದರಿಂದ ಇದು ಸಾಧ್ಯವಾಗಿದೆ! ತಮ್ಮ ಲೇಖನ ಪ್ರಕಟವಾದರೆ, ಹೆಸರು ಮುದ್ರಿತವಾದರೆ ಸಾಕು, ಏನೋ ಒಂದು ಮಹತ್ತರವಾದ ಕಾರ್ಯವನ್ನು ಸಾಧಿಸಿದೆವೆಂದೂ ಜನ್ಮವು ಸಾರ್ಥಕವಾಯಿತೆಂದೂ ಭಾವಿಸತಕ್ಕವರಿದ್ದಾರೆ. ಅದನ್ನು ಬರೆದದ್ದರಿಂದ ಯಾರಿಗೆ ಯಾವ ಪ್ರಯೋಜನವಾಯಿತು? ಯಾವ ಹೊಸದನ್ನು ಹೇಳಿ ಜನರಿಗೆ ಉದ್ಬೋಧವನ್ನುಂಟುಮಾಡಿದೆನು? ಇದನ್ನು ಬರೆಯದಿದ್ದರೆ ಯಾರಿಗೆ ಯಾವ ನಷ್ಟವಾಗುತ್ತಿತ್ತು? - ಎಂದು ವಿಮರ್ಶಿಸಿಕೊಳ್ಳತಕ್ಕವರು ವಿರಳ. 'ಸತ್ಯಾಯ ಮಿತಭಾಷಿಣಾಂ' ಎಂದು ಕಾಳಿದಾಸ ಹೇಳಿದ್ದಾನೆ. ಬಹಳ ಮಾತಾಡಿದರೆ ಸುಳ್ಳು ಸೇರಿಕೊಳ್ಳುತ್ತದೆ.

ದೇವರನ್ನೂ ಧರ್ಮವನ್ನೂ ನಂಬಿದವರು ಜಗತ್ತಿನಲ್ಲಿ ಅಧಿಕ. ಭಾರತ ದೇಶವಂತೂ ಆಸ್ತಿಕವಾದದ ಜನ್ಮಭೂಮಿ. ಇಂದು ಸತ್ಯ, ನ್ಯಾಯಗಳೇನಾದರೂ ಅಲ್ಪಸ್ವಲ್ಪ ಉಳಿದಿದ್ದರೆ ಆಸ್ತಿಕತೆಯಲ್ಲಿರುವ ದೃಢನಿಷ್ಠೆಯೇ ಅದಕ್ಕೆ ಮೂಲಕಾರಣ. ನಾಸ್ತಿಕತೆಯನ್ನೇನೂ ನಾವು ನಿಂದಿಸಬೇಕಾಗಿಲ್ಲ. ಅವರ ನಂಬಿಕೆ ಅವರಿಗೆ ಸೇರಿದ್ದು. ಆದರೆ ಆಸ್ತಿಕರ ನಂಬಿಕೆಗೆ ಕೊಡಲಿಪೆಟ್ಟು ಹಾಕುತ್ತಿರುವ ನಾಸ್ತಿಕ ಜ್ಞಾನವೃದ್ಧರ ಉದ್ದೇಶವೇನು? ಶ್ರೀರಾಮನಲ್ಲಿ, ಶ್ರೀಕೃಷ್ಣರಲ್ಲಿ ಜನರಿಗಿರುವ ಭಕ್ತಿ-ಶ್ರದ್ಧೆಗಳಿಂದ ಆ ವ್ಯಕ್ತಿಗಳಿಗಾಗಲಿ, ಸಮಾಜಕ್ಕಾಗಲಿ ಯಾವ ನಷ್ಟ ಉಂಟು? ಯಾವ ಅಪಚಾರವಾಗುತ್ತದೆ? ಅಲ್ಲಲ್ಲಿ ಉಳಿದಿರುವ ಧರ್ಮಭೀರುತೆಯನ್ನು ತೊಡೆದುಹಾಕಿ ಗೊಂದಲವನ್ನೆಬ್ಬಿಸಲು ಈ ವಿಮರ್ಶನಕಲಾಪ್ರಬುದ್ಧ-ಕೌಶಲೋನ್ಮೇಷಿತ-ಪ್ರಜ್ಞಾಭೂಷಿತರು ನಿಂದಾಸಿಂಧುಗಳನ್ನು ವ್ಯವಸ್ಥಿತವಾಗಿ ಬರೆದು ಹಂಚುತ್ತಿದ್ದಾರೆ. ಶ್ಮಶಾನದಲ್ಲೊಂದು ಹೆಜ್ಜೆಯೂರಿದವರಿಗೂ ಈ ಹಂಬಲ ತಪ್ಪಲಿಲ್ಲ. 'ಕಿಂ ನು ಮೇ ಸ್ಯಾದಿದಂ ಕೃತ್ವಾ ಕಿಂ ನು ಮೇ ಸ್ಯಾದಕುರ್ವತಃ' ಎಂಬ ಮಾತನ್ನವರು ಚಿಂತಿಸುವುದು ಉತ್ತಮ. ಸಮಾಜದ ಋಣವನ್ನು ಈ ಪ್ರಕಾರವಾಗಿ ತೀರಿಸುವುದು ಆವಶ್ಯಕವೆಂದು ಅವರ ಉದ್ದೇಶವಿದ್ದರೂ ಇರಬಹುದು.

**ಅಹಂ ವೋ ರಕ್ಷಿತೇತ್ಯುಕ್ತ್ವಾ ಯೋ ನ ರಕ್ಷತಿ ಭೂಮಿಪಃ ।**
**ಸ ಸಂಹತ್ಯ ನಿಹಂತವ್ಯಃ ಶ್ವೇವ ಸೋನ್ಮಾದ ಆತುರಃ ॥೬॥**

— *ಮಹಾಭಾರತ, ಶಾಂತಿಪರ್ವ*

"ನಾನು ನಿಮ್ಮೆಲ್ಲರನ್ನೂ ರಕ್ಷಿಸುತ್ತೇನೆಂದು ಹೇಳಿ ರಾಜನಾದವನು ಪ್ರಜೆಗಳನ್ನು ರಕ್ಷಿಸದೆಹೋದರೆ, ರೋಗಿಯಾದ ಹುಚ್ಚುನಾಯಿಯನ್ನು ಬಡಿದು ಜನರು ಮುತ್ತಿ ಕೊಲ್ಲುವಂತೆ, ಅವನನ್ನು ಕೊಂದುಹಾಕಬೇಕು."

ಮಹಾಭಾರತದಲ್ಲಿಯೇ ಒಂದೆಡೆ ಹೀಗೆ ಹೇಳಿದೆ: "ಪೂರ್ವದಲ್ಲಿ ರಾಜನೆಂಬವನೇ ಇರಲಿಲ್ಲ. ಧರ್ಮದಿಂದಲೇ ಜನಗಳು ಒಬ್ಬರನ್ನೊಬ್ಬರು ಕಾಪಾಡಿಕೊಂಡು ಹೋಗುತ್ತಿದ್ದರು. ಯಾವಾಗ ಧರ್ಮವು ಹ್ರಾಸವಾಗುತ್ತ ಬಂದಿತೋ ಆಗ ಜನರು ತಮ್ಮ ರಕ್ಷಣೆಗಾಗಿ ರಾಜನನ್ನು ಗೊತ್ತುಮಾಡಿಕೊಂಡರು." ಈ ಮಾತು ರಾಜನ, ಅವನ ಸರ್ಕಾರದ ಆವಶ್ಯಕತೆ ಏನೆಂಬುದನ್ನು ಸ್ಪಷ್ಟಪಡಿಸುತ್ತದೆ. ಅನಂತರ ಮನುಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ ಮೊದಲಾದ ಗ್ರಂಥಗಳು ರಾಜಧರ್ಮ ಎಂಬ ಅಧ್ಯಾಯವನ್ನೇ ವಿವರಣೆಗಾಗಿ ಮೀಸಲಾಗಿಟ್ಟವು. ಚಾಣಕ್ಯನ ಅರ್ಥಶಾಸ್ತ್ರ, ಶುಕ್ರನೀತಿ, ಕಾಮಂದಕ ನೀತಿಸಾರ ಮುಂತಾದ ಗ್ರಂಥಗಳು ಹುಟ್ಟಿ ಬೆಳೆದು ರಾಜನ ಕರ್ತವ್ಯ, ಸೇನಾವ್ಯವಸ್ಥೆ, ಕರವಿಧಿ, ವಾಣಿಜ್ಯ, ವಿದೇಶ ವ್ಯವಹಾರ, ದಂಡಸಂಹಿತೆ ಇತ್ಯಾದಿ ವಿಷಯಗಳನ್ನು ವಿಸ್ತಾರವಾಗಿ ನಿರೂಪಿಸಿದವು.

ವಂಶಪರಂಪರೆಯಿಂದ ರಾಜನಾಗುವ ಪದ್ಧತಿ ಮಾತ್ರವಲ್ಲದೆ ವಂಶಪರಂಪರೆಯಿಂದ• ಮಂತ್ರಿಯಾಗುವ ಪದ್ಧತಿಯೂ ಜಾರಿಯಲ್ಲಿತ್ತು. ಈ ಪದ್ಧತಿಯಲ್ಲಿಯೂ ಗುಣಾಂಶಗಳಿವೆ. ರಾಜನೋ ಮಂತ್ರಿಯೋ ಮುಂದೆ ಯಾರಾಗುವರೆಂಬುದು ನಿಶ್ಚಿತವಾದ್ದರಿಂದ, ಆತನಿಗೆ ರಾಜ್ಯನಿರ್ವಹಣೆಗೆ ಬೇಕಾದ ಸಾಮರ್ಥ್ಯವನ್ನು ಗಳಿಸಿಕೊಳ್ಳಲು ತಕ್ಕ ಶಿಕ್ಷಣವನ್ನು ಕೊಡಿಸುತ್ತಿದ್ದರು. ವಂಶಾಭಿಮಾನವೂ ಒಂದು ಉತ್ತಮಗುಣವಾಗಬಹುದು. "ನಮ್ಮ ಹಿರಿಯರು ಹೋದ ದಾರಿಯಲ್ಲಿಯೇ ನಾವು ಹೋಗಬೇಕು. ಎಂದಿಗೂ ನಮ್ಮ ವಂಶಕ್ಕೆ ಕೆಟ್ಟ ಹೆಸರನ್ನು ತರಬಾರದು" ಎಂಬ ಸ್ಪರ್ಧಾಚೋದಿತವಾದ ಕಳಕಳಿ ರೂಢಮೂಲವಾದ್ದರಿಂದ ಅವಿವೇಕದ ಘಟನೆ ಪ್ರಾಯೇಣ ಇರುತ್ತಿರಲಿಲ್ಲ. ಅವಿವೇಕಿಯಾದ ಅಸಮಂಜನೆಂಬ ಮಗನನ್ನು ರಾಜನಾದ ತಂದೆಯೇ ದೇಶಭ್ರಷ್ಟನನ್ನಾಗಿ ಮಾಡಿದ. ವೇನ ಎಂಬ ರಾಜನನ್ನು ಪ್ರಜೆಗಳೇ ಕೊಂದುಹಾಕಿದರು.

ದೇಶಕಾಲಾನುಗುಣವಾಗಿ ರಾಜ್ಯಾಡಳಿತದ ಪದ್ಧತಿಯಲ್ಲಿ ಪರಿವರ್ತನೆಯಾದರೂ ಮೂಲಭೂತವಾದ ತತ್ತ್ವ ಒಂದೇ. ಅದೇ ಪ್ರಜಾರಕ್ಷಣೆ. ಪ್ರಜೆಗಳ ಪ್ರಾಣರಕ್ಷಣೆ,

ಮಾನರಕ್ಷಣೆ, ಆಸ್ತಿಗಳ ರಕ್ಷಣೆ, ನ್ಯಾಯರಕ್ಷಣೆ, ಹಕ್ಕುಬಾಧ್ಯತೆಗಳ ರಕ್ಷಣೆ, ಇವೆಲ್ಲವೂ ರಕ್ಷಣೆಯೆಂಬ ಒಂದೇ ಪದದಲ್ಲಿ ಅಡಕವಾಗುತ್ತವೆ. ಇವುಗಳಲ್ಲಿ ಪ್ರಾಣರಕ್ಷಣೆ ಅತ್ಯಂತ ಮುಖ್ಯವಾದದ್ದು. ಅದೊಂದರಿಂದಲೇ ಸರ್ಕಾರದ ಸಾಫಲ್ಯ ವೈಫಲ್ಯಗಳನ್ನು ಗುರುತಿಸಬಹುದು.

ಈಗ ದಿನಬೆಳಗಾದರೆ "ಹನ್ನೆರಡು ಜನರ ಕಗ್ಗೊಲೆ", "ಸಾಮೂಹಿಕ ಹತ್ಯೆ", "ಮುಗ್ಧಜನರ ಹತ್ಯಾಕಾಂಡ" ಎಂಬ ಸುದ್ದಿಗಳನ್ನು ವಾರ್ತಾಪತ್ರಿಕೆಗಳು ತಂದು ರಾಚುತ್ತಿವೆ. ಕಾಶ್ಮೀರದಿಂದ ದೇಶಭ್ರಷ್ಟರಾಗಿ ಓಡಿಬಂದ ಲಕ್ಷಾಂತರ ಪ್ರಜೆಗಳ ಗೋಳನ್ನು ಕೇಳತಕ್ಕವರು ಯಾರು? ಅವರಿಗೆ ಪ್ರಾಣ, ಆಸ್ತಿ, ಮಾನ, ನ್ಯಾಯ - ಮೊದಲಾದ ಯಾವುದರ ರಕ್ಷಣೆಯೂ ಇಲ್ಲ. ಸರ್ಕಾರವು ಸಕಲ ವೈಭವಗಳಿಂದ ವಿಮಾನದಲ್ಲಿ ಅಡ್ಡಾಡುತ್ತಿದೆ.

**ನ ಹಿ ಪಾಪಕೃತಂ ಕರ್ಮ ಸದ್ಯಃ ಪಚತಿ ಕ್ಷೀರವತ್ ।**
**ನಿಗೂಢಂ ದಹತೀಹ್ಯೆನಂ ಭಸ್ಮಚ್ಛನ್ನಾಗ್ನಿವಚ್ಚಿರಮ್ ॥೭೦॥**

— *ಧಮ್ಮಪದ, ೪-೧೨*

"ಪಾಪಿಗಳು ಮಾಡಿದ ಪಾಪಕರ್ಮವು ಕೂಡಲೇ ಹಾಲಿನಂತೆ ಜೀರ್ಣವಾಗಿ ಫಲವನ್ನು ಕೊಡುವುದಿಲ್ಲ. ಅದು ಬೂದಿಮುಚ್ಚಿದ ಕೆಂಡದಂತೆ ಗುಪ್ತವಾಗಿದ್ದು ಬಹಳಕಾಲದ ಮೇಲೆ ಅವನನ್ನು ಸುಡುತ್ತದೆ."

ಕೆಲವು ಕಾರ್ಯಗಳು ಶೀಘ್ರದಲ್ಲಿ ಫಲವನ್ನು ಕೊಡುತ್ತವೆ. ಸ್ನಾನಮಾಡಿದರೆ ಕೂಡಲೇ ದೇಹವು ಶುದ್ಧಿಯಾಗುತ್ತದೆ. ಊಟಮಾಡಿದರೆ ಆ ಕ್ಷಣದಲ್ಲಿಯೇ ಹಸಿವು ನೀಗಿ ತೃಪ್ತಿಯಾಗುತ್ತದೆ. ಆದರೆ ಔಷಧವನ್ನು ಕುಡಿದರೆ ಆ ಕ್ಷಣದಲ್ಲಿ ರೋಗವು ಶಮನವಾಗುವುದಿಲ್ಲ. ಬೀಜವನ್ನು ನೆಟ್ಟಕೂಡಲೇ ಅದು ಸಸಿಯಾಗಿ ಬೆಳೆಯುವುದಿಲ್ಲ. ವಸ್ತುಸ್ವಭಾವ ನಾನಾ ರೀತಿಯಲ್ಲಿರುತ್ತದೆ. ಕಾರಣದಿಂದ ಕಾರ್ಯವು ಹುಟ್ಟುವಾಗ ಅದಕ್ಕೆ ವಿಘ್ನಗಳಿರಬಾರದು. ವಿಘ್ನವು ನಿವಾರಣೆಯಾಗುವವರೆಗೆ ಕಾರಣವು ಫಲವನ್ನು ನೀಡದು. ಎಲ್ಲ ಮಂಗಳಕಾರ್ಯಗಳನ್ನು ಆರಂಭಿಸುವಾಗಲೂ ಗಣೇಶಪೂಜೆಯನ್ನು ಮಾಡುವುದು ವಿಘ್ನನಿವಾರಣೆಯಾಗಲೆಂದೇ. ಒಂದು ಗ್ರಂಥವನ್ನು ಬರೆಯತೊಡಗಿದಾಗ ಇಷ್ಟದೇವತೆಯನ್ನು ಸ್ತುತಿಮಾಡುವ ಸಂಪ್ರದಾಯ ಈ ಕಾರಣದಿಂದಲೇ ಬಂದಿದೆ.

ಸ್ತುತಿಯನ್ನು ಮಾಡದಿದ್ದರೂ ಗ್ರಂಥವು ಮುಗಿಯುವುದುಂಟು; ಅಲ್ಲಿ ವಿಘ್ನವಿರಲಿಲ್ಲ - ಎಂಬ ಸಮಾಧಾನವನ್ನು ತಾರ್ಕಿಕರೂ ಸಹ ಹೇಳಿದ್ದಾರೆ.

ಒಳ್ಳೆಯ ಕೆಲಸಕ್ಕೆ ಒಳ್ಳೆಯ ಫಲವೂ ಕೆಟ್ಟ ಕೆಲಸಕ್ಕೆ ಕೆಟ್ಟ ಫಲವೂ ನಿಶ್ಚಯವಾಗಿ ದೊರೆಯುತ್ತದೆಯೆಂದು ನಮ್ಮ ನಂಬಿಕೆ. ಈ ಕೆಲಸಗಳು ಸಂಸ್ಕಾರರೂಪದಲ್ಲಿದ್ದು ಕಾಲವು ಬಂದಾಗ ಫಲವನ್ನು ಕೊಡುತ್ತವೆ. ಈ ಸಂಸ್ಕಾರಗಳಿಗೇ 'ಪುಣ್ಯ', 'ಪಾಪ' ಎಂದು ಹೆಸರು. ಪುಣ್ಯವು ಫಲವನ್ನು ನೀಡಿತೇ ಇಲ್ಲವೆ? - ಎಂಬ ವಿಷಯದಲ್ಲಿ ಜನರಿಗೆ ವಿಶೇಷ ಗಮನವಿರುವುದಿಲ್ಲ. ಪಾಪದ ಫಲದ ಕಡೆಗೆ ಮಾತ್ರ ಅವರ ಕುತೂಹಲ! ಪಾಪಕೃತ್ಯವನ್ನು ಮಾಡಿದವನು ಅದನ್ನು ಮುಚ್ಚಿಡಲು ಪ್ರಯತ್ನಿಸುವುದರಿಂದ ಶೀಘ್ರವಾಗಿ ಅದರ ಫಲ ದೊರೆಯುವುದಿಲ್ಲ. ಅದಕ್ಕೆ ವಿಘ್ನಗಳು ಬಹಳ. ಬೂದಿಮುಚ್ಚಿದ ಕೆಂಡವು ಕಾಣಿಸುವುದೂ ಇಲ್ಲ, ಬೂದಿಯು ಮುಚ್ಚಿರುವುದರಿಂದ ಥಟ್ಟನೆ ಸುಡುವುದೂ ಇಲ್ಲ. ಗಾಳಿ ಬೀಸಿ ಬೂದಿ ಹಾರಿಕೊಂಡಾಗ ಅದು ಸುಡುತ್ತದೆ. ಸುಡುವುದಕ್ಕೆ ಬೂದಿ ವಿಘ್ನಕಾರಿಯಾಗಿತ್ತು. ಆ ವಿಘ್ನವು ತೊಲಗಿದೊಡನೆ ಸುಡುವ ಕಾರ್ಯ ಆರಂಭವಾಯಿತು.

ಮಂತ್ರಿಗಳು ಅಧಿಕಾರದಲ್ಲಿದ್ದಾಗ ನಾನಾ ಭ್ರಷ್ಟಾಚಾರಗಳನ್ನು ನಡೆಸಿರಬಹುದು. ವಂಚನೆಯಿಂದ ತಮ್ಮ ಕಾರ್ಯವನ್ನು ಸಾಧಿಸಿಕೊಂಡಿರಬಹುದು. ಹಣವನ್ನು ಲಪಟಾಯಿಸಿರಬಹುದು. ಅಧಿಕಾರದ ರಕ್ಷಾಕವಚವು ಆಗ ಫಲವನ್ನು ನೀಡಲಾರದೆ ಉಳಿಸಿರುತ್ತದೆ. ಅಧಿಕಾರವು ಬೂದಿಯಂತೆ ಹಾರಿಹೋದಾಗ ಅವರ ಕೃತ್ಯಗಳು ಬೆಳಕಿಗೆ ಬಂದು ಕಾರ್ಯವನ್ನು ಆರಂಭಿಸುತ್ತವೆ.

ಪಾತ್ರಾಪಾತ್ರವಿವೇಕೋಽಸ್ತಿ ಧೇನುಪನ್ನಗಯೋರಿವ ।
ತೃಣಾತ್ ಸಂಜಾಯತೇ ಕ್ಷೀರಂ ಕ್ಷೀರಾತ್ ಸಂಜಾಯತೇ ವಿಷಮ್ ॥೭೧॥

— *ಸುಭಾಷಿತರತ್ನ-ಭಾಂಡಾಗಾರ*

"ಇದು ಪಾತ್ರ, ಇದು ಅಪಾತ್ರ - ಎಂಬ ವಿವೇಕ ಇರಬೇಕು. ಹಸು, ಹಾವುಗಳೇ ಇದಕ್ಕೆ ಉದಾಹರಣೆ. ಹಸುವಿಗೆ ಹುಲ್ಲನ್ನಿತ್ತರೆ ಹುಲ್ಲಿನಿಂದ ಹಾಲು ಬರುತ್ತದೆ. ಹಾಲನ್ನು ಹಾವಿಗೆ ಕೊಟ್ಟರೆ ಹಾಲಿನಿಂದ ವಿಷ ಹುಟ್ಟುತ್ತದೆ."

ಒಬ್ಬರಿಗೆ ದಾನ ಮಾಡುವುದು ಅಥವಾ ಬೇರೊಂದು ಸಹಾಯ ಮಾಡುವುದು ಉತ್ತಮಗುಣವೇ ಹೌದು. ಆದರೆ ಅದನ್ನು ನೀಡುವಾಗ ಪಡೆಯತಕ್ಕವನು ಸರಿಯಾದ ಪಾತ್ರವೆ? ದಾನಕ್ಕಾಗಲಿ ಉಪಕಾರಕ್ಕಾಗಲಿ ಅರ್ಹನೆ? - ಎಂಬ ವಿವೇಚನೆ ಬೇಕು. ವಿವೇಚನೆಯಿಲ್ಲದೆ ಮಾಡುವ ಸಹಾಯದಿಂದ ಒಳ್ಳೆಯದಿರಲಿ, ಕೆಟ್ಟ ಫಲವೇ ದೊರೆಯಬಹುದು. ಪಾತ್ರನಾದವನಿಗೆ ಕೊಡದಿರುವುದು ತಪ್ಪು, ಅಪಾತ್ರನಾದವನಿಗೆ ಕೊಡುವುದೂ ತಪ್ಪು. ವಿದುರನು ಧೃತರಾಷ್ಟ್ರನಿಗೆ ಹೇಳಿದ ನೀತಿ ಇದು:

**ಕರೆದಪಾತ್ರಂಗಿತ್ತು ಪಾತ್ರನ**
**ಪರಿಹರಿಸಲೀ ಎರಡರಿಂ ಸಂ-**
**ಹರಣವಹುದಾರ್ಜಿಸಿದ ಬಹುಧನವರಸ ಕೇಳೆಂದ ||**

ಯಾರು ಪಾತ್ರ, ಯಾರು ಅಪಾತ್ರ - ಎಂದು ಗೊತ್ತುಮಾಡುವುದು ಮಾತ್ರ ಕೆಲವು ವೇಳೆ ತುಂಬ ಕಠಿಣವಾಗುತ್ತದೆ. ಈ ಕಾಲದಲ್ಲಂತೂ ನಾನಾ ವೇಷಧಾರಿಗಳಾಗಿ ಬೇಡತಕ್ಕವರಿದ್ದಾರೆ. ದೊಡ್ಡವರ ಹೆಸರಿನಲ್ಲಿ ವಂಚನೆ ಮಾಡುವವರಿದ್ದಾರೆ. ದೇವರ ಹೆಸರಿನಲ್ಲಿ ಹಣಸುಲಿಯುವವರಿದ್ದಾರೆ. ಬೇಡುವುದನ್ನೇ ವೃತ್ತಿಯಾಗಿ ಮಾಡಿಕೊಂಡಿರುವ ಸೋಮಾರಿಗಳಿದ್ದಾರೆ. ತಿರುಪತಿಗೆ ಹೋಗುತ್ತೇನೆಂದು ಹಣವನ್ನು ಬೇಡಿ, ಪಡಖಾನೆಗೆ ಹೋಗತಕ್ಕವರಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ವಿವೇಚನೆಯೇ ತಪ್ಪಾಗಿ, ಯೋಗ್ಯಪಾತ್ರಕ್ಕೆ ಅಪಚಾರವಾಗುವ ಸಂಭವವೂ ಉಂಟು.

ಈಗ ರಾಜಕೀಯವು ವಿಶ್ವರೂಪಧಾರಣೆ ಮಾಡಿದೆ. ಶ್ರೀಕೃಷ್ಣನು ಅರ್ಜುನನಿಗೆ ತೋರಿಸಿದ ವಿಶ್ವರೂಪದಲ್ಲಿ ಈ ರಾಜಕೀಯ ವಿಶ್ವರೂಪನಿಗೆ ಇರುವಷ್ಟು ಶಿರಸ್ಸುಗಳೂ ಕೈಗಳೂ ಇರಲಿಲ್ಲ! ಈ ವಿಶ್ವರೂಪಧಾರಿಗಳಿಗೆ ಪಾಂಡವರು ಯಾರು ಕೌರವರು ಯಾರು - ಎಂಬ ವಿವೇಚನೆಯೂ ಬೇಕಿಲ್ಲ. ಸ್ವಾತಂತ್ರ್ಯಯೋಧರಿಂದ ಹಿಡಿದು ನಾನಾ ವೇಷಧಾರಿಗಳಿಗೆ ಹಣನೀಡಲು ನೂರಾರು ಕೈಗಳು ಬೇಕಾಗಿವೆ. ಪ್ರಶಸ್ತಿಪ್ರ ದಾನಗಳ ಹೆಸರಲ್ಲಿ ಯಾರು ಯಾರಿಗೋ ಯಾರ ಹಣವನ್ನೋ ದಾನಮಾಡಬೇಕಾಗಿದೆ. ಬಡವರಿಗೂ ದಲಿತರಿಗೂ ಮನೆಕಟ್ಟಲು ಭೂದಾನವನ್ನು ಕೊಡಬೇಕು. ಅಂತರ್ಜಾತೀಯ ವಿವಾಹವಾದವರಿಗೆ ತಾಳಿಕಟ್ಟಲು ಸುವರ್ಣದಾನ ಮಾಡಬೇಕು. ಹೀಗೆ ಲೆಕ್ಕವಿಲ್ಲದಷ್ಟು ದಾನ ಮಾಡಿದ ಪುಣ್ಯಬಲದಿಂದ ಮಂತ್ರಿಪದವಿಯಲ್ಲಿ ಮುಂದುವರಿಯಬಹುದು. ಹೊಸಬರು ಮಂತ್ರಿಗಳಾಗಬಹುದು. ಇಹದಲ್ಲಿಯೇ ದಾನದ ಪುಣ್ಯಫಲವು ಪ್ರಾಪ್ತವಾಗುತ್ತದೆಯಾದ್ದರಿಂದ ಪರದ ಚಿಂತೆ ಬೇಕಾಗಿಲ್ಲ!

ವಾಣಿಜ್ಯೋದ್ಯಮಿಗಳು ರಾಜಕೀಯ ಪಕ್ಷಗಳಿಗೆ ವಿಪುಲವಾಗಿ ದಾನ ಮಾಡುವುದು ಬಹಿರಂಗವಾದ ಅಂತರಂಗ! ದಾನದ ಹಣ ಯಾರದು? 'ಹಾವನ್ನು ಬಡಿದು ಹದ್ದಿಗೆ ಹಾಕು' ಎಂಬ ಗಾದೆಗೆ ಯಾರೂ ಹೊರತಲ್ಲ. ಈ ಎಲ್ಲ ಉದಾರಹೃದಯದ ದಾತೃಗಳಿಗೆ ಲಭಿಸುವ ಪುಣ್ಯವೆಷ್ಟೆಂಬುದನ್ನು ಚಿತ್ರಗುಪ್ತನೇ ಬಲ್ಲ. ದುಡಿದು ಹಣವನ್ನು ತೆತ್ತವರು ಹೆಣವಾದರೇನು? ಕುಬೇರನು ನರವಾಹನ. ಅವನು ಮನುಷ್ಯರ ಹೆಗಲ ಮೇಲೆ ಕುಳಿತು ಸವಾರಿ ಮಾಡುತ್ತಾನೆ.

**ದಾನಂ ವಿತ್ತಾದೃತಂ ವಾಚಃ ಕೀರ್ತಿಧರ್ಮೌ ತಥಾಽಽಯುಷಃ ।**
**ಪರೋಪಕರಣಂ ಕಾಯಾದಸಾರಾತ್ ಸಾರಮುದ್ಧರೇತ್ ॥೭೨॥**

— *ಸುಭಾಷಿತಸುಧಾನಿಧಿ*

"ಹಣದಿಂದ ದಾನವನ್ನೂ ವಾಕ್ಕಿನಿಂದ ಋತವನ್ನೂ ಆಯುಸ್ಸಿನಿಂದ ಕೀರ್ತಿಧರ್ಮಗಳನ್ನೂ ಸಾಧಿಸಬೇಕು. ಹಾಗೆಯೇ ದೇಹದಿಂದ ಪರೋಪಕಾರವನ್ನು ಸಾಧಿಸಬೇಕು. ಹೀಗೆ ಅಸಾರವಾದ ವಸ್ತುವಿನಿಂದ ಸಾರಭಾಗವನ್ನು ತೆಗೆದು ಉಪಯೋಗಿಸಿಕೊಳ್ಳಬೇಕು."

ಇದು ಆತ್ಮೋದ್ಧಾರದ ವಿಧಾನ. ಆದರೆ ಅಸಾರವಸ್ತುವಿನಿಂದ ಸಾರವನ್ನು ತೆಗೆಯುವುದೆಂದರೇನು? ಇದು ವಿರುದ್ಧವಾಗಿ ಕಾಣುವುದಲ್ಲವೆ? ಅಸಾರವೆಂದರೆ ಅಲ್ಪಸಾರವೆಂದರ್ಥ. 'ಇವನು ಬಿಳಿಚಿಕೊಂಡಿದ್ದಾನೆ, ರಕ್ತವೇ ಇಲ್ಲ' ಎಂದರೆ ಸಾಕಷ್ಟು ಪ್ರಮಾಣದಲ್ಲಿ ರಕ್ತವಿಲ್ಲ, ರಕ್ತವು ಅಲ್ಪವಾಗಿದೆ ಎಂದು ಅಭಿಪ್ರಾಯ. ಹಣ, ಮಾತು, ಆಯುಸ್ಸು, ದೇಹ - ಇವು ಅಲ್ಪಸಾರಗಳು. ಹಣವು ಶಾಶ್ವತವಲ್ಲ. ಸಾಯುವವನು ಒಂದು ಬಿಡಿಗಾಸನ್ನೂ ತನ್ನೊಡನೆ ಒಯ್ಯಲಾರ. ಪಾಪಪುಣ್ಯಗಳೆರಡೇ ಜೊತೆಗೆ ಬರತಕ್ಕವು. ಹಣವಿದ್ದಾಗ ದಾನಮಾಡಿದರೆ ಲಭಿಸುವ ಪುಣ್ಯವೇ ಸಾರಭೂತವಾದದ್ದು. ಮಾತಾಡುವ ಶಕ್ತಿ ತಾನಾಗಿ ಬಂದದ್ದು ; ಕೊಂಡು ತಂದದ್ದಲ್ಲ. ಆದ್ದರಿಂದಲೇ ಬಹಳ ಮಾತಾಡಿ ಶಕ್ತಿಯನ್ನು ದುರುಪಯೋಗಪಡಿಸುತ್ತೇವೆ! ಮಾತಿನಲ್ಲಿ ಸಾರವಾದದ್ದು ಋತ. ಅದೇ ಸತ್ಯ. "ಸತ್ಯಂ ವದ" ಎನ್ನುತ್ತದೆ ವೇದ. ಸತ್ಯವಾದ ನುಡಿಯೇ ಕಲ್ಯಾಣೀ ವಾಕ್. "ಕಲ್ಯಾಣೀಂ ವಾಚಮಾವದಾನಿ ಜನೇಭ್ಯಃ" - "ಕಲ್ಯಾಣಕರವಾದ ಮಾತನ್ನೇ ನಾನು ಜನರಿಗೆ ಹೇಳುವಂತಾಗಲಿ" - ಎನ್ನುತ್ತದೆ ವೇದವಾಣಿ.

ಆಯುಸ್ಸು ಮನುಷ್ಯನಿಗೆ ಪರಿಮಿತ. ಯಾವ ಕ್ಷಣದಲ್ಲಾದರೂ ಮೃತ್ಯು ಬರಬಹುದು. ಶುಭ್ರವಾದ ಕೀರ್ತಿ, ಧರ್ಮ - ಇವೆರಡು ಆಯುಸ್ಸಿನ ಗುರಿಯಾಗಿರಲಿ. ಕೀರ್ತಿಯೊಂದನ್ನು ಮಾತ್ರ ತನ್ನದೆಂದು ಲೋಕದಲ್ಲಿ ಉಳಿಸಿ ಹೋಗಲಾದೀತು. ಇನ್ನು ದೇಹವು ನಿಃಸಾರವಾದದ್ದೆಂದು ಹೇಳಬೇಕಾದ್ದೇ ಇಲ್ಲ. ಒಂದೊಂದು ಭಾಗವನ್ನು ಪ್ರತ್ಯೇಕಿಸಿ ನೋಡಿದಾಗ ನಮಗೇ ಜುಗುಪ್ಸೆಯಾದೀತು. ಯಥಾಶಕ್ತಿಯಾಗಿ ಪರೋಪಕಾರವನ್ನು ಮಾಡಿ ಈ ದೇಹವನ್ನು ಸಾರ್ಥಕಪಡಿಸಿಕೋ - ಎಂದು ನೀತಿಶಾಸ್ತ್ರದ ಉಪದೇಶ.

ಕಲಿಮಹಿಮೆಯಿಂದ ಇದೆಲ್ಲವೂ ತಲೆಕೆಳಗಾಗಿದೆ. ಗಳಿಸಿದ ವಿಪುಲವಾದ ಸಂಪತ್ತಿದೆ. ಉತ್ತರಾಧಿಕಾರಿಯೂ ಇಲ್ಲ. ಈ ಸಂಪತ್ತೆಲ್ಲವೂ ಕಂಡವರ ಪಾಲಾಗಿ ದುರ್ವ್ಯಯವಾಗುತ್ತದೆ. ಮೃತ್ಯುವಾದರೋ ನೆತ್ತಿಯ ಮೇಲೆ ಬಂದು ಕುಳಿತಿದೆ - ಎಂಬುದು ಗೊತ್ತಿದ್ದರೂ ಒಂದು ಕಾಸನ್ನೂ ದಾನಮಾಡಲು ಮನಸ್ಸು ಬರುವುದಿಲ್ಲ. ಸುಳ್ಳಿಗೆ ಸುಳ್ಳನ್ನು ಸೇರಿಸು; ನ್ಯಾಯಾಲಯದಲ್ಲಿ ವಕೀಲರಿಂದ ವಾಗ್ವಿಜೃಂಭಣೆಯನ್ನು ಮೆರೆಸಿ ಸುಳ್ಳನ್ನು ಪೇರಿಸು; ಅನೃತವನ್ನು ಉಳಿಸು - ಎಂಬುದು ಇಂದಿನ ಧೋರಣೆ. 'ಕೀರ್ತಿ' ಶಬ್ದಕ್ಕೆ ಕೆಸರು, ಕೊಳೆ ಎಂದು ಇನ್ನೊಂದು ಅರ್ಥ ಉಂಟು. ಕೀರ್ತಿಯೆಂಬ ಕೆಸರು ತೊಡೆದುಹೋಗಲಿ! ನಾವು ಶತಾಯುಷಿಗಳಾಗೋಣ. "ತ್ಯಾಗೇನೈಕೇ ಅಮೃತತ್ವಮಾನಶುಃ" ಎಂಬ ಉಪನಿಷದ್ವಾಕ್ಯದ ಅರ್ಥ ಹೀಗೆ - "ನಿಮ್ಮೆಲ್ಲರ ತ್ಯಾಗದಿಂದ ಮುಖ್ಯರೆನಿಸಿದ ನಾವು ಅಮರರಾಗಿ ಅಮೃತಭೋಜಿಗಳಾದೆವು"!

**ವಾಗ್ವೈಖರೀ ಶಬ್ದಝರೀ ಶಾಸ್ತ್ರವ್ಯಾಖ್ಯಾನಕೌಶಲಂ ।**
**ವೈದುಷ್ಯಂ ವಿದುಷಾಂ ತದ್ವದ್ ಭುಕ್ತಯೇ ನ ತು ಮುಕ್ತಯೇ ॥೭೩॥**

— *ವಿವೇಕಚೂಡಾಮಣಿ, ೫೮*

"ಮಾತುಗಳ ಅಟಾಟೋಪ, ಶಬ್ದಗಳ ನಿರರ್ಗಳ ಪ್ರವಾಹ, ಶಾಸ್ತ್ರವಾಕ್ಯಗಳನ್ನು ಉದಾಹರಿಸುವ ಜಾಣ್ಮೆ, ವಿದ್ವಾಂಸರ ಪಾಂಡಿತ್ಯ - ಇವೆಲ್ಲವೂ ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಉಪಯುಕ್ತವೇ ಹೊರತು ಮೋಕ್ಷಕ್ಕೆ ಉಪಯುಕ್ತವಾದದ್ದಲ್ಲ."

ನಾನಾ ವಿಧದ ಉದಾಹರಣೆಗಳನ್ನು ನೀಡಿ ಮಾತುಗಳನ್ನು ಜೋಡಿಸುವ

ಕೌಶಲ ವಾಗ್ವೈಖರಿ; ಹೊಸ ಹೊಸ ಶಬ್ದಗಳನ್ನು ಆಲಂಕಾರಿಕವಾಗಿ ತಡೆ ಇಲ್ಲದಂತೆ ಜೋಡಿಸುವುದು ಶಬ್ದಝರಿ; ವಿಭಿನ್ನ ಶಾಸ್ತ್ರೀಯವಾಕ್ಯಗಳನ್ನು ಉದಾಹರಿಸುವ ಜಾಣ್ಮೆ ಶಾಸ್ತ್ರವ್ಯಾಖ್ಯಾನಕೌಶಲ. ಶಾಸ್ತ್ರಗ್ರಂಥಗಳನ್ನು ಕ್ರಮಬದ್ಧವಾಗಿ ಅಭ್ಯಾಸ ಮಾಡಿರುವುದು ವೈದುಷ್ಯ. ಇವನ್ನು ಮೆರೆಸಿ ಭಾಷಣ ಮಾಡುವ ಶಕ್ತಿ, ಲೇಖನಗಳನ್ನು ಬರೆಯುವ ಜಾಣ್ಮೆ ಕೆಲವರಿಗಿರುತ್ತದೆ. ಜನರನ್ನು ವಶಪಡಿಸಿಕೊಳ್ಳುವ ಉತ್ತಮ ಸಾಧನ ಇದು. ಇವೆಲ್ಲವನ್ನು ಮೆರೆಸಿ ಹಣವನ್ನೂ ಕೀರ್ತಿಯನ್ನೂ ಗಳಿಸಬಹುದೇ ಹೊರತು ಮೋಕ್ಷವನ್ನು ಪಡೆಯಲಾಗುವುದಿಲ್ಲ. ತನ್ನ ಜ್ಞಾನವನ್ನು ಪೂರ್ತಿಯಾಗಿ ಆಚರಣೆಯಲ್ಲಿ ತಂದು ಕ್ರಿಯಾರೂಪಕ್ಕೆ ಇಳಿಸಿದಾಗ ಮಾತ್ರ ಅದು ಫಲಕಾರಿ ಯಾಗುತ್ತದೆ.

ಇದು ವೇದಾಂತಿಗಳಿಗೆ ಹೇಳಿದ ಉಪದೇಶವಾದರೂ, ಈ ನ್ಯಾಯವು ಸಮಸ್ತ ಲೌಕಿಕ ವ್ಯವಹಾರಗಳಿಗೂ ಅನ್ವಯಿಸುತ್ತದೆ. ಲೋಕದಲ್ಲಿಯೂ ಸಹ ಹೇಳುವುದನ್ನು ಅನುಷ್ಠಾನಕ್ಕೆ ತಂದರೆ ಮಾತ್ರ ಪಾಂಡಿತ್ಯಪ್ರದರ್ಶನವು ಸಾರ್ಥಕವಾಗುತ್ತದೆ. ಒಬ್ಬನು ಕೃಷಿಯಲ್ಲಿ ತಜ್ಞನಾದರೂ ಹೊಲದಲ್ಲಿಳಿದು ಕೆಲಸ ಮಾಡಿದರೆ ಮಾತ್ರ ಬೆಳೆ ದೊರೆಯುತ್ತದೆ. ನೇಗಿಲನ್ನು ಹಿಡಿದು ಉತ್ತಿ ಬಿತ್ತಿ ಪಾಲಿಸಿದರೆ ಫಸಲನ್ನು ಹೊಲವು ನೀಡೀತು. ಕಾಲೇಜಿನಲ್ಲಿ ವಾಣಿಜ್ಯ ಪ್ರಾಧ್ಯಾಪಕನಾಗಿದ್ದರೂ ವ್ಯವಹಾರಜ್ಞಾನವಿಲ್ಲದೆ ಅಂಗಡಿಯನ್ನಿಟ್ಟರೆ ಮೂರು ತಿಂಗಳಲ್ಲಿ ಬಾಗಿಲುಹಾಕಿಕೊಂಡು ಹೋಗುತ್ತಾನೆ. ಪಕ್ಕದ ಸೆಟ್ಟಿಯ ಅಂಗಡಿ ಅಭಿವೃದ್ಧಿ ಹೊಂದುತ್ತಲೇ ಇರುತ್ತದೆ. ಸಂಗೀತಶಾಸ್ತ್ರದ ಮೇಲೆ ಉಪದೇಶ ನೀಡಬಹುದು; ಸ್ವತಃ ಒಂದು ಹಾಡನ್ನೂ ಹಾಡಲಾರ! ನಾಟ್ಯಶಾಸ್ತ್ರದ ಮೇಲೆ ಪುಸ್ತಕವನ್ನು ಬರೆದ ಮಾತ್ರದಿಂದ ಅವನು ರಂಗಸ್ಥಳದಲ್ಲಿ ನರ್ತಿಸಲಾರ.

ಇದೇ ಪರಿಸ್ಥಿತಿ ರಾಜಕಾರಣಿಗಳದ್ದು. ಚುನಾವಣೆಯ ಕಾಲದಲ್ಲಿ ವಾಗ್ವೈಖರಿ ಶಬ್ದಝರಿಗಳು ಯಥೇಚ್ಛವಾಗಿ ಹರಿಯುತ್ತವೆ. ಮಾತಿನ ಮೋಡಿಗೆ ಮರುಳಾಗಿ ಜನರು ಸಭೆಯಲ್ಲಿ ಕಿಕ್ಕಿರಿದು ನೆರೆಯುತ್ತಾರೆ. ಅಧಿಕಾರಕ್ಕೆ ಬಂದ ಮೇಲೆ ಉಪದೇಶಿಸಿದ ಒಂದಂಶವನ್ನೂ ಜಾರಿಗೆ ತರಲು ಮನಸ್ಸಿಲ್ಲ, ಮನಸ್ಸಿದ್ದರೂ ಸಾಮರ್ಥ್ಯವಿಲ್ಲ. ಹಳ್ಳಿಗೊಂದು ಶಾಲೆ, ಎಲ್ಲರಿಗೂ ಮನೆ, ಮನೆಮನೆಗೂ ವಿದ್ಯುತ್ತು - ಎಲ್ಲವೂ ಮಾತಿನ ಮಂಟಪದಲ್ಲಿ ವಿಶ್ರಮಿಸುತ್ತದೆ. ವಾಗ್ವೈಖರಿ, ಶಬ್ದಝರಿಗಳು ಮತ ನೀಡಿದವರ ಮುಕ್ತಿಗಾಗಿ ಅಲ್ಲ, ಮತ ಗಳಿಸಿದವರ ಭುಕ್ತಿಗಾಗಿ.

**ಅಕಾರಣಂ ವ್ಯಾಕರಣಂ ತಂತ್ರೀಶಬ್ದೋऽಪ್ಯಕಾರಣಂ ।**
**ಅಕಾರಣಂ ತ್ರಯೋ ವೇದಾಸ್ತಂಡುಲಾಸ್ತತ್ರ ಕಾರಣಮ್ ॥೭೪॥**

— *ಚಾಣಕ್ಯ-ನೀತಿಸಾರ*

"ಜಗದ್‌ವ್ಯವಹಾರವು ನಡೆಯುವುದಕ್ಕೆ ವ್ಯಾಕರಣಶಾಸ್ತ್ರವು ಕಾರಣವಲ್ಲ, ವೀಣೆಯ ನಾದವೂ ಕಾರಣವಲ್ಲ. ಮೂರು ವೇದಗಳೂ ಕಾರಣವಲ್ಲ. ಅದಕ್ಕೆ ಕಾರಣವಾದದ್ದು ಅಕ್ಕಿ - ಅನ್ನ!"

ಜಗತ್ತಿನ ವ್ಯವಹಾರವು ನಡೆಯುತ್ತಿರುವುದು ಹೊಟ್ಟೆಯ ದೆಸೆಯಿಂದ. ಹೊಟ್ಟೆಬಟ್ಟೆಗಳ ಕಾರಣದಿಂದ ಅದ್ಭುತವಾದ ಜಗದ್ಯಂತ್ರವು ನಡೆಯುತ್ತಿದೆ. ಶಾಸ್ತ್ರ, ಸಂಗೀತ, ಪರಮಾರ್ಥವಿಚಾರಗಳೆಲ್ಲವೂ ಮೊದಲು ಹೊಟ್ಟೆ ತುಂಬಿದ ಮೇಲೆ. ಮಗು ಹುಟ್ಟುವಾಗಲೇ ಅಳುತ್ತ ಭೂಮಿಗೆ ಬರುತ್ತದೆ. ಹಾಲು ಕುಡಿಸಿದ ಮೇಲೆ ಸುಮ್ಮನಾಗುತ್ತದೆ. ಮನುಷ್ಯನು ಹುಟ್ಟುತ್ತಿರುವಾಗಲೇ ಅಶನಾಯಾ, ಪಿಪಾಸಾ - ಎಂಬ ಎರಡು ಮೃತ್ಯುದೇವತೆಗಳು ಬಂದು ಅವನನ್ನು ಹಿಡಿದುಕೊಂಡವಂತೆ. ಅಶನಾಯಾ = ಹಸಿವು; ಪಿಪಾಸಾ = ಬಾಯಾರಿಕೆ. ಈ ಪಿಶಾಚಿಗಳ ಕಾಟ ಸಾಯುವವರೆಗೂ ಇರುತ್ತದೆ. ಇವರಿಬ್ಬರನ್ನೂ ಶಾಂತಿಪಡಿಸುವಲ್ಲಿ ಮನುಷ್ಯನ ಆಯುಸ್ಸು ಕಳೆದುಹೋಗುತ್ತದೆ.

ಪ್ರಜೆಗಳ ಹಸಿವು-ಬಾಯಾರಿಕೆಗಳನ್ನು ನೀಗಿಸುವುದು ರಾಜನ ಪ್ರಥಮ ಕರ್ತವ್ಯವೆಂದೂ ಯಾವಾತನ ರಾಜ್ಯದಲ್ಲಿ ಅನ್ನ-ನೀರು ಸಮೃದ್ಧವಾಗಿ ದೊರಕುವುವೋ ಆ ರಾಜ್ಯದಲ್ಲಿ ಪ್ರಜಾಕ್ಷೋಭೆಯುಂಟಾಗುವುದಿಲ್ಲವೆಂದೂ ಚಾಣಕ್ಯನು ಹೇಳಿದ್ದಾನೆ. ವಿದ್ಯಾಭ್ಯಾಸ, ಮನೋರಂಜನೆ, ಪರಮಾರ್ಥಚಿಂತನೆ - ಇವು ಹೊಟ್ಟೆ ತುಂಬಿದ ಮೇಲೆ ಕ್ರಮವಾಗಿ ಬರತಕ್ಕವು. ಇವೂ ಜನರ ಶ್ರೇಯಸ್ಸಿಗೆ ಬೇಕಾದವು. 'ಸರ್ವಾರಂಭಾಸ್ತಂಡುಲಪ್ರಸ್ಥಮೂಲಾಃ' - 'ಎಲ್ಲ ಕಾರ್ಯಗಳೂ ಒಂದು ಸೇರು ಅಕ್ಕಿಯಿದ್ದಾಗ ನಡೆಯುತ್ತವೆ' ಎಂಬ ನೀತಿವಚನವೂ ಇದನ್ನೇ ಸಮರ್ಥಿಸುವುದು. 'ಎಲ್ಲರೂ ಮಾಡುವುದು ಹೊಟ್ಟೆಗಾಗಿ - ಗೇಣುಬಟ್ಟೆಗಾಗಿ'.

**ಅದ್ಯತೇऽತ್ತಿ ಚ ಭೂತಾನಿ । ತಸ್ಮಾದನ್ನಂ ತದುಚ್ಯತ ಇತಿ ।**

— ಎಂಬುದು ಉಪನಿಷದ್ವಾಕ್ಯ. ಅದ್ಯತೇ, ಅತ್ತಿ ಚ = ತಿನ್ನಲ್ಪಡುತ್ತದೆ ಮತ್ತು

ತಿನ್ನುವವನನ್ನು ತಿನ್ನುತ್ತದೆ! ಆದ್ದರಿಂದ ಇದಕ್ಕೆ ಅನ್ನವೆಂದು ಹೆಸರು. ಅಪಥ್ಯವಾದ್ದನ್ನು ತಿನ್ನುವುದರಿಂದ ಮತ್ತು ಮಿತಿಯಿಲ್ಲದೆ ತಿನ್ನುವುದರಿಂದ ಆಹಾರವು ಮನುಷ್ಯನನ್ನು ಕೊಲ್ಲುತ್ತದೆ.

ಮುಖ್ಯವಾದ ಇನ್ನೊಂದು ಅಭಿಪ್ರಾಯ ಈ ಮಾತಿಗಿದೆ. ಅನ್ನನಿಮಿತ್ತವಾಗಿಯೇ ಜನರಿಗೆ ಜಗಳವೂ ರಾಜ್ಯಗಳಿಗೆ ಪರಸ್ಪರ ಯುದ್ಧವೂ ನಡೆದು ಜನರು ಸಾಯುತ್ತಾರೆ. ರಾಜಸ, ತಾಮಸಾಹಾರಗಳಿಂದ ಮನುಷ್ಯನ ಕಾಮ, ಕ್ರೋಧಾದಿಗಳು ಅಧಿಕವಾಗುತ್ತವೆ. ಎಷ್ಟಿದ್ದರೂ ತೃಪ್ತಿಯಾಗದಷ್ಟು ಆಸೆ ಬೆಳೆಯುತ್ತದೆ. ಯಾವುದೇ ವಸ್ತು ಹಿತಮಿತವಾಗಿದ್ದರೆ ಅಮೃತವಾದೀತು; ಅತಿಯಾದರೆ ಅಮೃತವೇ ವಿಷವಾದೀತು.

**ಧರ್ಮೋ ರಾಜನ್ ಗುಣಶ್ರೇಷ್ಠೋ ಮಧ್ಯಗೋ ಹ್ಯರ್ಥ ಉಚ್ಯತೇ ।**
**ಕಾಮೋ ಯವೀಯಾನಿತಿ ಚ ಪ್ರವದಂತಿ ಮನೀಷಿಣಃ ॥೭೫॥**

*— ಶಾಂತಿಪರ್ವ, ೧೬೭:೮*

"ಗುಣಗಳಲ್ಲಿ ಧರ್ಮವು ಶ್ರೇಷ್ಠವಾದದ್ದು. ಧನಾರ್ಜನೆ ಮಧ್ಯಮ ವಾದದ್ದು. ಕಡೆಯದು ಕಾಮ-ಭೋಗವೆಂದು ಬಲ್ಲವರು ಹೇಳುತ್ತಾರೆ."

ಭೀಷ್ಮನು ಯುಧಿಷ್ಠಿರನಿಗೆ ಹೇಳಿದ್ದು ಇದು. ಮನುಷ್ಯನು ಮನನಶೀಲನಾದ್ದರಿಂದ ತನ್ನ ಜೀವಿತದ ಗುರಿಯನ್ನು ಗೊತ್ತುಮಾಡಿಕೊಂಡಿರಲೇಬೇಕು. ಅದು ಯಾವುದು? ನಮ್ಮವರು ಧರ್ಮ, ಅರ್ಥ, ಕಾಮ, ಮೋಕ್ಷಗಳೇ ಜೀವಿತದ ಗುರಿಯೆಂದು ತೀರ್ಮಾನಿಸಿ ಅದಕ್ಕೆ ಪುರುಷಾರ್ಥ ಎಂದು ಹೆಸರಿಟ್ಟಿದ್ದಾರೆ. ಅರ್ಥವೆಂದರೆ ಭೋಗಸಾಮಗ್ರಿಗೆ ಮೂಲವಾದ ಹಣ. ಕಾಮವೆಂದರೆ ಆ ಸಾಮಗ್ರಿಗಳಿಂದ ಪಡಬಹುದಾದ ವಿಷಯಸುಖಭೋಗ. ಈ ಅರ್ಥ-ಕಾಮಗಳಿಗಾಗಿ ಹೆಣಗುವುದು ಮಾನವಜಾತಿಯ ಹುಟ್ಟುಗುಣ. ಅದಕ್ಕೊಂದು ಹಿಡಿತವಿಲ್ಲದಿದ್ದರೆ ಸಮಾಜವು ಹುಲಿಹಾವುಗಳಿಂದ ತುಂಬಿದ ಅರಣ್ಯವಾದೀತು. ಅದಕ್ಕಾಗಿ ಧರ್ಮವೆಂಬ ಕಡಿವಾಣವನ್ನು ಅರ್ಥ-ಕಾಮಗಳಿಗೆ ಮೊದಲೇ ಸೇರಿಸಿದ್ದಾರೆ. ಧನಸಂಪಾದನೆ ಧರ್ಮಪೂರ್ವಕವಾಗಿರಲಿ, ಸುಖಭೋಗವೂ ಧರ್ಮಪೂರ್ವಕವಾಗಿರಲಿ - ಎಂದು ಕಟ್ಟುಪಾಡು ಬಿಗಿಯಾಗಿ ಸೇರಿಕೊಂಡಿದೆ. ಹೀಗೆ ತಿಂದುಂಡು ಬದುಕುವುದು, ಸಾಯುವುದು - ಇಷ್ಟು ಮಾತ್ರ ಜೀವಿತದ ಗುರಿಯಲ್ಲ , ನೀನು ಬದುಕಬೇಕಾದದ್ದು

ಮೋಕ್ಷವೆಂಬ ಪರಮಪುರುಷಾರ್ಥದ ಸಾಧನೆಗಾಗಿ - ಎಂದೂ ಗೊತ್ತುಮಾಡಿದ್ದಾರೆ. ಮೋಕ್ಷವನ್ನು ಅಲೌಕಿಕವೆನ್ನಬಹುದು. ಎಲ್ಲರಿಗೂ ಅದರಲ್ಲಿ ಪ್ರವೃತ್ತಿ ದುರ್ಲಭ.

ಸಮಾಜದ ಸುಖಜೀವನಕ್ಕೆ ಧರ್ಮಪೂರ್ವಕವಾದ ಅರ್ಥ-ಕಾಮಗಳಿದ್ದರೆ ಸಾಕು. ಈ ಮೂರಕ್ಕೆ 'ತ್ರಿವರ್ಗ'ವೆಂದು ಹೆಸರು. ಬುದ್ಧಿಶಾಲಿಯು ಈ ತ್ರಿವರ್ಗವನ್ನು ಯಥೋಚಿತವಾಗಿ ಬಳಸುತ್ತಾನೆ. ಯಾವುದನ್ನೂ ತಿರಸ್ಕರಿಸುವುದಿಲ್ಲ. "ಧರ್ಮಾರ್ಥ ಕಾಮಾಃ ಸಮಮೇವ ಸೇವ್ಯಾಃ" - "ಧರ್ಮ, ಅರ್ಥ, ಕಾಮ - ಈ ಮೂರನ್ನೂ ಬಿಡದೆ ಸೇವಿಸಬೇಕು"; "ಯಸ್ತ್ವೇಕಭಕ್ತಃ ಸ ನರೋ ಜಘನ್ಯಃ" - "ಇವುಗಳಲ್ಲಿ ಒಂದಕ್ಕೆ ಮಾತ್ರ ಅಂಟಿಕೊಂಡವನು ಕನಿಷ್ಠದರ್ಜೆಯವನು" ಎಂದು ಭೀಷ್ಮನೇ ಉಪದೇಶಿಸಿದ್ದಾನೆ.

ಮೂರನ್ನು ಬಳಸಬೇಕಾದರೂ ಅವುಗಳ ಅಳತೆಯಲ್ಲಿ ಹೆಚ್ಚುಕಡಮೆ ಉಂಟು. ಧರ್ಮವು ಶ್ರೇಷ್ಠಗುಣವಾದ್ದರಿಂದ ಅದರ ಪ್ರಮಾಣವು ಅರ್ಥ-ಕಾಮಗಳಿಗಿಂತ ಅಧಿಕವಾಗಿರಲಿ. ಅರ್ಥವು ಎರಡನೆಯ ದರ್ಜೆಯದು. ಅದು ಧರ್ಮಕ್ಕಿಂತ ಪ್ರಮಾಣದಲ್ಲಿ ಕಡಮೆಯಾಗಿದ್ದು ಕಾಮಕ್ಕಿಂತ ಅಧಿಕವಾಗಿರಲಿ. ಧರ್ಮಾರ್ಥಗಳಿಗಿಂತ ಕಡಮೆಯ ಸ್ಥಾನ ಕಾಮಕ್ಕಿರಲಿ. ಈ ಉಪದೇಶದ ಸೊಗಸೇನೆಂದರೆ:

ಧರ್ಮಕ್ಕೆ ಅಧೀನವಾಗಿ ಧನಾರ್ಜನೆ ಇರಬೇಕು. ಧನಾರ್ಜನೆಯ ನಿಮಿತ್ತದಿಂದ ಧರ್ಮಕ್ಕೆ ಲೋಪವಾಗಬಾರದು. ಸಂಪಾದಿಸಿದ ಧನವನ್ನೆಲ್ಲ ನಿನ್ನ ಭೋಗಕ್ಕಾಗಿ ವಿನಿಯೋಗಿಸಬೇಡ. ಅರ್ಥಕ್ಕಿಂತ ಕಾಮವು ಕೆಳದರ್ಜೆಯದು. ಸಂಪಾದಿಸಿದ್ದರಲ್ಲಿ ಒಂದು ಪಾಲು ನಿನಗಿರಲಿ; ಉಳಿದದ್ದು ಪರೋಪಕಾರಕ್ಕಾಗಿ, ಧರ್ಮಕ್ಕಾಗಿ ವಿನಿಯುಕ್ತವಾಗಿರಲಿ. ಮಂಚದ ಒಂದು ಪಾರ್ಶ್ವದಲ್ಲಿ ಮಲಗಿರಬೇಕು, ತಾನು ಕಟ್ಟಿಸಿದ ಮನೆಯೆಂದು ಮನೆಯಲ್ಲೆಲ್ಲ ಹೊರಳಾಡಬಾರದು.

**ವಯೋ ಬುದ್ಧ್ಯರ್ಥ-ವಾಗ್ವೇಷ-ಶ್ರುತಾಭಿಜನಕರ್ಮಣಾಂ ।**
**ಆಚರೇತ್ ಸದೃಶೀಂ ವೃತ್ತಿಂ ಅಜಿಹ್ಮಾಮಶಠಾಂ ತಥಾ ॥೭೬॥**

— *ಯಾಜ್ಞವಲ್ಕ್ಯಸ್ಮೃತಿ, ೧-೧೨೩*

"ತನ್ನ ವಯಸ್ಸು, ಬುದ್ಧಿಶಕ್ತಿ, ಐಶ್ವರ್ಯ, ಆಡುವ ಮಾತು, ಹಾಕಿಕೊಂಡಿರುವ ವೇಷ, ಕಲಿತ ವಿದ್ಯೆ, ತನ್ನ ವಂಶ, ಉದ್ಯೋಗ

- ಇವುಗಳಿಗೆ ಯೋಗ್ಯವಾದ ಕೆಲಸವನ್ನು ಮಾಡಬೇಕು. ಅಲ್ಲದೆ ಯಾರಿಗೂ ಮೋಸಮಾಡದೆ, ಛಲದಿಂದ ಕೆಟ್ಟದಾರಿಯನ್ನು ತುಳಿಯದೆ ಇರಬೇಕು."

ಮನುಷ್ಯನು ಆಚರಿಸಬೇಕಾದ ಕಾರ್ಯಗಳು ನೂರಾರು ಬಗೆಯಲ್ಲಿರುತ್ತವೆ. ಒಳ್ಳೆಯ ಕೆಲಸಗಳೇ ಆದರೂ ತರತಮಭಾವವಿರುತ್ತದೆ. ತನ್ನ ವಯಸ್ಸು ಮೊದಲಾದ್ದನ್ನು ಗಣಿಸಿ, ತನಗೆ ಯೋಗ್ಯವಾದದ್ದು ಯಾವುದು, ಯಾವುದಲ್ಲ - ಎಂಬ ವಿವೇಕವಿಲ್ಲದೆಹೋದರೆ ಅದು ವ್ಯರ್ಥವಾಗುತ್ತದೆ, ಹಾಸ್ಯಾಸ್ಪದವೂ ಆಗುತ್ತದೆ. ಮಕ್ಕಳು ಬೀದಿಯಲ್ಲಿ ಬೆಲೂನುಗಳನ್ನು ಹಿಡಿದು ತಿರುಗಾಡುತ್ತಾರೆಂದು ದೊಡ್ಡವರೂ ಹಿಡಿದು ಹೊರಡಬಾರದು. ಕಾಷಾಯಧಾರಿಯಾದ ಸಂನ್ಯಾಸಿ ಹೋಟಲಿನಲ್ಲಿ ತಿನ್ನತಕ್ಕದ್ದಲ್ಲ. ವಿದ್ವಾಂಸನು ಬಡಗಿಯ ಕೆಲಸದಲ್ಲಿ ತೊಡಗತಕ್ಕದ್ದಲ್ಲ. ವೈದ್ಯನು ಅಕ್ಕಸಾಲಿಯ ಕೆಲಸಕ್ಕೆ ಇಳಿಯುವುದು ಯೋಗ್ಯವಲ್ಲ. ಬಡವನು ಶ್ರೀಮಂತನಂತೆಯೂ ಶ್ರೀಮಂತನು ಬಡವನಂತೆಯೂ ನಡೆದುಕೊಳ್ಳುವುದನ್ನು ಲೋಕವು ಮೆಚ್ಚದು.

ಈ ಎಲ್ಲ ನೀತಿಯೂ ಔಚಿತ್ಯಪ್ರಜ್ಞೆ ಎಂಬ ಒಂದು ಶಬ್ದದಲ್ಲಿ ಅಡಕವಾಗುತ್ತದೆ. ಯಾವುದು ತನಗೆ ಉಚಿತವಾದದ್ದು, ತನ್ನ ಸ್ಥಾನಮಾನಗಳು ಯಾವುವು, ತನ್ನ ಅರ್ಹತೆ ಎಷ್ಟು - ಎಂಬುದನ್ನು ಅರಿತುಕೊಳ್ಳದೆಹೋದಾಗ ಎಲ್ಲ ಬಗೆಯ ಅವಿವೇಕಗಳೂ ಘಟಿಸುತ್ತವೆ. ಲೋಕದಲ್ಲಿ ನಾನಾಶಾಸ್ತ್ರಗಳನ್ನೂ ಕುಶಲಕಲೆಗಳನ್ನೂ ಬಲ್ಲವರಿದ್ದಾರೆ. ಒಂದೊಂದು ಕಾರ್ಯದಲ್ಲಿಯೂ ನಿಪುಣರಾದವರಿದ್ದಾರೆ. ಆದರೆ 'ಸ್ವಾಜ್ಞಾನಜ್ಞಾನಿನೋ ವಿರಲಾಃ' - ತಮ್ಮ ಅಜ್ಞಾನವೆಷ್ಟೆಂಬುದನ್ನು ತಿಳಿದುಕೊಂಡವರು ವಿರಳರೇ! ತಮಗೆ ಏನೇನೂ ಗೊತ್ತಿಲ್ಲದ ವಿಷಯದಲ್ಲಿ ಮಾತನಾಡತಕ್ಕವರೂ ಹಾಗೆಯೇ ನಡೆಯತಕ್ಕವರೂ ಅಧಿಕಸಂಖ್ಯೆಯಲ್ಲಿದ್ದಾರೆ.

ಧರ್ಮಶಾಸ್ತ್ರವನ್ನು ಕಣ್ಣೆತ್ತಿನೋಡದವನು ಮನುಸ್ಮೃತಿಯನ್ನು ಬಯ್ಯುತ್ತಾನೆ. ಭಾಷೆಯ ಬುಡವನ್ನರಿಯದವನು ವ್ಯಾಕರಣಶಾಸ್ತ್ರವನ್ನು ಹಂಗಿಸುತ್ತಾನೆ. ವಿಜ್ಞಾನಿಯು ವೇದಾಂತವನ್ನೂ, ವೇದಾಂತಿಯು ವಿಜ್ಞಾನವನ್ನೂ ಹಳಿಯುವುದು ಹಾಸ್ಯಾಸ್ಪದ. ರಾಜಕೀಯಸ್ಥನಿಗೆ ಅದ್ವೈತವು ಇಸ್ಲಾಂ ಮತದಿಂದ ಹುಟ್ಟಿದಂತೆ ಕಾಣುತ್ತದೆ. ಸಂಸ್ಕೃತಭಾಷೆಯೇ ಗೊತ್ತಿಲ್ಲದವನಿಗೆ ಭಗವದ್ಗೀತೆಯು ಕಾಮಗೀತೆಯಾಗಿ ಕಾಣುವುದೂ ಉಂಟು.

ಇವರೆಲ್ಲ ಮಾತುಗಾರರು, ಬರಹಗಾರರು. ಇವರಿಂದಾಗುವ ಹಾವಳಿಯನ್ನು

ಎದುರಿಸಬಹುದು; ತಪ್ಪಿಸಲೂಬಹುದು. ಆದರೆ ತಮ್ಮ ಬುದ್ಧಿ-ಶ್ರುತ-ವಾಗ್-ವೇಷಾದಿಗಳಿಗೆಲ್ಲಕ್ಕೂ ವ್ಯತಿರಿಕ್ತವಾಗಿ ಆಚರಿಸುವ, ಜಿಹ್ಮವೃತ್ತಿ-ಶಠವೃತ್ತಿಗಳನ್ನು ಮೈಗೂಡಿಸಿಕೊಂಡಿರುವ ಕೆಲವು ಆಡಳಿತಗಾರರೂ ಶಾಸಕರೂ ಇದ್ದಾರಲ್ಲ, ಇವರಿಂದಾಗುವ ಅನರ್ಥಗಳನ್ನು ಯಾರು ತಡೆಯಬಲ್ಲರು? ಮಾರೀಚನ ಮಾಯೆಯನ್ನು, ಇಂದ್ರಜಿತುವಿನ ಇಂದ್ರಜಾಲವನ್ನು ವಶಪಡಿಸಿಕೊಂಡ ಈ ಜನರು ಒಬ್ಬರಿಬ್ಬರನ್ನಲ್ಲ, ರಾಷ್ಟ್ರವನ್ನೇ ವಂಚಿಸುತ್ತಾರೆ.

**ರವಿಚಂದ್ರೌ ಘನಾ ವೃಕ್ಷಾ ನದೀ ಗಾವಶ್ಚ ಸಜ್ಜನಾಃ ।**
**ಏತೇ ಪರೋಪಕಾರಾಯ ಯುಗಾದೌ ದೈವನಿರ್ಮಿತಾಃ ॥೭೭॥**

— *ಸುಭಾಷಿತರತ್ನ-ಭಾಂಡಾಗಾರ*

"ಸೂರ್ಯಚಂದ್ರರು, ಮೋಡ, ಮರ, ನದಿ, ಗೋವುಗಳು ಮತ್ತು ಸಜ್ಜನರು ಪರೋಪಕಾರಕ್ಕಾಗಿಯೇ ಸೃಷ್ಟಿಯ ಆರಂಭದಲ್ಲಿ ಈಶ್ವರನಿಂದ ನಿರ್ಮಿತರಾಗಿದ್ದಾರೆ."

ಪರೋಪಕಾರವು ಸದ್ಗುಣಗಳಲ್ಲಿ ಶ್ರೇಷ್ಠವಾದದ್ದು. ಸತ್ಯ, ಅಹಿಂಸೆ, ತಾಳ್ಮೆ, ಇಂದ್ರಿಯನಿಗ್ರಹ - ಮೊದಲಾದವು ಆಯಾ ವ್ಯಕ್ತಿಯ ಉನ್ನತಿಗೆ ಕಾರಣವಾಗುತ್ತವೆ. ಅವುಗಳಿಂದ ಪರರಿಗೆ ಆಗುವ ಪ್ರಯೋಜನ ಕಡಮೆ. ಪರೋಪಕಾರವಾದರೋ ಆಯಾ ವ್ಯಕ್ತಿಯ ಉನ್ನತಿಗೆ ಮಾತ್ರವಲ್ಲದೆ ಅನ್ಯರಿಗೆ ಹಿತವನ್ನುಂಟುಮಾಡುತ್ತದೆ. ಆದ್ದರಿಂದಲೇ -

**ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ ।**
**ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್ ॥**

— ಎಂದು ನೀತಿಶಾಸ್ತ್ರಕಾರನೊಬ್ಬನು ಹೇಳಿದ್ದಾನೆ. ಪರಪೀಡನವು ಪಾಪಕೃತ್ಯಗಳಲ್ಲಿ ಪ್ರಬಲವಾದದ್ದು. ಕಳ್ಳತನ, ಕೊಲೆ ಮೊದಲಾದವೆಲ್ಲ ಪರಪೀಡನದಲ್ಲಿ ಪರ್ಯವಸಾನ ಹೊಂದುತ್ತವೆ.

ಮನುಷ್ಯನಿಂದ ಯಾವ ಖರ್ಚನ್ನೂ ಮಾಡಿಸದೆ ಬೆಳಕನ್ನೂ ಉಷ್ಣತೆಯನ್ನೂ ಕೊಟ್ಟು ಪಾಲಿಸತಕ್ಕವನು ಸೂರ್ಯ. ಚಂದ್ರನಿಂದ ಔಷಧಿಗಳು ಆಪ್ಯಾಯನಗೊಂಡು ಬೆಳೆಯುತ್ತವೆಯೆಂದು ಶಾಸ್ತ್ರವಚನ ಉಂಟು. ಚಂದ್ರನಿಗೆ ಓಷಧಿರಾಜನೆಂದು ಹೆಸರಿದೆ.

ಬೆಳಕನ್ನೂ ಸೌಂದರ್ಯದಿಂದ ಆನಂದವನ್ನೂ ನೀಡತಕ್ಕವನು ಚಂದ್ರ. ಇನ್ನು ಮೋಡ ಮೊದಲಾದವುಗಳಿಂದಾಗುವ ಉಪಕಾರವು ಸರ್ವವೇದ್ಯ. ಗೋವುಗಳೆಂದರೆ ಹಸುಗಳು ಮತ್ತು ಎತ್ತುಗಳು. ಇವೆಲ್ಲವುಗಳಿಂದ ಅಧಿಕವಾದ ಪ್ರಯೋಜನವನ್ನು ಪಡೆಯತಕ್ಕದ್ದು ಮನುಷ್ಯಜಾತಿ. ರವಿಚಂದ್ರಾದಿಗಳಲ್ಲಿ ಯಾವ ವಿಶೇಷವೂ ಇಲ್ಲದೆ ಸರ್ವರೂ ಉಪಕರಿಸತಕ್ಕವರೇ. ಆದರೆ ಮನುಷ್ಯರು ಮಾತ್ರ ಹಾಗಲ್ಲ! ಎಲ್ಲರೂ ಉಪಕಾರಿಗಳಲ್ಲ. ಸಜ್ಜನರು ಮಾತ್ರ ಉಪಕಾರಿಗಳು. ಆದ್ದರಿಂದ 'ಸತ್' ಎಂಬ ವಿಶೇಷಗುಣವನ್ನು ಕವಿಯು ಕೊಡಬೇಕಾಯಿತು. ಇದೇ ಮನುಷ್ಯಜಾತಿಯ ವಿಶೇಷ!

ಇವರೆಲ್ಲರೂ 'ದೈವನಿರ್ಮಿತರು' - ಈಶ್ವರನಿಂದ ನಿರ್ಮಿತರಾದವರು. ದೈವನಿರ್ಮಿತವಾದುದೆಲ್ಲವೂ ಜೀವಿಗಳಿಗೆ ಉಪಕಾರಿಯೇ ಸರಿ. ಮಣ್ಣು, ಕಲ್ಲು, ಲೋಹ, ಬೆಂಕಿ, ಗಾಳಿ, ವನೌಷಧಿಗಳು - ಎಲ್ಲವೂ ಅಷ್ಟೇ. ನಮ್ಮ ಕಾಲು, ಕೈ, ಕಣ್ಣು - ಇವೂ ದೈವಕೃಪೆಯಿಂದ ನಿರ್ಮಿತವಾದವು. ಈಶ್ವರನು ಅನುಗ್ರಹಿಸಿದ ಬುದ್ಧಿಶಕ್ತಿಯಿಂದ, ಅವನು ನಿರ್ಮಿಸಿದ ವಸ್ತುಗಳಿಂದ ಮನುಷ್ಯನು ತನಗೆ ಬೇಕಾದ ಯಂತ್ರಗಳನ್ನೂ ಸುಖಸಾಧನಗಳನ್ನೂ ನಿರ್ಮಿಸಿಕೊಂಡಿದ್ದಾನೆ. ಈಶ್ವರನಿರ್ಮಿತವಾದ ಯಾವ ವಸ್ತುವನ್ನೂ ಮನುಷ್ಯನು ಮಾಡಲಾರ. ಒಂದು ಹುಲ್ಲುಕಡ್ಡಿಯನ್ನೂ ಒಂದು ಸಾಸಿವೆಕಾಳನ್ನೂ ಸಹ ಇವನು ನಿರ್ಮಿಸಲಾರ. ವಸ್ತುವಿನಲ್ಲಿ ಗೂಢವಾಗಿ ಮೊದಲೇ ನೆಲೆಸಿರುವ ಶಕ್ತಿಯನ್ನು ಬಹಿರಂಗಪಡಿಸುವುದೇ ವಿಜ್ಞಾನ.

**ಗುಣೇಷು ಕ್ರಿಯತಾಂ ಯತ್ನಃ ಕಿಮಾಟೋಪೈಃ ಪ್ರಯೋಜನಂ ।**
**ವಿಕ್ರೀಯಂತೇ ನ ಘಂಟಾಭಿಃ ಗಾವಃ ಕ್ಷೀರವಿವರ್ಜಿತಾಃ ॥೭೮॥**

— *ಸುಭಾಷಿತರತ್ನ-ಭಾಂಡಾಗಾರ*

"ಯೋಗ್ಯವಾದ ಗುಣಗಳನ್ನು ಸಂಪಾದಿಸಲು ಪ್ರಯತ್ನಿಸಬೇಕು. ಬರಿಯ ಆಡಂಬರದಿಂದ ಫಲವೇನು? ಹಾಲಿಲ್ಲದ ಹಸುಗಳಿಗೆ ಘಂಟೆಗಳನ್ನು ಕಟ್ಟಿ ಶಬ್ದಮಾಡಿದ ಮಾತ್ರದಿಂದ ಹಸುಗಳ ಮಾರಾಟವಾಗಿ ಬಿಡುವುದಿಲ್ಲ!"

ಹಿಂದಿನ ಕಾಲದಲ್ಲಿ ಮಾರಾಟಮಾಡುವ ಹಸುಗಳ ಕೊರಳಿಗೆ ಘಂಟೆಗಳನ್ನು ಕಟ್ಟಿ ಪ್ರದರ್ಶಿಸುತ್ತಿದ್ದರೆಂದು ಕಾಣುತ್ತದೆ. ಅಥವಾ ಅಲಂಕಾರಕ್ಕಾಗಿ ಕಟ್ಟುತ್ತಿದ್ದರೂ

ಇರಬಹುದು. ಹಾಲುಹಿಂಡುವ ಹಸುವಿನ ಘಂಟೆಯೂ ಶಬ್ದಮಾಡುತ್ತದೆ; ಹಾಲಿಲ್ಲದ ಹಸುವಿನ ಘಂಟೆಯೂ ಶಬ್ದಮಾಡುತ್ತದೆ. ಹಸುವನ್ನು ಕೊಳ್ಳಲು ಬಂದವರಿಗೆ ಈ ಶಬ್ದವು ಮುಖ್ಯವಲ್ಲ. ಆ ಹಸು ಎಷ್ಟು ಹಾಲು ಕೊಡುತ್ತದೆಂಬುದನ್ನು ನೋಡಿ ಅದಕ್ಕೆ ಬೆಲೆ ಕಟ್ಟುತ್ತಾರೆ. ಘಂಟಾನಾದವು ಅಧಿಕವಾದ ಮಾತ್ರದಿಂದ ಹಸುವಿನ ಬೆಲೆಯು ಅಧಿಕವಾಗಿಬಿಡುವುದಿಲ್ಲ! ಕೊಳ್ಳತಕ್ಕವನಿಗೆ ಬೇಕಾದ್ದು ಹಾಲು, ಘಂಟೆಯಲ್ಲ.

ಮನುಷ್ಯನಿಗೆ ಕೀರ್ತಿಗೌರವಗಳು ಅವನ ಅರ್ಹತೆಯಿಂದ ಬರುತ್ತವೆ. ಬರಿಯ ವೇಷದಿಂದಲೋ ಪ್ರಚಾರದಿಂದಲೋ ಅವು ಲಭ್ಯವಾಗತಕ್ಕವಲ್ಲ. ಒಳ್ಳೆಯ ಪಾಂಡಿತ್ಯ ವಿದ್ದರೆ ವಿದ್ವಾಂಸನೆಂಬ ಗೌರವ ಸಹಜವಾಗಿ ದೊರೆಯುತ್ತದೆ. ಪ್ರಶಂಸನೀಯವಾದ ಕವಿತೆಗಳನ್ನು ರಚಿಸತಕ್ಕವನನ್ನು ಶ್ರೇಷ್ಠಕವಿಯೆಂದು ಸಮಾಜವು ಗೌರವಿಸುತ್ತದೆ. ಚಿನ್ನ-ಬೆಳ್ಳಿಗಳಿಗೆ ಇರುವ ಬೆಲೆ ಪ್ರಚಾರದಿಂದ ಬಂದದ್ದಲ್ಲ.

ಹಿಂದೆ ರಾಜರ ಕಾಲದಲ್ಲಿ ವಿದ್ಯಾವಂತರಿಗೂ ಕವಿಗಳಿಗೂ ಅಪೂರ್ವವಾದ ಗೌರವ ದೊರಕುತ್ತಿತ್ತು. ಅವರೆಲ್ಲರ ಪರೀಕ್ಷೆಯೂ ರಾಜಾಸ್ಥಾನದಲ್ಲಿ ಆಗುತ್ತಿತ್ತು. 'ಉಜ್ಜಯಿನ್ಯಾಂ ಕವಿಪರೀಕ್ಷಾ' ಎಂದು ರಾಜಶೇಖರನು 'ಕಾವ್ಯಮೀಮಾಂಸೆ'ಯಲ್ಲಿ ಬರೆದಿದ್ದಾನೆ. ಪ್ರಾಯೇಣ ಅರ್ಹತೆಯಿದ್ದವರು ಮಾತ್ರ ರಾಜರಿಂದ ಪುರಸ್ಕೃತ ರಾಗುತ್ತಿದ್ದರು.

ಆದರೆ ಈಗಿನ ಪರಿಸ್ಥಿತಿ ಬೇರೆಯದು. ಇದು ಜಾಹಿರಾತಿನ ಕಾಲ. ಮಾಲುಗಳಿಗೆ ಹೆಚ್ಚಿನ ಗಿರಾಕಿಗಳು ದೊರೆಯುವುದು ಜಾಹಿರಾತಿನಿಂದ. ರಾಜಕೀಯ ಪಕ್ಷಗಳು ಪ್ರಚಾರದ ಅಬ್ಬರದಿಂದ ಮೇಲಕ್ಕೇರುತ್ತವೆ. ರಾಜಕೀಯ ಪಕ್ಷದಲ್ಲಿರುವ ವ್ಯಕ್ತಿಯೂ ಪ್ರಚಾರದ ಬಲದಿಂದಲೇ ನಾಯಕನಾಗುತ್ತಾನೆ. ಹಣದ ಹೊಳೆ ಹರಿಯುತ್ತದೆ. ಅಲ್ಪಜ್ಞನು ಸರ್ವಜ್ಞನೆಂದೇ ವಿಖ್ಯಾತನಾಗಬಹುದು; ರಾಷ್ಟ್ರದ್ರೋಹಿಯು ರಾಷ್ಟ್ರಭಕ್ತನೆನಿಸ ಬಹುದು. ಸುಳ್ಳಿನ ಸರಮಾಲೆಯನ್ನು ಹಾಕಿಕೊಂಡವನು ಸತ್ಯಹರಿಶ್ಚಂದ್ರನೆನಿಸಿಯಾನು. ಕ್ರಿಮಿನಲ್ ಅಪರಾಧಿಯು ದೇಶಕ್ಕೆ ಕಾನೂನುಗಳನ್ನು ರಚಿಸುವ ಶಾಸಕನಾಗಬಹುದು. ಪ್ರಚಾರದ ಘಂಟೆಗಳನ್ನು ಬಾರಿಸದಿರುವ ಸತ್ಯಹರಿಶ್ಚಂದ್ರನು ಶ್ಮಶಾನದ ಕಾವಲುಗಾರ ನಾಗುತ್ತಾನೆ.

ಹಸುಗಳ ಮಾರಾಟಕ್ಕೂ ರಾಜಕೀಯ ಹಾರಾಟಕ್ಕೂ ಒಂದು ವ್ಯತ್ಯಾಸವಿದೆ. ಹಸುಗಳ ಹಾಲನ್ನು ಹಿಂಡಿ, ಅಲ್ಲಿ ಆಗಲೇ ಅರ್ಹತೆಯನ್ನೂ ಬೆಲೆಯನ್ನೂ ಗಿರಾಕಿಯು

ನಿರ್ಧರಿಸಿಕೊಳ್ಳಲು ಸಾಧ್ಯವಿದೆ. ಆದರೆ ರಾಜಕೀಯವ್ಯಕ್ತಿಯ ನಿಜವಾದ ಮೌಲ್ಯವನ್ನು ನಿರ್ಧರಿಸಲು ಸರಿಯಾದ ಸಾಧನವಿಲ್ಲ. ಪ್ರಚಾರದಿಂದ ಅವನು ಮೇಲೇರಿದ ಮೇಲೆ ಅವನು ಜನರ ಕೈಗೆ ಸಿಗುವುದೇ ಇಲ್ಲ!

ಯಥಾ ಹಿ ಮಲಿನೈರ್ವಸ್ತ್ರೈರ್ಯತ್ರ ತತ್ರೋಪವಿಶ್ಯತೇ ।
ಏವಂ ಚಲಿತವೃತ್ತಸ್ತು ವೃತ್ತಶೇಷಂ ನ ರಕ್ಷತಿ ॥೭೯॥

— *ಸುಭಾಷಿತರತ್ನ-ಭಾಂಡಾಗಾರ*

"ಉಟ್ಟಿರುವ ಬಟ್ಟೆಗಳು ಕೊಳೆಯಾಗಿದ್ದರೆ ಜನರು ಕೊಳೆಯಾದ ಬೇರೆ ಜಾಗದಲ್ಲಿಯೂ ಕುಳಿತುಕೊಂಡುಬಿಡುತ್ತಾರೆ. ಹಾಗೆಯೇ ತನ್ನ ಶೀಲವನ್ನು ಒಮ್ಮೆ ಕೆಡಿಸಿಕೊಂಡನೆಂದರೆ, ಆ ಮನುಷ್ಯನು ಮುಂದೆ ತನ್ನ ಶೀಲವನ್ನು ರಕ್ಷಿಸಿಕೊಳ್ಳುವುದಿಲ್ಲ."

ಉಡುವ ಬಟ್ಟೆ ಸ್ವಚ್ಛವಾಗಿರಲೆಂದು ಎಲ್ಲರೂ ಬಯಸುತ್ತಾರೆ. ಎಲ್ಲರಿಗೂ ಈ ಬಯಕೆ ನಡೆಯುವುದಿಲ್ಲ. ಕೃಷಿಕರು ಮತ್ತು ಕೂಲಿ ಕೆಲಸದವರು ತಮ್ಮ ಉಡುಪನ್ನು ನಿರ್ಮಲವಾಗಿಟ್ಟುಕೊಳ್ಳಲಾರರು. ತಮ್ಮ ಕೆಲಸದಲ್ಲಿ ಹೇಗಿದ್ದರೂ ಬಟ್ಟೆ ಕೊಳೆಯಾಗುತ್ತದೆ - ಎಂಬ ಭಾವನೆಯಿಂದ ಅದರ ಕಡೆಗೆ ಅವರು ಹೆಚ್ಚು ಲಕ್ಷ್ಯವನ್ನು ಕೊಡುವುದಿಲ್ಲ. ಧೂಳಿಯಿದ್ದ ಸ್ಥಳದಲ್ಲಿ ಕುಳಿತುಕೊಳ್ಳಲು ಹಿಂದೆ ಮುಂದೆ ನೋಡುವುದಿಲ್ಲ. ಅವರಿಗೆ ಅದು ಅಭ್ಯಾಸವಾಗಿಬಿಟ್ಟಿರುತ್ತದೆ. ಹಾರೆಯಿಂದ ಕುಟ್ಟುವ ಕೆಲಸದವರ ಅಂಗೈಚರ್ಮವು ಜಡ್ಡುಗಟ್ಟಿರುತ್ತದೆ. ಆ ಚರ್ಮಭಾಗದಲ್ಲಿ ಸ್ಪರ್ಶಜ್ಞಾನವಾಗುವುದಿಲ್ಲ. ಅಡುಗೆ ಮಾಡತಕ್ಕವರ ಕೈಗೆ ಸಾಧಾರಣವಾದ ಬಿಸಿ ತಾಗುವುದಿಲ್ಲ. ಚಳಿದೇಶದವರು ಸಾಮಾನ್ಯವಾದ ಚಳಿಯನ್ನು ಲಕ್ಷಿಸುವುದಿಲ್ಲ. ಅವರ ದೇಹವು ಆ ಪರಿಸ್ಥಿತಿಗೆ ಒಗ್ಗಿಕೊಂಡುಬಿಟ್ಟಿರುತ್ತದೆ.

ಮನೋಬುದ್ಧಿಗಳ ಸ್ವಭಾವವೂ ಹಾಗೆಯೇ. ಒಂದು ಸಲ ಕಳ್ಳತನವನ್ನು ಮಾಡಿ ಜೈಲಿಗೆ ಹೋದವನು ಜೈಲುವಾಸಕ್ಕೆ ಹಿಂಜರಿಯುವುದಿಲ್ಲ. ಮತ್ತೆ ಇನ್ನೊಂದು ಅಪರಾಧ ಮಾಡಲು ಹಿಂದೆಗೆಯುವುದಿಲ್ಲ. ಒಂದು ಸುಳ್ಳು ಹೇಳಿದವನು ಇನ್ನೊಂದು ಸುಳ್ಳು ಹೇಳಲು ಅಂಜುವುದಿಲ್ಲ. ಜೂಜು, ಹೆಂಡ, ಬೀಡಿ - ಮೊದಲಾದವು ಹೀಗೆಯೇ ಮೆಲ್ಲಗೆ ಮನುಷ್ಯನಲ್ಲಿ ಪ್ರವೇಶಿಸಿಬಿಡುತ್ತವೆ.

ಶೀಲವು ಸದ್ಗುಣಗಳಲ್ಲಿ ಮೂರ್ಧನ್ಯವೆನಿಸಿದೆ. ಶೀಲವೆಂದರೆ ಒಳ್ಳೆಯ ನಡತೆಯೆಂದರ್ಥ. ಒಳ್ಳೆಯದು ಯಾವುದೆಂಬುದಕ್ಕೆ ಪ್ರತ್ಯೇಕ ಲಕ್ಷಣವಿಲ್ಲ. ಸಮಾಜದ ಮಹಾಜನರು ಯಾವ ನಡತೆಯನ್ನು ಒಳ್ಳೆಯದೆಂದು ಒಪ್ಪಿದ್ದಾರೋ ಅದು ಒಳ್ಳೆಯದು. ಯಾವುದೋ ಕಾರಣದಿಂದ ಒಮ್ಮೆ ಶೀಲಭ್ರಷ್ಟನಾದರೆ ಮುಂದೆ ಅವನು ತನ್ನ ಶೀಲವನ್ನು ರಕ್ಷಿಸಿಕೊಳ್ಳಲಾರ. ಮಡಕೆ ಒಡೆದ ಮೇಲೆ ಸೋರುವುದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಹೊಳೆಯಲ್ಲಿ ಇಳಿದು ಮುಳುಗಿದವನಿಗೆ ಚಳಿಯ ಹಂಗೇನು? - ಎಂಬ ಮನೋಭಾವ ಬಂದುಬಿಡುತ್ತದೆ. ಒಮ್ಮೆ ಲಂಚಕ್ಕೆ ಒಡ್ಡಿದ ಕೈ ಇನ್ನೊಮ್ಮೆ ಒಡ್ಡಲು ಹೇಸುವುದಿಲ್ಲ. ಅಷ್ಟಕ್ಕೇ ನಿಲ್ಲುವುದಿಲ್ಲ. ಅದು ಇತರ ದುಃಶೀಲಗಳನ್ನೂ ಬರಮಾಡಿಕೊಳ್ಳುತ್ತದೆ. ಒಂದು ನಾಯಿ ಬಗುಳಿದರೆ ಬೀದಿನಾಯಿಗಳೆಲ್ಲ ಬಗುಳುವಂತೆ, ಒಂದು ಕಾಗೆ ಕೂಗಿದರೆ ಇತರ ಕಾಗೆಗಳು ಬಂದು ನೆರೆಯುವಂತೆ, ಒಂದು ಕೆಟ್ಟ ನಡತೆಯು ಇತರ ಕೆಟ್ಟ ನಡತೆಗಳನ್ನು ಬರಮಾಡಿಕೊಳ್ಳುತ್ತದೆ.

ಭ್ರಷ್ಟಾಚಾರಗಳು ಬೆಳೆಯುವುದು ಹೀಗೆಯೇ. ಒಂದು ತಪ್ಪು ತನ್ನ ನೆರವಿಗೆ ಇನ್ನೂ ಹನ್ನೊಂದನ್ನು ಬರಮಾಡಿಕೊಳ್ಳುತ್ತದೆ. ಇದು ಸಾಂಕ್ರಾಮಿಕವಾಗಿ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತ ಹೋಗಿ ರಾಷ್ಟ್ರವನ್ನೇ ವ್ಯಾಪಿಸಿಕೊಳ್ಳಬಲ್ಲದು. ಕಾಲು ಎಡವಿದರೆ ಮುಂದೆ ಎಚ್ಚರವಾಗಿರಬಹುದು. ಶೀಲವು ಒಮ್ಮೆ ಕುಸಿದರೆ ಮುಂದೆ ಸರಿಪಡಿಸಿಕೊಳ್ಳುವುದು ದುಃಸಾಧ್ಯ.

**ಅಜವತ್ ಚರ್ವಣಂ ಕುರ್ಯಾತ್ ಗಜವತ್ ಸ್ನಾನಮಾಚರೇತ್ ।**
**ಶುಕವದ್ ಭಾಷಣಂ ಕುರ್ಯಾತ್ ಬಕವದ್ ಧ್ಯಾನಮಾಚರೇತ್ ॥೮೦॥**

— *ಅಜ್ಞಾತಮೂಲ*

"ಮೇಕೆಯಂತೆ ಅಗಿದು ತಿನ್ನಬೇಕು. ಆನೆಯಂತೆ ಸ್ನಾನಮಾಡಬೇಕು.
ಗಿಳಿಯಂತೆ ಮಾತನಾಡಬೇಕು. ಬಕಪಕ್ಷಿಯಂತೆ ಧ್ಯಾನಿಸಬೇಕು."

'ಬುದ್ಧಿಃ ಸಂಸ್ಕಾರವರ್ತಿನೀ' ಎಂಬ ಹಳೆಯ ಮಾತುಂಟು. ಬುದ್ಧಿಯು ಆಯಾ ವ್ಯಕ್ತಿಯ ಸಂಸ್ಕಾರವನ್ನವಲಂಬಿಸುತ್ತದೆ. ಸಂಸ್ಕಾರವು ಹಿಂದಿನ ಜನ್ಮದ್ದೋ ಈ ಜನ್ಮದ್ದೋ ಎರಡೂ ಆಗಬಹುದು. ಬುದ್ಧಿಗೆ ತಕ್ಕ ಅಭಿರುಚಿ. ಒಬ್ಬನಿಗೆ ಸಂಗೀತದಲ್ಲಿ ಅಭಿರುಚಿ, ಇನ್ನೊಬ್ಬನಿಗೆ ಸಾಹಿತ್ಯದಲ್ಲಿ, ಮತ್ತೊಬ್ಬನಿಗೆ ವೇದಾಂತದಲ್ಲಿ,

ಮಗದೊಬ್ಬನಿಗೆ ಜಗಳದಲ್ಲಿ. ಒಬ್ಬಳೇ ಯುವತಿಯು ಯುವಕನಿಗೆ ಕಾಮಿನಿಯಾಗಿ, ವಿರಕ್ತ ಸಂನ್ಯಾಸಿಗಳಿಗೆ ಚಲಿಸುವ ಹೆಣವಾಗಿ, ಮಾಂಸಾಹಾರಿ ಮೃಗಕ್ಕೆ ಭಕ್ಷ್ಯವಾಗಿ ಕಾಣುತ್ತಾಳಂತೆ.

ಮೇಲೆ ಬರೆದ ಸುಭಾಷಿತದಲ್ಲಿ ನಾಲ್ಕು ಉಪಮಾನಗಳನ್ನು ಕೊಟ್ಟು ನಾಲ್ಕು ವಿಧಿಗಳನ್ನು ಉಪದೇಶಿಸಲಾಗಿದೆ. ಉಪಮಾನವನ್ನು ಯಾವ ರೀತಿಯಲ್ಲಿ - ಯಾವ ಸಾಮಾನ್ಯಧರ್ಮವನ್ನು ಗ್ರಹಿಸಿ ಈ ಹಿತವಚನಗಳನ್ನು ಅರ್ಥಮಾಡಿಕೊಳ್ಳ ಬೇಕೆಂಬುದನ್ನು ಹೇಳಿಲ್ಲ. ಅವರವರ ಸಂಸ್ಕಾರಕ್ಕೆ ಅನುರೋಧವಾಗಿ ಅರ್ಥವಾಗುತ್ತದೆ. ಬಹುಶಃ ಈ ಅಭಿಪ್ರಾಯವು ಉಪದೇಶಕರ್ತನ ಮನಸ್ಸಿನಲ್ಲಿ ಇದ್ದೀತು - "ಮೇಕೆಯು - ಆಡು - ಎಲ್ಲ ಬಗೆಯ ಗಿಡದ ಎಲೆಗಳನ್ನು ತಿನ್ನುತ್ತದೆ. ಜಗಿದು ನುಂಗುತ್ತದೆ. ಹಾಗೆ ಮನುಷ್ಯನು ದೊರಕಿದ ಆಹಾರದಿಂದ ತೃಪ್ತಿಪಡಬೇಕು. ಇದು ಸೇರುತ್ತದೆ, ಇದು ಸೇರುವುದಿಲ್ಲ ಎಂಬ ರಗಳೆ ಇರಬಾರದು. ಕಹಿಯಾದ ಒಂದು ಗಿಡದ ಎಲೆಯನ್ನು ಮಾತ್ರ ಆಡು ತಿನ್ನುವುದಿಲ್ಲ. ಅದಕ್ಕೆ 'ಆಡು ಮುಟ್ಟದ ಗಿಡ' ಎಂದೇ ಹೆಸರು ಬಂದಿದೆ. ಹಾಗೆ ಯಾವುದೋ ಒಂದು ವಿನಾಯಿತಿ ಆಹಾರದಲ್ಲಿರಬಹುದು. ಆನೆಯು ಧಾರಾಳವಾಗಿ ನೀರನ್ನೆರಚಿಕೊಂಡು ಸ್ನಾನಮಾಡುತ್ತದೆ. ಆ ರೀತಿಯಲ್ಲಿ ನೀರೆರೆದುಕೊಂಡು ಸ್ನಾನಮಾಡುವುದು ಉತ್ತಮ. ಅದರಿಂದ ದೇಹವು ಶುಚಿಯಾಗುತ್ತದೆಯಲ್ಲದೆ ಜಡತ್ವವು ಕಳೆದು ಹೊಸ ಉತ್ಸಾಹವು ಚಿಮ್ಮುತ್ತದೆ. ಗಿಳಿಯು ಮಾತಾಡಿದಂತೆ ಮಧುರವಾಗಿ ಮಾತಾಡುವುದು ಉತ್ತಮ. ಮೃದುಮಧುರ ನುಡಿಗಳಿಂದ ಜನರು ಸಂತೋಷಿಸುತ್ತಾರೆ. ಶುಕಭಾಷಿಣಿಯೆಂದು ಕವಿಗಳು ವರ್ಣಿಸುವುದುಂಟು. ಬಕಪಕ್ಷಿಯು ನಿಃಶಬ್ದವಾಗಿ ಎಡಬಲಕ್ಕೂ ನೋಡದೆ ಏಕಾಗ್ರತೆಯಿಂದ ಕುಳಿತಿರುತ್ತದೆ. ಆ ಬಗೆಯಲ್ಲಿ ಧ್ಯಾನಮಾಡಬೇಕು."

ಇನ್ನೊಂದು ಬಗೆಯ ಸಂಸ್ಕಾರವನ್ನು ಪಡೆದವರಿಗೆ ಮತ್ತೊಂದು ಬಗೆಯಲ್ಲಿ ಅರ್ಥವಾಗಿ ಉಪದೇಶವು ಗ್ರಾಹ್ಯವೆನಿಸಬಹುದು. "ಮೇಕೆಯಂತೆ ಕಂಡಕಂಡದ್ದನ್ನು ಮೆಲ್ಲುತ್ತಿರಬೇಕು. ತಿನ್ನುವುದಕ್ಕೆ ವಿಧಿ ನಿಷೇಧಗಳೇಕೆ? ಯಾವುದು ನಾಲಗೆಗೆ ರುಚಿಸದೋ ಅದು ವರ್ಜ್ಯವಾಗಲಿ. ಆನೆಯಂತೆ ಯಾವುದೋ ಒಂದು ದಿನ ಸ್ನಾನ ಮಾಡಿದರಾಯಿತು. ನಾವೇನು ಮಣ್ಣಲ್ಲಿ ಹೊರಳಾಡುತ್ತೇವೆಯೇ ನಿತ್ಯ ಸ್ನಾನ ಮಾಡುವುದಕ್ಕೆ? ಗಿಳಿಯಂತೆ ಬಾಯಿಪಾಠ ಮಾಡಿದ್ದನ್ನು ಹೇಳೋಣ, ಚಿಂತನೆಯೇಕೆ? ಮಹಾತ್ಮಗಾಂಧಿಜೀ ನಮಗೆ ಸ್ವರಾಜ್ಯವನ್ನು ದೊರಕಿಸಿಕೊಟ್ಟಿದ್ದಾರೆ. ನಾವು ಅವರಂತೆಯೇ

ನಡೆಯಬೇಕು. ಸತ್ಯವನ್ನೇ ಹೇಳಬೇಕು. ಸುಳ್ಳು ಹೇಳಬಾರದು. ಯಾರಿಗೂ ಹಿಂಸೆ ಮಾಡಬಾರದು. (ಕೋಳಿಮರಿಯನ್ನೇ ತಿನ್ನಬೇಕು. ಆಗ ಇತರ ಪ್ರಾಣಿಗೆ ಹಿಂಸೆಯಾಗುವುದಿಲ್ಲ!) ಬಕಪಕ್ಷಿಯು ತನ್ನ ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ ಸುಮ್ಮನೆ ಕುಳಿತಿರುತ್ತದೆ. ತಿಳಿಯದೆ ಮೀನೊಂದು ಬಂದೊಡನೆ ಗಪ್ಪನೆ ಹಿಡಿದುಕೊಳ್ಳುತ್ತದೆ. ಹಾಗೆ ಮಾಡದಿದ್ದರೆ ಅದರ ಹೊಟ್ಟೆ ತುಂಬುವುದು ಹೇಗೆ? ಆದ್ದರಿಂದ ಬಕಪಕ್ಷಿಯ ಹಾಗೆ ಕುಳಿತು ಯಾವ ಗಿರಾಕಿಯು ನಮ್ಮ ಪರಿಧಿಯೊಳಗೆ ಬರುವನೆಂಬುದನ್ನು ಗಮನಿಸತಕ್ಕದ್ದು. ಧ್ಯಾನಯೋಗಿಗೆ ನೀತಿನಿಯಂತ್ರಣಗಳೇನೂ ಇಲ್ಲ. ಅಥವಾ ಬಕಾಸುರನಂತೆ ಪ್ರತಿದಿನ ಕಪ್ಪಕಾಣಿಕೆಗಳು ಎಷ್ಟು ಬರಬೇಕೆಂಬುದನ್ನು ಗೊತ್ತುಮಾಡಿಕೊಳ್ಳತಕ್ಕದ್ದು."

ಇವುಗಳಲ್ಲಿ ಯಾವುದು ಸರಿ? ಯಾವುದು ತಪ್ಪು? ಯಾರನ್ನು ಕೇಳಿದರೂ ಅವರವರ ಸಂಸ್ಕಾರಾನುರೋಧವಾಗಿ ಉತ್ತರ ಬರುತ್ತದೆ. ಕೆಲವರಿಗೆ ಭಗವದ್ಗೀತೆ ಕಾಮಗೀತೆಯಾಗಿ ಕಾಣಿಸುತ್ತದೆ. ಶ್ರೀಕೃಷ್ಣನು ಜಾರಚೋರಶಿಖಾಮಣಿಯಾಗುತ್ತಾನೆ. ಕೆಲವರಿಗೆ ಪೂಜ್ಯನಾದ ಮಹಾಪುರುಷನಾಗಿ ಗೋಚರಿಸುತ್ತಾನೆ.

**ಬಹವೋ ಯತ್ರ ನೇತಾರಃ ಸರ್ವೇ ಪಂಡಿತಮಾನಿನಃ ।**
**ಸರ್ವೇ ಮಹತ್ತ್ವಮಿಚ್ಛಂತಿ ತದ್ ವೃಂದಮವಸೀದತಿ ॥೮೧॥**

— *ಅಜ್ಞಾತಮೂಲ*

"ಯಾವ ಸಂಘದಲ್ಲಿ ಬಹಳ ಜನರು ನಾಯಕರಾಗಿರುತ್ತಾರೋ, ಎಲ್ಲರೂ ತಾವೇ ಪಂಡಿತರೆಂದು ತಿಳಿದುಕೊಂಡಿರುತ್ತಾರೋ, ಎಲ್ಲರೂ ಮಹತ್ತ್ವವನ್ನು ಪಡೆಯಲು ಬಯಸುತ್ತಾರೋ, ಆ ಸಂಘವು ಕುಸಿದು ಬೀಳುತ್ತದೆ."

ಯಾವುದೇ ಒಂದು ಸಂಸ್ಥೆಯನ್ನು ಯಶಸ್ವಿಯಾಗಿ ನಡೆಸಬೇಕಾದರೆ, ಉತ್ಸಾಹಶೀಲನೂ ಕಾರ್ಯದಕ್ಷನೂ ಆದ ಒಬ್ಬ ನಾಯಕನಿರಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯನಿರದು. ಅಂತಹ ಸಂಸ್ಥೆ ತುಂಬ ಮುಂದಕ್ಕೆ ಬಂದು ಪ್ರಶಂಸನೀಯವಾದ ಕಾರ್ಯಕ್ರಮಗಳನ್ನು ನಡೆಸಬಲ್ಲದು. ಆ ಸಂಸ್ಥೆಗೆ ಯಾವುದೇ ಒಂದು ಕಾರಣದಿಂದ ಸಮರ್ಥವಾದ ನಾಯಕತ್ವವು ತಪ್ಪಿಹೋದಾಗ, ಅದು ಶೋಚನೀಯವಾದ

ಪರಿಸ್ಥಿತಿಯನ್ನು ಮುಟ್ಟುತ್ತದೆ. ಅದನ್ನು ನಾವು ಕಾಣುತ್ತಲೇ ಇದ್ದೇವೆ. ಇದು ರಾಜ್ಯಪಾಲನಾ-ಸಂಸ್ಥೆಯಾದ ಸರ್ಕಾರಕ್ಕೂ ಅನ್ವಯಿಸತಕ್ಕದ್ದೇ. ಆದರೆ ಯಾವ ನಾಯಕನಿಗಾದರೂ ಅವನಿಗೆ ಸರಿಯಾದ ಸಲಹೆಗಳನ್ನು ನೀಡಿ ಸಹಕರಿಸತಕ್ಕ ಜನರೂ ಇರಬೇಕಾಗುತ್ತದೆ. ಏಕೆಂದರೆ, ಯಾವ ಒಬ್ಬ ವ್ಯಕ್ತಿಯೂ ಸರ್ವಜ್ಞನೂ ಸರ್ವಶಕ್ತನೂ ಅಲ್ಲ. ಸಲಹೆಗಳನ್ನು ನೀಡತಕ್ಕವರಿಲ್ಲದಿದ್ದರೆ ಆಗಲೂ ಅಪಾಯವು ತಪ್ಪಿದ್ದಲ್ಲ. ಆದ್ದರಿಂದಲೇ ನಿರಂಕುಶಪ್ರಭುತ್ವವು ಎಲ್ಲಿಯೂ ಯಶಸ್ವಿಯಾಗಲಿಲ್ಲ. ಪ್ರಜಾಪ್ರಭುತ್ವ ಪದ್ಧತಿಯೇ ಉತ್ತಮವೆಂಬ ನಿರ್ಣಯಕ್ಕೆ ಜನರು ಬಂದಿದ್ದಾರೆ.

ಇದರಲ್ಲಿಯೂ ಒಂದು ಭೀತಿ ಇದೆ. ಬಹುನಾಯಕತ್ವವಾಗುವುದೇ ಅದು. ಬಹುನಾಯಕತ್ವಕ್ಕೂ ಅನಾಯಕತ್ವಕ್ಕೂ ಪರಿಣಾಮದಲ್ಲಿ ವ್ಯತ್ಯಾಸವೇನೂ ಇಲ್ಲ.

ಸಂಸ್ಥೆಯ ಸದಸ್ಯರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದಾಗ, ಅವರ ಸಲಹೆಗಳಲ್ಲೊಂದನ್ನು ಅಂಗೀಕರಿಸುವ ಅಧಿಕಾರವು ನಾಯಕನಿಗಿರಬೇಕು. ಅವನ ನಿರ್ಣಯವನ್ನು ಆಗ ಎಲ್ಲರೂ ಒಂದೇ ಮನಸ್ಸಿನಿಂದ ಒಪ್ಪಿಕೊಂಡಲ್ಲಿ ಮಾತ್ರ ಆ ಸಂಸ್ಥೆ ಯಶಸ್ವಿಯಾಗುತ್ತದೆ.

ರಾಮಾಯಣದಲ್ಲಿ ವಿಭೀಷಣನ ಶರಣಾಗತಿಯನ್ನು ಒಪ್ಪಿಕೊಳ್ಳುವ ವಿಷಯವಾಗಿ ಕಪಿನಾಯಕರಲ್ಲಿ ಭಿನ್ನಾಭಿಪ್ರಾಯವು ತಲೆದೋರಿತು. ಶ್ರೀರಾಮನ ಅಭಿಪ್ರಾಯವೇ ನಿರ್ಣಾಯಕವಾಯಿತು. ಯುದ್ಧದಲ್ಲಿ ಜಯ ಲಭಿಸಿತು. ಪಾಂಡವರು ವನವಾಸದಲ್ಲಿದ್ದಾಗ ಭೀಮ, ಅರ್ಜುನ, ದ್ರೌಪದಿಯರು ಕೆಲವು ಅಂಶಗಳಲ್ಲಿ ಭಿನ್ನಾಭಿಪ್ರಾಯಗಳನ್ನು ತಳೆದಿದ್ದರು. ಆದರೆ ಧರ್ಮರಾಜನ ತೀರ್ಪನ್ನು ಎಲ್ಲರೂ ಒಪ್ಪಿಕೊಳ್ಳುತ್ತಿದ್ದರು. ಭಾರತಯುದ್ಧದಲ್ಲಿ ಶ್ರೀಕೃಷ್ಣನ ತೀರ್ಪು ನಿರ್ಣಾಯಕವಾಗುತ್ತಿತ್ತು. ಪಾಂಡವರಿಗೆ ಜಯವಾಯಿತು.

ಈ ನೀತಿಯನ್ನು ಪ್ರಸಕ್ತ ಕೇಂದ್ರಸರ್ಕಾರದೊಡನೆ ಹೋಲಿಸಿನೋಡಬಹುದು.

**ಭಾರೋಽವಿವೇಕಿನಃ ಶಾಸ್ತ್ರಂ ಭಾರೋ ಜ್ಞಾನಂ ಚ ರಾಗಿಣಃ ।**
**ಅಶಾಂತಸ್ಯ ಮನೋ ಭಾರೋ ಭಾರೋಽನಾತ್ಮವಿದೋ ವಪುಃ ॥೮೨॥**

— *ಯೋಗವಾಸಿಷ್ಠ, ವೈರಾಗ್ಯ, ೧೩-೧೩*

"ವಿಚಾರವನ್ನು ಮಾಡದ ಅವಿವೇಕಿಗೆ ಶಾಸ್ತ್ರವು ಭಾರವೇ. ಸಂಸಾರದ ವ್ಯಾಮೋಹವಿರತಕ್ಕವನಿಗೆ ತತ್ತ್ವಜ್ಞಾನವು ಭಾರವೇ. ಶಾಂತಿಯಿಲ್ಲದವನಿಗೆ ಮನಸ್ಸೇ ಹೊರೆಯಾಗುತ್ತದೆ. ಆತ್ಮಜ್ಞಾನವನ್ನು ಪಡೆದುಕೊಳ್ಳದವನಿಗೆ ದೇಹವೇ ಹೊರೆ."

ಇದು ವಿಪುಲಾರ್ಥಗಳನ್ನೊಳಗೊಂಡ ಸೂಕ್ತಿ. ಇದರ ಅರ್ಥವ್ಯಾಪ್ತಿಯು ದೊಡ್ಡದು. ಹಲವು ವಿಧದಲ್ಲಿ ಇದನ್ನು ವಿವರಿಸಲು ಸಾಧ್ಯವಿದೆ. ಶಾಸ್ತ್ರಾಭ್ಯಾಸವನ್ನು ಮಾಡುವುದರಿಂದ ವಿಚಾರಶಕ್ತಿಯು ಬೆಳೆಯುತ್ತದೆ. 'ಪ್ರಜ್ಞಾವಿವೇಕಂ ಲಭತೇ ವಿಭಿನ್ನಾಗಮದರ್ಶನೈಃ' ಎಂದು ಭರ್ತೃಹರಿಯು ವಾಕ್ಯಪದೀಯದಲ್ಲಿ ಹೇಳಿದ್ದಾನೆ. ಬೇರೆಬೇರೆ ಶಾಸ್ತ್ರಗಳನ್ನೋದುವುದರಿಂದ ಮನುಷ್ಯನ ವಿಚಾರಶಕ್ತಿಯು ಬೆಳೆಯುತ್ತದೆ ಎಂದು ತಾತ್ಪರ್ಯ. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಯಾವುದು ಕರ್ತವ್ಯ, ಯಾವುದು ಕರ್ತವ್ಯವಲ್ಲ - ಇತ್ಯಾದಿ ವಿವೇಕವು ಬೆಳೆದಾಗ ಆತನ ವಿದ್ಯಾಭ್ಯಾಸವು ಸಾರ್ಥಕವಾದಂತೆ. ಅದಿಲ್ಲದೆ ದುಡುಕಿ ಇಷ್ಟಬಂದಂತೆ ಮಾಡುವವನಿಗೆ ಶಾಸ್ತ್ರಾಧ್ಯಯನವು ನಿಷ್ಫಲವೇ. ತತ್ತ್ವಜ್ಞಾನದಿಂದ ಮಾನವನ ವ್ಯಾಮೋಹವು ತೊಲಗಬೇಕು. ಶೋಕಮೋಹಗಳ ನಿವೃತ್ತಿಯಾಗುವುದೇ ತತ್ತ್ವಜ್ಞಾನದ ಫಲ. ಅದನ್ನು ಸಾಧಿಸಿಕೊಳ್ಳದೆಹೋದಾಗ, ಗಳಿಸಿದ ಜ್ಞಾನವು ವ್ಯರ್ಥವೇ ಸರಿ.

ಸರ್ವರೂ ಸುಖವನ್ನು ಬಯಸುತ್ತಾರೆ. ಹಣದಿಂದ ಸುಖವು ಲಭಿಸುತ್ತದೆ ಎನ್ನುವುದು ಭ್ರಮೆ. ಧನಿಕನಿಗೂ ನಾನಾ ಚಿಂತೆಗಳು ಕಾಡುತ್ತಲೇ ಇರುತ್ತವೆ. ಅವನು ಭೋಗಸಾಮಗ್ರಿಗಳನ್ನು ಗಳಿಸಿದಷ್ಟೂ ಆಸೆ ಹೆಚ್ಚುತ್ತಲೇ ಹೋಗುವುದು. ಮನಸ್ಸಿನ ಶಾಂತಿ ಕದಡಿಹೋಗುತ್ತದೆ. ಮನಃಶಾಂತಿಯಿಲ್ಲದಾಗ ಸುಖವೆಲ್ಲಿಂದ ಬರಬೇಕು? 'ಅಶಾಂತಸ್ಯ ಕುತಃ ಸುಖಮ್' - ಶಾಂತಿಯಿಲ್ಲದವನಿಗೆ ಸುಖವೆಲ್ಲಿಯದು? ಶ್ರೀಮಂತರಾಷ್ಟ್ರವೆಂದು ಪ್ರಸಿದ್ಧವಾದ ಅಮೆರಿಕದಲ್ಲಿರುವಷ್ಟು ಆತ್ಮಹತ್ಯೆಯ ಪ್ರಕರಣಗಳು ಇನ್ನಾವ ರಾಷ್ಟ್ರದಲ್ಲೂ ಇಲ್ಲ. ಅಲ್ಪ ಕಾರಣಕ್ಕಾಗಿ ಕೊಲೆಗಳ ಸರಮಾಲೆಯೇ ನಡೆಯುತ್ತಲಿದೆ. ಮನಸ್ಸಿಗೆ ನೆಮ್ಮದಿಯಿಲ್ಲದಿರುವುದೇ ಇದಕ್ಕೆ ಕಾರಣ. ತೃಪ್ತಿಯಿಲ್ಲದೆ ನೆಮ್ಮದಿ ಇಲ್ಲ. ಮದ್ಯವನ್ನು ಕುಡಿಯುವುದೂ, ನಾನಾ ಮಾದಕದ್ರವ್ಯಗಳನ್ನು ಸೇವಿಸುವುದೂ ಮನಃಶಾಂತಿ ಇಲ್ಲದ್ದರಿಂದ. ಯಾವ ಬಗೆಯಿಂದಲೂ ಮನಃಶಾಂತಿಯು ದೊರಕದೆಹೋದಾಗ ಆತ್ಮಹತ್ಯೆಗೆ ತೊಡಗುತ್ತಾರೆ. ನಿದ್ರೆಯಲ್ಲಾದರೂ ಶಾಂತಿಯು

ಲಭಿಸಲೆಂದರೆ, ನಿದ್ರೆಯೇ ಬರುವುದಿಲ್ಲ. ನಿದ್ರೆಯ ಗುಳಿಗೆಯ ಸೇವನೆ ಆರಂಭವಾಗುತ್ತದೆ. ಅಶಾಂತಿಗೆ ಕಾರಣವಾದ ಮನಸ್ಸೇ ಅವನಿಗೆ ಹೊರೆ.

ನಮಗೆ ಕಣ್ಣು, ಕೈ, ಕಾಲು ಮೊದಲಾದ ಇಂದ್ರಿಯಗಳು ಲಭಿಸಿವೆ. ಜ್ಞಾನಶಕ್ತಿ ಇದೆ. ಇನ್ನಾವ ಪ್ರಾಣಿಗೂ ಇಲ್ಲದಷ್ಟು ಸೌಕರ್ಯಗಳು ಮನುಷ್ಯನಿಗೆ ದೊರಕಿವೆ. ಮನುಷ್ಯನು ಬಾಹ್ಯದಲ್ಲಿರುವ ಎಲ್ಲ ವಸ್ತುಗಳನ್ನೂ ಪರೀಕ್ಷಿಸಿ ನೋಡಲು ಪ್ರಯತ್ನಿಸುತ್ತಾನೆ. ವಿಜ್ಞಾನವು ಮಾಡುತ್ತಿರುವ ಕೆಲಸ ಅದೇ. ತನ್ನ ಆವಶ್ಯಕತೆಗಳನ್ನು ಪೂರ್ಣಮಾಡಿಕೊಳ್ಳುವಷ್ಟು ವಿಜ್ಞಾನವು ಅಗತ್ಯವೇ ಹೌದು. ಅದಕ್ಕಿಂತ ಹೆಚ್ಚು ಬೆಳೆದರೆ, ಜಗತ್ತಿಗೆ ವಿಪತ್ತು ನಿಶ್ಚಿತ. ಹೊರಗೆ ಹುಡುಕತಕ್ಕವನು ತಾನು ಯಾರೆಂಬುದನ್ನೇ ಹುಡುಕಿ ತಿಳಿದುಕೊಂಡಿಲ್ಲ. ಆತ್ಮಜ್ಞಾನವನ್ನು ಪಡೆದುಕೊಳ್ಳುವುದೇ ಮನುಷ್ಯನ ಪರಮಧ್ಯೇಯವಾಗಬೇಕು. ಆಗ ಮಾತ್ರ ಸಕಲ ಸೌಕರ್ಯಗಳನ್ನೂ ಪಡೆದುಕೊಂಡಿರುವ ಮನುಷ್ಯದೇಹವು ಸಾರ್ಥಕವಾದೀತು. ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳಲು ಯಾವನು ಪ್ರಯತ್ನಿಸುವುದಿಲ್ಲವೋ, ಅವನಿಗೆ ಈ ದೇಹವು ಬಂದದ್ದೇ ಹೊರೆಯೆನ್ನುವುದು ಉಚಿತ.

**ಕ್ಷೀಣಃ ಕ್ಷೀಣಃ ಸಮೀಪತ್ವಂ ಪೂರ್ಣಃ ಪೂರ್ಣೋऽತಿದೂರತಾಂ ।**
**ಉಪೈತಿ ಮಿತ್ರಾದ್ಯಚ್ಚಂದ್ರೋ ಯುಕ್ತಂ ತನ್ಮಲಿನಾತ್ಮನಃ ॥೬೩॥**

— *ಸುಭಾಷಿತರತ್ನ-ಭಾಂಡಾಗಾರ*

"ಚಂದ್ರನು ಕ್ಷೀಣನಾದಷ್ಟೂ ಮಿತ್ರನಾದ ಸೂರ್ಯನ ಹತ್ತಿರಕ್ಕೆ ಬರುತ್ತಾ ಇರುತ್ತಾನೆ. ಮೈಯಲ್ಲಿ ತುಂಬಿಕೊಂಡು ಪೂರ್ಣನಾದಂತೆಲ್ಲ ದೂರದೂರಕ್ಕೆ ಹೋಗಿಬಿಡುತ್ತಾನೆ. ಕಳಂಕಿತನಾದ ಆತನಿಗೆ ಆ ಸ್ವಭಾವವು ಯುಕ್ತವೇ ಹೌದು."

ಹುಣ್ಣಿಮೆಯಾದಮೇಲೆ ಕೃಷ್ಣಪಕ್ಷದಲ್ಲಿ ಚಂದ್ರನು ತನ್ನ ಷೋಡಶಕಲೆಗಳಲ್ಲಿ ಒಂದೊಂದನ್ನೂ ಕಳೆದುಕೊಂಡು ಪ್ರತಿದಿನವೂ ಕ್ಷೀಣನಾಗುತ್ತಾನೆ. ಕ್ಷೀಣನಾದಷ್ಟೂ ಸೂರ್ಯನ ಹತ್ತಿರಕ್ಕೆ ಬರುತ್ತಾನೆ. ರಾತ್ರಿಯ ಹೊತ್ತು ಚಂದ್ರಗತಿಯನ್ನು ಪರೀಕ್ಷಿಸಿದರೆ ಇದು ಗೊತ್ತಾಗುತ್ತದೆ. ಅಮಾವಾಸ್ಯೆಯ ದಿನವಂತೂ ಸೂರ್ಯನ ಬಳಿಯಲ್ಲಿ ಮರೆಯಾಗಿ ಕಾಣಿಸುವುದೇ ಇಲ್ಲ. ಅನಂತರ ಶುಕ್ಲಪಕ್ಷದಲ್ಲಿ ದಿನದಿನವೂ

ಸೂರ್ಯರಶ್ಮಿಗಳಿಂದ ಪೂರ್ಣನಾಗುತ್ತಾನೆ. ಪೂರ್ಣನಾದಷ್ಟೂ ಸೂರ್ಯನಿಂದ ದೂರ ಹೋಗಿ ಹುಣ್ಣಿಮೆಯ ರಾತ್ರಿ ನೇರವಾಗಿ ಸೂರ್ಯನಿಗೆ ಎದುರಾಳಿಯಾಗಿಬಿಡುತ್ತಾನೆ. ಸೂರ್ಯನಿಂದ ಹೀಗೆ ಸಹಾಯವನ್ನು ಪಡೆದು ಅವನನ್ನೇ ದೂರಮಾಡುವುದು ಯುಕ್ತವೇ? - ಎಂದರೆ, ಹೌದು, ಮಲಿನಮನಸ್ಸಿನ ಕೃತಘ್ನರ ಸ್ವಭಾವವೇ ಇಂತಹದು - ಎಂದು ಉತ್ತರ.

'ಮಿತ್ರ' ಶಬ್ದಕ್ಕೆ ಸೂರ್ಯನೆಂದೂ ಸ್ನೇಹಿತನೆಂದೂ ಎರಡು ಅರ್ಥಗಳಿವೆ. ಚಂದ್ರನಲ್ಲಿ ಕಪ್ಪಾದ ಕಳಂಕವು ಇರುವುದರಿಂದ ಅವನು ಮಲಿನಾತ್ಮ-ಮಲಿನಶರೀರ. ಕೃತಘ್ನತೆಯಿಂದ ತುಂಬಿದ ಕೊಳಕುಮನಸ್ಸಿನವನು ಮಲಿನಾತ್ಮ. ಚಂದ್ರನಿಗೆ ಸ್ವಯಂಪ್ರಕಾಶವಿಲ್ಲ. ಸೂರ್ಯರಶ್ಮಿಗಳನ್ನು ಪಡೆದು ಅವನು ಪ್ರಕಾಶಿಸುತ್ತಾನೆ. ಸೂರ್ಯರಶ್ಮಿಗಳೇ ಚಂದ್ರನ ಮೇಲೆ ಬಿದ್ದು ಪ್ರತಿಫಲಿತವಾಗಿ ಭೂಮಿಯ ಕಡೆಗೆ ಬಂದಾಗ ಬೆಳದಿಂಗಳೆನಿಸುತ್ತವೆ. ಕೃತಘ್ನನು ಕಷ್ಟಬಂದಾಗ ಸ್ನೇಹಿತನ ಮನೆಗೆ ಹೋಗಿ ಅವನನ್ನು ಓಲೈಸಿ ಹಣವನ್ನು ಪಡೆದು ಮರೆಯಾಗುತ್ತಾನೆ. ತನ್ನ ಕೆಲಸವಾದ ಮೇಲೆ ಸ್ನೇಹಿತನನ್ನು ಬಿಟ್ಟು ದೂರಸರಿಯುತ್ತಾನೆ. ಇದನ್ನು ಚಿತ್ರಿಸುವುದಕ್ಕೆ ಕವಿಯು ಸುಂದರವಾದ ಉದಾಹರಣೆಯನ್ನು ತೆಗೆದುಕೊಂಡಿದ್ದಾನೆ.

ಕೃತಘ್ನರ ಸ್ವಭಾವವನ್ನು ವರ್ಣಿಸುವುದು ಕವಿಯ ಉದ್ದೇಶ. ವರ್ಣಿಸಿರುವುದು ಚಂದ್ರನನ್ನು. ಆದ್ದರಿಂದ ಇದಕ್ಕೆ ಅನ್ಯೋಕ್ತಿಯೆಂದು ಹೆಸರು. ಇದು ಅಪ್ರಸ್ತುತ ಪ್ರಶಂಸೆಯೆಂಬ ಕಾವ್ಯಾಲಂಕಾರದಲ್ಲಿ ಸೇರುತ್ತದೆ. ಅಪ್ರಸ್ತುತನಾದ ಚಂದ್ರನನ್ನು ವರ್ಣಿಸಿ ಪ್ರಸ್ತುತನಾದ ಕೃತಘ್ನನ ಸ್ವಭಾವವನ್ನು ವ್ಯಕ್ತಗೊಳಿಸಿದ್ದರಿಂದ ಈ ಹೆಸರು ಬಂದಿದೆ. ಸಂಸ್ಕೃತಸಾಹಿತ್ಯದಲ್ಲಿ ಈ ಬಗೆಯ ಅನ್ಯೋಕ್ತಿಗಳು ಅಪಾರವಾಗಿವೆ.

ವಿತ್ತಂ ಬಂಧುರ್ವಯಃ ಕರ್ಮ ವಿದ್ಯಾ ಭವತಿ ಪಂಚಮೀ ।
ಏತಾನಿ ಮಾನ್ಯಸ್ಥಾನಾನಿ ಗರೀಯೋ ಯದ್ಯದುತ್ತರಮ್ ॥೮೮॥

— *ಮನುಸ್ಮೃತಿ, ೨-೧೩೬*

"ಐಶ್ವರ್ಯ, ಬಂಧುತ್ವ, ವಯಸ್ಸು, ಆಚರಿಸುವ ಕಾರ್ಯ, ವಿದ್ಯೆ - ಈ ಐದು ಗೌರವಕ್ಕೆ ಪಾತ್ರವಾದವು. ಇವುಗಳಲ್ಲಿ ಹಿಂದಿನದಕ್ಕಿಂತ ಮುಂದೆಮುಂದಿನದು ಹೆಚ್ಚಿನದು."

ಪ್ರತಿಯೊಬ್ಬ ಮನುಷ್ಯನೂ ಸಮಾಜದಲ್ಲಿ ತನಗೊಂದು ಗೌರವ ಸ್ಥಾನವಿದೆಯೆಂದು ತಿಳಿದುಕೊಂಡಿದ್ದಾನೆ. ಇದೇ ಆತ್ಮಗೌರವ (self-respect). ಗೌರವವೆಂಬ ಶಬ್ದವು 'ಗುರು'ವಿನಿಂದ ಬಂದಿದೆ. ಗುರುವಿಗೆ ಸಲ್ಲಬೇಕಾದ ಮಾನ್ಯತೆ ಗೌರವ. ವಿದ್ಯಾಗುರುವಿಗೆ ಸಲ್ಲಬೇಕಾದ ಮರ್ಯಾದೆ ಇದು. ಕ್ರಮವಾಗಿ ಈ ಶಬ್ದದ ಅರ್ಥವು ಸಡಲಿ ಹರಡಿಕೊಂಡಿತು.

ಗುರುವೆಂದರೆ ದೊಡ್ಡವನು, ಹಿರಿಯ, ಪ್ರತಿಷ್ಠಿತ, ಗಟ್ಟಿಗ, ತೂಕವುಳ್ಳದ್ದು - ಎಂಬ ಅರ್ಥವೂ ಇದೆ. ನಾಗರಿಕ ಸಮಾಜದಲ್ಲಿ ಎಲ್ಲರಿಗೂ ಅವರವರ ಯೋಗ್ಯಾತಾನುಸಾರವಾಗಿ ಮರ್ಯಾದೆಯು ಸಲ್ಲಬೇಕಾದದ್ದು ಯುಕ್ತವೇ. ಆದರೆ ಯಾವಯಾವ ನಿಮಿತ್ತದಿಂದ ಇದು ಸಲ್ಲುತ್ತದೆ? ಸಲ್ಲಿಕೆಯಲ್ಲಿ ತಾರತಮ್ಯವೂ ಉಂಟೇ? - ಎಂಬ ಪ್ರಶ್ನೆಗೆ ಉತ್ತರವಾಗಿ ಮೇಲ್ಕಂಡ ಮನುಸ್ಮೃತಿಯ ವಚನವಿದೆ. ಶ್ರೀಮಂತ, ಅತ್ತೆ ಮಾವ ಮೊದಲಾದ ಬಂಧು, ವಯಸ್ಸಿನಲ್ಲಿ ಹಿರಿಯನಾದವನು, ಶಾಸ್ತ್ರೋಕ್ತವಾದ ಕರ್ಮಾಚರಣೆಯನ್ನಿಟ್ಟುಕೊಂಡವನು - ಇವರೂ ಸಹ ವಿದ್ಯಾ ಗುರುವಿನಂತೆ ಮಾನ್ಯರು. ಶ್ರೀಮಂತನಿಗಿಂತ ಬಂಧುವಿಗೆ, ಅವನಿಗಿಂತ ವಯಸ್ಸಿನಲ್ಲಿ ಅಧಿಕನಾದ ಹಿರಿಯನಿಗೆ, ಹಿರಿಯನಿಗಿಂತಲೂ ವಿಹಿತಕರ್ಮಗಳನ್ನು ಸರಿಯಾಗಿ ಪಾಲಿಸತಕ್ಕವನಿಗೆ, ಆತನಿಗಿಂತಲೂ ವಿದ್ಯಾಗುರುವಿಗೆ ಅಧಿಕವಾದ ಮರ್ಯಾದೆಯು ಸಲ್ಲಬೇಕೆಂದು ಮನುಸ್ಮೃತಿಯು ವಿಧಿಸಿದೆ. ಹಣಕ್ಕೆ ಕನಿಷ್ಠಸ್ಥಾನವನ್ನೂ ವಿದ್ಯೆಗೆ ಗರಿಷ್ಠಸ್ಥಾನವನ್ನೂ ಕೊಡಲಾಗಿದೆ - ಎಂಬುದನ್ನು ಗಮನಿಸಬೇಕು.

ಆಪಸ್ತಂಬಧರ್ಮಸೂತ್ರದಲ್ಲಿ ವಿದ್ಯೆಗಿಂತ ವಯಸ್ಸು ಅಧಿಕಮಾನ್ಯವೆಂದೂ ವಯಸ್ಸಿಗಿಂತ ವೇದಾರ್ಥವಿಜ್ಞಾನವು ಅಧಿಕವೆಂದೂ ಹೇಳಿದೆ. "ಶ್ರುತಂ ತು ಸರ್ವೇಭ್ಯೋ ಗರೀಯಃ". ಶ್ರುತ = ವೇದಾರ್ಥವಿಜ್ಞಾನ. ಆದ್ದರಿಂದ ಮನುಸ್ಮೃತಿಯಲ್ಲಿಯೂ ವಿದ್ಯೆ ಎಂದರೆ ಶ್ರುತವೆಂದು ತಿಳಿಯಬೇಕು. ಧರ್ಮಸೂತ್ರದ ಪ್ರಕಾರ, ಶಾಸ್ತ್ರಜ್ಞನಾದ ವಿದ್ವಾಂಸನಿಗಿಂತ ವಯಸ್ಸಿನಿಂದ ಅಧಿಕನೂ ಅವನಿಗಿಂತ ವೇದಾರ್ಥವಿಜ್ಞಾನಿಯೂ ಪೂಜ್ಯರಾಗುತ್ತಾರೆ. ಕರ್ಮವೆಂದರೆ ಶಾಸ್ತ್ರವಿಹಿತ ಕರ್ಮಾಚರಣೆ.

ಈ ಕ್ರಮವು ದೇಶಕಾಲಗಳ ಮಹಿಮೆಯಿಂದ ಬದಲಾಯಿಸುತ್ತಿದೆ. ಈಗ ಕರ್ಮವೆಂದರೆ ಸರ್ಕಾರದಲ್ಲಿರುವ ಅಧಿಕಾರ. ಈ ಅಧಿಕಾರಸಂಪತ್ತಿಗೆ ಸರ್ವಗರಿಷ್ಠವಾದ ಮಾನ್ಯತೆ. ಎರಡನೆಯ ಸ್ಥಾನವು ಐಶ್ವರ್ಯಕ್ಕೆ. ವಿದ್ಯೆಗೆ ಕನಿಷ್ಠಸ್ಥಾನ! ಶ್ರುತಕ್ಕೆ ಯಾವ ಪೂಜ್ಯ ಸ್ಥಾನವೂ ಇಲ್ಲ; ಸದ್ಯಕ್ಕೆ ಹಿಂಮೂಸ್ಥಾನದಲ್ಲಿ ನಿಂದಾಸ್ಥಾನ ಉಂಟು!

ಪ್ರಾತರ್ದ್ಯೂತಪ್ರಸಂಗೇನ ಮಧ್ಯಾಹ್ನೇ ಸ್ತ್ರೀಪ್ರಸಂಗತಃ ।
ರಾತ್ರೌ ಚೌರ್ಯಪ್ರಸಂಗೇನ ಕಾಲೋ ಗಚ್ಛತಿ ಧೀಮತಾಮ್ ॥೮೫॥

— ಅಜ್ಞಾತಮೂಲ

"ಬೆಳಗಿನಲ್ಲಿ ಜೂಜಾಡುವುದರಿಂದಲೂ, ಮಧ್ಯಾಹ್ನದಲ್ಲಿ ಸ್ತ್ರೀಸಂಬಂಧಿಯಾದ ವ್ಯವಹಾರದಿಂದಲೂ, ರಾತ್ರಿಯಲ್ಲಿ ಕಳ್ಳತನದ ಕಥೆಯಿಂದಲೂ ಬುದ್ಧಿಶಾಲಿಗಳು ತಮ್ಮ ಕಾಲವನ್ನು ಕಳೆಯುತ್ತಾರೆ!"

ಇದೊಂದು ಚಮತ್ಕಾರಿಯಾದ ಶ್ಲೋಕ. ಇದರ ನಿಜವಾದ ಅರ್ಥ ಬೇರೆ. ಮಹಾಭಾರತದಲ್ಲಿ ಕೌರವ-ಪಾಂಡವರು ಜೂಜಾಡುವ ಪ್ರಸಂಗದ ವರ್ಣನೆಯುಂಟು. ಈ ದ್ಯೂತಪ್ರಸಂಗವೇ ಮಹಾಭಾರತದ ಕಥೆಗೆ ಮೂಲಕಾರಣ. ಶ್ರೀಮದ್ರಾಮಾಯಣದಲ್ಲಿ ಸ್ತ್ರೀಪ್ರಸಂಗವು ಮುಖ್ಯವಾಗಿದೆ. ಕಾಮಲಂಪಟನಾದ ರಾವಣನು ಸೀತಾಪಹರಣ ಮಾಡಿದ್ದರಿಂದ ರಾಮಾಯಣದ ಕಥೆ ಬೆಳೆದಿದೆ. ಭಾಗವತದಲ್ಲಿ ಶ್ರೀಕೃಷ್ಣನು ಬೆಣ್ಣೆಯನ್ನು ಕದಿಯುತ್ತಿದ್ದನೆಂಬ ಕಥೆಯುಂಟು. ನಮ್ಮ ಸಾಹಿತ್ಯದಲ್ಲಿ ತುಂಬ ಪ್ರಸಿದ್ಧಿಯನ್ನು ಪಡೆದ ಗ್ರಂಥಗಳು ಈ ಮೂರು. ರಾಮಾಯಣ, ಭಾರತ, ಭಾಗವತಗಳನ್ನು ಓದುವುದು, ಕೇಳುವುದು - ಈ ಪ್ರಕಾರವಾಗಿ ಸಜ್ಜನರು ತಮಗಿರುವ ಕಾಲವನ್ನು ವಿನಿಯೋಗಿಸಬೇಕು. ಇದು ಬುದ್ಧಿವಂತರ ಲಕ್ಷಣ - ಎಂದು ಅಭಿಪ್ರಾಯ.

'ಪ್ರಗತಿಶೀಲ'ರಾದ ವಿಚಾರವಾದಿಗಳು ಈ ವ್ಯಾಖ್ಯಾನವನ್ನು ಒಪ್ಪುವುದಿಲ್ಲ. ಅವರ ವಿಚಾರ ಹೀಗೆ: ಅರ್ಥಕಾಮಗಳೆರಡೇ ನಾವು ಸಾಧಿಸಬೇಕಾದ ಪುರುಷಾರ್ಥಗಳು. ಜೀವಾತ್ಮನನ್ನೂ ಜನ್ಮಾಂತರವನ್ನೂ ನಾವು ಒಪ್ಪುವುದಿಲ್ಲವಾದ್ದರಿಂದ ಮೋಕ್ಷದ ಕಲ್ಪನೆಗೆ ಬುಡವಿಲ್ಲ. ಮೋಕ್ಷವಿಲ್ಲದ ಮೇಲೆ ಧರ್ಮದ ಕಲ್ಪನೆ ಅನಾವಶ್ಯಕ. ನಮ್ಮದು ಧರ್ಮನಿರಪೇಕ್ಷವಾದ ರಾಜ್ಯ. ಆದ್ದರಿಂದಲೇ ಧರ್ಮಶಾಸ್ತ್ರವನ್ನು ಲೆಕ್ಕಿಸದೆ ಹೊಸಹೊಸ ಕಾನೂನುಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಸಂವಿಧಾನವನ್ನು ಸಹ ನಾವು ಬದಲಾಯಿಸುತ್ತಿದ್ದೇವೆ. ಮೇಲ್ಕಂಡ ನೀತಿಶ್ಲೋಕವನ್ನು ಜಗ್ಗಾಡಿ ಇಲ್ಲದ ಅರ್ಥವನ್ನು ಕಲ್ಪಿಸುವುದೇಕೆ? ಯಥಾಶ್ರುತವಾದ ಅರ್ಥವೇ ಇದ್ದುಕೊಂಡಿರಲಿ. ದ್ಯೂತ, ಸ್ತ್ರೀಪ್ರಸಂಗ, ಚೌರ್ಯಾದಿಗಳಿಂದಲೇ ಅಲ್ಲವೆ ಅರ್ಥಕಾಮಗಳು ಸಿದ್ಧಿಸುವುದು? ಶ್ಲೋಕದ ಅರ್ಥವನ್ನು ಜಗ್ಗಾಡತಕ್ಕವರು ಬ್ರಹ್ಮಸೃಷ್ಟಿಯನ್ನೊಪ್ಪುವ ಮೂಢನಂಬಿಕೆಯವರು. ಈ ಶ್ಲೋಕಗಳನ್ನು ನೋಡಿ:

ಪ್ರಾತರ್ವಾರ್ತಾಪ್ರಸಂಗೇನ ಪೂರ್ವಾಹ್ಣೇ ಚಾರ್ಥಚಿಂತಯಾ ।
ತಲ್ಲಾಭಚಿಂತಯಾ ಪಶ್ಚಾತ್ ಪರಾಹ್ಣೇ ಮಿತ್ರಸಂಗತಃ ॥
ಸಾಯಂ ಮದ್ಯಪ್ರಸಂಗೇನ ದ್ಯೂತೇನ ಕಲಹೇನ ವಾ ।
ಕೂಟೋಪಾಯಪ್ರಯೋಗೇಣ ಪೂರ್ವರಾತ್ರೇ ಚರೇತ್ ಸುಧೀಃ ॥
ತತಃ ಕಾಮಪ್ರಸಂಗೇನ ನಿದ್ರಯಾ ಚ ನಿಶಾಂ ನಯೇತ್ ।
ಏವಂ ಜೀವನಸಾರ್ಥಕ್ಯಂ ಯಸ್ಯಾಸೌ ಪುರುಷೋತ್ತಮಃ ॥

ಪ್ರಾತಃಕಾಲದಲ್ಲಿ ವಾರ್ತಾಪತ್ರಿಕೆಗಳನ್ನೋದುವುದರಿಂದಲೂ ಆ ವಿಷಯವನ್ನು ಚರ್ಚಿಸುವುದರಿಂದಲೂ ಕಾಲವನ್ನು ಕಳೆಯಬೇಕು. ಅನಂತರ ಪೂರ್ವಾಹ್ಣದಲ್ಲಿ ಧನಪ್ರಾಪ್ತಿ ಹೇಗೆಂಬುದನ್ನು ಆಲೋಚಿಸುತ್ತ, ಮಧ್ಯಾಹ್ನದಲ್ಲಿ ಹಣದ ಗಳಿಕೆಗೆ ಉಪಾಯವೇನೆಂಬುದನ್ನು ನಿಶ್ಚಯಿಸಿಕೊಂಡು, ಅಪರಾಹ್ಣದಲ್ಲಿ ಮಿತ್ರರೊಡನೆ ಸಮಾಲೋಚಿಸಬೇಕು. ಸಾಯಂಕಾಲ ಮದ್ಯಪಾನ, ಜೂಜು ಅಥವಾ ಜಗಳಗಳಿಂದ ಮನೋರಂಜನೆಯನ್ನು ಪಡೆಯತಕ್ಕದ್ದು. ರಾತ್ರಿಯಾದೊಡನೆ ಇಷ್ಟಸಿದ್ಧಿಗಾಗಿ ಕಪಟೋಪಾಯವನ್ನು ಆಚರಿಸುವುದು ಯುಕ್ತ. ಮಧ್ಯರಾತ್ರಿಯಾದ ಮೇಲೆ ಕಾಮಪ್ರಸಂಗದಿಂದಲೂ ನಿದ್ರೆಯಿಂದಲೂ ರಾತ್ರಿಯನ್ನು ಕಳೆಯುವುದು ಉತ್ತಮ. ಈ ಪ್ರಕಾರದಲ್ಲಿ ಯಾವನು ಅರ್ಥಕಾಮಗಳನ್ನು ಗಳಿಸಿ ಭೋಗಿಸಿ ಜೀವನದಲ್ಲಿ ಸಾರ್ಥಕ್ಯವನ್ನು ಕಂಡುಕೊಳ್ಳುತ್ತಾನೋ ಆತನೇ ಪುರುಷೋತ್ತಮನೆನ್ನಬಹುದು.

ಇಂದಿಗೆ ಈ ಶ್ಲೋಕಗಳು ಪ್ರಮಾಣಭೂತವಾದವು. ಇದು ವಿಶ್ವಾಮಿತ್ರಸೃಷ್ಟಿ!

**ಗುಣೇಷು ಯತ್ನಃ ಕ್ರಿಯತಾಂ ಕಿಮಾಟೋಪೈಃ ಪ್ರಯೋಜನಮ್ ।**
**ವಿಕ್ರೀಯಂತೇ ನ ಘಂಟಾಭಿಃ ಗಾವಃ ಕ್ಷೀರವಿವರ್ಜಿತಾಃ ॥೮೬॥**

— ಅಜ್ಞಾತಮೂಲ

"ಗುಣಗಳ ಸಂಪಾದನೆಗಾಗಿ ಪ್ರಯತ್ನಿಸು. ಅಬ್ಬರ-ಆಡಂಬರಗಳಿಂದ ಯಾವ ಪ್ರಯೋಜನವಾದೀತು? ಹಸುಗಳಲ್ಲಿ ಹಾಲಿಲ್ಲದಿದ್ದರೆ ಬರಿಯ ಘಂಟಾನಾದದಿಂದ ಅವುಗಳ ಮಾರಾಟವಾಗುವುದಿಲ್ಲ."

ಹಣ, ಅಧಿಕಾರ, ಕೀರ್ತಿ - ಇವುಗಳಲ್ಲಿ ಮನುಷ್ಯನ ಆಸೆ ಅಧಿಕವಾಗಿರುತ್ತದೆ. ಈ ತ್ರಿಮೂರ್ತಿಗಳನ್ನು ಒಲಿಸಿಕೊಳ್ಳುವುದೇ ಜೀವನದ ಗುರಿಯೆಂದು ತಿಳಿದವರಿದ್ದಾರೆ.

ಇವುಗಳಲ್ಲಿ ಹಣದ ಮೇಲಿನ ವ್ಯಾಮೋಹ ಅಧಿಕವಾದದ್ದು. ಸಕಲ ಸುಖಪ್ರಾಪ್ತಿಯೂ ಹಣಕ್ಕೆ ಅಧೀನವಾಗಿದೆಯೆಂಬ ನಂಬಿಕೆ ಇದಕ್ಕೆ ಕಾರಣ. ಅರ್ಹತೆಯಿಲ್ಲದೆ ಧನಸಂಪಾದನೆಯಾಗುವುದಿಲ್ಲ. ಅರ್ಹತೆ ಅನ್ಯಾಯದ ಮೂಲಕವಾದರೂ ನಡೆಯುತ್ತದೆ. ಕಳ್ಳತನ, ವಂಚನೆ ಮೊದಲಾದ್ದರಿಂದಲೂ ಧನವನ್ನು ಗಳಿಸುತ್ತಾರೆ. ಅದಕ್ಕೂ ಒಂದು ಸಾಮರ್ಥ್ಯವು ಬೇಕು! ಎಲ್ಲರಿಗೂ ಅದು ಸಾಧ್ಯವಾದದ್ದಲ್ಲ.

ಅಧಿಕಾರ, ಕೀರ್ತಿಗಳ ಗಳಿಕೆಗೂ ಅರ್ಹತೆ ಬೇಕು. ಬರಿಯ ಅಬ್ಬರ-ಆಡಂಬರಗಳಿಂದ ಇವು ದೊರೆಯಲಾರವೆಂದು ಈ ನೀತಿಶ್ಲೋಕದ ಹೇಳಿಕೆ. ಹಸುಗಳಲ್ಲಿ ಹಾಲಿಲ್ಲದಿದ್ದರೆ, ಅವುಗಳ ಕೊರಳಿಗೆ ಕಟ್ಟಿದ ಗಂಟೆಯ ಶಬ್ದಕ್ಕೆ ಮರುಳಾಗಿ ಯಾರೂ ಅವನ್ನು ಕೊಳ್ಳುವುದಿಲ್ಲ - ಎಂಬ ದೃಷ್ಟಾಂತವೇನೋ ಸರಿಯಾಗಿದೆ. ಹಿಂದೆ ಏಕಸ್ವಾಮ್ಯದ ರಾಜರ ಆಡಳಿತವಿದ್ದಾಗ ಈ ಹೇಳಿಕೆ ಸತ್ಯವಾಗಿದ್ದೀತು. ತಕ್ಕ ಸಾಮರ್ಥ್ಯವಿಲ್ಲದವರನ್ನು ಅಧಿಕಾರಕ್ಕೇರಿಸಿದರೆ ತಮ್ಮ ಆಡಳಿತವೇ ಕೆಡುತ್ತದೆ ಎಂಬ ಅರಿವು ರಾಜರಿಗಿತ್ತು. ಉತ್ತಮವಾದ ವಿದ್ಯಾರ್ಹತೆಯಿಲ್ಲದವರನ್ನು ಅವರು ತಮ್ಮ ಆಸ್ಥಾನಗಳಿಗೆ ಸೇರಿಸುತ್ತಿರಲಿಲ್ಲ.

ಈಗ ಕಾಲ ಬದಲಾಯಿಸಿದೆ. ಈಗಿನ ಪ್ರಜಾತಂತ್ರದಲ್ಲಿ ಯಾರ ಆಡಳಿತ ಕೆಡುತ್ತದೆ? ಯಾರ ಆಸ್ಥಾನಕ್ಕೆ ಅಪಕೀರ್ತಿ ಬರುತ್ತದೆ? ಜಾಹಿರಾತಿನ ಘಂಟಾನಾದ ದಿಂದಲೇ ಪದಾರ್ಥಗಳ ವ್ಯಾಪಾರವು ಹೆಚ್ಚುತ್ತಿದೆಯಲ್ಲವೆ? ರಾಜಕೀಯಸ್ಥನು ನಯವಂಚನೆಗಳಿಂದ ಮತಗಳನ್ನು ಗಳಿಸಿ ಅಧಿಕಾರಕ್ಕೆ ಏರುತ್ತಾನೆ. ನಾನಾ ಪ್ರಶಸ್ತಿಗಳನ್ನು ಗಳಿಸಿ ಕೀರ್ತಿವಂತರಾಗಿರುವವರ ಪಟ್ಟಿಗಳನ್ನು ಸರ್ಕಾರವು ಪ್ರಕಟಿಸುತ್ತಲೇ ಇರುತ್ತದೆ. ಪಟ್ಟಿಯಲ್ಲಿರತಕ್ಕವರ ನಾಮಧೇಯಗಳನ್ನು ಗಮನಿಸಿದಾಗ ಒಂದು ಪ್ರಾಚೀನ ಶ್ಲೋಕವು ನೆನಪಿಗೆ ಬರುತ್ತದೆ:

**ಕಾಚಂ ಮಣಿಂ ಕಾಂಚನಮೇಕಸೂತ್ರೇ**
**ಗ್ರಥ್ನಾತಿ ಬಾಲಾ ನ ಹಿ ತದ್ವಿಚಿತ್ರಮ್ ।**
**ವಿಶೇಷವಿತ್ ಪಾಣಿನಿರೇಕಸೂತ್ರೇ**
**ಶ್ವಾನಂ ಯುವಾನಂ ಮಘವಾನಮಾಹ ॥**

"ಒಬ್ಬ ಹುಡುಗಿ ಹಾರವನ್ನು ಮಾಡುವಾಗ ಒಂದೇ ದಾರದಲ್ಲಿ ಗಾಜಿನಮಣಿ, ಹವಳ ಮೊದಲಾದ ಉತ್ತಮ ಮಣಿ, ಚಿನ್ನದ ಗುಂಡುಗಳನ್ನು ಒಟ್ಟಿಗೆ ಸೇರಿಸಿಬಿಡುತ್ತಾಳೆ.

ಇದೇನೂ ಅಚ್ಚರಿಯಲ್ಲ; ಹುಡುಗಿ ತಾರತಮ್ಯವನ್ನರಿಯದವಳು. ಆದರೆ ವಿದ್ವಾಂಸನಾದ ಪಾಣಿನಿ ಒಂದೇ ಸೂತ್ರದಲ್ಲಿ (ದಾರದಲ್ಲಿ) ನಾಯಿ, ಯುವಕ, ದೇವೇಂದ್ರ - ಇವರನ್ನು ಸೇರಿಸಿಬಿಟ್ಟಿದ್ದಾನಲ್ಲ!"

(ಟಿಪ್ಪಣಿ : ಪಾಣಿನಿಯು 'ಶ್ವಯುವಮಘೋನಮತದ್ಧಿತೇ' ಎಂಬ ವ್ಯಾಕರಣ ಸೂತ್ರವನ್ನು ರಚಿಸಿದ್ದಾನೆ. ಶ್ವ=ನಾಯಿ; ಯುವ=ಯುವಕ; ಮಘವನ್=ದೇವೇಂದ್ರ. ರೂಪಸಿದ್ಧಿಗಾಗಿ ಈ ಶಬ್ದಗಳನ್ನು ಒಂದೇ ಸೂತ್ರದಲ್ಲಿ ಸೇರಿಸಲಾಗಿದೆ.)

ತಾರತಮ್ಯವನ್ನರಿತಿದ್ದರೂ ಸರ್ಕಾರವೇ ಇಂತಹ ಕೆಲಸವನ್ನು ಮಾಡುವಾಗ ಏನೆನ್ನಬೇಕು? ಅಚ್ಚರಿ ಎನ್ನಬೇಕೆ? ಅಜ್ಞಾನ ಎನ್ನಬೇಕೆ? ಅಥವಾ ಉದ್ದೇಶಪೂರ್ವಕ ಎನ್ನಬೇಕೆ?

**ವೃತ್ತಂ ಯತ್ನೇನ ಸಂರಕ್ಷೇತ್ ವಿತ್ತಮಾಯಾತಿ ಯಾತಿ ಚ**
**ಅಕ್ಷೀಣೋ ವಿತ್ತತಃ ಕ್ಷೀಣಃ ವೃತ್ತತಸ್ತು ಹತೋ ಹತಃ॥೮೭॥**

— *ಮಹಾಭಾರತ*

"ಪ್ರಯತ್ನಪೂರ್ವಕವಾಗಿ ತನ್ನ ಚಾರಿತ್ರವನ್ನು ರಕ್ಷಿಸಿಕೊಳ್ಳಬೇಕು. ಹಣವಾದರೋ ಬರುತ್ತದೆ, ಹೋಗುತ್ತದೆ. ಸಚ್ಚಾರಿತ್ರವುಳ್ಳವನು ಹಣದಿಂದ ಕ್ಷೀಣನಾದರೂ ಕ್ಷೀಣನಲ್ಲ , ಬಡವನಲ್ಲ. ಯಾವನ ನಡತೆ ಕೆಟ್ಟಿದೆಯೋ ಅವನು ಹಣವಂತನಾದರೂ ದರಿದ್ರನೇ - ಸತ್ತಹಾಗೆಯೇ ಸರಿ."

ವಿತ್ತ, ವೃತ್ತ - ಎಂಬುದೆರಡು ಮನುಷ್ಯನ ಆಸ್ತಿ. ಸಂಪಾದಿಸು ಎಂಬ ಅರ್ಥವಿರುವ 'ವಿದ' ಧಾತುವಿನಿಂದ 'ವಿತ್ತ' ಶಬ್ದವು ಹುಟ್ಟಿದೆ. ದುಡಿದು ಸಂಪಾದಿಸಿದ್ದು ವಿತ್ತ. ಹಣ, ಮನೆ, ಹೊಲ ಮುಂತಾದದ್ದು ವಿತ್ತ. ಇದು ಮನುಷ್ಯನ ಬಹಿರಂಗವಾದ ಆಸ್ತಿ. ಹೊರಗಿನಿಂದ ಬಂದದ್ದು ಬಂದಂತೆಯೇ ಹೋಗಬಹುದು. ದುಡಿದು ಮತ್ತೆ ಗಳಿಸಬಹುದು. ಆದರೆ ವೃತ್ತವು ಅಂತಹುದಲ್ಲ. ವೃತ್ತವೆಂದರೆ ವರ್ತನೆ, ಸದಾಚಾರ, ಒಳ್ಳೆಯ ನಡತೆ. ಇದು ಅಂತರಂಗದ ಆಸ್ತಿ, ಮನಸ್ಸಿಗೆ ಸಂಬಂಧಿಸಿದ್ದು. ಇದು ಹೊರಗಿನಿಂದ ಬರತಕ್ಕದ್ದಲ್ಲ. ಇದರ ಮೌಲ್ಯ ಅಧಿಕ.

ಒಮ್ಮೆ ಸದಾಚಾರದಿಂದ ಜಾರಿದರೆ, ಜಾರುತ್ತಿರುವುದೇ ಗತಿ. ಮೇಲಿನ

ಮೆಟ್ಟಿಲಿಂದ ಚೆಂಡನ್ನು ಕೆಳಕ್ಕೆ ತಳ್ಳಿದಂತೆ, ಕೆಳಕೆಳಗೆ ಬೀಳುವುದು ತಪ್ಪಿದ್ದಲ್ಲ. ಹೆಂಡ, ಭಂಗಿಗಳ ಚಟದಂತೆ ದುರಾಚಾರವು ಗಟ್ಟಿಯಾಗಿ ಅಂಟಿಕೊಳ್ಳುತ್ತದೆ. ಮೇಲಿನ ಮೆಟ್ಟಿಲಿಂದ ಬಿದ್ದ ಚೆಂಡಿನಂತೆ ಅದರ ವೇಗವು ಹೆಚ್ಚಿ ನೆಲಕಚ್ಚಿಬಿಡುತ್ತದೆ.

ವಿತ್ತ-ವೃತ್ತಗಳ ಬೆಲೆ ಎಷ್ಟೆಂಬುದು ಪ್ರತಿಯೊಬ್ಬನ ಹೃದಯಕ್ಕೂ ತಿಳಿದಿದೆ. "ಅವನು ಶ್ರೀಮಂತನಲ್ಲ, ಅವನಲ್ಲಿ ಹೆಚ್ಚು ಹಣವಿಲ್ಲ" ಎಂದರೆ ಯಾವನೂ ವ್ಯಥೆಪಡುವುದಿಲ್ಲ. "ಅವನ ಚಾರಿತ್ರ ಒಳ್ಳೆಯದಲ್ಲ, ದುರಾಚಾರಗಳೇ ಅಧಿಕ" ಎಂದು ಹೇಳಿದರೆ ಮಾತ್ರ ಆತನು ಉರಿದುಬೀಳುತ್ತಾನೆ. ಮಾನನಷ್ಟವಾಯಿತೆಂದು ನ್ಯಾಯಾಲಯಕ್ಕೆ ದೂರು ಸಲ್ಲಿಸುತ್ತಾನೆ ! ಬಡತನವನ್ನು ಮುಚ್ಚಿಡಲು ಮನುಷ್ಯನು ಬಯಸುವುದಿಲ್ಲ; ಆದರೆ ತನ್ನ ದುರಾಚಾರವನ್ನು ಮುಚ್ಚಿಡಲು ಸತತವೂ ಪ್ರಯತ್ನಿಸುತ್ತಾನೆ. ಯಾವುದು ಒಳ್ಳೆಯದು, ಯಾವುದು ಕೆಟ್ಟದು - ಎಂಬುದು ಸ್ಪಷ್ಟವಾಗಿ ತಿಳಿದಿದ್ದರೂ ಸಹ, ಕೆಟ್ಟದರ ಕಡೆಗೇ ಮನಸ್ಸು ಲಂಗುಲಗಾಮಿಲ್ಲದೆ ಓಡುತ್ತಿದೆಯಲ್ಲ, ಇದಕ್ಕಿಂತ ಅಧಿಕವಾದ ಸೋಜಿಗವು ಜಗತ್ತಿನಲ್ಲಿದ್ದೀತೆ?

**ನ ದ್ವಿಷಂತಿ ನ ಯಾಚಂತೇ ಪರನಿಂದಾಂ ನ ಕುರ್ವತೇ ।**
**ಅನಾಹೂತಾ ನ ಚಾಯಾಂತಿ ತೇನಾಶ್ಮಾನೋಽಪಿ ದೇವತಾಃ॥೮೮॥**

— *ಸುಭಾಷಿತರತ್ನ-ಭಾಂಡಾಗಾರ*

"ಕಲ್ಲಿನ ಪ್ರತಿಮೆಗಳೂ ಸಹ ದೇವತೆಗಳೆನಿಸಿ ಪೂಜ್ಯವಾಗಿವೆ. ಏಕೆಂದರೆ, ಅವು ಯಾರನ್ನೂ ದ್ವೇಷಿಸುವುದಿಲ್ಲ. ಯಾರನ್ನೂ ಬೇಡುವುದಿಲ್ಲ. ಪರರನ್ನು ನಿಂದಿಸುವುದಿಲ್ಲ, ಕರೆಯದೆ ಬರುವುದೂ ಇಲ್ಲ!"

ನಮ್ಮಲ್ಲಿ ವಿಗ್ರಹಪೂಜೆ ಇದೆ. ಆದ್ದರಿಂದ ದೊಡ್ಡ ದೊಡ್ಡ ದೇವಸ್ಥಾನಗಳ ನಿರ್ಮಾಣವಾಯಿತು. ಕಲ್ಲು ದೇವರಲ್ಲವೆಂಬುದನ್ನು ಒಬ್ಬ ನಾಡಾಡಿಯೂ ಬಲ್ಲ. ವಿಧಿವತ್ತಾಗಿ ವಿಗ್ರಹವನ್ನು ಪ್ರತಿಷ್ಠಾಪಿಸಿ ಮಂತ್ರಪೂರ್ವಕವಾಗಿ ಆವಾಹನೆ ಮಾಡಿದಾಗ ಅದರಲ್ಲಿ ದೇವತಾಸಂನಿಧಾನವುಂಟಾಗುತ್ತದೆ. ಪ್ರತಿಮೆಯಲ್ಲಿ ದೇವತೆ ಸಂನಿಹಿತವಾಗಿದೆಯೆಂದು ಪೂಜಿಸುತ್ತಾರೆಯೇ ಹೊರತು ಕಲ್ಲನ್ನೇ ದೇವತೆಯೆಂದು ಯಾರೂ ತಿಳಿದಿಲ್ಲ. ಈ ಸುಭಾಷಿತಕಾರನು ಮನುಷ್ಯನಲ್ಲಿರಬೇಕಾದ ಉತ್ತಮ ಗುಣಗಳನ್ನು ಕಲ್ಲಿನ ಪ್ರತಿಮೆಯ ಮೂಲಕ ಚಮತ್ಕಾರವಾಗಿ ತೋರಿಸಿದ್ದಾನೆ.

ಮನುಷ್ಯನು ದೇವತಾಸದೃಶನಾದ ಸತ್ಪುರುಷನೆನಿಸಬೇಕಾದರೆ, ಈ ದುರ್ಗುಣಗಳು ಇರಬಾರದೆಂದು ನಿಷೇಧಾತ್ಮಕವಾಗಿ ಹೇಳಿದ್ದಾನೆ.

ಕಲ್ಲಿನ ಪ್ರತಿಮೆಗಳು 'ನ ದ್ವಿಷಂತಿ' = ಅನ್ಯರನ್ನು ದ್ವೇಷಿಸುವುದಿಲ್ಲ. ದ್ವಿಷ-ಅಪ್ರೀತೌ ಎಂಬ ಧಾತುವಿನ ರೂಪವಿದು. ಪ್ರೀತಿಗೆ ವಿರುದ್ಧವಾದದ್ದು ಅಪ್ರೀತಿ. ಇತರರು ಆತ್ಮೀಯರೆಂಬ ಭಾವನೆ ಪ್ರೀತಿ. ಅವರು ನಮಗೆ ಬೇಕಾದವರಲ್ಲ, ಪರಕೀಯರು ಎಂಬ ಭಾವನೆ ದ್ವೇಷ. ಪ್ರಾಯೇಣ ಅಸಹನೆ, ಹೊಟ್ಟೆಕಿಚ್ಚುಗಳಿಂದ ಬೆಳೆಯತಕ್ಕದ್ದು ದ್ವೇಷ. ಈ ಬಗೆಯ ಮತೀಯ ದ್ವೇಷವೇ ನಮ್ಮ ರಾಷ್ಟ್ರವಿಭಜನೆಗೆ ಕಾರಣವಾದದ್ದು. ಎಷ್ಟು ಕೊಟ್ಟು ಹೊಟ್ಟೆ ತುಂಬಿಸಿದರೂ ಆರದಿರುವ ವಿಲಕ್ಷಣವಾದ ಕಿಚ್ಚು ಇದು. ಕಾಶ್ಮೀರದ ಮೇಲೆ ನಡೆದ ಆಕ್ರಮಣಕ್ಕೆ ಇದೇ ಕಾರಣ. ನೀರನ್ನು ಹೊಯ್ದು ಆರಿಸಬಹುದಾದ ಕಿಚ್ಚು ಇದಲ್ಲ. ಬಡಬಾಗ್ನಿಯು ಸಮುದ್ರತಳದಲ್ಲಿ ಹುಟ್ಟಿ ನೀರಿನ ನಡುವೆಯೇ ಉರಿಯುವುದಂತೆ. ಅದು ನೀರಿನಿಂದ ಶಾಂತವಾದೀತೆ?

'ನ ಯಾಚಂತೇ' = ಬೇಡುವುದಿಲ್ಲ. ದುಡಿಯುವ ಶಕ್ತಿ ಇದ್ದರೂ ಆಲಸ್ಯದಿಂದ ಬೇಡುವುದು ಯಾಚನೆ. ಆತ್ಮಗೌರವವನ್ನು ಅಳಿಸಿಹಾಕತಕ್ಕದ್ದು ಇದು. ಯಾಚಕನು ಹತ್ತಿಗಿಂತ ಹಗುರ, ಎಂಬ ಮಾತಿದೆ. ತೀರಿಸಲಾರೆನೆಂದು ತಿಳಿದು ಸಾಲವನ್ನು ಪಡೆಯುವುದೂ ಯಾಚನೆಯೇ. 'ಅಭಿವೃದ್ಧಿ ಯೋಜನೆ' ಎಂಬ ಹೆಸರಿನಡಿಯಲ್ಲಿ ಇನ್ನೊಂದು ರಾಷ್ಟ್ರದಿಂದ ಸಾಲವನ್ನು ಪಡೆಯುವುದು ಯಾಚನೆಯಲ್ಲದೆ ಇನ್ನೇನು? ಅಭಿವೃದ್ಧಿಯಾಗತಕ್ಕದ್ದು ಸಾಲದ ಹೊರೆಯೊಂದೇ. ಸಾಹುಕಾರನು ಸಾಲವನ್ನು ಕೊಡುತ್ತಲೇ ಹೋಗುತ್ತಾನೆ. ಅವನಿಗೆ ಬಡ್ಡಿಯೊಂದನ್ನು ಕೊಡುತ್ತಿದ್ದರೆ ಸಾಕು, ಅಸಲನ್ನು ಅವನು ಕೇಳುವುದೇ ಇಲ್ಲ!

'ಪರನಿಂದಾಂ ನ ಕುರ್ವತೇ' = ಅನ್ಯರನ್ನು ನಿಂದಿಸುವುದಿಲ್ಲ. ಇನ್ನೊಬ್ಬರಲ್ಲಿ ದೋಷವಿದ್ದರೂ ಅದನ್ನು ಎತ್ತಿ ಹೇಳುವುದಿಲ್ಲ. ರಾಜಕೀಯ ಪಕ್ಷಗಳಿಗಂತೂ ಇದು ಅನ್ವಯಿಸುವುದೇ ಇಲ್ಲ. ಪರನಿಂದೆಯೇ ಅವುಗಳ ಜೀವಾಳ, ಬಂಡವಾಳ.

'ಅನಾಹೂತಾ ನ ಚಾಯಾಂತಿ' = ಕರೆಯದೆ, ಆಹ್ವಾನವಿಲ್ಲದೆ ಬರುವುದಿಲ್ಲ. ಇದು ನಿಷೇಧಾತ್ಮಕವಾಗಿಯೇ ಇರುವ ವೈಯಕ್ತಿಕ ಸದ್ಗುಣ. ಸರ್ವಜ್ಞಕವಿ ಹೇಳುತ್ತಾನೆ :

> ಹಬ್ಬಕ್ಕೆ ಮದುವೆಗೆ ಇಬ್ಬರೇಕಾಂತಕ್ಕೆ
> ಕಬ್ಬಿನಾಲಯಕೆ ಕರೆಯದೆ ಹೋದವನ
> ದಿಬ್ಬಾಣ ಕೆಡಗು ಸರ್ವಜ್ಞ ॥

**ಅನಭ್ಯಾಸೈರ್ಹತಾ ವಿದ್ಯಾ ನಿತ್ಯಹಾಸ್ಯೈರ್ಹತಾಃ ಸ್ತ್ರಿಯಃ।**
**ಕುಬೀಜೇನ ಹತಂ ಕ್ಷೇತ್ರಂ ಭೃತ್ಯದೋಷೈರ್ಹತಾ ನೃಪಾಃ ॥೮೯॥**

— *ಚಾಣಕ್ಯ-ನೀತಿಸಾರ*

"ಅಭ್ಯಾಸ ಮಾಡದಿರುವುದರಿಂದ ವಿದ್ಯೆ ಮಲಿನವಾಗುತ್ತದೆ. ಸದಾ ನಗುತ್ತಿರುವುದರಿಂದ ಸ್ತ್ರೀಯರು ಹಾಳಾಗುತ್ತಾರೆ. ದುರ್ಬೀಜದಿಂದ ಹೊಲವು ಕೆಡುತ್ತದೆ. ಸೇವಕರ ದೋಷಗಳಿಂದ ರಾಜರು ನಾಶವಾಗುತ್ತಾರೆ."

ಕಲಿತ ವಿದ್ಯೆಯನ್ನು ಉಳಿಸಿಕೊಳ್ಳುವುದಕ್ಕೆ ಶ್ರಮಪಡಬೇಕು. ಸಂಬಂಧಿಸಿದ ಗ್ರಂಥಗಳನ್ನೋದುತ್ತಿದ್ದರೆ ಮಾತ್ರ ವಿದ್ಯೆ ಉಳಿದುಕೊಳ್ಳುತ್ತದೆ. ಪುನರವಲೋಕನ, ಶಿಷ್ಯರಿಗೆ ಪ್ರವಚನ - ಇವೆರಡರಿಂದ ವಿದ್ಯೆಯ ರಕ್ಷಣೆಯೂ ಆಗುತ್ತದೆ, ತನ್ನ ರಕ್ಷಣೆಯೂ ಆಗುತ್ತದೆ. ನಮ್ಮ ಪ್ರಾಚೀನ ಶಾಸ್ತ್ರಗ್ರಂಥಗಳಲ್ಲಿ ಕೆಲವು ವ್ಯಾಸಂಗ ಮಾಡತಕ್ಕವರಿಲ್ಲದೆಯೇ ಮಲಿನವಾಗಿವೆ.

'ನಿತ್ಯಹಾಸ್ಯೈರ್ಹತಾಃ ಸ್ತ್ರಿಯಃ': ಸದಾ ನಗುವುದರಿಂದ ಸ್ತ್ರೀಯರು ಹಾಳಾಗುತ್ತಾರೆಂದರೆ, ನಗುವುದು ತಪ್ಪೆ? - ಎಂಬ ಪ್ರಶ್ನೆ ಹುಟ್ಟುತ್ತದೆ. ಹಾಗಲ್ಲ; ನಗುವುದರಲ್ಲಿ ಅನೇಕ ಬಗೆ ಇವೆ. ಹಾಸ, ವಿಹಾಸ, ಪ್ರಹಾಸ, ಸಂಪ್ರಹಾಸ, ಅತಿಹಾಸ, ಅಟ್ಟಹಾಸ - ಇತ್ಯಾದಿ. ಇಲ್ಲಿ ಹೇಳಿರುವುದು ಅತಿಹಾಸ. ಗಟ್ಟಿಯಾಗಿ ಎಲ್ಲೆಂದರಲ್ಲಿ, ಬೀದಿಯಲ್ಲಿ, ಅಪರಿಚಿತರೊಡನೆ ಮಾತಾಡುವಾಗ, ನಗಲು ಸರಿಯಾದ ಕಾರಣವಿಲ್ಲದಾಗ ಕೇಕೆಹಾಕಿ ನಗುವುದು ಒಳ್ಳೆಯ ಲಕ್ಷಣವಲ್ಲ. ಗಂಡಸಿಗೂ ಇದು ಅವಲಕ್ಷಣವೇ. ಇದರಿಂದ ಅವನು ಕೆಟ್ಟುಹೋಗುತ್ತಾನೆಂದು ಹೇಳಲಾಗದು. ಸ್ತ್ರೀಯರ ವಿಷಯ ಬೇರೆ. ಈ ಅತಿಹಾಸದಿಂದ ಅವರ ಶೀಲವೇ ಶಂಕೆಗೆ ಒಳಗಾಗುತ್ತದೆ. ಅವಳಲ್ಲಿ ನಿಗ್ರಹಶಕ್ತಿ ಇಲ್ಲವೆಂದೂ ಆಮಿಷಕ್ಕೆ ಬಲಿಯಾಗುವವಳೆಂದೂ ದುರ್ಜನರು ಕಣ್ಣಿಡುತ್ತಾರೆ. ಸ್ತ್ರೀಯರು ಗಂಟುಮೋರೆ ಹಾಕಿಕೊಂಡಿರಬೇಕೆಂದು ಇದರ ಅರ್ಥವಲ್ಲ. ಅವರು ಸ್ಮಿತವದನೆಯರಾಗಿರುವುದು ಗುರುಹಿರಿಯರಿಗೂ ಸಂಮತ, ಕವಿಗಳಿಗೂ ಪ್ರಿಯ.

ಹಳಿತ ಬೀಜ, ಹುಳಿತ ಬೀಜಗಳನ್ನು ಬಿತ್ತಿದರೆ, ನೀರಾವರಿಯುಳ್ಳ ಉತ್ತಮವಾದ ಗದ್ದೆಯಲ್ಲಿಯೂ ಫಲವು ಸಿಗದು. ಸರ್ವರಿಗೂ ಗೊತ್ತಿರುವ ಈ ಸಂಗತಿಯನ್ನು

ನೀತಿಶಾಸ್ತ್ರವು ಹೇಳಬೇಕಾಗಿಲ್ಲ. ಇದರ ಸೂಚ್ಯಾರ್ಥವೇ ಬೇರೆ. ಎಂಥ ಕೀರ್ತಿಶಾಲಿಯಾದ ದೇಶವಾಗಿದ್ದರೂ, ಹುಟ್ಟುವ ದುಷ್ಟ ಪ್ರಜೆಗಳಿಂದ, ಕೆಟ್ಟ ರಾಜಕಾರಣಿಗಳಿಂದ, ಆ ರಾಷ್ಟ್ರವು ಹಿಂದುಳಿಯುತ್ತದೆ; ಕೆಟ್ಟ ಹೆಸರನ್ನು ಪಡೆಯುತ್ತದೆ. ಉದಾಹರಣೆಗೆ ಭಾರತದೇಶ.

ರಾಜನನ್ನು ಕೆಡಿಸಬಲ್ಲ ಭೃತ್ಯರು ಯಾರು? ಜವಾನರಂತೂ ಅಲ್ಲ, ಅವರ ಮಾತಿಗೆ ರಾಜನು ಬೆಲೆ ಕೊಡುವುದಿಲ್ಲ. ಭೃತ್ಯರೆಂದರೆ ಮಂತ್ರಿಗಳು, ದೊಡ್ಡ ಅಧಿಕಾರಿಗಳು. ಇವರು ನೀತಿಭ್ರಷ್ಟರಾದರೆ ಸರ್ಕಾರೀ ಯಂತ್ರವೇ ಕೆಟ್ಟುಹೋಗುತ್ತದೆ. ಪ್ರಜಾಪ್ರಭುತ್ವದಲ್ಲಂತೂ ಸಚಿವರ ಶೀಲವೇ ಮುಖ್ಯವಾದದ್ದು. ಅವರ ಶೀಲಕ್ಕೆ ತಕ್ಕಂತೆ ಅವರ ಭೃತ್ಯರು ನಡೆದುಕೊಳ್ಳುತ್ತಾರೆ. ನೀರು ಮೇಲಿಂದ ಕೆಳಗೆ ಹರಿಯುತ್ತದೆ, ಕೆಳಗಿನಿಂದ ಮೇಲಕ್ಕೆ ಹರಿಯುವುದಿಲ್ಲ.

**ಭುಕ್ತಾ ಬಹವೋ ದಾರಾ ಲಬ್ಧಾಃ ಪುತ್ರಾಶ್ಚ ಪೌತ್ರಾಶ್ಚ ।**
**ನೀತಂ ಶತಮಪ್ಯಾಯುಃ ಸತ್ಯಂ ವದ ಮರ್ತುಮಸ್ತಿ ಮನಃ ॥೯೦॥**

*— ಅಪ್ಪಯ್ಯದೀಕ್ಷಿತರ ವೈರಾಗ್ಯಶತಕ*

"ಅನೇಕ ಮಡದಿಯರನ್ನು ಅನುಭವಿಸಿದ್ದಾಯಿತು. ಮಕ್ಕಳನ್ನೂ ಮೊಮ್ಮಕ್ಕಳನ್ನೂ ಪಡೆದದ್ದಾಯಿತು. ನೂರು ವರ್ಷ ಆಯುಸ್ಸನ್ನೂ ಕಳೆದಿದ್ದೀಯೆ. ಈಗಲಾದರೂ ಸಾಯುವುದಕ್ಕೆ ಮನಸ್ಸಿದೆಯೆ? ಸತ್ಯವನ್ನು ಹೇಳು!"

ಸಾವು ಎಂಬುದು ಸರ್ವರಿಗೂ ಭಯವನ್ನುಂಟುಮಾಡುತ್ತದೆ. ಅದಕ್ಕೆ ಹೆದರದವರೇ ಇಲ್ಲ. ಮುದುಕನಾದ ಮೇಲೆ ಒಬ್ಬನು ಕಾಲವಶನಾದರೆ, ಏನೋ ವಯಸ್ಸಾಗಿತ್ತು, ತೀರಿಹೋದ — ಎಂದು ಸಮಾಧಾನ ಪಟ್ಟುಕೊಳ್ಳುವುದುಂಟು. ಆದರೆ ವಯಸ್ಸಾದವನಿಗೆ ಸಾಯುವ ಇಚ್ಛೆ ಇತ್ತೋ? ಅವನಿಗಿರಲಿಲ್ಲ. ಸಾವು ಅನಿವಾರ್ಯವಾಗಿ ಬಂದಿತು. ಅದರಿಂದ ತಪ್ಪಿಸಿಕೊಳ್ಳಲು ಬೇಕಾದಷ್ಟು ಹಣಗಿರುತ್ತಾನೆ. ಸಾವಿರಗಟ್ಟಲೆ, ಶಕ್ತಿಯಿದ್ದವರು ಲಕ್ಷಗಟ್ಟಲೆ ರೂಪಾಯಿಗಳನ್ನು ಬದುಕುವ ಆಸೆಯಿಂದ ಸುರಿದಿರುತ್ತಾರೆ. ಆದರೂ ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದ ಪ್ರಾಣ ಬಿಡುತ್ತಾರೆ.

ತೀವ್ರವಾದ ರೋಗದಿಂದಲೋ ಅಥವಾ ಮನಸ್ಸಿನ ಮೇಲಾದ ಉಗ್ರವಾದ ಆಘಾತದಿಂದಲೋ ಕೆಲವರು ಆತ್ಮಹತ್ಯೆ ಮಾಡಿಕೊಳ್ಳುವುದುಂಟು. ಅದು ಸಹಜವಾದ ಇಚ್ಛೆಯಿಂದ ಆದದ್ದಲ್ಲ. ಆತ್ಮಹತ್ಯೆಯ ಬಯಕೆ ತಾತ್ಕಾಲಿಕವಾದದ್ದು. ಬೇರೊಂದು ಪರಿಹಾರವನ್ನು ಕಾಣದೆ ದುಡುಕಿ ಮಾಡಿದ ನಿರ್ಧಾರ ಅದು.

ಸಾವಿನ ಭಯ ಮನುಷ್ಯನಿಗೆ ಮಾತ್ರವಲ್ಲ, ಸಕಲ ಪ್ರಾಣಿಗಳಿಗೂ ಉಂಟು. ಬೆಕ್ಕನ್ನು ಕಂಡೊಡನೆ ಇಲಿಯು ಓಡುವುದು ಸಾವಿನ ಹೆದರಿಕೆಯಿಂದ. ಹುಲಿಯನ್ನು ಕಂಡು ಹರಿಣದ ಪಲಾಯನವೂ ಸಾವಿನ ಭಯದಿಂದಲೇ. ಬೆಕ್ಕು ತನ್ನನ್ನು ತಿಂದುಬಿಡುತ್ತದೆಯೆಂದೂ ತಾನು ಸತ್ತುಹೋಗುತ್ತೇನೆಂದೂ ಇಲಿಗೆ ಹೇಗೆ ಗೊತ್ತಾಗುತ್ತದೆ? ಇನ್ನೊಂದು ಇಲಿಗೆ ಬೆಕ್ಕಿನಿಂದ ಸಾವು ಬಂದದ್ದನ್ನು ಅದೇನೂ ಕಂಡಿರುವುದಿಲ್ಲ. ಇದು ಪ್ರಕೃತಿಸಿದ್ಧಜ್ಞಾನ (instinct) ಎಂದು ಕೆಲವರು ಹೇಳುವುದುಂಟು. ಈ instinct — ಬೆಕ್ಕು ತನ್ನನ್ನು ಕೊಲ್ಲುತ್ತದೆಯೆಂಬ ಬುದ್ಧಿ ಇಲಿಗೆ ಏಕೆ ಬರುತ್ತದೆ? ಅದು ನಾಯಿಗೇಕೆ ಬರುವುದಿಲ್ಲ? ಹಸುವಿಗೇಕೆ ಇರುವುದಿಲ್ಲ? ಹಾವನ್ನು ಕೊಲ್ಲಬೇಕೆಂಬ ಬುದ್ಧಿ ಮುಂಗಸಿಗೇಕೆ ಬರುತ್ತದೆ? ಮುಂಗಸಿ ಹಾವನ್ನೇನೂ ತಿನ್ನುವುದಿಲ್ಲ. ಕೊಂದು ಎಸೆದು ಹೊರಟುಹೋಗುತ್ತದೆ. ಉತ್ತರವಾಗಿ ಪ್ರಕೃತಿಸಿದ್ಧಜ್ಞಾನ (instinct) ಎಂದು ಹೇಳುವುದೂ ಒಂದೇ, ಉತ್ತರ ಗೊತ್ತಿಲ್ಲ ಎಂದು ಹೇಳುವುದೂ ಒಂದೇ! ನಮ್ಮ ಪೂರ್ವಜರು ಇದೆಲ್ಲವೂ ಜನ್ಮಾಂತರದ ಸಂಸ್ಕಾರವೆಂದು ಸಮಾಧಾನ ಹೇಳಿದ್ದಾರೆ. ಪ್ರಾಣಿಯು ತನ್ನ ಹಿಂದಿನ ನಾನಾ ಜನ್ಮಗಳಲ್ಲಿ ಸಾವು, ಭಯ, ಸೇಡು ಮೊದಲಾದ್ದನ್ನು ಅನುಭವಿಸಿರುತ್ತದೆ. ಆ ಸಂಸ್ಕಾರವು ಜೊತೆಗೂಡಿ ಬಂದು ಅಂತಃಕರಣದಲ್ಲಿ ನೆಲೆಸಿರುತ್ತದೆ. ಇದಕ್ಕಿಂತ ಉತ್ತಮವಾದ ಸಮಾಧಾನ ಇದುವರೆಗೆ ದೊರಕಿಲ್ಲ.

ಯಾವಾತನಿಗೆ "ನಾನು ಎಂದರೆ ಈ ದೇಹವಲ್ಲ, ಇಂದ್ರಿಯವಲ್ಲ, ಇವೆಲ್ಲವುಗಳಿಗಿಂತ ಅತಿರಿಕ್ತನಾದ ಆತ್ಮನೇ ನಾನು. ನನಗೆ ಸಾವಿಲ್ಲ; ಜನ್ಮವೂ ಇಲ್ಲ. ಇಂತಹ ದೇಹ ಎಷ್ಟೋ ಬಂದಿದೆ. ಇನ್ನೆಷ್ಟು ಬರಬೇಕೋ! ಹಳೆಯ ಅಂಗಿಯನ್ನು ಎಸೆದರೆ ಹೇಗೆ ದುಃಖವಿಲ್ಲವೋ ಹಾಗೆಯೇ ಈ ದೇಹವನ್ನು ಬಿಡಲು ನಾನು ದುಃಖಿಸುವುದಿಲ್ಲ. ಇದು ಹೋದರೆ ಹೊಸ ದೇಹ ಬರುತ್ತದೆ. ನನ್ನ ಕರ್ಮಕ್ಕೆ ಅನುಗುಣವಾದದ್ದು ಬರುತ್ತದೆ" — ಎಂಬ ನಿಶ್ಚಯವಿರುತ್ತದೆಯೋ ಅವನು ಮಾತ್ರ ಸಾವಿಗೆ ಅಂಜುವುದಿಲ್ಲ.

**ಸತ್ಯೇನ ರಕ್ಷ್ಯತೇ ಧರ್ಮಃ ವಿದ್ಯಾ ಯೋಗೇನ ರಕ್ಷ್ಯತೇ ।**
**ಮೃಜಯಾ ರಕ್ಷ್ಯತೇ ರೂಪಂ ಕುಲಂ ವೃತ್ತೇನ ರಕ್ಷ್ಯತೇ ॥೯೧॥**

— ಅಜ್ಞಾತಮೂಲ

"ಸತ್ಯದಿಂದ ಧರ್ಮವು ರಕ್ಷಿತವಾಗುತ್ತದೆ. ವಿದ್ಯೆಗೆ ಯೋಗದಿಂದ, ಸ್ವಚ್ಛತೆಯಿಂದ ರೂಪಕ್ಕೆ ರಕ್ಷಣೆಯೊದಗುತ್ತದೆ. ಸದ್ವರ್ತನೆಯಿಂದ ಕುಲದ ರಕ್ಷಣೆಯಾಗುತ್ತದೆ."

ಸತ್ಯವೇ ಒಂದು ಧರ್ಮ. ಇದು ಧರ್ಮವನ್ನು ರಕ್ಷಿಸುವ ಧರ್ಮ. ಇದು ಸತ್ಯ, ಇದು ಅಸತ್ಯ - ಎಂಬುದನ್ನು ಪ್ರತಿಯೊಬ್ಬನ ಹೃದಯವೂ ತಿಳಿದಿರುತ್ತದೆ. ಇದು ವಿಶೇಷಧರ್ಮಗಳ ಕವಚ. ಸತ್ಯನಿಷ್ಠೆಯೆಂಬ ಕವಚವು ಕಳಚಿದರೆ ಉಳಿದ ಧರ್ಮಗಳು ಅಳಿದಂತೆಯೇ. ತಂದೆಯ ಪ್ರತಿಜ್ಞಾಪಾಲನೆಗಾಗಿ ಶ್ರೀರಾಮನು ವನವಾಸಕ್ಕೆ ಹೋಗಲು ಸಿದ್ಧನಾದ. ಆಗ ದಶರಥನೇ "ರಾಮ, ನನ್ನನ್ನು ಸೆರೆಯಲ್ಲಿಟ್ಟು ನೀನು ರಾಜನಾಗು" ಎಂದ. ಇದು ಪುತ್ರವ್ಯಾಮೋಹದಿಂದ ಬಂದ ಉದ್ಗಾರ. ಶ್ರೀರಾಮನು ಮಾತುಕೊಟ್ಟಂತೆ ಸತ್ಯಪಾಲನೆಗಾಗಿ ವನಕ್ಕೆ ತೆರಳಿದ. ಅವನ ಸತ್ಯದಿಂದ ದಶರಥನ ಧರ್ಮ ಉಳಿಯಿತು.

ಯೋಗವೆಂದರೆ ಅಧ್ಯಯನ ಮತ್ತು ಪ್ರವಚನ. ಇವೆರಡರಿಂದಲೇ ವಿದ್ಯೆಗೆ ರಕ್ಷಣೆ ದೊರೆಯುವುದು. ಇಲ್ಲದಿದ್ದರೆ ವಿದ್ಯೆಯು ಮಾಸಿಹೋಗುತ್ತದೆಯೆಂಬುದು ಸ್ಪಷ್ಟವಾಗಿದೆ. ದೇಹವನ್ನೂ, ಉಡುವ ವಸ್ತುಗಳನ್ನೂ ಶುಭ್ರವಾಗಿಟ್ಟುಕೊಂಡಿದ್ದರೆ, ಶುಭ್ರತೆಯೇ ಒಂದು ಶೋಭೆಯನ್ನುಂಟುಮಾಡುತ್ತದೆ. ಅಲಂಕಾರವು ಅನಾವಶ್ಯಕ. ದೇಹವಸ್ತುಗಳು ಕೊಳೆಯಾಗಿದ್ದರೆ, ಯಾವ ಅಲಂಕಾರಗಳೂ ನಿಷ್ಫಲಗಳೇ. ಈ ರೂಪರಕ್ಷಣೆ ದೇಹಕ್ಕೆ ಮಾತ್ರವೇ ಅಲ್ಲ; ಮನೆ, ಅಂಗಣ, ಪಾತ್ರೆ ಮುಂತಾದ ಸಕಲವಸ್ತುಗಳಿಗೂ ಸಂಬಂಧಿಸಿದ್ದು. ಸ್ವಚ್ಛತೆಯಿಲ್ಲದೆ ಸೌಂದರ್ಯವೇ ಇಲ್ಲ.

'ಕುಲಂ ವೃತ್ತೇನ ರಕ್ಷ್ಯತೇ.' ಕುಲವೆಂದರೆ ವಂಶ. 'ಇಂತಹ ದೊಡ್ಡವರ ವಂಶದಲ್ಲಿ ಬಂದವನು ನಾನು. ಅವರಲ್ಲಿದ್ದ ಉನ್ನತಗುಣವನ್ನು ಪಾಲಿಸಿ ನನ್ನ ವಂಶಮರ್ಯಾದೆಯನ್ನು ರಕ್ಷಿಸಿಕೊಳ್ಳಬೇಕು' ಎಂಬ ಕುಲಾಭಿಮಾನವು ಇಲ್ಲಿ ವ್ಯಕ್ತವಾಗಿದೆ. ಹಿಂದೆ ನೈತಿಕವೃತ್ತಿಗಲ್ಲದೆ ಜೀವಿಕಾವೃತ್ತಿಗೂ ಇದು ಸಂಬಂಧಿಸಿತ್ತು.

ಪುರೋಹಿತನ ಮಗ ಪುರೋಹಿತನಾಗುತ್ತಿದ್ದ. ಯೋಧನ ಮಗ ಸೈನ್ಯಕ್ಕೆ ಸೇರುತ್ತಿದ್ದ. ಸಂಗೀತ, ವೈದ್ಯಕ, ಜ್ಯೌತಿಷ, ವಾಣಿಜ್ಯ - ಇವೂ ವಂಶಪರಂಪರೆಯ ವೃತ್ತಿಗಳು. ಇದರಲ್ಲೊಂದು ಸೌಲಭ್ಯವೂ ಇದೆ. ಚಿಪ್ಪಿಗನ ಮಗನಿಗೆ ಹೊಲಿಗೆ, ಅಕ್ಕಸಾಲೆಯ ಮಗನಿಗೆ ಚಿನ್ನ-ಬೆಳ್ಳಿ ಕೆಲಸ, ಕಮ್ಮಾರಕುಲದವರಿಗೆ ಕಮ್ಮಾರಿಕೆ ಕೆಲಸ - ಇವೆಲ್ಲವುಗಳಲ್ಲಿಯೂ ಶಿಕ್ಷಣವು ಮನೆಯಲ್ಲಿಯೇ ದೊರೆಯುತ್ತಿತ್ತು. ಈಚೆಗೆ ಈ ಕುಲಪದ್ಧತಿಗಳು ಬಹಳಮಟ್ಟಿಗೆ ಅಳಿದುಹೋದವು. ಈಗ ಹೊಸದೊಂದು ಕುಲ ಸೃಷ್ಟಿಯಾಗುತ್ತಿದೆ. ಅದು ರಾಜಕೀಯ ಕುಲ! ತಂದೆಯು ಮಂತ್ರಿಯಾದರೆ ಮಗನು ಶಾಸಕನಾದರೂ ಆಗಬೇಕು. ಮುಖ್ಯಮಂತ್ರಿಯಾದರೆ ಇನ್ನೂ ಉತ್ತಮ! 'ಪುತ್ರಾದಿಚ್ಛೇತ್ ಪರಾಜಯಂ.' ಇತರ ಕುಲಮರ್ಯಾದೆಗಳು ಕ್ಷೀಣಿಸಿದರೂ ರಾಜಕೀಯ ಕುಲಮರ್ಯಾದೆಯಲ್ಲಿ ಅಭಿಮಾನವು ಬೆಳೆಯುತ್ತಿದೆ.

> **ವ್ರಜತ್ಯಧೋಽಧೋ ಯಾತ್ಯುಚ್ಚೈಃ ನರಃ ಸ್ವೈರೇವ ಕರ್ಮಭಿಃ ।**
> **ಖನಿತೇವ ಹಿ ಕೂಪಸ್ಯ ಪ್ರಾಸಾದಸ್ಯೇವ ಕಾರಕಃ ॥೯೨॥**

— *ಸುಭಾಷಿತರತ್ನ-ಭಾಂಡಾಗಾರ*

"ಮನುಷ್ಯನು ಜೀವನದಲ್ಲಿ ಕೆಳಕೆಳಗೆ ಇಳಿಯುವುದಾಗಲಿ ಅಥವಾ ಮೇಲೆಮೇಲಕ್ಕೆ ಏರುವುದಾಗಲಿ ತಾನು ಮಾಡುವ ಕರ್ಮಗಳಿಗೆ ಅನುಗುಣವಾಗಿ ನಡೆಯುತ್ತದೆ. ಹೇಗೆಂದರೆ, ಬಾವಿ ತೆಗೆಯುವವನು ನೆಲವನ್ನು ಅಗೆಯುತ್ತ ಅಗೆಯುತ್ತ ಕೆಳಗೆ ಹೋಗುತ್ತಾನೆ! ಉಪ್ಪರಿಗೆಯನ್ನು ಕಟ್ಟುವವನು ಮೇಲೆಮೇಲಕ್ಕೆ ಏರುತ್ತ ಹೋಗುತ್ತಾನೆ!

ಕರ್ಮಾನುಗುಣವಾಗಿ ಫಲವು ದೊರೆಯುತ್ತದೆ - ಎನ್ನುವುದು ನಮ್ಮ ಭಾರತೀಯರ ವಿಶ್ವಾಸ. ಕ್ರಿಯೆಯ ಸ್ವಭಾವವೇ ಫಲವನ್ನೀಯುವುದು. ವ್ಯಾಯಾಮಕ್ರಿಯೆಯಿಂದ ಹಸಿವಾದರೆ ಭೋಜನಕ್ರಿಯೆಯಿಂದ ತೃಪ್ತಿಯಾಗಲೇಬೇಕು. ಸತ್ಕರ್ಮದಿಂದ ಒಳ್ಳೆಯ ಫಲವಾದರೆ ದುಷ್ಕರ್ಮದಿಂದ ಕೆಟ್ಟ ಫಲವಾಗಲೇಬೇಕು. ಅಧ್ಯಯನ ಮಾಡಿದವನಿಗೆ ಜ್ಞಾನವು ಫಲ. ಕಳ್ಳತನ ಮಾಡಿದವನಿಗೆ ಕಾರಾಗೃಹ ಪ್ರವೇಶವೇ ಫಲ. ಹೀಗೆ ಫಲವು ದೊರೆಯದೆಹೋದರೆ ಧರ್ಮಾಧರ್ಮಗಳಿಗೆ ಬೆಲೆಯೇ ಇಲ್ಲದೆಹೋದೀತು. ಕ್ರಿಯೆಯ ಅನಂತರ ಲಭಿಸುವ ಫಲವು ಕಾರ್ಯ;

ಕ್ರಿಯೆಯು ಕಾರಣ. ಕ್ರಿಯೆಗೂ ಫಲಕ್ಕೂ ಕಾರ್ಯ-ಕಾರಣ ಭಾವವಿದೆಯೆಂಬುದು ಲೋಕಾನುಭವದಿಂದ ನಿಶ್ಚಿತವಾಗಿದೆ. ರೋಗ ಬಂದಾಗ ಅದಕ್ಕೊಂದು ಕಾರಣವಿದೆಯೆಂಬುದು ನಿಶ್ಚಿತ. ಇದು ತರ್ಕಸಿದ್ಧವಾಗಿ ಸರ್ವರ ಅನುಭವಕ್ಕೂ ಬಂದಿರುವುದನ್ನು ಬುದ್ಧಿಶಾಲಿಯು ಅಲ್ಲಗಳೆಯಲಾರ.

ಕೈ ಕೆಸರಾಗದೆ ಬಾಯಿಗೆ ಮೊಸರಾಗದು - ಎಂಬ ಗಾದೆಯುಂಟು. ಜನರು ಕಷ್ಟಪಟ್ಟು ದುಡಿದು ವಿದ್ಯಾಭ್ಯಾಸ ಮಾಡಿ ಮೇಲೇರುವುದನ್ನು ನೋಡಿದ್ದೇವೆ. 'ಮಾಡಿದ್ದುಣ್ಣೋ ಮಹಾರಾಯ' ಎಂಬ ಗಾದೆಯೂ ಉಂಟು. ಕೆಟ್ಟ ಚಟದಿಂದಲೋ ದುರ್ಜನಸಹವಾಸದಿಂದಲೋ ಮನುಷ್ಯನು ಹೀನಸ್ಥಿತಿಗೆ ಇಳಿಯುವುದೂ ಕಂಡುಬಂದಿದೆ. ಇಲ್ಲಿ ಕಾರ್ಯ-ಕಾರಣಗಳೆರಡೂ ಕಂಡುಬರುತ್ತವೆ. ಕೆಲವು ಸಂದರ್ಭಗಳಲ್ಲಿ ಕಾರ್ಯವಾದ ಫಲವಿರುತ್ತದೆ, ಅದರ ಕಾರಣವು ಮಾತ್ರ ಕಾಣಿಸುವುದಿಲ್ಲ. ರೈಲು ಅಪಘಾತದಲ್ಲಿ ಕೆಲವರು ಸಾಯುತ್ತಾರೆ. ಕೆಲವರಿಗೆ ಕೈ ಕೆಲವರಿಗೆ ಕಾಲು ಮುರಿಯಬಹುದು. ರೈಲು ಅಪಘಾತಕ್ಕೆ ಕಾರಣವಿರಬಹುದು. ವೈಯಕ್ತಿಕವಾಗಿ ಆಯಾ ಜನರಿಗೆ ಒದಗಿದ ಕಷ್ಟಕ್ಕೆ ಕಾರಣವೇನು? ಅವರು ಮಾಡಿದ ಅಪರಾಧವೇನು? ಅವರ ಕಷ್ಟವೂ ಬೇರೆಬೇರೆಯಾಗಲು ನಿಮಿತ್ತವೇನು? ಒಬ್ಬನು ಹುಟ್ಟುಬಡವ; ಇನ್ನೊಬ್ಬನು ಹುಟ್ಟಿನಿಂದಲೇ ಶ್ರೀಮಂತ. ಒಬ್ಬನು ಹುಟ್ಟುವಾಗಲೇ ಕುರುಡ; ಇನ್ನೊಬ್ಬ ಹೆಳವ. ಕಾರ್ಯ-ಕಾರಣ ಭಾವವನ್ನು (cause and effect) ಒಪ್ಪಿದ ಮೇಲೆ ಕಾರಣವನ್ನು ಹೇಳಲೇಬೇಕಾಗುತ್ತದೆ.

ಕಾರಣವು 'ದೃಷ್ಟ'ವಾಗಿಲ್ಲವಾದ್ದರಿಂದ ಅದಕ್ಕೆ 'ಅದೃಷ್ಟ' ಎಂದು ಹೆಸರಿಟ್ಟಿದ್ದಾರೆ. ಈ ಜನ್ಮದಲ್ಲಿಯ ಕಾರಣವು ದೃಷ್ಟವಾಗದಿದ್ದಾಗ ಜನ್ಮಾಂತರದ ಕಾರಣಕ್ಕೆ ಧಾವಿಸಬೇಕಾಯಿತು. ಆಕಸ್ಮಿಕವೆಂದು ಅದರ ಅರ್ಥವಲ್ಲ. ಜಗತ್ತಿನಲ್ಲಿ ಯಾವುದೂ ಆಕಸ್ಮಿಕವಲ್ಲ. ಎಲ್ಲವೂ ನಿಯಮಬದ್ಧವೇ ಆಗಿರುತ್ತದೆ. ನಿಮಿತ್ತವು ಕಾಣದಿದ್ದಾಗ ಆಕಸ್ಮಿಕವೆನ್ನುತ್ತೇವೆ. ದೈವವೆಂದರೂ ಅದೃಷ್ಟವೆಂದೇ ಅರ್ಥ. ನಮಗೆ ಕೆಡಕು ಮಾಡಲು ಯಾವ ದೈವವೂ ಕಾದು ಕುಳಿತಿರುವುದಿಲ್ಲ. 'ಮಾಡಿದ್ದುಣ್ಣೋ ಮಹಾರಾಯ' ಎಂಬುದು ತ್ರೈಕಾಲಿಕ ಸತ್ಯ.

**ವಿಷಸ್ಯ ವಿಷಯಾಣಾಂ ಚ ನ ದೂರಮನನಂತರಂ ।**
**ಉಪಭುಕ್ತಂ ವಿಷಂ ಹಂತಿ ವಿಷಯಾಃ ಸ್ಮರಣಾದಪಿ ॥೯೩॥**

— ಸುಭಾಷಿತಾವಳಿ

"ವಿಷಕ್ಕೂ ವಿಷಯಗಳಿಗೂ ಬಹಳ ದೂರವೇನಿಲ್ಲ. ತೀರಾ ಹತ್ತಿರವೂ ಇಲ್ಲ. ವಿಷವು ತಿಂದರೆ ಸಾಯಿಸುತ್ತದೆ. ವಿಷಯಗಳು ನೆನಪು ಮಾಡಿಕೊಂಡರೂ ಸಾಯಿಸಿಬಿಡುತ್ತವೆ!"

ಇಲ್ಲಿ ದೂರ, ಹತ್ತಿರ ಎನ್ನುವುದು ಅಡಿ-ಗಜಗಳ ಲೆಕ್ಕದಲ್ಲಲ್ಲ; ವಿಷ ಮತ್ತು ವಿಷಯಗಳ ಕ್ರೌರ್ಯದ ಲೆಕ್ಕದಲ್ಲಿ. ವಿಷವು ಹತ್ತಿರವಿದ್ದರೂ ನಮ್ಮನ್ನು ಕೊಲ್ಲದು. ನಮ್ಮ ಹೊಟ್ಟೆಯಲ್ಲಿಳಿದಾಗ ತನ್ನ ಪರಾಕ್ರಮವನ್ನು ಮೆರೆಸುತ್ತದೆ. ವಿಷಯಗಳಾದರೋ, ಅವನ್ನು ಸ್ಮರಿಸಿಕೊಂಡರೆ ಸಾಕು, ಕೇಡನ್ನು ತಂದೊಡ್ಡುತ್ತವೆ - ಎಂದು ಅಭಿಪ್ರಾಯ.

ಕಿವಿ, ತ್ವಕ್ (ಚರ್ಮ), ಕಣ್ಣು, ನಾಲಗೆ, ಮೂಗು - ಇವು ಪಂಚೇಂದ್ರಿಯಗಳು. ಇವು ಗ್ರಹಿಸತಕ್ಕ ವಿಷಯಗಳೂ ಐದು. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳನ್ನು ಈ ಇಂದ್ರಿಯಗಳು ತಿಳಿಯಬಲ್ಲವು. ಬೇಕೆಂಬ ಅಪೇಕ್ಷೆಯನ್ನು ಇವು ಮನುಷ್ಯನಲ್ಲಿ ಹುಟ್ಟಿಸುತ್ತವೆ. ಅಪೇಕ್ಷೆಯು ಹೆಚ್ಚಾಗಿ ವಿಷಯಭೋಗವು ಅತಿಯಾದಾಗ ಇವುಗಳಿಂದ ವಿಪತ್ತೂ ನಿಶ್ಚಯ. ವಿಪತ್ತೆಂದರೆ ಮರಣವೇ ಆಗಬೇಕಾಗಿಲ್ಲ. ದೈಹಿಕ ಅನಾರೋಗ್ಯ, ನೈತಿಕ ಬೌದ್ಧಿಕ ಅವನತಿ, ಅವಮಾನ - ಮೊದಲಾದವೂ ವಿಪತ್ತುಗಳೇ.

**ಶಬ್ದಾದಿಭಿಃ ಪಂಚಭಿರೇವ ಪಂಚ**
**ಪಂಚತ್ವಮಾಪುಃ ಸ್ವಗುಣೇನ ಬದ್ಧಾಃ ।**
**ಕುರಂಗ-ಮಾತಂಗ-ಪತಂಗ-ಮೀನ-**
**ಭೃಂಗಾ ನರಃ ಪಂಚಭಿರಂಚಿತಃ ಕಿಮ್॥**

— *ವಿವೇಕಚೂಡಾಮಣಿ, ೭೮*

"ಶಬ್ದವೇ ಮೊದಲಾದ ಐದು ವಿಷಯಗಳು ತಮ್ಮ ಆಕರ್ಷಣಗುಣದಿಂದ (ಗುಣ=ಹಗ್ಗ) ಎಳೆದು ಕಟ್ಟಿದ್ದರಿಂದ ಜಿಂಕೆ, ಆನೆ, ಪತಂಗ (ದೀಪದಹುಳು), ಮೀನು, ದುಂಬಿ - ಇವು ಸತ್ತುಹೋಗುತ್ತವೆ. ಹೀಗಿರುವಾಗ ಐದು ಇಂದ್ರಿಯಗಳ ದಾಳಿಗೆ ಸಿಕ್ಕಿದ ಮನುಷ್ಯನ ಪಾಡೇನು!"

ಬೇಡರು ಊದುವ ಕೊಳಲಿನ ಶಬ್ದಕ್ಕೆ ಮರುಳಾಗಿ ಜಿಂಕೆಯು ಆಲಿಸುತ್ತ ನಿಂತಿರುತ್ತದೆ. ಆಗ ಇನ್ನೊಬ್ಬ ಬೇಡನು ಅದನ್ನು ಬಾಣದಿಂದ ಹೊಡೆದು ಕೊಲ್ಲುತ್ತಾನೆ. ಗಂಡಾನೆಯು ಹೆಣ್ಣಾನೆಯ ವ್ಯಾಮೋಹಕ್ಕೆ ಒಳಗಾಗಿ ಕಾಮಕ್ಕೆ (ಸ್ಪರ್ಶ) ಒಳಗಾಗಿ ಖೆಡ್ಡಾದಲ್ಲಿ ಸಿಕ್ಕಿಬೀಳುತ್ತದೆ. ಪತಂಗವು ದೀಪದ ರೂಪಕ್ಕೆ ಮರುಳಾಗಿ ಸುಟ್ಟು ಸಾಯುತ್ತದೆ. ಮೀನು ಅಂಬಿಗನೊಡ್ಡಿದ ಗಾಳದಲ್ಲಿರುವ ಮಾಂಸದ ರುಚಿಗಾಗಿ

ಬಂದು ಗಾಳದಲ್ಲಿ ಸಿಕ್ಕಿಕೊಳ್ಳುತ್ತದೆ. ದುಂಬಿಯು ಸಂಪಗೆಯ ಗಂಧಕ್ಕೆ ವಶವಾಗಿ ಬಂದು ಸಂಪಗೆಯಲ್ಲಿ ಸೇರಿ ಸಾಯುತ್ತದೆಯಂತೆ. ಈ ಪ್ರಾಣಿಗಳನ್ನು ಕೊಲ್ಲಲು ಒಂದೊಂದು ಇಂದ್ರಿಯವೇ ಸಾಕು. ಹೀಗಿರುವಾಗ ಐದು ಇಂದ್ರಿಯಗಳ ಆಕ್ರಮಣಕ್ಕೆ ಒಳಗಾದ ಮನುಷ್ಯನ ಪಾಡೇನು? ಇವನ ಪುಣ್ಯಕ್ಕೆ ಐದೇ ಇಂದ್ರಿಯಗಳಿವೆ, ಆರು ಇಲ್ಲ! ಅದಕ್ಕೆ ಬದಲಾಗಿ ಮನಸ್ಸು ಎಂಬುದು ಒಂದಿದೆ. ಸಿಟ್ಟು, ದುರಾಸೆ, ಹೊಟ್ಟೆಕಿಚ್ಚುಗಳನ್ನು ಎಬ್ಬಿಸಿ ಸರ್ವನಾಶಕ್ಕೆ ಅದು ಕಾರಣವಾಗಬಹುದು. ಇನ್ನೊಂದು ವಿಶೇಷವುಂಟು. ಪ್ರಾಣಿಗಳಿಗೆ ವಿಧಿ-ನಿಷೇಧಗಳಿಲ್ಲ. ಆದಕಾರಣ ಪಾಪವೂ ಇಲ್ಲ. ಮನುಷ್ಯನಿಗೆ ವಿಷಯಾತಿರೇಕದಿಂದ ಪಾಪವೂ ಗಂಟುಬೀಳುತ್ತದೆ.

**ಹಿತಬೋಧಕರು ಸಾಲದುದರಿಂದಲಲ್ಲವೀ**
**ಕ್ಷಿತಿಗೆ ದುರ್ದಶೆ ಬಂದುದವಿಧೇಯರಿಂದೆ ।**
**ದ್ಯುತಿ ಕಣ್ಣೊಳಿರ್ದೊಡೇಂ ಶಿರದಿ ಮದ್ಯರಸಂಗ-**
**ಳತಿಶಯಂ ಸೇರಿರಲು - ಮರುಳ ಮುನಿಯ ॥೯೪॥**

— *ಡಿ.ವಿ.ಜಿ.*

"ಈ ಜಗತ್ತಿಗೆ ದುರವಸ್ಥೆಯುಂಟಾಗಿರುವುದು ಹಿತಬೋಧಕರಿಲ್ಲವೆಂದಲ್ಲ. ಮತ್ತೇನೆಂದರೆ, ಹಿತಬೋಧಕರ ಉಪದೇಶವನ್ನು ಪಾಲಿಸದಿರುವ ಅವಿಧೇಯರಾದ ಜನರಿಂದ ಈ ದೆಸೆ ಬಂದಿದೆ. ಕಣ್ಣಿನಲ್ಲಿ ನೋಡುವ ಶಕ್ತಿ ಚೆನ್ನಾಗಿದ್ದರೂ ಕುಡುಕನು ಎಡವಿ ಬೀಳುತ್ತಲೇ ಇರುತ್ತಾನೆ. ತಲೆಗೆ ಹೆಂಡದ ಮತ್ತು ಏರಿರುವಾಗ ಹಿತಬೋಧಕರ ಉಪದೇಶದಿಂದ ಏನಾದೀತು!"

ಈಗ ಜಗತ್ತಿಗೆ ಬಂದಿರುವ ದುರವಸ್ಥೆ ಯಾವುದು? ಸದ್ಗುಣಗಳ ಹ್ರಾಸ, ದುರ್ಗುಣಗಳ ವೃದ್ಧಿ. ತೃಪ್ತಿ, ಸಂತೋಷ, ಸಹಬಾಳ್ವೆ, ಪರೋಪಕಾರ, ಕರ್ತವ್ಯನಿಷ್ಠೆ, ನಿಯಮಪಾಲನೆ, ಸತ್ಯ, ಅಹಿಂಸೆ, ಆರ್ಜವ - ಇವೆಲ್ಲ ಸದ್ಗುಣಗಳು ಕ್ಷೀಣವಾಗಿ ನಶಿಸಿಹೋದವೋ ಎಂಬಂತಾಗಿದೆ. ಎಲ್ಲೆಲ್ಲಿಯೂ ದುರಾಸೆ, ಹಿಂಸಾಚಾರ, ಲೋಭ, ಭ್ರಷ್ಟಾಚಾರ, ವಂಚನೆ - ಮುಂತಾದ ದುರ್ಗುಣಗಳು ನಾನು ಮುಂದು ತಾನು ಮುಂದೆಂದು ನುಗ್ಗಿಬಂದು ವಿಕಟ ನೃತ್ಯವನ್ನೆಸಗುತ್ತಿವೆ. ಈ ದುರ್ದೆಸೆಗೆ ಕಾರಣವೇನು? ಜನರಿಗೆ ಬುದ್ಧಿ ಹೇಳತಕ್ಕವರು ಯಾರೂ ಇಲ್ಲವೆ?

ಹಿತೋಪದೇಶಕರಾದ ಋಷಿ-ಮುನಿಗಳ, ಸಾಧು-ಸಂತರ ಕೊರತೆ ಈ ಜಗತ್ತಿಗೆ ಯಾವಾಗಲೂ ಸಂಭವಿಸಿಯೇ ಇಲ್ಲ. ಅವರ ಸಂಖ್ಯೆ ಅಪಾರವಾಗಿದೆ. ಅವರ ಗ್ರಂಥಗಳು ಇಂದಿಗೂ ನಮ್ಮ ಕಣ್ಣುಮುಂದಿವೆ. ಉಪದೇಶವನ್ನು ಪಾಲಿಸತಕ್ಕವರು ಬೆರಳೆಣಿಕೆಗೆ ಸಿಗುವಷ್ಟು ಜನರು ಮಾತ್ರ.

ಭಗವದ್ಗೀತೆಯಲ್ಲಿ ಅರ್ಜುನನು ಶ್ರೀಕೃಷ್ಣನನ್ನು ಕುರಿತು ಕೇಳುವ ಒಂದು ಪ್ರಶ್ನೆ ಮಾರ್ಮಿಕವಾಗಿದೆ: "ಮನುಷ್ಯನು ಯಾರಿಂದಲೋ ದಬ್ಬಲ್ಪಟ್ಟವನ ಹಾಗೆ, ದುರ್ಮಾರ್ಗಕ್ಕೆ ಇಳಿಯುತ್ತಾನಲ್ಲ, ಇದಕ್ಕೆ ಕಾರಣವೇನು?" ಅದಕ್ಕೆ ಶ್ರೀಕೃಷ್ಣನು ಕೊಡುವ ಉತ್ತರ ಹೀಗಿದೆ - "ಕಾಮವೆಂದರೆ ಆಸೆ. ಅದಕ್ಕೆ ಯಾವುದಾದರೂ ಅಡ್ಡಿ ಬಂದರೆ ಕ್ರೋಧವಾಗಿ ಪರಿಣಮಿಸುತ್ತದೆ. ಈ ಕಾಮ-ಕ್ರೋಧಗಳೇ ಮಾನವನ ದುರ್ವರ್ತನೆಗೆ ಕಾರಣ. ಇದೇ ಮಾನವಜನಾಂಗಕ್ಕೆ ವೈರಿ."

ಈಗ ಜಗತ್ತಿಗೆ ಉಪದೇಶಕರು ಬೇಕಾಗಿಲ್ಲ. ಉಪದೇಶಗಳ ಪಾಲಕರು ಬೇಕಾಗಿದ್ದಾರೆ. ಹಿತವನ್ನು ಸದಾ ಬೋಧಿಸುತ್ತಲೇ ಇರುವ ರಾಜಕಾರಣಿಗಳೂ, ಕವಿಗಳೂ, ಪ್ರವಚನಕರ್ತರೂ, ಪಂಡಿತರೂ ಅನ್ಯರಿಗೆ ಬೋಧಿಸುವುದನ್ನು ತಮ್ಮ ಜೀವನದಲ್ಲೂ ಅಳವಡಿಸಿಕೊಂಡರೆ ಸಾಕು, ಈ ಭೂಲೋಕವೆಂಬ ನರಕವು ಸ್ವರ್ಗವಾಗಿಬಿಡುತ್ತದೆ.

ನಂಬು ನೀಂ ದೈವವನು ನಂಬು ಸ್ವಯಂಭುವನು
ನಂಬು ಸಾಂಬನ ಮನದಿ ತುಂಬು ಭಕ್ತಿಯನು ।
ಬಿಂಬವೋ ಕಂಬವೋ ನಂಬಿಕೆಯ ಮಾತ್ರದಿಂ-
ದಿಂಬುಗೊಳುವುದು ಜೀವ – ಮರುಳ ಮುನಿಯ ॥೯೫॥

— ಡಿ.ವಿ.ಜಿ.

"ದೈವವನ್ನು ನಂಬು, ಸ್ವಯಂಭುವಾದ ಈಶ್ವರನನ್ನು ನಂಬು, ಸಾಂಬಶಿವನನ್ನು ನಂಬಿ ಹೃದಯದಲ್ಲಿ ಭಕ್ತಿಯನ್ನು ತುಂಬಿಕೊ. (ಶ್ರೀರಾಮಕೃಷ್ಣ ಪರಮಹಂಸರು ನಂಬಿದಂತೆ) ನೀನು ಪೂಜಿಸತಕ್ಕದ್ದು ಮೂರ್ತಿಯಾಗಿರಬಹುದು. ಅಥವಾ (ಪ್ರಹ್ಲಾದನು ನಂಬಿದಂತೆ)

ಕಂಬವಾಗಿರಬಹುದು. ಕೇವಲ ನಂಬಿಕೆಯಿಂದಲೇ ಜೀವವು ಹದಗೊಳ್ಳುವುದು - ವಿಕಸಿತವಾಗುವುದು."

ಯಾವುದೇ ಒಂದು ಘಟನೆ ನಡೆದಾಗ ಅದಕ್ಕೆ ಒಂದು ಕಾರಣವಿರಬೇಕೆಂಬುದು ನಿಶ್ಚಿತವಾದದ್ದು. ಕಾರಣವಿಲ್ಲದೆ ಕಾರ್ಯವು ಹುಟ್ಟಲಾರದು. ನಮ್ಮ ಜೀವನದ ಘಟನೆಗಳಲ್ಲಿ ಎಷ್ಟೋ ವೇಳೆ ಕಾರಣವೇನೆಂಬುದು ತಿಳಿಯದೆ ಹೋಗುತ್ತದೆ. ಮನುಷ್ಯಮಾತ್ರನಿಂದ ಊಹಿಸಲಾರದ ಕಾರಣ ಅದು. ಯಾವುದನ್ನು ತಿಳಿಯಲು ಶಕ್ಯವೋ ಅದು ದೃಷ್ಟಕಾರಣ. ಯಾವುದನ್ನು ನಾವು ಗೊತ್ತುಪಡಿಸಲಾರೆವೋ ಅದು ಅದೃಷ್ಟಕಾರಣ. ಈ ಅದೃಷ್ಟವೇ ದೈವ. ಕಾರಣವಿಲ್ಲದೆ ಯಾವುದೂ ಸಂಭವಿಸುವುದಿಲ್ಲವೆಂಬುದು ವೈಜ್ಞಾನಿಕವಾದ್ದರಿಂದ, ದೃಷ್ಟವಾದ ಕಾರಣವು ಗೊತ್ತಾಗದ ಸಂದರ್ಭದಲ್ಲಿ ದೈವವನ್ನು ಕಾರಣವೆಂದು ನಂಬುವುದು ವೈಜ್ಞಾನಿಕವೇ ಆಗುತ್ತದೆ. ಜನ್ಮಾಂತರಕೃತವಾದ ನಮ್ಮ ಕರ್ಮವೇ ದೈವವೆಂದು ಶಾಸ್ತ್ರಕಾರರ ಸಿದ್ಧಾಂತವಿದೆ. ಇದನ್ನು ನಂಬುವುದರಿಂದ ವಿಷಾದಕರ ಘಟನೆಗಳಲ್ಲಿ ಮನಸ್ಸಿಗೆ ಒಂದು ಶಾಂತಿ ದೊರೆಯುತ್ತದೆ. ಮನಃಶಾಂತಿಯು ಅಲ್ಪವಾದ ಫಲವಲ್ಲ.

ನಂಬುವುದು ಜೀವದ ಉತ್ಕರ್ಷಕ್ಕಾಗಿ. ಗುರಿಯಿಲ್ಲದ ಮನುಷ್ಯಜೀವನ ಬರಡು. ಧಾರ್ಮಿಕಜೀವನದಿಂದಲೇ ಈ ಬಡಜೀವಕ್ಕೆ ಶಾಂತಿ ದೊರೆತೀತು. ಈಶ್ವರನಲ್ಲಿ ನಂಬಿಕೆಯಿಲ್ಲದೆ ಧರ್ಮದ ವ್ಯವಸ್ಥೆಯೇ ಆಗದು. ಈಶ್ವರನೇ ಧರ್ಮದ ಮೇಟಿಗಂಬ. ದೇವರಲ್ಲಿ ವಿಶ್ವಾಸ ಇಡುವುದು ಮೂಢನಂಬಿಕೆಯೆಂದು ತಳ್ಳಲಾಗದು. ಏಕೆಂದರೆ, ನಂಬಿಕೆ ಎಲ್ಲವೂ ಮೂಢವೇ ಆಗಿರುತ್ತದೆ. ನಂಬಿಕೆಯಿಲ್ಲದೆ ಲೋಕವ್ಯವಹಾರವೇ ಸಾಗದು. ಗೊತ್ತಾದ ಸ್ಥಳಕ್ಕೆ ಗೊತ್ತಾದ ಸಮಯದಲ್ಲಿ ತಲಪುತ್ತೇವೆಂದು ರೈಲನ್ನೋ ವಿಮಾನವನ್ನೋ ಏರುತ್ತೇವೆ. ಹಾಗೆಯೇ ಆಗುವುದೆಂಬ ಭರವಸೆಯುಂಟೇನು ? ಒಂದು ರಾಜಕೀಯಪಕ್ಷವು ಪ್ರಬಲವಾದ ಮತ್ತು ಪ್ರಬುದ್ಧವಾದ ಸರ್ಕಾರವನ್ನು ರಚಿಸುತ್ತದೆಂಬ ನಂಬಿಕೆಯಿಂದ ಜನರು ಮತ ನೀಡುತ್ತಾರೆ. ಎಷ್ಟುಬಾರಿ ಈ ನಂಬಿಕೆ ಸತ್ಯವಾಗಿದೆ? ಆದರೂ ಮತಗಳನ್ನು ನೀಡುತ್ತಲೇ ಇದ್ದಾರೆ! ಎಲ್ಲ ನಂಬಿಕೆಗಳನ್ನು ಮೌಢ್ಯವು ಗಟ್ಟಿಯಾಗಿ ಅಪ್ಪಿಕೊಂಡಿರುತ್ತದೆ. ದೇವರಲ್ಲಿ ಇಡುವ ದೃಢವಾದ ನಂಬಿಕೆಯಿಂದ ಪರವಿರಲಿ - ಇಲ್ಲದಿರಲಿ, ಇಹವಂತೂ ಉಂಟು. ಜೀವನಕ್ಕೆ ಒಂದು ಕಾಂತಿ ಬರುತ್ತದೆ. ಬಾಳಿಗೆ ನೆಮ್ಮದಿ ಇರುತ್ತದೆ. ಗುರಿಯಿಲ್ಲದೆ ತಾರಾಡಿ ತತ್ತರಿಸುವ ಪ್ರಸಂಗ ಬರುವುದಿಲ್ಲ.

**ವಾನರನ ಲಾಂಗೂಲವೆರಡಾದರದರಿನವ -**
**ನಾಡುವಾ ಚೇಷ್ಟೆಯೇನರೆಯೊ ಇಮ್ಮಡಿಯೋ ।**
**ಮಾನವನೊಳಾತ್ಮ ಬಲಿಯದೆ ಬಾಹ್ಯವೈಭವಗ-**
**ಳೇನಾದೊಡೇಂ ಲಾಭ - ಮರುಳ ಮುನಿಯ ॥೯೬॥**

*— ಡಿ.ವಿ.ಜಿ.*

"ಕಪಿಯ ಬಾಲಕ್ಕೆ ಇನ್ನೊಂದು ಚಿಗುರೊಡೆದು ಎರಡು ಬಾಲಗಳಾದರೆ, ಆ ಕಪಿಯ ಚೇಷ್ಟೆ ಕಡಮೆಯಾದೀತೋ ಅಥವಾ ಎರಡರಷ್ಟಾದೀತೋ? ಮನುಷ್ಯನ ಆತ್ಮವು, ಹೃದಯಸಂಸ್ಕಾರವು ಬಲಿಯದಿದ್ದಾಗ, ಅವನ ಬಾಹ್ಯವೈಭವಗಳು ಹೆಚ್ಚಿದರೇನು ಆದೀತು? ಅದರಿಂದ ಮಾನವನಿಗೆ ಯಾವ ಪ್ರಯೋಜನವಾದೀತು?"

ಕಪಿಗೆ ತನ್ನ ಬಾಲದ ಮೇಲೆ ಬಹಳ ಪ್ರೀತಿಯಂತೆ. ಅದರ ವೈಭವದ ಚಿಹ್ನೆ ಅದು ! ವಾನರಜಾತಿ ವಿಕಾಸಗೊಂಡು ನರಜಾತಿ ಹುಟ್ಟಿತೆಂಬುದು ಡಾರ್ವಿನ್ನನ ವಿಕಾಸವಾದ. ವಾನರ ನರನಾದರೂ ಸಂಸ್ಕಾರವಶದಿಂದ ವಾನರಸ್ವಭಾವವನ್ನು ಇನ್ನೂ ಸ್ವಲ್ಪ ಉಳಿಸಿಕೊಂಡಿದ್ದಾನೆ! ಶರೀರಶಾಸ್ತ್ರದಂತೆ ಮನಃಶಾಸ್ತ್ರವೂ ವಿಕಾಸವಾದವನ್ನು ಬೆಂಬಲಿಸಬಹುದು. ಪಾಕ್ಷಿಕವಾಗಿ ವಾನರತ್ವವನ್ನು ಉಳಿಸಿಕೊಂಡಿರತಕ್ಕವನು ನರ. ವಾನರ ಮರದ ಮೇಲೆ ಸಂಚರಿಸುತ್ತ ಮರದಿಂದ ಮರಕ್ಕೆ ಸುಲಭವಾಗಿ ನೆಗೆಯಬಲ್ಲದು. ನೆಲದ ಮೇಲೂ ನಡೆಯಬಲ್ಲದು. ತನಗೆ ಆಶ್ರಯವನ್ನಿತ್ತ ಮರವನ್ನು ಅದು ಪ್ರೀತಿಸುತ್ತದೆ. ಮರಕ್ಕೆ ಯಾವ ಹಾನಿಯನ್ನೂ ಒಡ್ಡುವುದಿಲ್ಲ. ನರನಾದರೋ ತನಗೆ ಉಪಕಾರಿಯಾದ ಮರವನ್ನು ಅದರ ಮೇಲಿನ ಪ್ರೀತಿಯಿಂದಲೇ ಕಡಿದುರುಳಿಸುತ್ತಾನೆ! 'ಕೃತಸ್ಯ ಪ್ರತಿಕರ್ತವ್ಯಂ' ಎಂಬ ಕಣಿಕನೀತಿಶಾಸ್ತ್ರದಿಂದ ಬುದ್ಧಿವಿಕಾಸವನ್ನು ಹೊಂದಿ ಪ್ರತೀಕಾರದಲ್ಲಿ ತೊಡಗಿದ್ದಾನೆ.

ಈಗ ರಾಷ್ಟ್ರವು ಭೋಗಸಾಮಗ್ರಿಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡಿದೆ. ಕುಡಿಯುವ ನೀರು, ವಾಸಕ್ಕೆ ಮನೆ - ಮುಂತಾದ ಆವಶ್ಯಕತೆಗಳಿಗಿಂತ ವೈಭವ ವಿಲಾಸಗಳಿಗೆ ಅಧಿಕವಾಗಿ ಮನಸೋತಿದೆ. ಒಂದೆಡೆ ಬಡತನದ ಪ್ರೇತನೃತ್ಯ ನಡೆಯುತ್ತಿದ್ದರೆ, ಇನ್ನೊಂದೆಡೆ ವೈಭವದ ರಾಸಲೀಲೆ ನಡೆಯುತ್ತಿದೆ. ನಮಗೆ ಸ್ವಾತಂತ್ರ್ಯ ಬಂದ ಈಚೆಗೆ ಐವತ್ತು ವರ್ಷಗಳಲ್ಲಿ ಹೇಗೆ ಹೇಗೆ ಭೋಗಾಭಿಲಾಷೆ

ಬೆಳೆಯಿತೋ ಹಾಗೆ ಹಾಗೇ ಜನರಲ್ಲಿ ಆಸುರೀಸಂಪತ್ತು ಬೆಳೆಯುತ್ತ ಬಂದಿದೆ. ಕೊಲೆ, ಹಿಂಸಾಚಾರ, ಭ್ರಷ್ಟಾಚಾರ, ದರೋಡೆ ಮುಂತಾದ ವಿಕೃತಿಗಳು, ಮಳೆಗಾಲದಲ್ಲಿ ಮುಳ್ಳುಪೊದೆಗಳು ಬೆಳೆದಹಾಗೆ, ಹುಲುಸಾಗಿ ಬೆಳೆದವು. ಈಚೆಗೆ ರಾಷ್ಟ್ರದಲ್ಲಿ ನಡೆಯುತ್ತಿರುವ ಕೊಲೆಗಳು ಎಷ್ಟು? ಎಷ್ಟು ಕುಟುಂಬಗಳು ಕಣ್ಣೀರಲ್ಲಿ ಕೈತೊಳೆಯುತ್ತಿವೆ? ಯುದ್ಧವು ನಡೆದಾಗಲೂ ಈ ಪ್ರಕಾರದಲ್ಲಿ ಪ್ರಾಣಹಾನಿಯಾಗಲಾರದೆನಿಸುತ್ತದೆ. ಸುಖಸಮೃದ್ಧಿಯ ಮಾತಿರಲಿ, ಪ್ರಜೆಗಳ ಪ್ರಾಣರಕ್ಷಣೆಯನ್ನೂ ಸರ್ಕಾರವು ಮಾಡಲಾರದೆಹೋಗಿದೆ.

ಆನುವಂಶಿಕವಾಗಿ ವಾನರಚೇಷ್ಟೆಯನ್ನು ಗಳಿಸಿಕೊಂಡಿದ್ದ ನರನಿಗೆ, ಭೋಗ ಲಾಲಸೆಯೆಂಬ ಬಾಲ ಹುಟ್ಟಿಕೊಂಡಿದೆ. ವಾನರನ ಚೇಷ್ಟೆ ವಿನೋದಕಾರಿಯಾದರೆ, ನರನ ಚೇಷ್ಟೆ ಪ್ರಾಣಾಂತಕಾರಿ. ಮಾನವನ ವಾನರಚೇಷ್ಟೆ ಅತಿಯಾಗಲಿಲ್ಲ , ದಾನವ ಚೇಷ್ಟೆಯಾಗಿ ಇಮ್ಮಡಿಸಿದೆ.

**ಸರಸತಿಯ ಸತ್ರ ಬಳಿಯಿರೆ ತೊರೆದು ದೂರದಾ**
**ಸಿರಿದೇವಿಯಂಗಡಿಯನರಸಿ ತಟವಟಿಸಿ ।**
**ಹೊರಹೊಳಪಿನಾಸೆಯಿಂದೊಳಮಬ್ಬನಪ್ಪುವನು**
**ಕುರುಡನೋ ಕಂಡವನೊ? - ಮರುಳ ಮುನಿಯ ॥೯೭॥**

— *ಡಿ.ವಿ.ಜಿ.*

“ಸರಸ್ವತೀದೇವಿಯ ಛತ್ರವೇ ಬಳಿಯಲ್ಲಿ ಇದ್ದರೂ ಅದನ್ನು ತೊರೆದು, ದೂರದಲ್ಲಿರುವ ಲಕ್ಷ್ಮೀದೇವಿಯ ಅಂಗಡಿಯನ್ನು ಹುಡುಕುತ್ತ ಹೋಗಿ ಚಡಪಡಿಸತಕ್ಕವರಿದ್ದಾರೆ. ಹೊರಗಿನ ಥಳುಕಿಗೆ ಮೆಚ್ಚಿ ಅದರ ನಿಮಿತ್ತವಾಗಿ ತಮ್ಮ ಅಂತರಂಗವನ್ನು ಕತ್ತಲೆಯ ಮಬ್ಬಿಗೆ ದೂಡುತ್ತಾರೆ. ಇವರನ್ನು ಕುರುಡರೆನ್ನಬೇಕೆ, ಕಣ್ಣಿದ್ದವರೆನ್ನಬೇಕೆ?”

ವಿದ್ಯೆ, ಧನ - ಇವೆರಡೂ ಮನುಷ್ಯನು ಗಳಿಸಬಲ್ಲ ವಿಶಿಷ್ಟ ಆಸ್ತಿಗಳು. ಈ ಆಸ್ತಿಗಳ ಸಂಪಾದನೆ ಮನುಷ್ಯೇತರ ಪ್ರಾಣಿಗಳಿಗಿಲ್ಲ. ಅದಕ್ಕಾಗಿ ಅವು ಪ್ರಯತ್ನಿಸುವುದಿಲ್ಲ. ಎಲ್ಲ ಪ್ರಾಣಿಗಳಿಗೂ ಸಹಜವಾಗಿ ಬಂದ ಬುದ್ಧಿಶಕ್ತಿ ತಕ್ಕಮಟ್ಟಿಗೆ ಇರುತ್ತದೆ. ಅದು

ಬಹಳ ಪರಿಮಿತವಾದದ್ದು. ಅಂತೆಯೇ ಮನುಷ್ಯನಿಗೂ ಸಹಜವಾದ ಬುದ್ಧಿ ಶಕ್ತಿಯುಂಟು. ಲೋಕವೀಕ್ಷಣೆಯಿಂದಲೂ ತನ್ನ ಅನುಭವದಿಂದಲೂ ಮನುಷ್ಯನು ತನ್ನ ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳಬಲ್ಲ. ಸಹಜವಾಗಿ ಬರತಕ್ಕದ್ದು ಬುದ್ಧಿ. ಗ್ರಂಥಗಳ ಅಧ್ಯಯನದಿಂದ ಗಳಿಸತಕ್ಕದ್ದು ವಿದ್ಯೆ. ಈ ವಿದ್ಯೆ ಸಹಜವಾದ ಬುದ್ಧಿಶಕ್ತಿಯನ್ನು ಬೆಳೆಸಿ ಹದಗೊಳಿಸುತ್ತದೆ. ಬುದ್ಧಿಯು ವರ್ಧಿಸಿ ಪಕ್ವವಾಗುವುದಕ್ಕೆ ಗ್ರಂಥಗಳ ಅಧ್ಯಯನವೇ ಮುಖ್ಯವಾದ ಮಾರ್ಗ. ಏಕೆಂದರೆ, ಈ ಗ್ರಂಥ, ಲೋಕಾನುಭವಗಳು ಪೂರ್ವಜರ ಲೋಕವೀಕ್ಷಣೆಗಳಿಂದ ಬಂದ ಜ್ಞಾನದ ಭಂಡಾರಗಳು. ಆ ಜ್ಞಾನರಾಶಿ ಕ್ರಮವಾಗಿ ಬೆಳೆದುಬಂದದ್ದು. ಮನುಷ್ಯನು ತನ್ನೊಬ್ಬನ ಊಹಾಪೋಹಗಳಿಂದ ಗಳಿಸುವ ಜ್ಞಾನವು ಬಹಳ ಪರಿಮಿತ. ಆತನ ಊಹನಶಕ್ತಿಯೇ ಒಂದು ಪರಿಮಿತಿಗೆ ಒಳಪಟ್ಟದ್ದು. ಋಷಿಗಳ ಅಸಾಧಾರಣ ಜ್ಞಾನವೂ ಸಹ ಪೂರ್ವಗ್ರಂಥಗಳ ಅಧ್ಯಯನದಿಂದ ಬಂದದ್ದು - ಎನ್ನುತ್ತಾನೆ ವಾಕ್ಯಪದೀಯಕಾರನಾದ ಭರ್ತೃಹರಿ -

**ಕಿಯದ್ವಾ ಶಕ್ಯಮುನ್ನೇತುಂ ಸ್ವಶಕ್ತಿಮನುಧಾವತಾ ।**
**ಋಷೀಣಾಮಪಿ ಯಜ್ಞಾನಂ ತದಪ್ಯಾಗಮಪೂರ್ವಕಮ್ ॥**

ಅಭಿನವಗುಪ್ತನೆಂಬ ವಿಖ್ಯಾತ ವಿದ್ವಾಂಸನು "ನನ್ನ ಮೇಲ್ಮಟ್ಟದ ವಿಚಾರಗಳೆಲ್ಲವೂ ಹಿಂದಿನವರು ಕಟ್ಟಿದ ಮೆಟ್ಟಿಲುಗಳನ್ನೇರಿ ಬಂದವು" ಎನ್ನುತ್ತಾನೆ. ಪ್ರಾಚೀನ ಶಾಸ್ತ್ರಗಳಾಗಲಿ, ಆಧುನಿಕ ಶಾಸ್ತ್ರಗಳಾಗಲಿ ಬಹುಮಂದಿ ಶೋಧಕರ ಪ್ರಯಾಸದ ಫಲಗಳು.

ವಿದ್ಯಾವಂತನು ಜಗತ್ತಿನ ಸ್ಥಿತಿಗಳನ್ನು ಸ್ಪಷ್ಟವಾಗಿ ನೋಡಿ ತಿಳಿಯಬಲ್ಲ. ಅವನ ಮನೋನೇತ್ರಗಳಿಗೆ ಹಬ್ಬಿರುವ ಮಬ್ಬು ಹರಿದುಹೋಗಿರುತ್ತದೆ. ಅವನು ಜಗತ್ತಿಗೆ ನೀಡುವ ಮಾರ್ಗದರ್ಶನವು ಅಮೂಲ್ಯವಾದದ್ದು ಮತ್ತು ಶಾಶ್ವತವಾದದ್ದು. ತನ್ನ ಉದ್ಧಾರದೊಂದಿಗೆ ಅನ್ಯರ ಉದ್ಧಾರಕ್ಕಾಗಿ ಮಾರ್ಗವನ್ನು ತೋರಿಸಬಲ್ಲವನು ವಿದ್ಯಾವಂತನೇ. ಸರಸ್ವತಿಯ ಉಪಾಸನೆಯಿಂದ ಅವನು ಗಳಿಸುವ ಆನಂದಸಂಪತ್ತು ಧನಬಲದಿಂದ ಕೊಳ್ಳಲು ಶಕ್ಯವಾದದ್ದೇ ಅಲ್ಲ. ತನ್ನ ಉಪಾಸನೆ ಮಾಡುವ ಭಕ್ತರಿಗೆ ಸುಲಭವಾಗಿ ಒಲಿಯತಕ್ಕವಳು ಸರಸ್ವತಿ. ಅವಳ ಒಲವು ಶಾಶ್ವತವಾದದ್ದು.

ಲಕ್ಷ್ಮೀದೇವಿಯ ಒಲವು ಸುಲಭವಲ್ಲ, ಶಾಶ್ವತವೂ ಅಲ್ಲ. ಅವಳ ಅನುಗ್ರಹದಿಂದ ಲಭಿಸತಕ್ಕದ್ದು ಬಾಹ್ಯವಾದ - ತಾತ್ಕಾಲಿಕವಾದ ಸುಖ. ಅವಳ ಕಟಾಕ್ಷವು ಮನುಷ್ಯನನ್ನು

ಅಡ್ಡದಾರಿಗೆ ಒಯ್ದು ಪ್ರಪಾತದಲ್ಲಿ ಬೀಳಿಸುವ ಸಂಭವವೂ ಉಂಟು. ಆದರೂ ಜನರಿಗೆ ಲಕ್ಷ್ಮೀಕಟಾಕ್ಷವನ್ನು ಪಡೆಯುವ ಪ್ರವೃತ್ತಿಯೇ ಕಂಡುಬರುತ್ತದೆ. ಅಮೃತಪ್ರಾಯದ ಕ್ಷೀರವನ್ನು ಮನೆಗೆ ತಂದು ಕೊಡಬೇಕಾಗಿದೆ. ಹೆಂಡದಂಗಡಿ ದೂರವಾದರೂ ಜನರೇ ಅಲ್ಲಿಗೆ ಧಾವಿಸುತ್ತಾರೆ.

ನಿನ್ನನಾರ್ ನಿಯಮಿಸಿದರನ್ನವಸ್ತ್ರದನೆಂದು
ಶೂನ್ಯವಪ್ಪುದೆ ಲೋಕ ನಿನ್ನ ಹಂಗಿರದೆ?।
ಸ್ವರ್ಣಗರ್ಭನ ಪಟ್ಟವನು ಧರಿಸಿ ನೀಂ ಜಗಕೆ
ಕನ್ನವಿಡೆ ಬಂದಿಹೆಯ – ಮರುಳ ಮುನಿಯ? ॥೯೮॥

— ಡಿ.ವಿ.ಜಿ.

"ಜನರಿಗೆ ಅನ್ನದಾತೃ, ವಸ್ತ್ರದಾತೃ ಎಂದು ನಿನ್ನನ್ನು ಯಾರು ಗೊತ್ತು ಮಾಡಿದ್ದಾರೆ? ನಿನ್ನ ಹಂಗು ಇಲ್ಲದಿದ್ದರೆ ಲೋಕವೆಲ್ಲವೂ ಅನ್ನ ವಸ್ತ್ರಗಳಿಲ್ಲದೆ ಶೂನ್ಯವಾಗಿಬಿಡುತ್ತದೆಯೆ? ಹಿರಣ್ಯಗರ್ಭನ (ಬ್ರಹ್ಮನ) ಪಟ್ಟವನ್ನು ಧರಿಸಿ ಈ ಜಗತ್ತಿಗೆ ಕನ್ನವನ್ನು ಹಾಕಲು ಬಂದಿದ್ದೀಯೋ ಹೇಗೆ?"

ಶ್ರೀಮಂತನಾದವನೊಬ್ಬನು, ಶ್ರೀರಾಮಕೃಷ್ಣ ಪರಮಹಂಸರೊಡನೆ ಮಾತನಾಡುತ್ತ ತಾನು ಬಡವರಿಗೆ ತುಂಬ ಉಪಕಾರ ಮಾಡಿದ್ದೇನೆಂದೂ ತನ್ನಿಂದ ಅನೇಕರು ಬದುಕಿದರೆಂದೂ ಹೇಳಿದ. ಆಗ ಪರಮಹಂಸರು "ಹಾಗೆ ಹೇಳಬೇಡ. ಜನರಿಗೆ ಉಪಕಾರ ಮಾಡಲು ನೀನು ಯಾರು? ಜಗತ್ತನ್ನು ಸೃಷ್ಟಿಸಿದ ಭಗವಂತನೊಬ್ಬನೇ ಉಪಕಾರ ಮಾಡಬಲ್ಲ. ಕೈಲಾದಷ್ಟು ಜನರ ಸೇವೆ ಮಾಡಿದೆನೆಂದು ಬೇಕಾದರೆ ಹೇಳಿಕೊ. ನಾವು ಮಾಡಬಹುದಾದದ್ದು ಸೇವೆ, ಉಪಕಾರವಲ್ಲ" ಎಂದರಂತೆ. ಯಯಾತಿರಾಜನು ನೂರಾರು ಪುಣ್ಯಕಾರ್ಯಗಳನ್ನು ಮಾಡಿ ಸ್ವರ್ಗದಲ್ಲಿ ದೇವೇಂದ್ರ ಪದವಿಗೆ ಯೋಗ್ಯನಾದನು. ಇಂದ್ರನ ಅಧಿಕಾರವನ್ನು ವಹಿಸಿಕೊಳ್ಳುವುದಕ್ಕಾಗಿ ದೇವಲೋಕಕ್ಕೆ ಹೋದನು. ದೇವೇಂದ್ರನು ದಿಗ್‌ಭ್ರಾಂತನಾಗಿ ತನ್ನ ಗುರುವಾದ ಬೃಹಸ್ಪತಿಯನ್ನು ಕಂಡು, ತನಗೆ ಅಧಿಕಾರಚ್ಯುತಿ ಬಂದಿತೆಂದು ದೂರಿಕೊಂಡ. ಅದಕ್ಕೆ ಬೃಹಸ್ಪತಿಯು "ಹೆದರಬೇಡ, ನಿನ್ನ ದೇವಸಭೆಗೆ ಯಯಾತಿ

ಬಂದಾಗ 'ಯಯಾತಿರಾಜ, ಇಂದ್ರಪದವಿಯನ್ನೇರಲು ನಿನಗಿರುವ ಯೋಗ್ಯತೆ ಏನು?' ಎಂದು ಪ್ರಶ್ನೆ ಮಾಡು" ಎಂದು ಹೇಳಿಕಳಿಸಿದ. ಆ ಪ್ರಕಾರ ದೇವೇಂದ್ರನು ಯಯಾತಿಯನ್ನು ಪ್ರಶ್ನೆಮಾಡಿದ. ಅದಕ್ಕೆ ಯಯಾತಿಯು ದರ್ಪದಿಂದ ನಾನು ಇಂತಹ ಶ್ರೇಷ್ಠ ಕಾರ್ಯಗಳನ್ನು ಮಾಡಿದ್ದೇನೆ, ಪ್ರಜೆಗಳಿಗೆ ನಾನು ಇಷ್ಟು ಉಪಕಾರ ಮಾಡಿದ್ದೇನೆ, ಎಂಬುದಾಗಿ ತಾನು ಮಾಡಿದ ಕಾರ್ಯಗಳನ್ನು ಒಂದೊಂದಾಗಿ ಹೇಳಿಕೊಂಡನಂತೆ. ಒಡನೆಯೇ ಅವನ ಎಲ್ಲ ಪುಣ್ಯಗಳೂ ಕ್ಷಯಿಸಿಹೋದವು. ಸ್ವರ್ಗದಲ್ಲಿರುವ ಯೋಗ್ಯತೆಯನ್ನೂ ಕಳೆದುಕೊಂಡು ಭೂಲೋಕಕ್ಕೆ ಉರುಳಿದ.

'ಧರ್ಮಃ ಕ್ಷರತಿ ಕೀರ್ತನಾತ್' : ತಾನು ಮಾಡಿದ ಪುಣ್ಯಕಾರ್ಯವನ್ನು ತಾನೇ ಬಾಯಿಬಿಟ್ಟು ಹೇಳಿಕೊಂಡರೆ ಗಳಿಸಿದ ಪುಣ್ಯವು ಕ್ಷಯಿಸಿಹೋಗುತ್ತದೆ.

ಅನ್ನವನ್ನು ಕೊಡತಕ್ಕವನು ನಾನೆಂದು ಹೇಳಿಕೊಳ್ಳಲು ನಮಗೆ ಯಾವ ಅಧಿಕಾರ ಉಂಟು? ಅಕ್ಕಿಯನ್ನು ಬೆಳೆದದ್ದು ಭೂಮಿತಾಯಿ, ನೀರು, ಗಾಳಿ, ಸೂರ್ಯ, ಆಕಾಶ.

ಈ ಜಗತ್ತಿನಲ್ಲಿ ಅನಿವಾರ್ಯ ವ್ಯಕ್ತಿ ಎಂಬವರು ಯಾರೂ ಇಲ್ಲ. ಈಶ್ವರನ ಸೃಷ್ಟಿ ಬಡವಲ್ಲ, ಬರಡಲ್ಲ; ಎಂಥೆಂಥವರೋ ಹುಟ್ಟಿ ಗತಿಸಿಹೋದರು. ಜಗತ್ತು ತನ್ನ ಪಾಡಿಗೆ ನಡೆಯುತ್ತಲೇ ಇದೆ. ಸೂರ್ಯ ಹುಟ್ಟುತ್ತಾನೆ. ಗಾಳಿ ಬೀಸುತ್ತದೆ. ನದಿ ಹರಿಯುತ್ತದೆ. ನಾನಾ ಸಂಪತ್ತುಗಳನ್ನು ಭೂಮಿ ಜನರಿಗೆ ಹಂಚುತ್ತಲೇ ಇದೆ. ಇದನ್ನು ಮನಗಾಣುವುದೇ ತನಗೆ ಶ್ರೇಯಸ್ಸು, ಲೋಕಕ್ಕೆ ಉಪಕಾರ.

**ಋಣಗಳುಂಟೆನಿತೆನಿತೊ ಅನ್ನಋಣ ವಸ್ತ್ರಋಣ**
**ಧನಋಣಗಳವನಿನಿತು ತೀರಿಸಲ್ಕಕ್ಕುಂ ।**
**ಋಣವೊಂದು ಬೇರಿಹುದು ತೀರಿಸಲ್ಕಸದಳವೊ**
**ಹೆಣದ ಹೊರೆಯದು ಜಗಕೆ - ಮರುಳ ಮುನಿಯ ॥೯॥**

— *ಡಿ.ವಿ.ಜಿ.*

"ನಾವು ತೀರಿಸಬೇಕಾದ ಸಾಲಗಳು ಎಷ್ಟೋ ಇವೆ - ಅನ್ನಋಣ, ವಸ್ತ್ರಋಣ, ಧನಋಣ ಮೊದಲಾದವು. ಅವನ್ನು ಸ್ವಲ್ಪವಾದರೂ ತೀರಿಸಲು ಸಾಧ್ಯವುಂಟು. ಇವುಗಳಲ್ಲದೆ ಇನ್ನೊಂದು ಋಣ ಇದೆ.

ಅದನ್ನು ಮಾತ್ರ ತೀರಿಸಲು ಸಾಧ್ಯವಿಲ್ಲ. ಅದು ಯಾವುದೆಂದರೆ, ನಾವು ಜಗತ್ತಿಗೆ ಬಿಟ್ಟುಹೋಗುವ ನಮ್ಮ ಹೆಣದ ಹೊರೆ!”

ಪ್ರತಿಯೊಬ್ಬ ಮಾನವ ಇನ್ನೊಬ್ಬರ ನೆರವಿಲ್ಲದೆ ಬಾಳಲಾರ. ಶಾಸ್ತ್ರವು ಹೇಳುತ್ತದೆ, ಮನುಷ್ಯನು ಹುಟ್ಟುವಾಗಲೇ ಮೂರು ಋಣಗಳನ್ನು ಹೊತ್ತುಕೊಂಡು ಬಂದಿರುತ್ತಾನೆ - ಎಂದು: ಋಷಿಋಣ, ದೇವಋಣ, ಪಿತೃಋಣ. ಜ್ಞಾನಸಂಪಾದನೆಗಾಗಿ, ಜ್ಞಾನವೃದ್ಧಿಗಾಗಿ ಅಗಾಧಶ್ರಮವಹಿಸಿದವರು ಋಷಿಗಳು. ಅಪಾರ ವೇದರಾಶಿಯನ್ನು ಉಳಿಸಿಕೊಟ್ಟ ಮಹಾತ್ಮರು ಅವರು. ಹಾಗೆಯೇ ವಿಭಿನ್ನ ದರ್ಶನಗಳನ್ನೂ ಆಯುರ್ವೇದಾದಿ ಶಾಸ್ತ್ರಗಳನ್ನೂ ಲೋಕೋಪಕಾರಕ್ಕಾಗಿ ರಚಿಸಿ, ಉಳಿಸಿ, ಬೆಳೆಸಿದವರು ಅವರು. ಅವರಿಗಾಗಿ ನಾನು ತೆರಬೇಕಾದ ಋಣವೇ ‘ಋಷಿಋಣ’. ಅದನ್ನು ತೀರಿಸುವುದು ಹೇಗೆ? ಆ ವೇದಶಾಸ್ತ್ರಗಳನ್ನು ಸ್ವತಃ ಕಲಿತು ಇನ್ನೊಬ್ಬರಿಗೆ ಕಲಿಸುವುದರಿಂದ. ಜಗತ್ತು ಉದ್ಧಾರವಾಗಲೆಂಬುದೊಂದೇ ಅವರ ಆಶಯ. ಇದರಿಂದ ಅವರ ಸಾಲ ತೀರಿಹೋಗುತ್ತದೆಯಂತೆ! ಇಂಥದು ಅವರ ಭವ್ಯಕಲ್ಪನೆ. ಇಂದ್ರನಿಂದ ಮಳೆ, ಭೂಮಿಯಿಂದ ಬೆಳೆ, ಸೂರ್ಯನಿಂದ ಬೆಳಕು ಮೊದಲಾದವನ್ನು ಪಡೆಯುತ್ತೇವೆ. ದೇವತಾಯಜನ ಪೂಜನಗಳಿಂದ ‘ದೇವಋಣ’ವನ್ನು ತೀರಿಸಬೇಕು. ಸಂತತಿಯನ್ನು ಪಡೆಯುವುದರಿಂದ ‘ಪಿತೃಋಣ’ವನ್ನು ತೀರಿಸತಕ್ಕದ್ದು.

ಇಲ್ಲಿ ವಿಷಯವಾಗಿರುವುವು ಇನ್ನು ಮೂರು ಋಣಗಳು. ‘ಅನ್ನಋಣ’ ಕೃಷಿಗೆ ಸಂಬಂಧಿಸಿದ್ದು. ಆಹಾರವನ್ನು ಬೆಳೆದುಕೊಡುವ ರೈತನಿಗೆ ಎಲ್ಲರೂ ಋಣಿಗಳು. ಅದಕ್ಕಾಗಿ ನಾವು ತೆರುವ ಹಣದಲ್ಲಿ ಬಹುಭಾಗವು ಮಧ್ಯವರ್ತಿಗಳ ಪಾಲಾಗಿ ರೈತನಿಗೆ ನ್ಯಾಯವಾಗಿ ಸಲ್ಲಬೇಕಾದಷ್ಟು ಸಲ್ಲುತ್ತಲೇ ಇಲ್ಲ; ‘ವಸ್ತ್ರಋಣ’ವು ಕಾರ್ಮಿಕರಿಗೆ ಸಂಬಂಧಿಸಿದ್ದು. ಇಲ್ಲಿಯೂ ಅಷ್ಟೆ : ಮೈಮುರಿದು ಕೆಲಸ ಮಾಡುವ ಕಾರ್ಮಿಕರಿಗೆ ಸಲ್ಲಬೇಕಾದ ಹಣಕ್ಕಿಂತ ಅಧಿಕವಾದ್ದನ್ನು ಮಧ್ಯವರ್ತಿಗಳು ಕಬಳಿಸುತ್ತಾರೆ.

ಸತ್ತಮೇಲೆ ಹೆಣಕ್ಕೆ ಗತಿಯೊಂದನ್ನು ತೋರಿಸಬೇಕಾದ ಹೊರೆ ಅನ್ಯರ ಮೇಲೆ ಬೀಳುತ್ತದೆ. ಈ ಉಪಕಾರವನ್ನು ಸತ್ತವನು ತೀರಿಸುವುದು ಹೇಗೆ? ಈ ವಿನೋದಪ್ರಶ್ನೆಯ ತಾತ್ಪರ್ಯವೇನೆಂದರೆ, ನಾವು ಸದಾ ರಾಷ್ಟ್ರಕ್ಕೆ ಋಣಿಗಳೇ ಆಗಿರುತ್ತೇವೆ. ನಾವು ಲೋಕದಿಂದ ತೆಗೆದುಕೊಂಡದ್ದು ಅಧಿಕ, ತಿರುಗಿಕೊಡುವುದು ಅತ್ಯಲ್ಪ. ಮಾನವನಿಂದ ಆಗತಕ್ಕದ್ದು ಲೋಕಸೇವೆ, ಲೋಕೋಪಕಾರವಲ್ಲ.

ರಾಮಚಂದ್ರನ ಚರಿತೆ ಲೋಕಧರ್ಮಾದರ್ಶ
ಶ್ಯಾಮಸುಂದರಚರಿತೆ ವಿಷಮಸಮಯನಯ ।
ಸೋಮೇಶ್ವರನ ರೂಪ ನಿರ್ದ್ವಂದ್ವ ಶಾಂತಿಮಯ
ಈ ಮೂವರನು ಭಜಿಸೊ - ಮರುಳ ಮುನಿಯ ॥೧೦೦॥

— ಡಿ.ವಿ.ಜಿ.

"ಶ್ರೀರಾಮನ ಚರಿತ್ರೆ ಎಲ್ಲ ಜನರೂ ಅನುಸರಿಸಬೇಕಾದ ಧರ್ಮಕ್ಕೆ ಆದರ್ಶಭೂತವಾದದ್ದು. ಶ್ರೀಕೃಷ್ಣನ ಚರಿತ್ರೆಯಾದರೊ ಧರ್ಮಸಂಕಟದ ವಿಷಮಪ್ರಸಂಗದಲ್ಲಿ ಅನುಸರಿಸಬಹುದಾದ ನೀತಿಯನ್ನು ಬೋಧಿಸುತ್ತದೆ. ಶಿವನ ಸ್ವರೂಪವು ದ್ವಂದ್ವರಹಿತವೂ ಶಾಂತಿಮಯವೂ ಆದದ್ದು. ಈ ಮೂವರನ್ನೂ ವ್ಯವಹಾರದಲ್ಲಿ ಆದರ್ಶವಾಗಿಟ್ಟುಕೊಂಡು ಭಜಿಸಬೇಕು."

ಪುರಾಣೇತಿಹಾಸಗಳಲ್ಲಿ ಶ್ರೀರಾಮನಂಥ ಇನ್ನೊಬ್ಬ ಧರ್ಮನಿಷ್ಠನೂ ಕರ್ತವ್ಯನಿಷ್ಠನೂ ಆದ ವ್ಯಕ್ತಿಯನ್ನು ಕಾಣಲಾರೆವು. ವಾಲ್ಮೀಕಿಯೇ ಹೇಳಿರುವಂತೆ 'ಸಾಧುರೇಕೋ ವಿನಿರ್ಮಿತಃ'. ಒಬ್ಬ ಮನುಷ್ಯನಲ್ಲಿ ಯಾವಯಾವ ಸದ್ಗುಣಗಳನ್ನು ಭಾರತೀಯ ಸಂಸ್ಕೃತಿಯು ನಿರೀಕ್ಷಿಸುತ್ತದೆಯೋ ಅವೆಲ್ಲವುಗಳಿಂದ ಕಡೆದ ಮೂರ್ತಿಯೇ ಶ್ರೀರಾಮ. ಆತನ ನಯ, ವಿದ್ಯೆ, ಪರಾಕ್ರಮ, ಮಾತಾಪಿತೃಭಕ್ತಿ, ಗುರುಹಿರಿಯರಲ್ಲಿ ಗೌರವ, ಭ್ರಾತೃವಾತ್ಸಲ್ಯ, ಏಕಪತ್ನೀವ್ರತ, ಉಪಕಾರಸ್ಮರಣೆ, ಅನುಕಂಪೆ, ಸ್ವಾಭಿಮಾನ, ಸುಖದುಃಖಗಳಲ್ಲಿ ಸಮತೆ - ಇವು ಎಲ್ಲ ದೇಶಕಾಲಗಳಲ್ಲೂ ಅನುಸರಿಸಬೇಕಾದ ಧರ್ಮಗಳು.

ಶ್ರೀಕೃಷ್ಣನಾದರೋ ದಿವ್ಯಮಹಿಮಾನ್ವಿತ ವ್ಯಕ್ತಿ. ಅವನ ವ್ಯಕ್ತಿತ್ವವು ಸುಲಭವಾಗಿ ಅರ್ಥವಾಗತಕ್ಕದ್ದಲ್ಲ. ಜೀವನದಲ್ಲಿ ಇದು ಸರಿಯೆ, ಅದು ಸರಿಯೆ? - ಎಂಬ ಗೊಂದಲದಲ್ಲಿ ಸಿಕ್ಕಿಕೊಂಡಾಗ, ಯಾವುದು ಸರಿಯೆಂದು ನಿರ್ಧರಿಸಲು ವಿವೇಕಬುದ್ಧಿ ಬೇಕು. ತನ್ನ ಗುರಿಯೂ ತನ್ನ ಹೃದಯವೂ ಪರಿಶುದ್ಧವಾಗಿದ್ದಾಗ ಯುಕ್ತವಾದ ಮಾರ್ಗ ಹೊಳೆದೀತು. ಇಂತಹ ಧರ್ಮಸಂಕಟದ ಪ್ರಸಂಗಗಳಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಶ್ರೀಕೃಷ್ಣನು ತೋರಿಸಿಕೊಟ್ಟಿದ್ದಾನೆ. 'ಯತಃ ಕೃಷ್ಣಸ್ತತೋ ಧರ್ಮಃ' ಎಂದಿದ್ದಾರೆ, ವ್ಯಾಸರು.

ಉಮೆಯಿಂದ ಸಹಿತನಾದವನು ಸೋಮ. ಅವನು ಅರ್ಧನಾರೀಶ್ವರ. ದೇವಸ್ಥಾನಗಳಲ್ಲಿ ಈಶ್ವರಲಿಂಗ ಒಂದೇ ಇರುತ್ತದೆ. ಪಾರ್ವತಿ ಇರುವುದಿಲ್ಲ. ಪಾರ್ವತಿಗೆ ಪ್ರತ್ಯೇಕವಾದ ಗುಡಿ ಇರಬಹುದು. ಶಿವನು ಅರ್ಧನಾರೀಶ್ವರನಾದರೂ ಕಾಮಾರಿ! ನಿರ್ದ್ವಂದ್ವವೂ ನಿರಾಕಾರವೂ ಆದ ಪರವಸ್ತುವಿಗೆ ಸಮೀಪದ ಪ್ರತಿನಿಧಿ, ಈಶ್ವರಲಿಂಗ. 'ಅಭಿಷೇಕಪ್ರಿಯಃ ಶಿವಃ'. ಅವನಿಗೆ ಹೂಗಳೂ ಬೇಡ; ಬಿಲ್ವಪತ್ರೆ ಸಾಕು. ಬಿಲ್ವಪತ್ರೆಯಲ್ಲಿರುವ ಮೂರು ಎಲೆಗಳು ಭಕ್ತನ ತ್ರಿಕರಣಗಳನ್ನು ಸೂಚಿಸುತ್ತವೆ. ಕಾಯ, ವಾಕ್ಕು, ಮನಸ್ಸು - ಇವನ್ನು ಪರಮಾತ್ಮನಿಗೆ ಒಪ್ಪಿಸಿದ್ದೇನೆಂದು ಭಕ್ತನು ಸೂಚಿಸಿ ಶರಣಾಗತನಾಗುತ್ತಾನೆ.

**ಹಳೆಯ ಮನೆ ಮಳೆಯ ಹೊಡೆತದಿನುರುಳಿ ಮಣ್ಣಪ್ಪು-**
**ದಿಳೆಗೆ ದಿನದಿನದ ಪಾಡದೊರಳತಿಶಯಮೇಂ?।**
**ಅಳಿದ ಮನೆಯನು ಮರಳಿ ಕಟ್ಟಿ ನಿಲ್ಲಿಸಿ ಬಾಳ**
**ಬೆಳಗಿದೊಡೆ ಸುಕೃತಕಥೆ – ಮರುಳ ಮುನಿಯ ।।೧೦೧।।**

— *ಡಿ.ವಿ.ಜಿ.*

"ಮಳೆಯ ಹೊಡೆತಕ್ಕೆ ಸಿಕ್ಕಿ ಹಳೆಯ ಮನೆ ಬಿದ್ದು ಮಣ್ಣಾಗಿ ಹೋದೀತು. ಅದು ಜಗತ್ತಿನಲ್ಲಿ ಪ್ರತಿದಿನ ನಡೆಯುತ್ತಿರುವ ಸಂದರ್ಭವೇ ಸರಿ. ಅದರಲ್ಲಿ ಆಶ್ಚರ್ಯಪಡಬೇಕಾದ ವಿಶೇಷವೇನೂ ಇಲ್ಲ. ಹಾಗೆ ಬಿದ್ದುಹೋದ ಮನೆಯನ್ನು ಮರಳಿ ಕಟ್ಟಿ ನಿಲ್ಲಿಸಿ ಬಾಳನ್ನು ಬೆಳಗಿಸುವುದು ಸರಿಯಾದ ಕೆಲಸ. ಆ ರೀತಿ ಮಾಡುವುದು ಪುಣ್ಯಕಾರ್ಯವೆನಿಸುತ್ತದೆ."

ಕಾಲಪ್ರಭಾವದ ರಭಸಕ್ಕೆ ಎಲ್ಲ ಗಿಡ ಮರ ಬಳ್ಳಿಗಳೂ ಉರುಳಿಹೋಗುತ್ತವೆ. ಸಮಾಜದ ಯಾವ ನಾಗರಿಕತೆಯೂ ಶಾಶ್ವತವಾಗಿ ನಿಂತಿರುವುದಿಲ್ಲ. ಹೀಗೆ ಬಿದ್ದು ಹೋಗುತ್ತಿರುವ ಮನೆಗೆ ಅಲ್ಲೊಂದು ಇಲ್ಲೊಂದು ಕಂಬವನ್ನು ಒತ್ತಾಸೆಯಾಗಿ ನಿಲ್ಲಿಸಿದರೆ, ಆ ಕಂಬವೂ ಸ್ವಲ್ಪದಿನಗಳಲ್ಲಿ ಬಿದ್ದುಹೋಗುತ್ತದೆ. ಮನೆಯ ನಿವೇಶನ ಸ್ಥಿರವಾದದ್ದು. ಅಭಿರುಚಿಗೆ ತಕ್ಕಂತೆ ಹೊಸ ಮನೆಯೊಂದನ್ನು ಆ ನಿವೇಶನದಲ್ಲಿ ಕಟ್ಟಿಕೊಳ್ಳುವುದೇ ಸರಿಯಾದ ಮಾರ್ಗ. ಸಮಾಜದಲ್ಲಿ ಕಾಲಪ್ರವಾಹದಿಂದಾದ

ಪರಿವರ್ತನೆಗಳನ್ನು ಲಕ್ಷಿಸಿ ಇಂದಿಗೆ ತಕ್ಕಂತೆ ತಳಭದ್ರವಾದ ಇನ್ನೊಂದು ಸಮಾಜವನ್ನು ಕಟ್ಟುವುದೇ ಪ್ರಜಾಹಿತಚಿಂತಕರ ಪ್ರಥಮ ಕರ್ತವ್ಯ.

ಹಿಂದೆ ಭಾರತೀಯರಲ್ಲಿ ಗುರುಮನೆ, ಅರಮನೆ - ಎಂಬ ಎರಡು ಸಾಮಾಜಿಕ ಸಂಸ್ಥೆಗಳಿದ್ದವು. ಪ್ರಜೆಗಳ ಆಂತರಿಕವಾದ ನೀತಿನಿಯಮಗಳನ್ನು ಗುರುಮನೆಯೂ ಬಾಹ್ಯವಾದ ಲೌಕಿಕ ವ್ಯವಹಾರಗಳನ್ನು ಅರಮನೆಯೂ ನಿಯಂತ್ರಿಸಿ ಮಾರ್ಗದರ್ಶನ ಮಾಡುತ್ತಿದ್ದವು. ಈ ಎರಡು ಸಂಸ್ಥೆಗಳೂ ಇಂದು ನಿಷ್ಕ್ರಿಯವಾಗಿವೆ.

ವಿದ್ಯೆ, ಯೋಧವೃತ್ತಿ, ವಾಣಿಜ್ಯಾದಿ ವ್ಯವಹಾರ, ಕೃಷಿ ಮುಂತಾದ ಕಾರ್ಮಿಕವೃತ್ತಿ ಈ ನಾಲ್ಕೂ ಯಾವುದೇ ಒಂದು ಪ್ರಜಾಸಮುದಾಯದ ಸುಖಜೀವನಕ್ಕೆ ಬೇಕಾದ ಗೃಹದ ತಳಪಾಯವಾದ ಚೌಕಟ್ಟು. ಆಧಾರಸ್ತಂಭಗಳು ಮನೆಯನ್ನು ಹೊತ್ತುನಿಂತಾಗ, ಮನೆಯನ್ನು ಒಳಹೊರಗೆ ಬೇಕಾದಂತೆ ಸಿಂಗರಿಸಿಕೊಳ್ಳಬಹುದು. ಈ ರಹಸ್ಯವನ್ನರಿತ ಪೂರ್ವಜರು ಚಾತುರ್ವರ್ಣ್ಯದ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದರು. ಕಾಲಪ್ರವಾಹ ದಿಂದ ಅದೀಗ ಅಳಿಯಿತು. ಮುರಿದುಬಿದ್ದ ಕಂಬಗಳಿಗೆ ಬದಲಾಗಿ ಕವಲುಕಂಬಗಳನ್ನು ಕೊಡುತ್ತಿದ್ದಾರೆ. ಅದು ಚಾವಣಿಯ ಭಾರವನ್ನು ಹೊರಲಾರದು. ಆದ್ದರಿಂದ ಸೋಷಿಯಲಿಸಂ, ಕಮ್ಯೂನಿಸಂ - ಮುಂತಾದ ದಿಢೀರ್ ಗೃಹನಿರ್ಮಾಣಸಂಘಗಳು ನಿರ್ಮಿತವಾದವು. ಗೊಂದಲಕ್ಕೆ ಹೆಸರಾದ ಈ 'ಇಸಂ'ಗಳು ನಮ್ಮ ಕಣ್ಣೆದುರಿಗೇ ಉರುಳಿಬೀಳುತ್ತಿವೆ.

ಹಳ್ಳಿಗಳಲ್ಲಿ ಜನರೇ ಗೊತ್ತುಮಾಡಿಕೊಂಡಿದ್ದ ಪಂಚಾಯಿತಿಗಳಿಗೆ ಬದಲಾಗಿ ಬಂದಿರುವ ಜಿಲ್ಲಾ ಪರಿಷತ್ತು, ತಾಲೂಕು ಪರಿಷತ್ತುಗಳಲ್ಲಿಯೇ ನೆಮ್ಮದಿ ಇಲ್ಲದೆ ವೈಮನಸ್ಯಗಳು ಹೊಗೆಯಾಡುತ್ತಿವೆ. ಮನೆಯನ್ನು ಬೆಳಗಿಸುವುದು ಒಳಗೆ ಮಿನುಗುವ ದೀಪ; ಚಾವಣಿಗೆ ಹಚ್ಚಿದ ಬೆಂಕಿಯಲ್ಲ. ಇದು ಭಾರತೀಯರ ಕರ್ಮಕಥೆ.

**ಧಾನ್ಯವುಂಡಿಹ ಹೊಟ್ಟೆ ತುಂಬಿ ತೇಗುವುದೊಡನೆ**
**ನಾಣ್ಯಸಂಚಿಕೆಗಂತು ತಣಿವಪ್ಪುದುಂಟೆ? ।**
**ಪಣ್ಯವಾಗಿಸಿತೆಲ್ಲ ಮನುಜಬಂಧುತೆಯ ಹಣ**
**ಸನ್ನೆಯದು ಕಲಿದೊರೆಗೆ - ಮರುಳ ಮುನಿಯ ॥೧೦೨॥**

— *ಡಿ.ವಿ.ಜಿ.*

"ಧಾನ್ಯವನ್ನುಂಡ ಹೊಟ್ಟೆ ಕೂಡಲೆ ತುಂಬಿ ತೇಗಿಬಿಡುತ್ತದೆ. ಹಣದ ಚೀಲಕ್ಕ ಆ ರೀತಿಯಲ್ಲಿ ತೃಪ್ತಿಯಾಗುವುದುಂಟೇನು? ಈ ಹಣವು ಮಾನವ-ಮಾನವ ಬಾಂಧವ್ಯವನ್ನು ಕ್ರಯದ ವಸ್ತುವನ್ನಾಗಿ ಮಾಡಿಬಿಟ್ಟಿತು. ಹಣವೆನ್ನುವುದು ಕಲಿರಾಜನ ಸಂಕೇತ - ಅವನ ಬಾವುಟ!"

ಮನುಷ್ಯನಿಗೆ ಬಯಕೆಗಳು ಬಹಳ. ಅವುಗಳಲ್ಲಿ ಯಾವುದೂ ಪೂರ್ತಿಯಾಗಿ ಕೈಗೂಡತಕ್ಕದ್ದಲ್ಲ. ಒಂದು ಬಯಕೆ ಇನ್ನೊಂದು ಬಯಕೆಯನ್ನು ಹೊಮ್ಮಿಸುತ್ತಲೇ ಇರುತ್ತದೆ. ಮೊದಲು ಒಂದು ಉದ್ಯೋಗ ಬೇಕೆಂಬ ಮೊಳಕೆ ಹೊರಡುತ್ತದೆ. ಅದಾಗುತ್ತಿರುವಾಗಲೇ ಮನೆ ಬೇಕು, ಮಡದಿ ಬೇಕು, ಮಕ್ಕಳು ಬೇಕು, ಇನ್ನಷ್ಟು ಹಣ ಬೇಕು, ಇನ್ನೊಂದು ಮನೆ ಇರಲಿ - ಈ ಬಗೆಯಲ್ಲಿ, ಜಡ್ಡು ಬೆಳೆದಂತೆ, ಆಶಾಸಂತತಿಯೇ ಕವಲೊಡೆಯುತ್ತದೆ.

ಮನುಷ್ಯನನ್ನು ತಾತ್ಕಾಲಿಕವಾಗಿಯಾದರೂ ತೃಪ್ತಿಗೊಳಿಸತಕ್ಕದ್ದು ಭೋಜನ. ಈ ಕಾರಣದಿಂದಲೇ ಇರಬಹುದು, ನಮ್ಮಲ್ಲಿ ಯಾವ ವಿಶೇಷ ಕಾರ್ಯವನ್ನು ನಡೆಸಿದಾಗಲೂ ಅನ್ನಸಂತರ್ಪಣೆಯನ್ನು ನಡೆಸುವ ಸಂಪ್ರದಾಯ ಬಂದಿದೆ. 'ಸಂತರ್ಪಣೆ' ಎಂಬ ಶಬ್ದಕ್ಕೆ 'ಚೆನ್ನಾಗಿ ತೃಪ್ತಿಗೊಳಿಸುವಿಕೆ' ಎಂದರ್ಥ. ಈ ರೀತಿಯಲ್ಲಿ ಧನಸಂತರ್ಪಣೆ, ವಸ್ತ್ರಸಂತರ್ಪಣೆ ಎಂಬುದಾಗಿ ಯಾರೂ ಹೇಳುವುದಿಲ್ಲ. 'ಇನ್ನು ಬೇಡ - ಸಾಕು' ಎಂಬ ತೃಪ್ತಿಯನ್ನು ನೀಡಬಹುದಾದದ್ದು ಭೋಜನ ಒಂದೇ.

ದಶರಥನು ಪುತ್ರಕಾಮೇಷ್ಟಿಯಾಗ ಮಾಡಿದಾಗ, ಬಂದವರೆಲ್ಲರೂ ಹೊಟ್ಟೆತುಂಬ ತಿಂದು ತೇಗಿದರು. ತಿಂದು ತೇಗುತ್ತಿದ್ದ ಒಬ್ಬನು ಮಹಾರಾಜನ ಹಸ್ತವನ್ನಲಂಕರಿಸಿದ್ದ ಚಿನ್ನದ ಕಡಗವನ್ನು ಬೇಡಿದನಂತೆ!

ಪೂರ್ವಕಾಲದಲ್ಲಿ ಗೋವು, ವಸ್ತ್ರ, ಚಿನ್ನ, ಬೆಳ್ಳಿ ಮೊದಲಾದ ವಸ್ತುಗಳೇ ನಾಣ್ಯದ ಸ್ಥಾನದಲ್ಲಿದ್ದವು. ಅವುಗಳಲ್ಲಿ ಸಂಗ್ರಹಿಸಿ ಇಡಬಹುದಾದವು ಚಿನ್ನ, ಬೆಳ್ಳಿ - ಇವೆರಡೇ. ಹೆಚ್ಚಾದ ಸಂಗ್ರಹವಿದ್ದರೆ ನೆಲದಲ್ಲಿ ಹೂತಿಡಬೇಕಾಗಿತ್ತು. ಈಗ ಒಂದು ಕಾಗದದ ತುಂಡು ಲಕ್ಷಾಂತರ ರೂಪಾಯಿಗಳನ್ನು ತನ್ನ ತೆಳುವಾದ ಕುಕ್ಷಿಯಲ್ಲಿ ಅಡಗಿಸಿಕೊಳ್ಳಬಲ್ಲದು. ಹಣವನ್ನು ಕೈಯಾಡಿಸುವುದು ಸುಲಭವಾದಷ್ಟೂ ಮಾನವನ ಆಸೆಗಳು ಬೆಳೆದು, ಹಣದ ಕೈಚಳಕ ಮಿತಿಯಿಲ್ಲದಂತೆ ಬೀಗಿತು. ಹಣದ ಸಾಗಾಣಿಕೆ, ರಕ್ಷಣೆ ಸುಲಭವಾದಂತೆ ನೀತಿಬಾಹಿರವಾದ ಭ್ರಷ್ಟಾಚಾರಗಳು ಬಲಿಯುತ್ತ ಹೋಗಿವೆ.

ಹಿಂಸೆ, ದರೋಡೆ, ರಾಷ್ಟ್ರದ್ರೋಹ, ವಿಶ್ವಾಸಘಾತುಕತೆಗಳು ಸಾವಿರಹೆಡೆಗಳನ್ನಾಡಿಸ ತೊಡಗಿದಾಗ, ಮಾನವತೆ ತಲೆಯೆತ್ತುವುದುಂಟೆ? ಕರೆನ್ಸಿ ನೋಟುಗಳು ಕಲಿರಾಜನ ಧ್ವಜಪಟಗಳಂತೆ ಹಾರಾಡುತ್ತಿವೆ.

**ಒಳಿತೊಂದೆ ಶಾಶ್ವತವೊ ಉಳಿದೆಲ್ಲವಳಿಯುವುದೊ**
**ಅಳುವ ನೀನೊರಸಿದುದು ನಗುವ ನಗಿಸಿದುದು ।**
**ಒಲಿದು ನೀಂ ನೀಡಿದುದು ನಲವ ನೀನೆಸಗಿದುದು**
**ನೆಲಸುವುವು ಬೊಮ್ಮನಲಿ - ಮರುಳ ಮುನಿಯ ॥೧೦೩॥**

— *ಡಿ.ವಿ.ಜಿ.*

"ಒಳ್ಳೆಯ ಕೆಲಸ ಒಂದೇ ಶಾಶ್ವತವಾಗಿ ಲೋಕದಲ್ಲಿ ನಿಲ್ಲತಕ್ಕದ್ದು. ಉಳಿದುದೆಲ್ಲ ನಶಿಸಿಹೋಗುತ್ತದೆ. ಇನ್ನೊಬ್ಬರ ದುಃಖವನ್ನು ಶಮನ ಮಾಡುವುದು, ಜನರು ಸಂತೋಷದಿಂದ ನಗುವಂತೆ ಮಾಡುವುದು, ಪ್ರೀತಿಯಿಂದ ನೀನು ಇನ್ನೊಬ್ಬರಿಗೆ ಕೊಟ್ಟದ್ದು, ಜನೋಪಕಾರಿಯಾದ ಕಾರ್ಯವನ್ನೆಸಗುವುದು - ಇವೆಲ್ಲವೂ ಭಗವಂತನಲ್ಲಿ ನೆಲೆಸುತ್ತವೆ. ಆತನ ಕೃಪೆಗೆ ಪಾತ್ರವಾಗುತ್ತವೆ."

'ಅಳುವ ನೀನೊರಸಿದುದು' ಮೊದಲಾದದ್ದು ಒಳಿತು ಯಾವುದೆಂಬುದರ ವಿವರಣೆ. ಧನ, ಅಧಿಕಾರ, ಯೌವನ, ಸೌಂದರ್ಯ - ಮೊದಲಾದವು ಸ್ವಲ್ಪ ಕಾಲದಲ್ಲಿ ಕೈತಪ್ಪಿ ಹೋಗುತ್ತವೆ. ಈಶ್ವರನ ಕರುಣೆಯೊಂದೇ ಶಾಶ್ವತಫಲವನ್ನು ನೀಡುವುದು. 'ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರಪೂಜನಂ'. ಫಲಾಪೇಕ್ಷೆಯಿಲ್ಲದೆ ಈಶ್ವರಾರ್ಪಣಬುದ್ಧಿಯಿಂದ ಮಾಡುವ ಸತ್ಕಾರ್ಯ ಮನಸ್ಸಿಗೆ ಹರ್ಷವನ್ನೀಯುತ್ತದೆ. ಭಗವಂತನು ಆನಂದಸ್ವರೂಪವೇ ಆಗಿದ್ದಾನೆ. 'ಆನಂದೋ ಬ್ರಹ್ಮೇತಿ ವ್ಯಜಾನಾತ್'

**ಮೈತ್ರೀಕರುಣಾ-ಮುದಿತೋಪೇಕ್ಷಾಣಾಂ ಸುಖದುಃಖ-**
**ಪುಣ್ಯಾಪುಣ್ಯ-ವಿಷಯಾಣಾಂ ಭಾವನಾತಶ್ಚಿತ್ತಪ್ರಸಾದನಮ್ ॥**

—ಎಂದು ಪತಂಜಲಿಯು ಯೋಗಸೂತ್ರದಲ್ಲಿ ಹೇಳುತ್ತಾನೆ (ಸಮಾಧಿಪಾದ, ಸೂತ್ರ ೩೩). ಸುಖಿ, ದುಃಖಿ, ಪುಣ್ಯಾತ್ಮ, ಪಾಪಾತ್ಮ ಇವರೊಂದಿಗೆ ಕ್ರಮವಾಗಿ

ಮೈತ್ರಿ, ಕರುಣೆ, ಹರ್ಷ, ಉಪೇಕ್ಷೆ - ಈ ಭಾವನೆಗಳನ್ನು ಬೆಳೆಸಿಕೊಳ್ಳಬೇಕು, ಇದರಿಂದ ಚಿತ್ತವು ಪ್ರಸನ್ನವಾಗುತ್ತದೆ, ಎಂದು ಅದರ ಅರ್ಥ. ಸುಖದಲ್ಲಿದ್ದವರೊಡನೆ ಸ್ನೇಹವನ್ನು ಬೆಳೆಸಿಕೊಳ್ಳಬೇಕು. ದುಃಖಿಗಳಲ್ಲಿ ಕರುಣೆಯನ್ನು ತೋರಿಸಬೇಕು. ನಮಗೆ ಅಪಕಾರಮಾಡಿದವರಲ್ಲಿ ಉದಾಸೀನರಾಗಿದ್ದುಬಿಡಬೇಕು. ಇದರಿಂದ ಕೋಪವನ್ನು ನಿಗ್ರಹಿಸಲು ಶಕ್ಯವಾಗುತ್ತದೆ; ಮನಸ್ಸು ಶುದ್ಧವಾಗುತ್ತದೆ.

**ಏತಿ ಜೀವಂತಮಾನಂದೋ ನರಂ ವರ್ಷಶತಾದಪಿ ॥**

—ಎಂಬ ಮಾತು ಶ್ರೀಮದ್ರಾಮಾಯಣದಲ್ಲಿ ಬರುತ್ತದೆ. ಈ ಆನಂದವೇ ಮಾನವಕುಲದ ಪರಮೋದ್ದೇಶ. ಶ್ರೀರಾಮನ ಸುದ್ದಿಯನ್ನು ಅಶೋಕವನದಲ್ಲಿದ್ದ ಸೀತಾದೇವಿಗೆ ತಿಳಿಸಿ ಹನುಮಂತನು ಆಕೆಯ ಕಣ್ಣೀರನ್ನೊರಸಿದ, ಸೀತಾವೃತ್ತಾಂತ ವನ್ನು ಶ್ರೀರಾಮನಿಗೆ ಒಪ್ಪಿಸಿ ಅವನನ್ನು ಸಂತೈಸಿದ. ಆ ಹನುಮಂತನೇ ಸೀತಾರಾಮಲಕ್ಷ್ಮಣರ ಆಗಮನದ ವಾರ್ತೆಯನ್ನು ಭರತನಿಗೆ ಹೇಳಿ ಅವನನ್ನು ಆನಂದದಲ್ಲಿ ಮುಳುಗಿಸಿದ. ಹನುಮಂತನು ಭಗವಂತನಿಗೆ ಹತ್ತಿರವಾದ. ಅವನ ಕೀರ್ತಿ ಶಾಶ್ವತವಾಗಿ ನೆಲೆಸಿತು.

**ವಿಧಿಯನೆದುರಿಸಿ ಹೋರಿ ಪುರುಷತೆಯ ತುದಿಗೇರಿ**
**ಬದುಕಿನೆಲ್ಲನುಭವಗಳಿಂ ಪಕ್ವನಾಗಿ ।**
**ಹೃದಯದಲಿ ಜಗದಾತ್ಮನಂ ಭಜಿಪ ನಿರ್ದ್ವಂದ್ವ-**
**ನಧಿಪುರುಷನೆನಿಸುವನೊ - ಮರುಳ ಮುನಿಯ ॥೧೦೪॥**

**— ಡಿ.ವಿ.ಜಿ.**

"ಮನುಷ್ಯನು ತನಗೆ ಎದುರಾದ ವಿಧಿಯನ್ನೆದುರಿಸಿ ಹೋರಾಡಿ ಪುರುಷತ್ವದ ತುದಿಯ ಮೆಟ್ಟಿಲನ್ನೇರಬೇಕು. ಜೀವನದಲ್ಲೊದಗುವ ಸಿಹಿಕಹಿಗಳ ಅನುಭವದಿಂದ ಹೃದಯವು ಶುದ್ಧವಾಗಿ ಪರಿಪಕ್ವ ವಾಗುತ್ತದೆ. ಅದರಲ್ಲಿ ಜಗದಾತ್ಮನಾದ ಭಗವಂತನನ್ನು ಧ್ಯಾನಿಸುತ್ತದೆ. ಯಾರು ನಿರ್ದ್ವಂದ್ವ ಸ್ಥಿತಿಯನ್ನು ಮುಟ್ಟುವನೋ ಅವನು 'ಅಧಿಪುರುಷ'ನೆನಿಸುತ್ತಾನೆ."

ಜೀವನದಲ್ಲಿ ಒದಗುವ ಎಡರುಗಳು ಒಂದೆರಡಲ್ಲ. ಬಾಲ್ಯದಲ್ಲಿ ತಾಯಿತಂದೆಗಳ

ವಿಯೋಗ, ಬಡತನ, ರೋಗರುಜಿನಗಳ ಕಾಟ, ಅಪಘಾತ - ಮುಂತಾದವು ಅಸಂಖ್ಯ. ನಮ್ಮ ಕೈಗೆ ಮೀರಿದ ಆಕಸ್ಮಿಕವನ್ನು ವಿಧಿಯೆಂದೋ ದೈವವೆಂದೋ ಹೇಳುತ್ತೇವೆ. ಅದೃಷ್ಟವೆಂದರೂ ಇದೇ: ಯಾವುದಕ್ಕೆ ಕಾರಣವು ದೃಷ್ಟವಾಗಿಲ್ಲವೋ ಅದು ಅದೃಷ್ಟ. ಇದನ್ನು ಒಂದಲ್ಲ ಒಂದು ವಿಧದಲ್ಲಿ ಮಾನವನು ಎದುರಿಸಬೇಕಾಗುತ್ತದೆ. ಈ ವಿಧಿಗೆ ಅಳುಕದೆ ಹೋರಾಡುವುದೇ ಮನುಷ್ಯಲಕ್ಷಣ. ಸಮಾಜಕ್ಕೆ, ರಾಷ್ಟ್ರಕ್ಕೆ ವಿದ್ರೋಹಿಗಳಿಂದ ವಿಪತ್ತು ತಲೆದೋರಿದಾಗ ಇವುಗಳನ್ನೆದುರಿಸಿ ಹೋರಾಡುವುದು ಪ್ರತಿಯೊಬ್ಬ ಪ್ರಜೆಯ ಮುಖ್ಯ ಕರ್ತವ್ಯ. ಈ ಹೋರಾಟ ಧರ್ಮದ ರಕ್ಷಣೆಗಾಗಿ, ಅಧರ್ಮದ ವಿನಾಶಕ್ಕಾಗಿ ಇರಬೇಕೇ ಹೊರತು ಕ್ಷುದ್ರ ಸ್ವಾರ್ಥಕ್ಕಾಗಿ ಅಲ್ಲ. ರಾವಣ, ದುರ್ಯೋಧನರೂ ವಿಧಿಯನ್ನೆದುರಿಸಿ ಹೋರಾಡಿದವರೇ; ಆದರೆ ಜಗತ್ತು ಅವರನ್ನು ಸಜ್ಜನರ ಮಾಲೆಯಲ್ಲಿ ಸೇರಿಸಲಿಲ್ಲ. ವಿಜಯನಗರವನ್ನು ಸ್ಥಾಪಿಸಿದ ಹಕ್ಕಬುಕ್ಕರು, ಮೊಗಲರನ್ನೆದುರಿಸಿದ ಛತ್ರಪತಿ ಶಿವಾಜಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಲೋಕಮಾನ್ಯ ತಿಲಕ್, ಮಹಾತ್ಮಾಗಾಂಧಿ ಇಂಥವರದು ನಿಜವಾದ ಪುರುಷಸಿಂಹರ ಹೋರಾಟ. ಇಂತಹ ಹೋರಾಟಗಳು ಮನುಷ್ಯನನ್ನು 'ಅಧಿಪುರುಷ' ಪದವಿಗೇರಿಸುತ್ತವೆ. ಮನುಷ್ಯತ್ವದ ಎಲ್ಲ ಉದಾತ್ತ ಗುಣಗಳನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡು ದೇವತ್ವದ ಹಂತಕ್ಕೆ ಏರಿದವನು ಅಧಿಪುರುಷ. ಸ್ವಾರ್ಥದ ಹಾರಾಟಗಳಾದರೋ ಮನುಷ್ಯನನ್ನು ಪಶುವಿನ ಹಂತಕ್ಕೆ ಇಳಿಸುತ್ತವೆ.

'ಹೃದಯದಲಿ ಜಗದಾತ್ಮನಂ ಭಜಿಪ ನಿರ್ದ್ವಂದ್ವನ್': ಇದು ಅಧಿಪುರುಷನ ಪ್ರಧಾನ ಲಕ್ಷಣ. ದೇವರು ಎಲ್ಲಿಯೋ ಆಕಾಶದಲ್ಲಿ ಕುಳಿತುಕೊಂಡಿಲ್ಲ. ಅವನು ನಮ್ಮೆಲ್ಲರ ಆತ್ಮನೇ ಆಗಿದ್ದಾನೆ. ಜನತೆಯೇ ಜನಾರ್ದನನೆಂಬುದರ ರಹಸ್ಯ ಇದೇ.

ನರನಲ್ಲಿ ಪಶುತ್ವದ ಅಂಶ, ದೈವತ್ವದ ಅಂಶ - ಎರಡೂ ಸೇರಿಕೊಂಡಿರುತ್ತವೆ. ಪಶುತ್ವದ ಅಂಶವನ್ನು ಉಳಿಸಿಕೊಂಡವನು ನರಪಶು; ದೇವತ್ವದ ಅಂಶವನ್ನು ಬೆಳೆಸಿಕೊಂಡವನು ನರದೇವ.

**ನ್ಯಾಯಕೇ ಜಯವಂತೆ! ಧರ್ಮಜನೆ ಸಾಕ್ಷಿಯಲ**
**ದಾಯಿಗರ ಸದೆದು ದೊರೆತನವ ಗೆದ್ದನಲ!।**
**ಆಯಸಂಬಟ್ಟುಂಡುದೇನೆನ್ನದಿರ್ ಪೈತೃ-**
**ವಾಯಸಗಳುಂಡವಲ - ಮರುಳ ಮುನಿಯ ॥೧೦೫॥**

— *ಡಿ.ವಿ.ಜಿ.*

"ನ್ಯಾಯಕ್ಕೇ ಜಯವಾಗುತ್ತದೆಯಂತೆ! ಇದಕ್ಕೆ ಧರ್ಮರಾಜನೇ ಸಾಕ್ಷಿಯಲ್ಲವೆ? ದಾಯಾದಿಗಳಾದ ಕೌರವರನ್ನು ಗೆದ್ದು ದೊರೆತನವನ್ನು ಪಡೆದುಕೊಂಡನಲ್ಲವೆ? ಅಷ್ಟೊಂದು ಕಷ್ಟಪಟ್ಟು ರಾಜ್ಯವನ್ನು ಗಳಿಸಿದ ಮೇಲೆ, ಅವನು ಏನನ್ನು ತಿಂದು ಸುಖಪಟ್ಟನೆಂದು ಮಾತ್ರ ಕೇಳಬೇಡ! ಪಿತೃದೇವತೆಗಳ ಪರವಾಗಿ ಕಾಗೆಗಳು ಬೇಕಾದಷ್ಟು ತಿಂದು ತೇಗಿದುವಲ್ಲವೆ!"

ನ್ಯಾಯಕ್ಕೇ ಜಯ, ಧರ್ಮಕ್ಕೇ ಜಯ, ಸತ್ಯಕ್ಕೇ ಜಯ - ಎಂಬ ಘೋಷಣೆಗಳಿಗೆ ಕೊರತೆಯಿಲ್ಲ. ಆದರೆ ಈ ಹಾರೈಕೆ ಎಷ್ಟರಮಟ್ಟಿಗೆ ಕಾರ್ಯಕಾರಿಯಾಗಿ ಸತ್ಯವಾಗಿದೆ? ಪೌರಾಣಿಕವಾಗಿ, ಐತಿಹಾಸಿಕವಾಗಿ - ಹೇಗೆ ನೋಡಿದರೂ ಧರ್ಮಾತ್ಮರು ಕಷ್ಟಪಟ್ಟದ್ದೇ ಅಧಿಕ. ಅದಕ್ಕೆ ಪ್ರತಿಯಾಗಿ ರಾವಣ, ದುರ್ಯೋಧನ, ಹಿರಣ್ಯಕಶಿಪು ಮೊದಲಾದವರು ವೈಭವದಿಂದ ಬಾಳಿದರು; ಅಧಿಕಾರ, ಭೋಗಗಳಿಗೆ ಮಿತಿಯಿಲ್ಲದಂತೆ ಲೋಕದಲ್ಲಿ ಮೆರೆದರು. ಶ್ರೀರಾಮ, ಹರಿಶ್ಚಂದ್ರ, ಧರ್ಮರಾಜ ಮೊದಲಾದವರು ಸತ್ಯ-ಧರ್ಮಗಳನ್ನು ಗಟ್ಟಿಯಾಗಿ ಹಿಡಿದು ಪಡಬಾರದ ಪಾಡನ್ನು ಅನುಭವಿಸಿದರೂ ಅವರಿಗೆ ದೊರಕಿದ ಜಯ ವಾಸ್ತವವಾಗಿ ಜಯವೇ ಅಲ್ಲ. ಅದು ಜಯಾಭಾಸ. ಭಾರತಯುದ್ಧದಲ್ಲಿ ಅಭಿಮನ್ಯು ಮೊದಲಾದ ಪಾಂಡವರ ಮಕ್ಕಳೆಲ್ಲ ಹತರಾದರು. ದ್ರುಪದ, ಧೃಷ್ಟದ್ಯುಮ್ನ, ವಿರಾಟ ಮೊದಲಾದ ಬಾಂಧವರೆಲ್ಲ ಮಡಿದರು. ಹೀಗೆ ಎಲ್ಲರನ್ನೂ ಕಳೆದುಕೊಂಡ ಮೇಲೆ ಧರ್ಮರಾಜನಿಗಾದ ಪಟ್ಟಾಭಿಷೇಕ ವಸ್ತುತಃ ಶೋಕಬಾಷ್ಪಾಭಿಷೇಕವೇ ಆಯಿತು. "ಜೀಯಮಾನಾ ಜಯಂತ್ಯನ್ಯೇ ಜಯಮಾನಾ ವಯಂ ಜಿತಾಃ" : "ಸೋತವರು ಗೆದ್ದರು, ಗೆದ್ದ ನಾವು ಸೋತೆವು" ಎನ್ನುತ್ತಾನೆ, ಹತಾಶನಾದ ಧರ್ಮರಾಜ. ಅದೇ ದುರ್ಯೋಧನನು ತೊಡೆಮುರಿದು ಬಿದ್ದು ಸಾಯುವಾಗ ಹೇಳುವ ಮಾತನ್ನು ಕೇಳಿ : "ಮೂರ್ಧ್ನಿಸ್ಥಿತಮಮಿತ್ರಾಣಾಂ ಕೋ ನು ಸ್ವಂತತರೋ ಮಯಾ" - "ವೈರಿಗಳ ತಲೆಯನ್ನು ಮೆಟ್ಟಿನಿಂತೆನು, ನನಗಿಂತ ಸುಖಿ ಯಾರು? ಅನ್ಯರಾಜರಿಗೆ ದುರ್ಲಭವಾದ ದೇವಭೋಗಗಳನ್ನು ಯಥೇಚ್ಛವಾಗಿ ಅನುಭವಿಸಿದ್ದೇನೆ. ಈಗ ಯುದ್ಧದಲ್ಲಿ ಹತನಾಗಿ ವೀರಸ್ವರ್ಗಕ್ಕೆ ಹೋಗುತ್ತೇನೆ. ಎಲೈ ಪಾಂಡವರೆ, ಸಕಲ ಬಾಂಧವರನ್ನು ಕಳೆದುಕೊಂಡ ನೀವು ಅಳುತ್ತಲೇ ಬಾಳನ್ನು ಸವೆಸಿರಿ!"

ಧರ್ಮವೀರರೂ ರಾಷ್ಟ್ರಭಕ್ತರೂ ಆದ ಛತ್ರಪತಿ ಶಿವಾಜಿ, ಪ್ರತಾಪಸಿಂಹ

ಮೊದಲಾದವರು ಯಾವ ಸೌಖ್ಯವನ್ನನುಭವಿಸಿದರು? ಮಹಾತ್ಮಗಾಂಧಿಯವರು ಯಾವ ಸುಖವನ್ನು ಪಡೆದರು?

ಧರ್ಮಕ್ಕಾಗಿ ನರಳಿದವರ ಕಥೆ ಧರ್ಮದ ಫಲವನ್ನು ತೋರಿಸುವುದಕ್ಕಾಗಿ ಅಲ್ಲ, ಕಿಂತು ಎಂತಹ ವಿಪತ್ತು ಬಂದರೂ ಧರ್ಮವನ್ನು ರಕ್ಷಿಸಬೇಕೆಂಬ ಲೋಕೋತ್ತರ ಆದರ್ಶವನ್ನು ಜಗತ್ತಿಗೆ ತಿಳಿಸುವುದಕ್ಕಾಗಿ.

**ಅಂತರ್ಧನಂ ಬಾಹ್ಯಧನಕಿಂತ ಮಿಗಿಲೆಂದು**
**ಸ್ವಾಂತಶಿಕ್ಷಣೆ ರಾಜ್ಯವಿಧಿಗೆ ಮೇಲೆಂದು ।**
**ಅಂತಃಶಮಂ ಪ್ರಕೃತಿವಿಷಮಗಳ ಹಾಯ್ದುಂದು**
**ಶಾಂತಿ ನರಮಂಡಲಕೆ - ಮರುಳ ಮುನಿಯ ॥೧೦೬॥**

— *ಡಿ.ವಿ.ಜಿ.*

"ಹಣ, ಅಧಿಕಾರ, ಆಸ್ತಿ ಮುಂತಾದ ಬಾಹ್ಯಧನಕ್ಕಿಂತ ತ್ಯಾಗ, ದಯೆ, ಋಜುತ್ವ ಮುಂತಾದ ಆಂತರಿಕಧನವು ಮಿಗಿಲಾದದ್ದೆಂದೂ, ರಾಜ್ಯದ ಕಾನೂನು ವಿಧಿಗಿಂತ ತನ್ನ ಅಂತರಂಗವನ್ನು ತಿದ್ದಿಕೊಳ್ಳುವುದು ಮೇಲೆಂದೂ ತಿಳಿದು, ಪ್ರಕೃತಿಸಿದ್ಧವಾದ ಕಾಮ, ಕ್ರೋಧ, ಲೋಭಗಳೆಂಬ ವಿಕಾರಗಳನ್ನು ಗೆದ್ದು ಯಾವಾಗ ಅಂತರಂಗದ ಶಾಂತಿಯು ನೆಲೆಸುತ್ತದೆಯೋ ಆಗ ವಿಶ್ವದ ಜನತೆಗೆ ಶಾಂತಿ ಲಭಿಸುತ್ತದೆ."

ಶಾಂತಿಯು ಯಾರಿಗೆ ಬೇಡ? ನನ್ನ ಮನಸ್ಸಿಗೆ ಸದಾ ನೆಮ್ಮದಿ ಇರಬೇಕು, ಎಲ್ಲೆಡೆಯೂ ಶಾಂತ ವಾತಾವರಣವಿರಬೇಕು - ಎಂದು ಎಲ್ಲರೂ ಬಯಸತಕ್ಕವರೇ. ಸಮಾಜ, ರಾಷ್ಟ್ರಗಳಲ್ಲಿ ಶಾಂತಿ ನೆಲೆಸಿರಬೇಕು, ಜಗತ್ತಿಗೇ ಶಾಂತಿ ಬೇಕು - ಎಂದು ರಾಜಕಾರಣಿಗಳು ಹೇಳುತ್ತಲೇ ಇದ್ದಾರೆ. ಎಲ್ಲರ ಪ್ರಯತ್ನವೂ ತಮ್ಮ ನೆರಳನ್ನು ಹಿಡಿಯಲು ಸೂರ್ಯನಿಗೆ ಬೆನ್ನು ಕೊಟ್ಟು ಓಡತಕ್ಕವರ ಪಾಡಾಗಿದೆ! ಓಡಿದಷ್ಟೂ ನೆರಳು ಕೈಗೆ ಸಿಗದೆ ಓಡುತ್ತಲೇ ಇರುತ್ತದೆ. ಜಗತ್ತು ಯಾವ ಕಾಲದಲ್ಲಿ ಯುದ್ಧದಿಂದ ಪಾರಾಗಿದೆ? ಗಲಭೆ, ಹಿಂಸಾಚಾರ, ಕೊಲೆ, ದರೋಡೆಗಳಿಂದ ಹೊರತಾದ ರಾಜ್ಯ ಯಾವುದು? ವರ್ಗಕಲಹ, ಜಾತಿದ್ವೇಷ, ಕುಟುಂಬದ ಬಿಕ್ಕಟ್ಟುಗಳಿಂದ ದೂರವಾಗಿ ನೆಮ್ಮದಿಯಿಂದಿರುವ ಸಮಾಜ ಯಾವುದು?

ಕಾಮ, ಕ್ರೋಧ, ಲೋಭಗಳು ಮುಪ್ಪುರಿಗೊಂಡು ಬಾರಿಸುತ್ತಿರುವಾಗ ಯಾರಿಗೆ ಶಾಂತಿಯುಂಟು?

ಶಾಂತಿಯನ್ನು ಅರಸಬೇಕಾದ್ದು ಒಳಗೆ; ಹೊರಗಲ್ಲ.

ದೈವಭಕ್ತಿ, ದೇಶಭಕ್ತಿ - ಇವೆರಡು ಸಮಸ್ತ ಸದ್ಗುಣಗಳನ್ನು ಹೊಮ್ಮಿಸುವ ಮೂಲ ಸ್ರೋತಸ್ಸು. ದೈವಭಕ್ತಿಯಿಂದ ಅಂತರಂಗಶುದ್ಧಿ, ದೇಶಭಕ್ತಿಯಿಂದ ಬಹಿರಂಗಶುದ್ಧಿ. ದೈವಭಕ್ತಿಯಿಂದ ಅಂತರ್ಧನ; ದೇಶಭಕ್ತಿಯಿಂದ ಬಾಹ್ಯಧನ. ದೈವಭಕ್ತಿ ಸ್ವಾಂತಶಿಕ್ಷಣೆಗಾಗಿ; ದೇಶಭಕ್ತಿ ರಾಜ್ಯವಿಧಿಗಾಗಿ. ಪ್ರಕೃತಿವಿಷಮಗಳನ್ನು ಹಾಯುವ ಸಾಮರ್ಥ್ಯ ಬರತಕ್ಕದ್ದು ಇವುಗಳಿಂದ. ದೈವಭಕ್ತಿಯಿಲ್ಲದ ದೇಶಭಕ್ತಿ ನಗೆಪಾಟಲು; ದೇಶಭಕ್ತಿಯಿಲ್ಲದ ದೈವಭಕ್ತಿ ಬೂಟಾಟಿಕೆ.

**ಸತ್ತವರ ಜಸವೊಂದು ಶವಭಾರ ಲೋಕಕ್ಕೆ**
**ಒತ್ತುತಿರಲದು ಮೇಲೆ ಯುವಕ ಗತಿಯೆಂತೊ?।**
**ಉತ್ತು ನೆಲದಲಿ ಬೆರಸು ಹಳೆ ಜಸವನದು ಬೆಳೆದು**
**ಮತ್ತೆ ಹೊಸ ಪೈರಕ್ಕೆ - ಮರುಳ ಮುನಿಯ ॥೧೦೭॥**

— **ಡಿ.ವಿ.ಜಿ.**

"ಸತ್ತುಹೋದವರ ಕೀರ್ತಿಯು ಈ ಲೋಕಕ್ಕೆ ಒಂದು ಹೆಣದ ಭಾರವಿದ್ದಂತೆ! ಅದು ಮೇಲಿಂದ ಒತ್ತುತ್ತಿದ್ದರೆ ಯುವಕರು ಎದ್ದು ನಿಲ್ಲುವುದು ಹೇಗೆ? ಅವರು ನಡೆಯುವುದೆಂತು? ಹಳಬರ ಹಳೆಯ ಕೀರ್ತಿಯನ್ನು ನೆಲದಲ್ಲಿ ಬೆರೆಸಿಬಿಡು. ಅದು ಬೆಳೆದು ಹೊಸ ಪೈರನ್ನು ನೀಡುವುದು."

ದಿವಾನ್ ವಿಶ್ವೇಶ್ವರಯ್ಯನವರ ಕೀರ್ತಿ ದಿಗಂತವಿಶ್ರಾಂತವಾಗಿದೆ. ಅವರು ಮೈಸೂರಿನ ಭಾಗ್ಯವಿಧಾತರು. ತಿಲಕ್, ಗಾಂಧಿ ಮೊದಲಾದವರು ಭಾರತಭಾಗ್ಯ ವಿಧಾತರೆಂದು ಕೀರ್ತಿತರಾಗಿದ್ದಾರೆ. ಇನ್ನೂ ಹಿಂದಕ್ಕೆ ಹೋದರೆ ರಾಣಾ ಪ್ರತಾಪಸಿಂಹ, ಛತ್ರಪತಿ ಶಿವಾಜಿ, ಝೂನ್ಸಿರಾಣಿ ಲಕ್ಷ್ಮೀಬಾಯಿ - ಮುಂತಾದ ಮಹಾವ್ಯಕ್ತಿಗಳು ಭಾರತದಲ್ಲಿ ಆಗಿಹೋದರು. ಇನ್ನು ಭಾರತದೇಶದ ಸಂಸ್ಕೃತಿಯನ್ನು ರೂಪಿಸಿ ಚಿರಂತನವಾಗಿ ನೆಲೆಗೊಳಿಸಿದವರು ವಿಪುಲಸಂಖ್ಯೆಯಲ್ಲಿದ್ದಾರೆ. ಅವರ ಜಯಂತಿ

ವರ್ಧಂತಿಗಳನ್ನು ಆಚರಿಸುತ್ತೇವೆ. ಆದರೆ ಹಳಬರನ್ನು ನೆನೆಸಿಕೊಂಡು ಹಬ್ಬವಾಡಿದ್ದರಿಂದ ನಮಗಾಗಲಿ ರಾಷ್ಟ್ರಕ್ಕಾಗಲಿ ಆಗುವ ಪ್ರಯೋಜನ ಪರಿಮಿತವಾದ್ದು.

ಜಯಂತಿಗಳೂ ಸ್ವಾತಂತ್ರ್ಯೋತ್ಸವಗಳೂ ಬಂದಾಗ ನಾಲ್ಕು ದಿನಗಳ ವೈಭವ, ಮೆರೆತ. ವ್ಯಯವೆಷ್ಟೆಂಬುದನ್ನು ಲೆಕ್ಕವಿಟ್ಟವರಿಲ್ಲ. 'ಉತ್ಸವಪ್ರಿಯಾ ಹಿ ಮನುಷ್ಯಾಃ' ಎಂಬ ಕಾಳಿದಾಸನ ಉಕ್ತಿಯ ಸಾರ್ಥಕ್ಯವನ್ನು ಪ್ರತ್ಯಕ್ಷ ಕಾಣುತ್ತೇವೆ. ಹಾಗೆಯೇ ಕೀರ್ತಿಶಾಲಿಗಳಾದವರ ಪ್ರತಿಮೆಗಳನ್ನು ಸ್ಥಾಪಿಸುವುದು, ಬೀದಿಗಳಿಗೆ ಅವರ ಹೆಸರನ್ನಿಡುವುದು - ಮುಂತಾದ ಬಹಿರಂಗ ವ್ರತಗಳನ್ನಾಚರಿಸಿ ಜನರು ಧನ್ಯರಾಗುತ್ತಾರೆ. ಇತಿಹಾಸಪ್ರಸಿದ್ಧವಾದ ಹೆಸರುಗಳನ್ನು ಅಳಿಸುವುದಕ್ಕೂ ನಾವು ಹಿಂಜರಿಯುವುದಿಲ್ಲ! ಕೀರ್ತಿಶಾಲಿಗಳು ಹಾಕಿಕೊಟ್ಟ ಆದರ್ಶಗಳ ಪಾಲನೆ ಅದೃಶ್ಯವಾಗುತ್ತದೆ; ಅವರ ಅಸ್ಥಿಪಂಜರಗಳನ್ನು ಹೊತ್ತು ಮೆರೆಸುತ್ತೇವೆ.

ಹೂಗಳು ಉದುರದೆ ಮೊಗ್ಗುಗಳು ಅರಳವು. 'ಉತ್ತು ನೆಲದಲಿ ಬೆರಸು ಹಳೆ ಜಸವ!' ಯಾವ ನೆಲದಲ್ಲಿ ಈ ಜಸವನ್ನು ಉತ್ತಿ ಬೆಳೆಸಬೇಕು? ಅಂತರಂಗಸಹಿತವಾದ ಈ ಶರೀರವೇ ನೆಲ. ಈ ಕ್ಷೇತ್ರದಲ್ಲಿ ಹಳಬರ ಜಸವನ್ನು ಉತ್ತಬೇಕು; ಅವರ ಸಾಧನೆ ಸಿದ್ಧಿಗಳನ್ನೂ ಅವರ ಸೇವಾ ಪ್ರಕಾರಗಳನ್ನೂ ಅಂತರಂಗದಲ್ಲಿ, ಅಂತಃಕರಣದಲ್ಲಿ ನಾಟಬೇಕು. ಆ ಜನರು ಬದುಕಿದ್ದು ತಮಗಾಗಿ ಅಲ್ಲ, ರಾಷ್ಟ್ರದ ಹಿತಕ್ಕಾಗಿ - ಎಂಬುದನ್ನು ಮನಗಂಡು ಆ ಬೆಳಕಿನಲ್ಲಿ ರಾಷ್ಟ್ರವು ಮುನ್ನಡೆದಾಗ ಹೊಸ ಪೈರು ಬೆಳೆದು ಫಲವನ್ನು ನೀಡುತ್ತದೆ. ಬಿತ್ತನೆ ಇಲ್ಲದಿದ್ದರೆ ಮುಂದೆ ಬತ್ತವಿಲ್ಲ.

**ಮೊಟ್ಟೆಗಳನಿಕ್ಕಿ ತಾನೇ ನುಂಗುವಹಿಯಂತೆ**
**ಸೃಷ್ಟಿಯುಣುವಳು ತಾನೆ ತನ್ನ ಸಂತತಿಯ।**
**ಸತ್ತುದೇನ್? ಎಲ್ಲ ಹೊಸ ಬೆಳೆಗೆ ಗೊಬ್ಬರವಾಯ್ತು**
**ನಷ್ಟಕೆಡೆಗೊಡಳವಳು – ಮರುಳ ಮುನಿಯ ॥೧೦೮॥**

— *ಡಿ.ವಿ.ಜಿ.*

"ಸರ್ಪವು ಮೊಟ್ಟೆಗಳನ್ನಿಟ್ಟು ಅವನ್ನು ತಾನೇ ತಿಂದುಬಿಡುತ್ತದೆಯೆಂತೆ. ಹಾಗೆ ಪ್ರಕೃತಿದೇವಿ ತನ್ನ ಸಂತತಿಯನ್ನು ತಾನೇ ತಿಂದುಬಿಡುತ್ತಾಳೆ!

ಆದರೆ ಸತ್ತು ಪೂರ್ಣವಾಗಿ ನಾಶವಾಗತಕ್ಕದ್ದು ಯಾವುದೂ ಇಲ್ಲ. ಸತ್ತದ್ದು ಹೊಸ ಬೆಳೆಗೆ ಗೊಬ್ಬರವಾಗಿ ಅದನ್ನು ಪೋಷಿಸುತ್ತದೆ. ಪ್ರಕೃತಿಯು ಯಾವುದನ್ನೂ ನಷ್ಟಮಾಡಲು ಅವಕಾಶ ಕೊಡುವುದಿಲ್ಲ."

ಜಗತ್ತಿನಲ್ಲಿ ಎಷ್ಟೋ ರಾಜ್ಯಗಳೂ ಪದ್ಧತಿಗಳೂ ಬೆಳೆದು ಅಳಿದುಹೋಗಿವೆ. ಅಂತೆಯೇ ಮನುಷ್ಯನ ನಾಗರಿಕತೆ, ಸಂಸ್ಕೃತಿಗಳ ಪಾಡೂ. ನಾಗರಿಕತೆಯು ಬಾಹ್ಯ ವೇಷ, ಭೂಷ, ಶಿಲ್ಪ, ಕಲೆ - ಮುಂತಾದವುಗಳಿಗೆ ಸಂಬಂಧಿಸಿದ್ದು. ಸಂಸ್ಕೃತಿಯು ಅಂತರಂಗಕ್ಕೆ ಸಂಬಂಧಿಸಿದ್ದು - ಪ್ರಜೆಗಳ ನಡೆ, ನುಡಿಗಳಲ್ಲಿ ಅಭಿವ್ಯಕ್ತವಾಗುವ ಮನೋಭಾವ ಅದು. ಇವೆಲ್ಲವನ್ನೂ ಮನುಷ್ಯನು ತನ್ನ ದೇಶಕಾಲ ಪರಿಸ್ಥಿತಿಗಳಿಗೆ ಅನುಗುಣವಾಗಿ ಪರಿಷ್ಕರಿಸಿಕೊಳ್ಳುತ್ತ ಮುನ್ನಡೆಯುತ್ತಾನೆ. ಯಾವುದನ್ನೂ ಹೊಸದಾಗಿ ಹುಟ್ಟುಹಾಕುವುದಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ರಾಜ್ಯಗಳಲ್ಲಿ ಎಷ್ಟು ಸರ್ಕಾರಗಳು ಬಂದವು? ಎಷ್ಟು ಉರುಳಿದವು? ಜನತೆ ಆರಿಸಿದ ಸರ್ಕಾರವನ್ನು ಜನತೆಯೇ ನುಂಗಿಹಾಕಿದೆ. ಸೃಷ್ಟಿಕರ್ತನಾದ ಈಶ್ವರನನ್ನು ಮರೆತಾಗ ಮಾನವನಿಗೆ ಅಧೋಗತಿ; ತನ್ನನ್ನು ಸೃಷ್ಟಿಸಿದ ಜನತೆಯನ್ನು ಮರೆತಾಗ ಸರ್ಕಾರಕ್ಕೆ ಅಧೋಗತಿ.

ಮೇಲೆ ಉದಾಹರಿಸಿದ ಹಾವಿನ ದೃಷ್ಟಾಂತಕ್ಕೆ 'ಸರ್ಪಿಣೀಗರ್ಭಭಕ್ಷಣನ್ಯಾಯ' ವೆನ್ನುತ್ತಾರೆ. ಇದಕ್ಕೆ ಪ್ರತಿಯಾಗಿ 'ಕದಳೀಗರ್ಭನ್ಯಾಯ', 'ಕರ್ಕಟೀಗರ್ಭನ್ಯಾಯ' - ಎಂಬ ನ್ಯಾಯಗಳುಂಟು. ಬಾಳೆಯಮರದಿಂದ ಹಣ್ಣಿನ ಗೊನೆ ಹೊರಡುತ್ತದೆ. ಈ ಬಾಳೆಹಣ್ಣು ತನ್ನ ತಾಯಿಯಾದ ಬಾಳೆಮರಕ್ಕೆ ಮೃತ್ಯುವಾಗುತ್ತದೆ. ಕರ್ಕಟೀ ಎಂದರೆ ಹೆಣ್ಣು ಏಡಿ. ಏಡಿಮರಿಗಳು ಹುಟ್ಟುವಾಗಲೇ ತಾಯಿಯ ಗರ್ಭವನ್ನು ಸೀಳಿಕೊಂಡು ಬರುತ್ತವೆ.

ಸರ್ಕಾರಗಳು ತಮಗೆ ಜನ್ಮವನ್ನಿತ್ತ ಜನತೆಯನ್ನು ಅಲಕ್ಷಿಸಿ ಬಾಳೆಗೊನೆಯಂತೆ, ಏಡಿಯಮರಿಗಳಂತೆ, ವರ್ತಿಸುತ್ತವೆ.

ಸರ್ಪಿಣೀಗರ್ಭಭಕ್ಷಣನ್ಯಾಯಕ್ಕೆ ಪ್ರತಿದ್ವಂದ್ವಿಯಾಗಿ ಕರ್ಕಟೀಗರ್ಭನ್ಯಾಯವು ತಲೆಹಾಕುತ್ತಲೇ ಇದೆ. ಆದರೆ ಕರ್ಕಟಿಗಿಂತ ಸರ್ಪಿಣಿ ಪ್ರಬಲವೆಂದು ನೆನಪಿಡಬೇಕು.

* * *

# ಶ್ಲೋಕಗಳ ಮತ್ತು ಉದಾಹೃತಗಳ ಅಕಾರಾದಿ ಸೂಚಿ


ಅಕಾರಣಂ ವ್ಯಾಕರಣಂ ೧೧೧
ಅಕೃತ್ವಾತ್ಮಾನಮಸಾದ್ಯ ೧
ಅಂಗಂ ಗಲಿತಂ ೮೬
ಅಂತರ್ಧನಂ ಬಾಹ್ಯಧನಕಿಂತ ೧೫೭
ಅಜವತ್ ಚರ್ವಣಂ ೧೧೯
ಅತಃ ಪರೀಕ್ಷ್ಯ ಕರ್ತವ್ಯಂ ೭೮
ಅತಿ ಸರ್ವತ್ರ ೮೬
ಅರ್ಥ ಏವ ಅಭಿಜನಹೇತುಃ ೨೭
ಅರ್ಥಾ ವೈ ವಾಚಿ ೩೫
ಅದ್ಯತೇಽತ್ತಿ ಚ ೧೧೧
ಅಧಮಾ ಧನಮಿಚ್ಛಂತಿ ೯೩
ಅನಭ್ಯಾಸೈರ್ಹತಾ ೧೩೩
ಅನ್ಯಾಯೇನಾರ್ಜಿತಂ ೧೬
ಅನಿರ್ಲೋಡಿತಕಾರ್ಯಸ್ಯ ೪೨
ಅನುಕೂಲಾಂ ವಿಮಲಾಂಗೀಂ ೬೬
ಅನುಗಂತುಂ ಸತಾಂ ವರ್ತ್ಮ ೧೪
ಅಭಾವಪ್ರತ್ಯಯಾಲಂಬನಾ ೬೧
ಅಭಿಷೇಕಪ್ರಿಯಃ ಶಿವಃ ೧೫೦
ಅಮಂತ್ರಮಕ್ಷರಂ ನಾಸ್ತಿ ೭೪
ಅವಗಚ್ಛತಿ ಮೂಢಚೇತನಃ ೬೭
ಅವಮಾನಂ ಪುರಸ್ಕೃತ್ಯ ೫೦
ಅವಿದಿತಪರಮಾನಂದಃ ೨
ಅಶಾಂತಸ್ಯ ಕುತಃ ಸುಖಮ್ ೧೨೩
ಅಸಂಕಲ್ಪಾಜ್ಜಯೇತ್ ೭೫
ಅಹಂ ವೋ ರಕ್ಷಿತೇತ್ಯುಕ್ತ್ವಾ ೧೦೩
ಅಹಿಂಸಾ ಪರಮೋ ಧರ್ಮಃ ೮
ಆಚಕ್ಷ್ವ ಮತ್ವಾ ೨೮
ಆಜನ್ಮಮರಣಾಂತಂ ಚ ೧೩
ಆನಂದೋ ಬ್ರಹ್ಮೇತಿ ೧೫೩
ಆಯುರ್ವಿತ್ತಂ ಗೃಹಚ್ಛಿದ್ರಂ ೭೨
ಆಲಸ್ಯಂ ಯದಿ ೧೬
ಆಶಾಂ ಬಲವತೀಂ ೨೫
ಇಚ್ಛೆಯಾನರಿವ ಸತಿಯಾಗೆ ೬೬
ಈಶಾನಃ ಸರ್ವವಿದ್ಯಾನಾಂ ೧೭
ಇಹೈವೈಕಸ್ಯ ನಾಮುತ್ರ ೪
ಉಜ್ಜಯಿನ್ಯಾಂ ಕವಿಪರೀಕ್ಷಾ ೧೧೭
ಉತ್ಸವಪ್ರಿಯಾ ಹಿ ೧೫೯
ಉಪಲಶಕಲಮೇತತ್ ೨೪
ಋಣಗಳುಂಟೆನಿತೆನಿತೊ ೧೪೭
ಎಲ್ಲ ಕೆಲಸದಲ್ಲೂ ೫೩
ಎಲ್ಲರೂ ಮಾಡುವುದು ೧೧೧
ಏಕಂ ವಿಷರಸೋ ಹಂತಿ ೬
ಏಕಃ ಪಾಪಾನಿ ಕುರುತೇ ೫೬
ಏತದ್ ವೈ ಪರಮಂ ೩೫
ಏತಿ ಜೀವಂತಮಾನಂದಃ ೧೫೪
ಒಳಿತೊಂದೆ ಶಾಶ್ವತವೊ ೧೫೩
ಕರೆದಪಾತ್ರಂಗಿತ್ತು ೪೦, ೧೦೭
ಕಲ್ಯಾಣೀಂ ವಾಚಂ ೧೦೮
ಕವಿತ್ವಸ್ಯ ಗಾಂಭೀರ್ಯಂ ೧೦೧
ಕಾಚಂ ಮಣಿಂ ಕಾಂಚನಂ ೧೨೯

ಕಾದಂಬರೀರಸಜ್ಞಾನಾಂ ೯೭
ಕಾಮ ಜಾನಾಮಿ ತೇ ೭೬
ಕಾಯಸ್ಥೇನೋದರಸ್ಥೇನ ೧೯
ಕಾಲಕ್ರಮೇಣ ಜಗತಃ ೨೫
ಕಾವ್ಯಂ ಯಶಸೇ ೯೬
ಕಿಚ್ಚಹುದು ನಿನ್ನ ಭಾವ್ಯಕೆ ೪೩
ಕಿಂ ನು ಮೇ ಸ್ಯಾದಿದಂ ೧೦೨
ಕಿಯದ್ವಾ ಶಕ್ಯಮುನ್ನೇತುಂ ೧೪೫
ಕೃತಸ್ಯ ಪ್ರತಿಕರ್ತವ್ಯಂ ೧೪೩
ಕೈ ಕೆಸರಾದರೆ ೯೦
ಕೋ ಧರ್ಮೋ ಭೂತದಯಾ ೭
ಕ್ಷೀಣಃ ಕ್ಷೀಣಃ ಸಮೀಪತ್ವಂ ೧೨೪
ಖಲಃ ಕುರ್ಯಾತ್ ೨೯
ಗತೋ ಮಾರ್ಗೋಽನುಗಮ್ಯತೇ ೧೫
ಗ್ರಂಥಾನಧೀತ್ಯ ೪೩
ಗಾಳಿ ಬಂದಾಗ ೩೭
ಗುಣೇಷು ಕ್ರಿಯತಾಂ ೧೧೬
ಗುಣೇಷು ಯತ್ನಃ ೧೨೮
ಗುರುಂ ಪ್ರಯೋಜನೋದ್ದೇಶಾತ್ ೨೪
ಚಟ = ಭೇದೇ ೧೮
ಚಾಟ-ತಸ್ಕರ-ದುರ್ವೃತ್ತ ೧೮
ಚಾತುರ್ಯಂ ಯದಿ ೧೮
ಚಿಂತಾಯಾಶ್ಚ ಚಿತಾಯಾಶ್ಚ ೩೪
ಜಗದ ಭಾಗ್ಯದ ಪಂಕ್ತಿ ೨೬
ಜನ್ಮಿನೋ ಮಾನಹೀನಸ್ಯ ೯೫
ಜಾತಸ್ಯ ಮರಣಂ ೪೯
ಜೀಯಮಾನಾ ಜಯಂತ್ಯನ್ಯೇ ೧೫೬
ಜ್ಞಾನವೃದ್ಧಾ ವಯೋವೃದ್ಧಾಃ ೧೦
ಜ್ಞಾನೇನ ಹೀನಃ ೮೯
ಜ್ಯೌತಿಷಂ ಜಲದೇ ೮೫
Death is the rule ೭೦
ತತ್ತ್ವಶೂನ್ಯಾ ರಾಜನೀತಿಃ ೪೫
ತಾಸ್ತು ವಾಚಃ ೫೯
ತೀಕ್ಷ್ಣಧಾರೇಣ ಖಡ್ಗೇನ ೮೩
ತ್ಯಾಗೇನೈಕೇ ಅಮೃತತ್ವಮಾನಶುಃ ೧೦೯
ದಯೆಯೇ ಧರ್ಮದ ೧೫
ದಂಡಸ್ಯೈವ ಭಯಾತ್ ೯೧
ದಂಡಿಸದೆ ದೇಹವನು ೭೧
ದಂಡೋ ದಮನಾತ್ ೯೨
ದಾತೃತ್ವಮುಚಿತಜ್ಞತ್ವಂ ೫೬
ದಾನಂ ವಿತ್ತಾದೃತಂ ೧೦೮
ದುರ್ಲಭಂ ತ್ರಯಮೇವೈತತ್ ೧೯
ದೇಹದಂಡನಮಾತ್ರೇಣ ೭೦
ದೈವಂ ನಿಹತ್ಯ ಕುರು ೫೫
ದೈವಂ ಫಲತಿ ಸರ್ವತ್ರ ೫೪
ದ್ವಾತ್ರಿಂಶದ್ದಶನದ್ವೇಷಿ ೬೩
ದ್ವಾವಿಮೌ ಕಂಟಕೌ ೮೯
ದ್ವಿಷ = ಅಪ್ರೀತೌ ೧೩೨
ದ್ವೇಷ್ಯೋಽಪಿ ಸಂಮತಃ ೩೨
ಧರ್ಮಃ ಕ್ಷರತಿ ಕೀರ್ತನಾತ್ ೧೪೭
ಧರ್ಮಸ್ತಮನುಗಚ್ಛತಿ ೯೫
ಧರ್ಮಾರ್ಥಕಾಮಾಃ ೧೧೩
ಧರ್ಮೋ ರಾಜನ್ ಗುಣಶ್ರೇಷ್ಠಃ ೧೧೨
ಧರ್ಮೋ ವಿಶ್ವಸ್ಯ ಜಗತಃ ೪೧
ಧಾನ್ಯವುಂಡಿಹ ಹೊಟ್ಟೆ ೧೫೧
ಧುರ್ವೀ=ಹಿಂಸಾಯಾಂ ೫೩
ಧೂಮೋ ವಾಯೋರಿವ ೪೧
ನ ಚಾಗಮಾದೃತೇ ಧರ್ಮಃ ೪೪

ನ ದ್ವಿಷಂತಿ ನ ಯಾಚಂತೇ ೧೩೧
ನ ಪ್ರಯೋಜನಮಂತರಾ ೨೪
ನ ವ್ಯತೀಯುಃ ಪ್ರಜಾಸ್ತಸ್ಯ ೭
ನ ಸಾ ಸಭಾ ಯತ್ರ ೬
ನ ಹಿ ಧರ್ಮಾರ್ಥಸಿದ್ಧ್ಯರ್ಥಂ ೬೪
ನ ಹಿ ಪಾಪಕೃತಂ ಕರ್ಮ ೧೦೫
ನಂಬು ನೀಂ ದೈವವನು ೧೪೧
ನಾತ್ಮಾನಮವಮನ್ಯೇತ ೮೦
ನಾಧರ್ಮಶ್ಚರಿತೋ ಲೋಕೇ ೭೭
ನಾನ್ಯತ್ರ ವಿದ್ಯಾತಪಸೋಃ ೯೨
ನಾಯಂ ಹಂತಿ ೫೨
ನಾಸ್ತ್ಯಚೋರಃ ಕವಿಜನಃ ೩೬
ನ್ಯಾಯಕೇ ಜಯವಂತೆ ೧೫೫
ನಿತ್ಯಃ ಶಬ್ದಾರ್ಥಸಂಬಂಧಃ ೩೫
ನಿದ್ದೆವೊಲು ಸಾವು ಪಡೆ ೨೧
ನಿದ್ರಾಸ್ಥಾನಾನಿ ತು ತ್ರೀಣಿ ೬೧
ನಿನ್ನನಾರ್ ನಿಯಮಿಸಿದರ್ ೧೪೬
ನಿಃಶೀರ್ಷಾಂಘ್ರಿರ್ನಟ ಇವ ೯೮
ನೀಚೈರ್ಗಚ್ಛತ್ಯುಪರಿ ಚ ೨೬
ಪಂಡಿತರುಂ ನಿಖಿಲಕಲಾ ೩
ಪರಸ್ಪರೋಪಕಾರೀದಂ ೧೦
ಪರೋಪಕಾರವಿಜ್ಞಾನಮಾತ್ರ ೫೨
ಪ್ರಜ್ಞಯಾ ಮಾನಸಂ ದುಃಖಂ ೮೧
ಪ್ರಜ್ಞಾವಿವೇಕಂ ಲಭತೇ ೧೨೩
ಪ್ರಥಮೇ ನಾರ್ಜಿತಾ ವಿದ್ಯಾ ೨೦
ಪಾತ್ರಾಪಾತ್ರವಿವೇಕೋऽಸ್ತಿ ೧೦೬
ಪ್ರಾತರ್ದ್ಯೂತಪ್ರಸಂಗೇನ ೧೨೭
ಪ್ರಾತರ್ವಾರ್ತಾಪ್ರಸಂಗೇನ ೧೨೮
ಪ್ರಾರಬ್ಧವ್ಯೇ ನಿರುದ್ಯೋಗಃ ೩೬
ಪೀತ್ವಾ ಪೀತ್ವಾ ೬೫
ಪುತ್ರಾದಿಚ್ಛೇತ್ ೧೩೭
ಪುರಾಣಾಂತೇ ಶ್ಮಶಾನಾಂತೇ ೩೦
ಪೂರ್ವಜನ್ಮಕೃತಂ ಕರ್ಮ ೫೫
ಬಡವನ ಸಿಟ್ಟು ೯೦
ಬಹವೋ ಯತ್ರ ನೇತಾರಃ ೧೨೧
ಬುದ್ಧಿಃ ಸಂಸ್ಕಾರವರ್ತಿನೀ ೧೧೯
ಬೋದ್ಧಾರೋ ಮತ್ಸರಗ್ರಸ್ತಾಃ ೫೯
ಭಾರೋऽವಿವೇಕಿನಃ ೧೨೨
ಭಾರ್ಯಾ ರೂಪವತೀ ೬೭
ಭೀಷಾऽಸ್ಮಾದ್ ವಾತಃ ೯೧
ಭುಕ್ತಾ ಬಹವೋ ದಾರಾಃ ೧೩೪
ಭೇದಾಭೇದೌ ಸಪದಿ ೫೦
ಮನುಷ್ಯಾಣಾಂ ಸಹಸ್ರೇಷು ೨೦
ಮಮೈವಾಂಶೋ ಜೀವಲೋಕೇ ೩೧
ಮರಣಂ ಪ್ರಕೃತಿಃ ಶರೀರಿಣಾಂ ೬೮
ಮಾಡಿದ್ದುಣ್ಣೋ ಮಹಾರಾಯ ೧೩೮
ಮಾಂಧಾತಾ ಚ ಮಹೀಪತಿಃ ೪೯
ಮಾರ್ಜಾಲಭಕ್ಷಿತೇ ೯೯
ಮಾತನಾಡಿದರೆ ಮುತ್ತು ೬೦
ಮಾತನಾಡಿದರೆ ಹೋಯಿತು ೬೦
ಮಾತು ಬಲ್ಲವನಿಗೆ ೬೦
ಮಾತು ಮಾಣಿಕ್ಯ ೬೦
ಮಾನಶ್ಚಿತ್ತಸಮುನ್ನತಿಃ ೯೪
ಮಾನೇನ ಹೀನಾಃ ೯೫
ಮೂರ್ಧ್ನಿಸ್ಥಿತಮಮಿತ್ರಾಣಾಂ ೧೫೬
ಮೃಗ-ಮೀನ-ಸಜ್ಜನಾನಾಂ ೪೩
ಮೈತ್ರೀ-ಕರುಣಾ-ಮುದಿತೋಪೇಕ್ಷಾಣಾಂ ೧೫೩
ಮೊಟ್ಟೆಗಳನಿಕ್ಕಿ ತಾನೇ ೧೫೯

ಯಜ್ಞೋ ದಾನಂ ತಪಃ ೨೪
ಯತಃ ಕೃಷ್ಣಸ್ತತೋ ಧರ್ಮಃ ೧೪೯
ಯತೋ ಧರ್ಮಸ್ತತೋ ಜಯಃ ೪೧
ಯಥಾ ಪುಮಾನ್ ನ ಸ್ವಾಂಗೇಷು ೩೦
ಯಥಾ ವ್ಯಾಲಗಲಸ್ಥೋಽಪಿ ೪೮
ಯಥಾ ಹಿ ಮಲಿನೈರ್ವಸ್ತ್ರೈಃ ೧೧೮
ಯಸ್ಮಿನ್ ದೇಶೇ ೧೧
ಯಾವದ್ ಭ್ರಿಯೇತ ೫೮
ಯುಕ್ತಾಹಾರವಿಹಾರಸ್ಯ ೮೬
ರವಿಚಂದ್ರೌ ಘನಾ ವೃಕ್ಷಾಃ ೧೧೫
ರಾಜಪುತ್ರ ಚಿರಂ ಜೀವ ೫
ರಾತ್ರಿರ್ಗಮಿಷ್ಯತಿ ೩೯
ರಾಮಚಂದ್ರನ ಚರಿತೆ ೧೪೯
ರೋಗೋಽಂಡಜೋಽಂಕುರಃ ೪೭
ವಯೋಬುದ್ಧ್ಯರ್ಥವಾಕ್ ೧೧೩
ವಸುಧೈವ ಕುಟುಂಬಕಂ ೩೧, ೫೨
ವಾಗ್ಭೂಷಣಂ ಭೂಷಣಂ ೬೦
ವಾಗ್ವೈಖರೀ ಶಬ್ದಝರೀ ೧೦೯
ವಾನರನ ಲಾಂಗೂಲ ೧೪೩
ವಿತ್ತಂ ಬಂಧುರ್ವಯಃ ಕರ್ಮ ೧೨೫
ವಿದೇಶೇಷು ಧನಂ ವಿದ್ಯಾ ೯೫
ವಿದ್ಯಾ ದದಾತಿ ವಿನಯಂ ೩೮
ವಿದ್ಯಾಧನಂ ಸರ್ವಧನಪ್ರಧಾನಂ ೯೫
ವಿಧಿಯನೆದುರಿಸಿ ಹೋರಿ ೧೫೪
ವಿಷಸ್ಯ ವಿಷಯಾಣಾಂ ಚ ೧೩೮
ವೃತ್ತಂ ಯತ್ನೇನ ೧೩೦
ವ್ರಜತ್ಯಧೋಽಧೋ ಯಾತ್ಯುಚ್ಚೈಃ ೧೩೭
ಶಬ್ದಾದಿಭಿಃ ಪಂಚಭಿಃ ೧೩೯
ಶಾಂತಿರಸ್ತು ೯೩
ಶಿವೇನ ವಚಸಾ ತ್ವಾ ೨೧
ಶ್ರುತಂ ತು ಸರ್ವೇಭ್ಯಃ ೧೨೬
ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ೧೧೫
ಶ್ವ-ಯುವ-ಮಘೋನಂ ೧೩೦
ಸ ಏಕೋ ಬ್ರಹ್ಮಣ ಆನಂದಃ ೨
ಸಂಕಟ ಬಂದಾಗ ೨೨
ಸಂತೋಷಂ ಜನಯೇತ್ ೧೫೩
ಸತ್ತವರ ಜಸವೊಂದು ೧೫೮
ಸತ್ಯಂ ವದ ೧೦೮
ಸತ್ಯಾಯ ಮಿತಭಾಷಿಣಾಂ ೩೬, ೧೦೩
ಸತ್ಯೇನ ರಕ್ಷ್ಯತೇ ಧರ್ಮಃ ೧೩೬
ಸಂತೋಷಸ್ತ್ರಿಷು ಕರ್ತವ್ಯಃ ೨೨
ಸಮರಭರಃ ಸುಭಟಾನಾಂ ೯
ಸರಸತಿಯ ಸತ್ರ ಬಳಿಯಿರೆ ೧೪೪
ಸರ್ವಭೂತಾತ್ಮಭೂತಾತ್ಮಾ ೮, ೩೧
ಸರ್ವಾರಂಭಾಃ ೧೧೧
ಸರ್ವೇ ಗುಣಾಃ ೧೧
ಸಾಧುರೇಕೋ ವಿನಿರ್ಮಿತಃ ೧೪೯
ಸ್ಮಾರಯೇ ನ ತು ೬೧
ಸಿಂಹಾದೇಕಂ ಬಕಾದೇಕಂ ೮೮
ಸುಖಾರ್ಥಿನಃ ಕುತೋ ವಿದ್ಯಾ ೩೮
ಸ್ವಲ್ಪಮಪ್ಯಸ್ಯ ಧರ್ಮಸ್ಯ ೧೬
ಸ್ವಾಜ್ಞಾನಜ್ಞಾನಿನೋ ವಿರಲಾಃ ೧೧೪
ಹಬ್ಬಕ್ಕೆ ಮದುವೆಗೆ ೧೩೨
ಹಳೆಯ ಮನೆ ಮಳೆಯ ೧೫೦
ಹಾವನ್ನು ಬಡಿದು ೧೦೮
ಹಿತಬೋಧಕರು ಸಾಲದುದರಿಂದ ೧೪೦

# ಸೂಕ್ತಿ - ವ್ಯಾಪ್ತಿ

## ಸಂಪುಟ ೨

ಕಡಮೆ ಮಾತುಗಳಲ್ಲಿ ವಿಶಾಲವಾದ ಅರ್ಥವನ್ನೂ ಜೀವನಾನುಭವವನ್ನೂ ಬಿಂಬಿಸುವ ಪದ್ಯಗಳು ಸುಭಾಷಿತಗಳು. ಅವುಗಳ ಅರ್ಥ ಸಮೃದ್ಧಿಯಂತೆ ಉಕ್ತಿಸೌಂದರ್ಯವೂ ಮನಸ್ಸನ್ನು ಆಕರ್ಷಿಸುತ್ತದೆ. ಈ ಕಾರಣದಿಂದ ಒಂದಷ್ಟು ಸುಭಾಷಿತಗಳ ಪರಿಚಯ ಸುಸಂಸ್ಕೃತರ ಲಕ್ಷಣವೆಂದು ಗಣನೆ ಇದೆ. ವಿವಿಧ ಮೂಲಗಳಿಂದ ಆಯ್ದ ಇಂತಹ ಸುಭಾಷಿತಗಳ ಸಂಗ್ರಹ, 'ಸೂಕ್ತಿ-ವ್ಯಾಪ್ತಿ' . ಶ್ಲೋಕಗಳ ಅರ್ಥವನ್ನು ಈಗಿನ ಸಾಮಾಜಿಕ ಪರಿಸರದ ಹಿನ್ನಲೆಯಲ್ಲಿ ಖ್ಯಾತ ವಿದ್ವಾಂಸರಾದ ಎನ್. ರಂಗನಾಥಶರ್ಮಾ ಅವರು ಈ ಗ್ರಂಥದಲ್ಲಿ ವಿಸ್ತರಿಸಿದ್ದಾರೆ. ಸಾಹಿತ್ಯಾಭ್ಯಾಸಿಗಳು ಮಾತ್ರವಲ್ಲದೆ ಎಲ್ಲ ಆಸಕ್ತರೂ ಆಗಾಗ ಮೆಲುಕುಹಾಕಬಹುದಾದವು ಈ ಸುಭಾಷಿತಗಳು.

---

ರಾಷ್ಟ್ರೋತ್ಥಾನ ಸಾಹಿತ್ಯ
ಬೆಂಗಳೂರು - 560 019

ISBN 81-7531-015-4

